www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ಜೀವವೈವಿಧ್ಯ ಸಂರಕ್ಷಣೆಗೆ ಸುಸ್ಥಿರ ಕ್ರಿಯಾಯೋಜನೆ

9 ಕಾರಿಡಾರ್ ಅಭಿವೃದ್ಧಿಗೆ ₹400 ಕೋಟಿ ಅನುದಾನ 5A

ಇಂದು ಸ್ಪರ್ಧಾವಾಣಿ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,067 ▼	18,199 ▼	₹56,240 (ಬೆಂಗಳೂರು) ▲	₹70,400 (ಬೆಂಗಳೂರು) ▲	82.84 ▼

ಕೇಂದ್ರ ಆರೋಗ್ಯ ಸಚಿವರ ಸಭೆ: ಮಾಸ್ಕ್ ಧರಿಸಲು, ಲಸಿಕೆ ಪಡೆಯಲು ಸಲಹೆ

ಕೋವಿಡ್: ಕಣ್ಗಾವಲು ಹೆಚ್ಚಳಕ್ಕೆ ಸೂಚನೆ

ನವದೆಹಲಿ (ಪಿಟಿಐ): ಚೀನಾ ಸೇರಿದಂತೆ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ದಿಢೀರ್ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಕಣ್ಗಾವಲು ಹೆಚ್ಚಿಸಲು ಹಾಗೂ ಲಸಿಕೀಕರಣಕ್ಕೆ ಒತ್ತು ನೀಡಲು ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ಸೂಚಿಸಿದೆ.

ಜನಸಂದಣಿ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದು ಸೇರಿ ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಜ್ಞರು ನಾಗರಿಕರಿಗೆ ಸಲಹೆ ನೀಡಿದ್ದಾರೆ.

ಚೀನಾ ಸೇರಿದಂತೆ ಇತರೆ ದೇಶಗಳಿಂದ ವಿಮಾನ ನಿಲ್ದಾಣಕ್ಕೆ ಬರುವ ಪ್ರಯಾಣಿಕರಲ್ಲಿ ಆಯ್ದ ಕೆಲವರನ್ನು ಪರೀಕ್ಷೆಗೆ ಒಳಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅಧ್ಯಕ್ಷತೆಯಲ್ಲಿ ನಡೆದ ತಜ್ಞರು ಹಾಗೂ ಅಧಿಕಾರಿಗಳ ಸಭೆಯಲ್ಲಿ ದೇಶದಲ್ಲಿನ ಪರಿಸ್ಥಿತಿ ಅವಲೋಕಿಸಲಾಗಿದ್ದು, ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತೂ ಚರ್ಚಿಸಲಾಗಿದೆ.

ಮುಂದೆ ಹಬ್ಬಗಳ ಋತು ಶುರುವಾಗಲಿದೆ. ಹೀಗಾಗಿ ಎಂತಹುದೇ ಪರಿಸ್ಥಿತಿ ಎದುರಾದರೂ ಅದನ್ನು ಎದುರಿಸಲು ಸಜ್ಜಾಗಬೇಕು. ಕೋವಿಡ್‌ನ ಹೊಸ ತಳಿಯ ಬಗ್ಗೆ ಜಾಗೃತರಾಗಿರಬೇಕು. ಕೋವಿಡ್ ಸೋಂಕಿತರಿಂದ ಸಂಗ್ರಹಿಸಲಾಗುವ ಮಾದರಿಗಳನ್ನು ಪ್ರತಿದಿನವೂ ಕೇಂದ್ರ ಸರ್ಕಾರದ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಐಎನ್‌ಎಸ್‌ಎಸಿಒಜಿಯ ಪ್ರಯೋಗಾಲಯಗಳಿಗೆ ಕಳುಹಿಸಬೇಕು ಎಂದು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಲಾಗಿದೆ.

ನವದೆಹಲಿಯಲ್ಲಿ ಬುಧವಾರ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಅವರು ಕೋವಿಡ್ ಸಭೆಗೆ ಬಂದ ಕ್ಷಣ —ಪಿಟಿಐ ಚಿತ್ರ

ಕೋವಿಡ್ ಪರಿಸ್ಥಿತಿ ಅವಲೋಕಿಸುವ ನಿಟ್ಟಿನಲ್ಲಿ ವಾರಕ್ಕೊಮ್ಮೆ ಸಭೆ ನಡೆಸಲೂ ತೀರ್ಮಾನಿಸಲಾಗಿದೆ.

ಭಾರತದಲ್ಲಿ ಕೋವಿಡ್ ಪ್ರಕರಣಗಳು ಗಣನೀಯವಾಗಿ ಇಳಿಕೆಯಾಗಿವೆ. ಆದರೆ ಜಾಗತಿಕ ಮಟ್ಟದಲ್ಲಿ ಪ್ರಕರಣಗಳು ಹೆಚ್ಚಳವಾಗಿವೆ. ಕೇರಳ, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಮತ್ತು ತಮಿಳುನಾಡಿನಲ್ಲಿ ಹೊಸ ಪ್ರಕರಣಗಳು ಹೆಚ್ಚು ಪತ್ತೆಯಾಗುತ್ತಿವೆ. ಇದೇ 20ರಂದು ದೇಶದಲ್ಲಿ ವರದಿಯಾಗಿರುವ ಹೊಸ ಪ್ರಕರಣಗಳಲ್ಲಿ ಈ ಐದು ರಾಜ್ಯಗಳ ಪಾಲು ಶೇ 84ರಷ್ಟಿದೆ ಎಂದು ಮಾಂಡವೀಯ ಹೇಳಿದ್ದಾರೆ.

> **ಕೋವಿಡ್ ಇನ್ನೂ ಮುಗಿದಿಲ್ಲ. ಜಾಗೃತರಾಗಿರುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿದ್ದೇನೆ. ಯಾವುದೇ ಪರಿಸ್ಥಿತಿ ನಿಭಾಯಿಸಲು ನಾವು ಸನ್ನದ್ಧರಾಗಿದ್ದೇವೆ**
> **ಮನ್ಸುಖ್ ಮಾಂಡವೀಯ,** ಕೇಂದ್ರ ಆರೋಗ್ಯ ಸಚಿವ

ಕೋವಿಡ್ ಸಂದರ್ಭದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಬಳಸಲಾಗುತ್ತಿದ್ದ ಔಷಧಗಳನ್ನು ದಾಸ್ತಾನು ಇಡುವಂತೆ ಸಭೆಯಲ್ಲಿ ಪಾಲ್ಗೊಂಡಿದ್ದ ಔಷಧ ಹಾಗೂ ಆಯುಷ್ ಇಲಾಖೆಗಳ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

ಹೊಸ ಪ್ರಕರಣಗಳು ಪತ್ತೆ: ದೇಶದಲ್ಲಿ ಹಿಂದಿನ 24 ಗಂಟೆಗಳಲ್ಲಿ 129 ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 3,408ಕ್ಕೆ ಹೆಚ್ಚಿದೆ.

ಓಮೈಕ್ರಾನ್‌ನ ಬಿಎಫ್.7 ಉಪತಳಿ: ದೇಶದಲ್ಲಿ 4 ಪ್ರಕರಣಗಳು ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೊರೊನಾ ವೈರಸ್ ಓಮೈಕ್ರಾನ್‌ನ ಉಪತಳಿ ಬಿಎಫ್.7 ಸೋಂಕಿನ ನಾಲ್ಕು ಪ್ರಕರಣಗಳು ಜುಲೈ, ಸೆಪ್ಟೆಂಬರ್ ಮತ್ತು ನವೆಂಬರ್‌ನಲ್ಲಿ ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಸೋಂಕಿತರೆಲ್ಲರೂ ಗುಣಮುಖರಾಗಿದ್ದಾರೆ. ಗುಜರಾತ್ ಬಯೋಟೆಕ್ನಾಲಜಿ ಸಂಶೋಧನಾ ಕೇಂದ್ರವು ಈ ಪ್ರಕರಣಗಳನ್ನು ಪತ್ತೆ ಮಾಡಿತು. ಎರಡು ಮತ್ತು ಮೂರನೇ ಪ್ರಕರಣವೂ ಗುಜರಾತ್‌ನಲ್ಲಿ ಪತ್ತೆಯಾಗಿದ್ದರೆ, ಮತ್ತೊಂದು ಪ್ರಕರಣ ಒಡಿಶಾದಲ್ಲಿ ವರದಿಯಾಗಿದೆ.

ಚೀನಾದಲ್ಲಿ ಸದ್ಯ ಅಧಿಕ ಸಂಖ್ಯೆಯಲ್ಲಿ ಕೋವಿಡ್-19 ಪ್ರಕರಣಗಳು ವರದಿಯಾಗುತ್ತಿರುವುದಕ್ಕೆ ವೈರಸ್‌ನ ಈ ಬಿಎಫ್.7 ಉಪತಳಿಯೇ ಕಾರಣ ಎಂದು ಮೂಲಗಳು ತಿಳಿಸಿವೆ.

ಮಾದರಿಗಳ ವಿಶ್ಲೇಷಣೆ: ಡಾ. ಸುಧಾಕರ್

ಬೆಳಗಾವಿ: 'ಕೋವಿಡ್‌ನ ರೂಪಾಂತರಿ ಕಂಡುಬರುತ್ತಿರುವುದರಿಂದ ಎಲ್ಲ ಸೋಂಕಿತರ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಒಳಪಡಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚೀನಾ ಮತ್ತು ಜಪಾನ್ ಸೇರಿ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಚೀನಾದಲ್ಲಿ ಆಸ್ಪತ್ರೆ ದಾಖಲಾತಿ ಕೂಡ ಹೆಚ್ಚಳವಾಗುತ್ತಿದೆ. ಆದ್ದರಿಂದ ಲಸಿಕೆಯ ಮೂರನೇ ಡೋಸ್ ಪಡೆದುಕೊಳ್ಳಬೇಕು. ಕೋವಿಡ್‌ಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಸಭೆ ನಡೆಸಿ, ಕೆಲ ತೀರ್ಮಾನಗಳನ್ನು ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದರು.

11ನೇ ಪುಟ ನೋಡಿ

ಕನಿಷ್ಠ 20 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ: ಕೂಡಲಸಂಗಮ ಶ್ರೀ

'ಬುತ್ತಿ ಸಮೇತ ಸುವರ್ಣಸೌಧಕ್ಕೆ ಮುತ್ತಿಗೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಡಿ. 22 ರಂದು ಬೃಹತ್ ಸಮಾವೇಶ ನಡೆಯುವುದು ಶತಃಸಿದ್ಧ. ಸುವರ್ಣಸೌಧದ ಬಳಿ ನಡೆಯುವ ಸಮಾವೇಶಕ್ಕೆ ನಮ್ಮ ಜನ ಬುತ್ತಿ ಕಟ್ಟಿಕೊಂಡು ಬರುತ್ತಾರೆ. ಜಾಗ ಬಿಟ್ಟು ಕದಲುವುದಿಲ್ಲ. ಮೀಸಲಾತಿ ಪಡೆದೇ ಮನೆಗೆ ಮರಳುವೆವು' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಗುರುವಾರ ಬೆಳಿಗ್ಗೆ 11ಕ್ಕೆ ಸಮಾವೇಶ ಆರಂಭವಾಗುತ್ತದೆ. ಮೀಸಲಾತಿ ಘೋಷಿಸಿದರೆ ಮುಖ್ಯಮಂತ್ರಿ ಅವರನ್ನು ಕರೆದು ಕಲ್ಲುಸಕ್ಕರೆ ತುಲಾಭಾರ ಮಾಡಿ, ಸಿಹಿ ತಿನ್ನಿಸುತ್ತೇವೆ. ಇಲ್ಲದಿದ್ದರೆ ಬಂಡಾಯದ ಧ್ವಜ ಎತ್ತುತ್ತೇವೆ, ಸಂಜೆಯವರೆಗೆ ಕಾಯ್ದು ಸೌಧಕ್ಕೆ ಮುತ್ತಿಗೆ ಹಾಕುತ್ತೇವೆ' ಎಂದರು.

'ಸೌಧದ ಬಳಿ 100 ಎಕರೆಯಷ್ಟು ವಿಶಾಲ ಜಾಗ ಸಿದ್ಧಮಾಡಿದ್ದೇವೆ.

7ನೇ ಪುಟ ನೋಡಿ

ಮೀಸಲಾತಿ ಅಧ್ಯಯನ ವರದಿ ಪೂರ್ಣವಾಗಿಲ್ಲ: ಜಯಪ್ರಕಾಶ್ ಹೆಗ್ಡೆ

ಬೆಂಗಳೂರು: ಪಂಚಮಸಾಲಿ ಸಮುದಾಯವನ್ನು ಪ್ರವರ್ಗ '2ಎ' ಮೀಸಲಾತಿಗೆ ಸೇರ್ಪಡೆ ಮಾಡುವ ಬೇಡಿಕೆ ಸೇರಿದಂತೆ ವಿವಿಧ ಸಮುದಾಯಗಳ ಮೀಸಲಾತಿ ಪುನರ್ ನಿಗದಿ ಕುರಿತು ಕೈಗೊಂಡಿರುವ ವರದಿ ಪೂರ್ಣ ಸಿದ್ಧವಾಗಿಲ್ಲ ಎಂದು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿದರು.

7ನೇ ಪುಟ ನೋಡಿ

> **ಲಿಂಗಾಯತ ಪಂಚಮಸಾಲಿ ಸಮಾಜದ ಪಂಚಶಕ್ತಿ ವಿರಾಟ ಸಮಾವೇಶಕ್ಕೆ ಬರುವವರನ್ನು ತಡೆಯುವುದಿಲ್ಲ. ಹೋರಾಟ ಶಾಂತ ರೀತಿಯಲ್ಲಿ ನಡೆಸಬೇಕು. ತೊಂದರೆಯಾದವರು ಆಯಾ ಜಿಲ್ಲಾ ಎಸ್ಪಿಯನ್ನು ಸಂಪರ್ಕಿಸಿ**
> **ಅಲೋಕುಮಾರ,** ಎಡಿಜಿಪಿ

'ವರದಿ ಬಂದ ನಂತರವೇ ಕ್ರಮ'

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗವು ವರದಿ ನೀಡಿದ ನಂತರವೇ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಪಂಚಮಸಾಲಿ ಸಮುದಾಯದವರು ನಮ್ಮವರೇ. ಅವರು ಬೇರೆ ಅಲ್ಲ' ಎಂದೂ ಅವರು ಹೇಳಿದರು.

ಒಳ ಪುಟಗಳು

ಕ್ರಿಸ್‌ಮಸ್, ಹೊಸ ವರ್ಷ: ಪ್ರವಾಸೋದ್ಯಮಕ್ಕೆ ಶುಕ್ರದೆಸೆ 5
ಆರ್ಥಿಕ ಬಿಕ್ಕಟ್ಟಿಗೆ ದಾರಿ ಖಾಸಗಿ ಕ್ರಿಪ್ಟೊ 10

₹1 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣ, 'ಬಿ' ವರದಿ ತಿರಸ್ಕೃತ

ಎಡಿಜಿಪಿ ಅಲೋಕ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪ್ರಕರಣದಲ್ಲಿ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ಸೇರಿದಂತೆ ಮೂವರು ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ವರದಿಯನ್ನು ತಿರಸ್ಕರಿಸಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, ನೇರ ವಿಚಾರಣೆ ಆರಂಭಿಸಲು ನಿರ್ಧರಿಸಿದೆ.

2015ರಲ್ಲಿ ವ್ಯಕ್ತಿಯೊಬ್ಬರಿಂದ ₹ 1 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪ್ರಕರಣದಲ್ಲಿ ಅಲೋಕ್ ಕುಮಾರ್, ಶೇಷಾದ್ರಿಪುರ ಉಪ ವಿಭಾಗದ ಆಗಿನ ಎಸಿಪಿ ದಾನೇಶ್ವರ್ ರಾವ್ ಮತ್ತು ವೈಯಾಲಿಕಾವಲ್ ಪೊಲೀಸ್ ಠಾಣೆಯ ಆಗಿನ ಇನ್‌ಸ್ಪೆಕ್ಟರ್ ಶಂಕರಾಚಾರಿ ವಿರುದ್ಧ ಸಲ್ಲಿಕೆಯಾಗಿದ್ದ ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು 'ಬಿ' ವರದಿ ಸಲ್ಲಿಸಿದ್ದರು.

6ನೇ ಪುಟ ನೋಡಿ

ನ್ಯಾಯಾಲಯದ ಆದೇಶದಲ್ಲೇನಿದೆ?

'ಸಾಕ್ಷಿಯಾಗಿದ್ದ ಪುಟ್ಟೇಗೌಡ ಅವರ ಹೇಳಿಕೆಯನ್ನು ತನಿಖಾಧಿಕಾರಿ ನಂಬಿಲ್ಲ. ಸಾಕ್ಷಿಯ ಹೇಳಿಕೆಯ ಕುರಿತು ಅಭಿಪ್ರಾಯ ನೀಡಬೇಕಿರುವುದು ನ್ಯಾಯಾಲಯವೇ ಹೊರತು ತನಿಖಾಧಿಕಾರಿಯಲ್ಲ. ಪುಟ್ಟೇಗೌಡರ ಹೇಳಿಕೆಯನ್ನು ಪುಷ್ಟೀಕರಿಸುವಂತಹ ಸಾಕ್ಷ್ಯಗಳು ಲಭಿಸಿಲ್ಲ ಎಂಬ ತನಿಖಾಧಿಕಾರಿಯ ತೀರ್ಮಾನವು ಸಮರ್ಥನೀಯವಲ್ಲ. ನೇರವಾದ ಸಾಕ್ಷ್ಯಗಳು ಲಭ್ಯವಿರುವಾಗ ಆರೋಪ ಪುಷ್ಟೀಕರಿಸುವಂತಹ ಇತರ ಸಾಕ್ಷ್ಯಗಳ ಅಗತ್ಯವಿಲ್ಲ. ತನಿಖಾ ಧಿಕಾರಿಯು ಲಭ್ಯ ಸಾಕ್ಷ್ಯಗಳನ್ನು ನ್ಯಾಯಾಲಯದ ಮುಂದಿಡುವ ಬದಲಿಗೆ ಆರೋಪಿಗಳನ್ನು ರಕ್ಷಿಸುವ ಪ್ರಯತ್ನ ಮಾಡಿದ್ದಾರೆ' ಎಂದು ನ್ಯಾಯಾಲಯ ಆದೇಶದಲ್ಲಿ ಹೇಳಿದೆ.

'ಆರೋಪಿಗಳು ಲಂಚಕ್ಕೆ ಬೇಡಿಕೆ ಇಟ್ಟಿರುವುದು ಹಾಗೂ ಪಡೆದಿರುವ ಕುರಿತು ವಿಚಾರಣೆಯ ಅಗತ್ಯವಿದೆ. ಅಂತಿಮ ವರದಿಯು ಸಮಗ್ರ ಹಾಗೂ ಪಾರದರ್ಶಕವಾಗಿಲ್ಲ. ತನಿಖೆಯೂ ಸಂಪೂರ್ಣವಾಗಿಲ್ಲ. ಆರೋಪಿಗಳ ವಿರುದ್ಧ ವಿಚಾರಣೆ ಆರಂಭಿಸಿ, ಸಮನ್ಸ್ ಜಾರಿಗೊಳಿಸಲು ಪೂರಕವಾದ ಹಲವು ಸಾಕ್ಷ್ಯಗಳು ತನಿಖಾಧಿಕಾರಿ ಸಲ್ಲಿಸಿರುವ 'ಬಿ' ವರದಿಯೊಳಗೇ ಇವೆ. ಪ್ರಕರಣವನ್ನು ಮುಕ್ತಾಯಗೊಳಿಸಲು ತನಿಖಾಧಿಕಾರಿ ಕೈಗೊಂಡಿರುವ ತೀರ್ಮಾನ ಸಮರ್ಪಕವಾಗಿಲ್ಲ' ಎಂದು ನ್ಯಾಯಾಧೀಶರು 'ಬಿ' ವರದಿಯನ್ನು ತಿರಸ್ಕರಿಸುವ ತೀರ್ಮಾನದಲ್ಲಿ ಹೇಳಿದ್ದಾರೆ.

ಸಭಾಪತಿಯಾಗಿ ಹೊರಟ್ಟಿ ಆಯ್ಕೆ

ಬೆಳಗಾವಿ: ಬಿಜೆಪಿಯಿಂದ ಪರಿಷತ್ತಿಗೆ ಆಯ್ಕೆಯಾಗಿದ್ದ ಬಸವರಾಜ ಹೊರಟ್ಟಿ ಅವರು ಮೂರನೇ ಬಾರಿ ಸಭಾಪತಿಯಾಗಿ ಆಯ್ಕೆಯಾದರು.

ಸಭಾಪತಿ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಗೆ ಹೊರಟ್ಟಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅರ್ಜಿ ಸಲ್ಲಿಸದವರೂ ಫಲಾನುಭವಿಗಳು- ತನಿಖೆಯಿಂದ ಬಯಲು

ಅಂಬೇಡ್ಕರ್ ನಿಗಮ: ₹ 25 ಕೋಟಿ ಅಕ್ರಮ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಳಗಾವಿ: ಸರ್ಕಾರದ ಆದೇಶ ಉಲ್ಲಂಘಿಸಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಐದು ಸಾವಿರ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನೇರ ಸಾಲ ಯೋಜನೆಯಡಿ ತಲಾ ₹ 50 ಸಾವಿರ ಮಂಜೂರು ಮಾಡಿ ₹ 25 ಕೋಟಿ ಅಕ್ರಮ ಎಸಗಿರುವುದೂ ಸೇರಿದಂತೆ ಭಾರಿ ಭ್ರಷ್ಟಾಚಾರ ನಡೆಸಿರುವುದು ಇಲಾಖೆಯ ಪ್ರಾಥಮಿಕ ತನಿಖೆಯಲ್ಲಿ ಬಹಿರಂಗವಾಗಿದೆ.

ಅಕ್ರಮ ದೂರುಗಳು ಬಂದ ಕಾರಣ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್ ಅವರನ್ನು ಅ. 29ರಂದು ಎತ್ತಂಗಡಿ ಮಾಡಿ ಆ ಜಾಗಕ್ಕೆ ಸುರೇಶ ನಾಯಕ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು.

ಕೆ.ಎಂ. ಸುರೇಶ್ ಕುಮಾರ್

ಸರ್ಕಾರದ ನಿರ್ದೇಶನದಂತೆ ಸುರೇಶ್ ಕುಮಾರ್ ಮೇಲಿನ ದೂರುಗಳ ಮೇಲೆ ಸುರೇಶ ನಾಯಕ ಅವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಅದರ ಪ್ರತಿ ಇಲಾಖೆಯಿಂದ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಆದರೆ, ತನ್ನನ್ನು ವರ್ಗಾವಣೆ ಮಾಡಿ ಸುರೇಶ ನಾಯಕ ಅವರನ್ನು ನೇಮಿಸಿದ ಕ್ರಮದ ವಿರುದ್ಧ ಕೆಎಟಿಯಿಂದ ತಡೆಯಾಜ್ಞೆ ತಂದು ಸುರೇಶ ಕುಮಾರ್ ಇದೇ 13ರಿಂದ ಮತ್ತೆ ನಿಗಮದ ಅಧ್ಯಕ್ಷ ಹುದ್ದೆಯಲ್ಲಿದ್ದಾರೆ.

> **ಅಕ್ರಮದ ದೂರು ಬಂದ ಕಾರಣಕ್ಕೆ ವ್ಯವಸ್ಥಾಪಕ ನಿರ್ದೇಶಕರನ್ನು ವರ್ಗಾವಣೆ ಮಾಡಲಾಗಿತ್ತು. ಆದರೆ, ಕೆಎಟಿ ತಡೆಯಾಜ್ಞೆ ನೀಡಿದೆ. ಆರೋಪಗಳ ಬಗ್ಗೆ ತನಿಖೆಗೆ ಆದೇಶ ಮಾಡಿದ್ದೇನೆ**
> **ಕೋಟ ಶ್ರೀನಿವಾಸ ಪೂಜಾರಿ,** ಸಮಾಜ ಕಲ್ಯಾಣ ಸಚಿವ

7ನೇ ಪುಟ ನೋಡಿ



ಗುರುವಾರದ ಉಷ್ಣಾಂಶ 27° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ.
ತುಂತುರು ಮಳೆ ಸಾಧ್ಯತೆ.

ಹವಾಮಾನ: ಶುಕ್ರವಾರ 27° 15° | ಶನಿವಾರ 27° 16° | ಭಾನುವಾರ 27° 17°

'ಕುಲಪತಿ ಹುದ್ದೆಗೆ ₹ 5 ಕೋಟಿ: ಇ.ಡಿ ಮಧ್ಯಪ್ರವೇಶಿಸಲಿ'

ಬೆಳಗಾವಿ: 'ಕುಲಪತಿ ಹುದ್ದೆಗೆ ₹ 5 ಕೋಟಿಗೆ ಮಾರಾಟ ಆಗುತ್ತಿದೆ ಎಂಬ ಬಿಜೆಪಿ ಸಂಸದ ಪ್ರತಾಪಸಿಂಹ ಹೇಳಿಕೆ ವಿಚಾರದಲ್ಲಿ ಲೋಕಾಯುಕ್ತ, ಇ.ಡಿ ತಕ್ಷಣ ಮಧ್ಯಪ್ರವೇಶಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಹಣ ಸರ್ಕಾರದಲ್ಲಿ ಯಾರಿಗೆ ತಲುಪಿದೆ? ಮಂತ್ರಿಗಳಿಗೆ ತಲುಪಿದೆಯೋ? ಅಧಿಕಾರಿಗಳಿಗೆ ತಲುಪಿದೆಯೋ? ಎಂಬುದು ಚರ್ಚೆ ಆಗಬೇಕು' ಎಂದರು.

'ವಿಧಾನಪರಿಷತ್‌ನಲ್ಲಿ ಈ ವಿಚಾರ ಪ್ರಸ್ತಾಪಿಸಲಾಗಿದೆ. ನಮ್ಮ ಮೇಲೆ ದಾಳಿ ಮಾಡಿ ತನಿಖೆ ಮಾಡುವವರು ಅವರ ಹೇಳಿಕೆ ವಿಚಾರದಲ್ಲೂ ತನಿಖೆ ಮಾಡಬೇಕು. ಸಿಬಿಐನವರು ನನ್ನ ಜತೆ ವ್ಯವಹಾರ ಇಟ್ಟುಕೊಂಡವರಿಗೆಲ್ಲ ನೋಟೀಸ್ ನೀಡಿ ವಿಚಾರಣೆ ಮಾಡಿದ್ದಾರೆ. ಹೀಗಾಗಿ, ಈ ವಿಚಾರದಲ್ಲಿ ಚರ್ಚೆ ಆಗಬೇಕು ಎಂದು ಕಾಂಗ್ರೆಸ್ ಆಗ್ರಹಿಸುತ್ತದೆ' ಎಂದರು.

'ಇ.ಡಿ, ಐಟಿ, ಸಿಬಿಐ, ಲೋಕಾಯುಕ್ತ ಸಂಸ್ಥೆಗಳು ಏನು ಮಾಡುತ್ತಿವೆ. ಈ ಸಂದರ್ಭದಲ್ಲಿ ರಾಜ್ಯಪಾಲರು ಹಾಗೂ ಅವರ ಕಚೇರಿ ಮೇಲೆ ಆರೋಪ ಮಾಡಲು ಆಗುವುದಿಲ್ಲ. ಅದು ಸರಿಯಲ್ಲ. ಕುಲಪತಿಗಳ ಹೆಸರನ್ನು ಸರ್ಕಾರ ಶಿಫಾರಸು ಮಾಡಿದರೆ ರಾಜ್ಯಪಾಲರು ನೇಮಕ ಮಾಡುತ್ತಾರೆ. ಶಿಕ್ಷಣ ವ್ಯವಸ್ಥೆಯ ಹುದ್ದೆ ಮಾರಾಟ ಭ್ರಷ್ಟಾಚಾರದ ವಿಚಾರವಾಗಿದ್ದು, ಬಿಜೆಪಿ ಸಂಸದರು ಹೇಳಿರುವ ವಿಚಾರವನ್ನು ನಾವು ಚರ್ಚೆ ಮಾಡದಿದ್ದರೆ ನಮ್ಮ ಕರ್ತವ್ಯದಲ್ಲಿ ಲೋಪ ಆಗಲಿದೆ. ಈ ಬಗ್ಗೆ ತನಿಖೆ ಆಗಬೇಕು, ಜನರಿಗೆ ವಿಚಾರ ತಿಳಿಯಬೇಕು' ಎಂದರು.

ಪ್ರತಾಪ್ ಬಳಿ ದಾಖಲೆ ಇದ್ದರೆ ಕೊಡಲಿ: ಅಶ್ವತ್ಥನಾರಾಯಣ

ಬೆಳಗಾವಿ: 'ಸಂಸದ ಪ್ರತಾಪ ಸಿಂಹ ಆಡಿರುವ ಮಾತಿನ ಬಗ್ಗೆ ಈಗಾಗಲೇ ತನಿಖೆಗೆ ಆದೇಶಿಸಲಾಗಿದ್ದು, ಅವರ ಬಳಿ ಆರೋಪಕ್ಕೆ ಸಂಬಂಧಿಸಿದ ದಾಖಲೆ ಇದ್ದರೆ ಅವರ ಬಳಿ ಇದ್ದರೆ ಕೊಡಲಿ' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಬಗ್ಗೆ ವಿಸ್ತೃತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ. ಯಾವುದೇ ಚುನಾಯಿತ ಪ್ರತಿನಿಧಿ ತಮ್ಮ ಅಭಿಪ್ರಾಯ ಮಂಡಿಸಿದರೆ ತಪ್ಪೇನು? ಪ್ರತಾಪ ಸಿಂಹ ಮಾತುಗಳಿಂದ ಸರ್ಕಾರಕ್ಕೆ ಮುಜುಗರ ಆಗುವಂತದ್ದೇನಿಲ್ಲ' ಎಂದರು.

'ನಮ್ಮ ಸರ್ಕಾರದ ಬಂದ ಮೇಲೆ ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲ. ಅಂತಹ ಭ್ರಷ್ಟಾಚಾರ ನಡೆದಿದ್ದು, ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿಯೇ ಎಂದು ಹೇಳಿದರು.

ಕಿರಿಯ ಆರೋಗ್ಯ ಪರಿವೀಕ್ಷಕರು: ಏಜೆನ್ಸಿಗೆ ಹಣ ಬಿಡುಗಡೆ ಮಾಡದ ಬಿಬಿಎಂಪಿ

5 ತಿಂಗಳಿಂದ ವೇತನ ಇಲ್ಲ

• ಆರ್. ಮಂಜುನಾಥ್

ಬೆಂಗಳೂರು: ಘನತ್ಯಾಜ್ಯ ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ 172 ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಜುಲೈನಿಂದ ಬಿಬಿಎಂಪಿ ವೇತನ ಬಿಡುಗಡೆ ಮಾಡಿಲ್ಲ.

ಪ್ರತಿ ವಾರ್ಡ್‌ನಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಮೇಲುಸ್ತುವಾರಿ ಜೊತೆಗೆ ಬ್ಲ್ಯಾಕ್‌ಸ್ಪಾಟ್ ನಿರ್ಮೂಲನೆ, ಮನೆಗಳಿಂದ ತ್ಯಾಜ್ಯ ಸಂಗ್ರಹ, ಸಾಗಣೆ ವಾಹನಗಳ ಲೆಕ್ಕಾಚಾರ, ಪೌರ ಕಾರ್ಮಿಕರ ಮೇಲ್ವಿಚಾರಣೆ ಜವಾಬ್ದಾರಿ ಹೊಂದಿರುವ ಕಿರಿಯ ಆರೋಗ್ಯ ಪರಿವೀಕ್ಷಕರನ್ನು (ಜೆಎಚ್‌ಐ) ಗುತ್ತಿಗೆ ಆಧಾರದಲ್ಲಿ 172 ಮಂದಿಯನ್ನು ನೇಮಿಸಿಕೊಳ್ಳಲಾಗಿದೆ.

ಬಿಬಿಎಂಪಿಯಲ್ಲಿ 2019ರಿಂದ ಗುತ್ತಿಗೆ ಆಧಾರದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಕಿರಿಯ ಆರೋಗ್ಯ ಪರಿವೀಕ್ಷಕ ಅಥವಾ ಘನತ್ಯಾಜ್ಯ ನಿರ್ವಹಣೆ ಪರಿವೀಕ್ಷಕ (ಜೆಎಚ್‌ಐ) ಎಂದು ನೇಮಿಸಿಕೊಳ್ಳಲಾಗುತ್ತಿದೆ. 2022ರ ಜೂನ್‌ವರೆಗೆ 120 ಜೆಎಚ್‌ಐಗಳಿದ್ದರು. ಜುಲೈನಲ್ಲಿ ಮತ್ತೆ 52 ಜೆಎಚ್‌ಐಗಳನ್ನು ನೇಮಿಸಿಕೊಳ್ಳಲಾಗಿದ್ದು, ಅಂದಿನಿಂದ 172 ಜೆಎಚ್‌ಐಗಳಿಗೂ ವೇತನ ಪಾವತಿ ಮಾಡಿಲ್ಲ. ಹೊಸ ಏಜೆನ್ಸಿಯವರೊಂದಿಗೆ ಒಪ್ಪಂದ ಪ್ರಕ್ರಿಯೆ ವಿಳಂಬ ಇದಕ್ಕೆ ಕಾರಣ ಎನ್ನಲಾಗಿದೆ.

'ಹೊಸ ಒಪ್ಪಂದ ಪ್ರಕ್ರಿಯೆಯಾದರೆ ಹೊಸದಾಗಿ ಬಂದ 52 ಮಂದಿಗೆ ವೇತನ ತೊಂದರೆಯಾಗಬೇಕಿತ್ತು. ಆದರೆ, ಹಳೆಯ ಜೆಎಚ್‌ಐಗಳಿಗೂ ವೇತನ ಪಾವತಿಯಾಗಿಲ್ಲ. ಏಜೆನ್ಸಿಯವರನ್ನು ಕೇಳಿದರೆ ಬಿಬಿಎಂಪಿ ಹಣ ಬಿಡುಗಡೆ ಮಾಡಿಲ್ಲ ಎನ್ನುತ್ತಾರೆ. ವೇತನದ ಜವಾಬ್ದಾರಿ ಹೊಂದಿರುವ ಘನತ್ಯಾಜ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರನ್ನು ಕೇಳಿದರೆ, ಹಿರಿಯ ಅಧಿಕಾರಿಗಳನ್ನು ಕೇಳಬೇಕು ಎನ್ನುತ್ತಾರೆ. ವೇತನ ಇಲ್ಲದೆ, ಸಾಕಷ್ಟು ಸಂಕಷ್ಟ ಎದುರಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಜೆಎಚ್‌ಐಗಳು ಅಳಲು ತೋಡಿಕೊಂಡರು.

'ಬೆಳಿಗ್ಗೆ 6.30ಕ್ಕೆ ಮಸ್ಟರಿಂಗ್ ಕೇಂದ್ರದಲ್ಲಿ ಬಯೊ ಮೆಟ್ರಿಕ್ ಹಾಜರಿ ನೀಡಬೇಕು. ಪೌರಕಾರ್ಮಿಕರೊಂದಿಗೆ ಸಮನ್ವಯ ಸಾಧಿಸಿ ಘನತ್ಯಾಜ್ಯ ನಿರ್ವಹಣೆ ಮಾಡಬೇಕು. ಮಧ್ಯಾಹ್ನ 2ಕ್ಕೆ ಮತ್ತೆ ಬಯೊಮೆಟ್ರಿಕ್ ಹಾಜರಿ ನೀಡಬೇಕು. ವೇತನ ಇಲ್ಲದೆ ಬಡ್ಡಿಗೆ ಹಣ ತಂದಿದ್ದೇವೆ' ಎಂದರು.

ಪ್ರತಿ ಗುತ್ತಿಗೆ ಜೆಎಚ್‌ಐಗೆ ಬಿಬಿಎಂಪಿ ₹28,500 ವೇತನ ನೀಡುತ್ತಿದ್ದು, ಅವರನ್ನು ಒದಗಿಸಿರುವ ಕ್ಷೀಮ್ ವೆಂಚರ್ಸ್ ಏಜೆನ್ಸಿ ಸೇವಾ ವೆಚ್ಚವಾಗಿ ₹1,500 ಕಡಿತ ಮಾಡಿಕೊಳ್ಳುತ್ತದೆ. ಪಿ.ಎಫ್ ಕಡಿತವಾಗಿ ಸುಮಾರು ₹24 ಸಾವಿರ ವೇತನ ಸಿಗುತ್ತಿದೆ.

ಒಪ್ಪಂದ ಪ್ರಕ್ರಿಯೆಯಿಂದ ವಿಳಂಬ...

'ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆ ವಿಳಂಬವಾಯಿತು. ಹೀಗಾಗಿ, ನಾಲ್ಕು ತಿಂಗಳಿಂದ ಜೆಎಚ್‌ಐಗಳಿಗೆ ವೇತನ ನೀಡಿಲ್ಲ. ಇದೀಗ ಒಪ್ಪಂದದ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಈ ತಿಂಗಳ ಅಂತ್ಯಕ್ಕೆ ಹಣವನ್ನು ಏಜೆನ್ಸಿಗೆ ಬಿಡುಗಡೆ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಪರಶುರಾಮ್ ಹೇಳಿದರು.

ಪ್ರಜಾವಾಣಿ ವಿಶೇಷ

ಗುತ್ತಿಗೆಯವರಿಗೆ ವಿಳಂಬ ಏಕೆ?

'ಬಿಬಿಎಂಪಿ ಅಧಿಕಾರಿಗಳು, ಎಂಜಿನಿಯರ್‌ಗಳಿಗೆ ತಿಂಗಳಿಗೆ ಸರಿಯಾಗಿ ವೇತನ ಬರುವಂತೆ ಎಲ್ಲ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಅವರಿಗೆ ತೊಂದರೆ ಆಗುತ್ತದೆ ಎಂದು ಮಾ.31ರ ಮಧ್ಯರಾತ್ರಿ ಬಜೆಟ್ ಅನುಮೋದಿಸಿದರು. ಕಾರ್ಯಗತವಾಗದ ಘನತ್ಯಾಜ್ಯ ವರ್ಗಾವಣೆ ಕೇಂದ್ರಗಳಿಗೆ ಕೋಟ್ಯಂತರ ಹಣ ಬಿಡುಗಡೆ ಮಾಡಿದ್ದಾರೆ. ಬಿಬಿಎಂಪಿ ಕಾಯಂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ವೇತನ ನೀಡಲಾಗುತ್ತದೆ. ಆದರೆ, ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವವರಿಗೆ ವೇತನ ನೀಡುವಲ್ಲಿ ಯಾವಾಗಲೂ ಅಧಿಕಾರಿಗಳಿಗೆ ತಾರತಮ್ಯ ಮಾಡುತ್ತಾರೆ. ಸರಿಯಾಗಿ ವೇತನ ನೀಡಲು ಸಾಧ್ಯವಿಲ್ಲ, ಹಣ ಇಲ್ಲ ಎಂದರೆ ಏಕೆ ನೇಮಿಸಿಕೊಳ್ಳಬೇಕು' ಎಂದು ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ಪ್ರಶ್ನಿಸಿದರು.

ವಾಜಪೇಯಿ ಕಪ್‌ಗೆ ಚಾಲನೆ

ರಾಜಾಜಿನಗರದ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದಿಂದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಪುರುಷ ಮತ್ತು ಮಹಿಳೆಯರಿಗಾಗಿ ಹಮ್ಮಿಕೊಳ್ಳಲಾಗಿರುವ ರಾಷ್ಟ್ರ ಮಟ್ಟದ 20ನೇ ವಾಜಪೇಯಿ ಕಪ್ ಕ್ರೀಡಾಕೂಟಕ್ಕೆ ಮಾಜಿ ಸಚಿವ ರಾಮಚಂದ್ರಗೌಡ ಚಾಲನೆ ನೀಡಿದರು. ಮಾಜಿ ಮೇಯರ್ ಕೆ. ಶಾಂತಕುಮಾರಿ, ಹೇಮಲತಾ ಗೋಪಾಲಯ್ಯ, ವಿನುತಾ ಹರೀಶ್, ಅರ್ಜುನ ಪ್ರಶಸ್ತಿ ಪುರಸ್ಕೃತೆ ಶೋಭಾ ನಾರಾಯಣ್, ಉಮಾದೇವಿ, ಅಂತರರಾಷ್ಟ್ರೀಯ ಕ್ರೀಡಾಪಟುಗಳಾದ ರಿಧಿಮಾ ವೀರೇಂದ್ರಕುಮಾರ್, ಅಶ್ವಿನಿ ಅಕ್ಕುಂಜಿ, ಪವಿತ್ರ, ರಜನಿ, ಅಂಜಲಿ, ಯುಕ್ತಿ ರಾಜೇಂದ್ರ, ಎಸ್. ಹರೀಶ್ ಇದ್ದರು.

ಸಂಕ್ಷಿಪ್ತ ಸುದ್ದಿ

ಇಂದಿನಿಂದ 'ಸ್ಕಿಲ್ ಟೆಕ್ ಎಕ್ಸ್‌ಪೊ–22'

ಬೆಂಗಳೂರು: ಹೊಸೂರು ರಸ್ತೆಯ ಸರ್ಕಾರಿ ಮಾದರಿ ಕೈಗಾರಿಕಾ ಸಂಸ್ಥೆಯ ಆವರಣದಲ್ಲಿ ಡಿ.22 ಮತ್ತು 23ರಂದು ಬೆಂಗಳೂರು ನಗರ ಜಿಲ್ಲಾಮಟ್ಟದ ಕೈಗಾರಿಕಾ ತರಬೇತಿ ಸಂಸ್ಥೆಗಳ ತಾಂತ್ರಿಕ ವಸ್ತು ಪ್ರದರ್ಶನ 'ಸ್ಕಿಲ್ ಟೆಕ್ ಎಕ್ಸ್‌ಪೊ–22' ಆಯೋಜಿಸಲಾಗಿದೆ.

26ಕ್ಕೂ ಹೆಚ್ಚು ಸಂಸ್ಥೆಗಳು ಭಾಗವಹಿಸಲಿವೆ. ಐಟಿಐ ವಿದ್ಯಾರ್ಥಿಗಳು ಸಿದ್ಧಪಡಿಸಿರುವ ಆವಿಷ್ಕಾರಗಳ 80ಕ್ಕೂ ಹೆಚ್ಚು ಮಾದರಿಗಳನ್ನು ವೀಕ್ಷಿಸಬಹುದು.

22ರಂದು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ನಿರ್ದೇಶಾನಾಲಯದ ಆಯುಕ್ತೆ ಕೆ.ಜ್ಯೋತಿ ಪ್ರದರ್ಶನಕ್ಕೆ ಚಾಲನೆ ನೀಡುವರು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ನಾಲ್ವರು ಕಲಾವಿದರಿಗೆ 'ಅಂಕಿತ ಪುಸ್ತಕ ಬಹುಮಾನ'

ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನವು ಮುಖಪುಟ ವಿನ್ಯಾಸ ಸ್ಪರ್ಧೆಯ ಫಲಿತಾಂಶ ಘೋಷಿಸಿದ್ದು, ಸತೀಶ್ ಯಲ್ಲಾಪುರ ಸೇರಿ ನಾಲ್ವರು ಕಲಾವಿದರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಂದೀಪ್ ಎಸ್., ಅಜಿತ್ ಹಾಗೂ ಸೌಮ್ಯ ಶಿಂದೆ ಅವರು ಬಹುಮಾನಕ್ಕೆ ಆಯ್ಕೆಯಾದ ಕಲಾವಿದರಾಗಿದ್ದಾರೆ.

ಕಳೆದ ಜುಲೈ 28ರಂದು ಪ್ರಕಾಶನವು 'ಹಸ್ತಿನಾವತಿ' ಕಾದಂಬರಿ ಮುಖಪುಟ ರಚನೆಯ ಸ್ಪರ್ಧೆ ಘೋಷಿಸಿತ್ತು.
ಈ ಸ್ಪರ್ಧೆಯಲ್ಲಿ 16 ಕಲಾವಿದರು ಭಾಗವಹಿಸಿದ್ದರು. ಕಲಾವಿದ ಹಾಗೂ ಮುಖಪುಟ ವಿನ್ಯಾಸಗಾರ ಸುಧಾಕರ ದರ್ಬೆ ಅವರು ನಾಲ್ಕು ಮುಖಪುಟಗಳನ್ನು ಆಯ್ಕೆ ಮಾಡಿದ್ದಾರೆ.

ಬಹುಮಾನವು ತಲಾ ₹ 5 ಸಾವಿರ ನಗದು ಒಳಗೊಂಡಿದೆ. 2023ರ ಫೆ.19ರಂದು 'ಹಸ್ತಿನಾವತಿ' ಕೃತಿ ಬಿಡುಗಡೆಯಾಗಲಿದ್ದು, ಅದೇ ಸಮಾರಂಭದಲ್ಲಿ ಬಹುಮಾನ ಪ್ರದಾನ ಮಾಡಲಾಗುವುದು ಎಂದು ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ICAR-National Dairy Research Institute
Southern Regional Station, Bengaluru- 560030
F.No.3-34/CDN/LRC/T-Coconut/NDRI/2019-20 Date:19/12/2022
Notice for Inviting Quotations for Harvest of Tender Coconut Yield
Sealed quotations are invited for the harvest of tender coconut from about 484 trees from the above mentioned address for eleven months. Blank quotation along with terms and conditions may be obtained from the office of undersigned on or before 16-01-2023 at 2.00 p.m.
Sd/- Asst. Administrative Officer
Landline No.080-22631405

fabindia
60 YEARS OF CELEBRATING INDIA ESTABLISHED 1960
CLEARANCE SALE
FLAT 50 %OFF* ON SELECT MERCHANDISE
10 am - 8 pm
Venue :
Srinivasa Sagar Kalyana Mahal, T.Mariyappa Road, 2nd Block, Jayanagar, (Near Ashoka Pillar), Bangalore – 560 011
Raja Rajeshwari Kalyana Mantapa, 2nd Block, Dr. Rajkumar Road, Rajajinagar, Bangalore – 560 010
fabfamily | fabindia.com | ALL COVID-19 PROTOCOLS WILL BE TAKEN CARE OF *T&C Apply
Surya Agency Private Limited

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2022–23/44
ದಿನಾಂಕ : 14–12–2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಅಶೋಕಪುರಂ ಯಾರ್ಡ್ ಓಹೆಚ್‌ಇ ಮಾರ್ಪಾಡು ಕಾಮಗಾರಿ.	ರೂ. 1,45,30,425.56

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05–01–2023 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಮೈಸೂರು
ಪಿಯುಬಿ/550/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

NOTICE
This is to notify that Ford Fiesta car bearing regn no KA01MC 0086, owned by Mr. Krishna Reddy (represented by Mr.Vijay) is lying in our parking since 2016. The said vehicle shall be disposed as Scrap to recover the parking charges. Any one proving the ownership to revert us in 7 working days upon this notice.
Contact **Bodyshop Manager**
(96633 15073)
CAUVERY FORD, Kamakshipalya, Bangalore.

NOTICE
This is to notify that Ford Figo car bearing regn no KA50P6464, owned by Mr. Havish Basavraj, is lying in our parking since 2017. The said vehicle shall be disposed as Scrap to recover the parking charges. Any one proving the ownership to revert us in 7 working days upon this notice.
Contact **Bodyshop Manager**
(96633 15073)
CAUVERY FORD, Kamakshipalya, Bangalore.

ನೈಋತ್ಯ ರೈಲ್ವೆ
ಇ-ಟೆಂಡರ್ ಸೂಚನೆ ಸಂ.: E-GSU-ELE-2022-23-OT-4
ದಿನಾಂಕ: 17.12.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
1. ಹೊಸೂರು ಯಾರ್ಡ್‌ನಲ್ಲಿ ರಸ್ತೆ 5 ರ ಮೇಲಿನ ಹೆಚ್ಚುವರಿ ಲೂಪ್ ಲೈನ್‌ಗೆ ವಿದ್ಯುತ್ ವ್ಯವಸ್ಥೆ. 2. ಹೊಸೂರು ಯಾರ್ಡ್ ಅನ್ನು ಮರು ರೂಪೀಕರಣಗೊಳಿಸುವುದಕ್ಕಾಗಿ ಬೇಕಾದ ವಿದ್ಯುತ್ ವ್ಯವಸ್ಥೆ.	ರೂ. 1,05,08,419/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.01.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ / ಗತಿ ಶಕ್ತಿ ಘಟಕ ಬೆಂಗಳೂರು
PUB/559/AAD/PRB/SWR/2022-23
S.W.Railways SWRRLY SWRRLY

CORRIGENDUM
With reference to our advertisement published in this newspaper on 20th December 2022, captioned **Extents** should be read as **Guntas - 26** instead of Guntas - 0.2. Other information remains the same.
Archana Sindhe, Advocate,
No.45, I Floor, out house,
NR Colony, Basavanagudi,
Bangalore-560 004.
Mobile No. 9844488872

ವೇಮಗಲ್–ಕುರುಗಲ್ ಪಟ್ಟಣ ಪಂಚಾಯಿತಿ ಕಾರ್ಯಾಲಯ,
ಕೋಲಾರ ತಾಲ್ಲೂಕು–563 127. website:www.tpvemagalkurugal@gmail.com
ಸಂಖ್ಯೆ:ವೇ–ಕುಪಪಂ/ತಾಂತ್ರಿಕ/15ನೇಹಕಾ/ಸಿಆರ್/130/2022–23 ದಿನಾಂಕ: 19.12.2022
ಟೆಂಡರ್ ಪ್ರಕಟಣೆ
(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು 2 ರ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ವೇಮಗಲ್–ಕುರುಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವೇಮಗಲ್ ಮತ್ತು ಕುರುಗಲ್ ಭಾಗದ ಹಳ್ಳಿಗಳಲ್ಲಿ ನೈರ್ಮಲ್ಲೀಕರಣ ರಸ್ತೆ ಚರಂಡಿ ಸ್ವಚ್ಛತೆ ಮಾಡಿ ಬ್ಲೀಚಿಂಗ್ ಪೌಡರ್ ಸಿಂಪಡಣೆ ಮಾಡಲು ಹಾಗೂ ಬೇಕಾಗುವ ಸ್ವಚ್ಛತಾ ವಾಹನವನ್ನು ಬಾಹ್ಯ ಮೂಲದಿಂದ ಪಡೆಯುವ ಕಾಮಗಾರಿ 2021–22ನೇ ಸಾಲಿನ 14ನೇ ಹಣಕಾಸು ಯೋಜನೆಯಡಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಏಜನ್ಸಿದಾರರು/ ಕನ್ಸಲ್ಟೆಂಟ್ಸ್/ಗುತ್ತಿಗೆದಾರರು ರವರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್: **https://eproc.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. **(1)** ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ದಿನಾಂಕ: 07.01.2023ರ ಸಂಜೆ 05.00 ಗಂಟೆವರೆಗೆ. (2)** ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 09.01.2023 ಬೆಳಗ್ಗೆ 11.00 ಗಂಟೆಗೆ. ಸೂಚನೆ:** ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯಿತಿ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/- ಮುಖ್ಯಾಧಿಕಾರಿ, ವೇಮಗಲ್–ಕುರುಗಲ್ ಪಟ್ಟಣ ಪಂಚಾಯಿತಿ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ431/ಎಂ.ಸಿ.ಎ/2022–23
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.: CAO/CN/BNC/131/2022
ದಿನಾಂಕ: 19.12.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಸ್ವಾಮಿಹಳ್ಳಿ – ರಾಯದುರ್ಗ ನಿಲ್ದಾಣಗಳ ನಡುವೆ (52.0 ಕಿ.ಮೀ.) ಅಂತಿಮ ಸ್ಥಳಗಳ ಸಮೀಕ್ಷೆ. (ಟೆಂಡರು ಉಲ್ಲೇಖ ಸಂ. SMLI-RDG-FLS-01)	ರೂ. 5,91,53,626/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.01.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು
PUB/558/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಓಪನ್ ಟೆಂಡರ್ ಸೂಚನೆ ಸಂ.: 21/SBC/22
ದಿನಾಂಕ: 16.12.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು: ಬೆಂಗಳೂರು ಸಿಟಿ ಯಾರ್ಡ್‌ನಲ್ಲಿ ಈಗಿರುವ ಪಿಟ್ ಲೈನ್ 3 ಅನ್ನು ಕಿತ್ತುಹಾಕುವುದು ಮತ್ತು ಕ್ಯಾಟ್ ವಾಕ್‌ನೊಂದಿಗೆ ಕ್ಯಾಮ್‌ಟೆಕ್ ಡಿಜೈನ್ ಅನುಸಾರವಾಗಿ ಪಿಟ್ ಲೈನ್ 3 ಅನ್ನು ಮರುನಿರ್ಮಾಣ ಮಾಡುವುದು. ನಿರ್ವಹಣಾ ಅವಧಿ: 4 ತಿಂಗಳುಗಳು	ರೂ. 6,50,54,189/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.01.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್ / ಸಂಯೋಜನೆ ಬೆಂಗಳೂರು
PUB/557/AAD/PRB/SWR/2022-23
S.W.Railways SWRRLY SWRRLY

PUBLIC NOTICE
I, V. VIJAYALAKSHMI, W/o Sri. V. Lakshminarayana, aged about 68 years, R/at No.258, 3rd Cross, 2nd Main, III Phase, J.P.Nagar, Bengaluru – 560 078, do hereby bring to the notice to the general public by this "PUBLIC NOTICE" as under:

1. I am one of the children out of seven children to my parents. I am being only girl child to the family, my parents and my brothers have taken care of me in the best possible way. In fact, with the proceeds given by my parents, myself and my brothers were doing business under the name and style of "M/s. Teju Constructions".
2. I am married to one **Sri. V. Lakshminarayana** on 01/06/1970. From out of our wedlock, I have two sons and one daughter viz., V. L. Bharath Raj, V.L. Sharath Raj and Smt.Tejavathi. Due to my efforts, I have given proper education to my children more particularly to my daughter who is a Doctor by profession.
3. My husband was working in various places including CPWD and ultimately expressed his interest to join the business done by me and my brothers. Accordingly, we floated a company by name **M/s.Nirman Shelters (B) Private Limited,** in which, my husband, my brothers and son are the promoting Directors. The capital for the said business was pooled in by me and my brothers, which business developed multi-fold and the said Company made huge amounts of profits. This resulted in accumulation of various properties.
4. When such being the case, just to usurp the entire property those were made with the hard effort of the family members, the said V. Lakshminarayan in the guise of tax planning obtained signatures of myself and my children on certain documents known as settlement deeds and got the same registered under which, the properties owned by us were sought to be settled in our names by making nasty and false allegations. As we never had any doubt in respect of the acts of **V. Lakshminarayan** and we blindly signed the same without reading the contents of the said documents. Subsequent to the same, the said **V. Lakshminarayan** started to change his behaviour entirely and by which time he is in a relationship with a office staff by name **Smt. Sushma Murthy** as his kept mistress and he is under full control of the said lady and another person by name **Sri. Shashi S Patil** and he started to act according to their dictum and started to distance himself from us. When said Sri.V.Lakshminarayan was aged about 70 years, (now aged 76) he has instituted proceedings before the Family Court for a decree of divorce seeking annulment of our marriage which is pending consideration before the Hon'ble Family Court in **M.C. No.640/2016.**
5. That apart, the said V. Lakshminarayan, who is worth several crores holding several immoveable properties has instituted proceedings before the Assistant Commissioner under Maintenance and Welfare of Senior Citizens Act in Misc (SC) CR No.2/2021-22 against one of our son Sri. V. L. Bharathraj by making false allegations against him and claiming that he is in rented house and sought to seek cancellation of documents stood in my son's name. After contest, the said proceedings came to be dismissed.
6. My daughter **Dr. Tejavathi** has now joined her father V. Lakshminarayan as she has been promised huge money and properties in her name by my husband. Accordingly, my daughter under the instigation of V. Lakshminarayan and his kept mistress **Smt. Sushma Murthy,** in the guise of taking care of my health, my daughter convinced me that keeping gold and diamonds worth several crores at house is bad and in the guise of keeping the same in the safe locker took over the same. When it was realised that my daughter **Dr. Tejavanthi has stolen my jewellery,** I have lodged a complaint against my daughter before the jurisdictional Police, which is registered as **Crime No.200/2021.** Similarly, my husband V. Lakshminarayan my daughter and their goons had tried to dispossess me from my house. With the help of my son I managed to retain the possession of my house and lodged a police complaint against all of them for their illegal acts before jurisdictional Police, who after investigation filed charge sheet against them in **CC No.15978/2021.**
7. As my husband and daughter could not achieve what they want, my daughter has filed a false suit against me in respect of my house property in OS No.6411/2021. Likewise, my daughter has filed a false suit against my son Sri. V.L. Bharathraj in OS No.2742/2021, which suits are pending consideration.
8. That apart, it is now within the knowledge of general public through various newspapers and electronic media that said V. Lakshminarayan is involved in various illegal acts, in which, he has usurped the Civic Amenity sites in the layouts formed by the said Company and sold the same to gullible purchasers and made huge money. With respect to the said illegal acts, various proceedings, criminal cases are pending before various authorities and all probability, the said CA site would be restored back to its original position and the gullible purchasers would lose the same and the said V. Lakshminarayan would be punished for such illegal acts as per law.
9. My husband Sri. V. Lakshminarayan has also running a Company by name **M/s. Nava Nirman VLN Prabhuddhalaya and Ayurdham Private Limited,** and has constructed and running old age home on civic amenity site. The entire management is now transferred illegally to his kept mistress **Smt. Sushma Murthy** name.
10. When **Sri. V. Lakshminarayan** and his kept mistress **Smt. Sushma Murthy,** my daughter **Dr.Tejavanthi** have realised that they cannot sustain all these any more, they are in the process of selling all the properties standing in the name of Sri. V. Lakshminarayan, close the Companies and old age home and flee the country. Myself and my sons have our rightful share in various properties currently standing in the name of Sri. V. Lakshminarayan. Hence, it is hereby notified to the general public from **NOT TO** entering into any kind of agreements/sale deeds in respect of any properties offered by said Sri. V. Lakshminarayan and part with monies. Despite this notice, if they were to indulge in such acts with said Sri. V. Lakshminarayan, they would be doing so at their own cost and risk.

Bengaluru.
Date: 20/12/2022.
Vijayalakshmi

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿ-1, (ಮೆಟ್ರೋ ರೈಲು ಯೋಜನೆ), ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು-01.
ನಂ.: ಕೆಐಎಡಿಬಿ/ಭೂಸ್ವಾ/ಮೆಟ್ರೋ/ಏರ್‌ಪೋರ್ಟ್‌ಲೈನ್–2ಬಿ/2022–23 ದಿನಾಂಕ: 20.12.2022
ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು 2ನೇ 'ಬಿ' ಹಂತದ **"ಮೆಟ್ರೋ ರೈಲು ಯೋಜನೆಯ"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾರಂಭಿಕ ಅಧಿಸೂಚನೆಯನ್ನು ಸಂಖ್ಯೆ: ಸಿಐ **312** ಎಸ್‌ಪಿಕ್ಯೂ(ಇ) **2022** ದಿನಾಂಕ **12–12–2022** ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ: 12–12–2022** ರಂದು ಪ್ರಕಟಣೆ ಹೊರಡಿಸಿದೆ ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ (ಮೆಟ್ರೋ) ಬೆಂಗಳೂರು ರವರ ಕಛೇರಿಯಲ್ಲಿ ದಿನಾಂಕ: **17–01–2023 ರಂದು ಬೆಳಿಗ್ಗೆ 11.30 ಗಂಟೆಗೆ** ವಿಚಾರಣೆ ನಿಗಧಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರ ವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯದ ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ, ವೈಗೈರೆ ಮಾಡುಬಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದುವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರಧನ ನಿಗಧಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.
ಷೆಡ್ಯೂಲ್ ಸ್ವತ್ತುಗಳು
ವಿಚಾರಣೆ ದಿನಾಂಕ: 17.01.2023 ವಿಚಾರಣೆ ಸಮಯ: ಬೆಳಿಗ್ಗೆ 11.30 ಗಂಟೆಗೆ
ಗ್ರಾಮದ ಹೆಸರು: ನಾಗವಾರ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ: ಬೆಂಗಳೂರು ನಗರ

ಕ್ರ. ಸಂ.	ಖಾತಾದಾರರ ಹೆಸರು	ಗುರುತಿನ ಸಂಖ್ಯೆ	ಎಲ್‌ಎ/ಸಿಟಿಎಸ್ ಸರ್ವೆ ನಂಬರ್	ಬಿಬಿಎಂಪಿ ಸ್ವತ್ತಿನ ಸಂಖ್ಯೆ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಚ.ಮೀ
1	ಮೆ: ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಪ್ರೈ.ಲಿ	ARP-VRP-2-ADL-1	87/3 87/2A	ಕ್ರ.ಸಂ. 230/87/ 2ಎ/87/3	1235.71 1527.22
2	ಡಾ: ಕರ್ತಾರ್ ಸಿಂಗ್ ಲಾಲ್‌ವಾನಿ ಬಿನ್ ತಿರತ್ ಸಿಂಗ್ ಲಾಲ್‌ವಾನಿ	ARP-VRP-2-ADL-1A	89/3	267/591/89/3	1419.70

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–1,
ಕೆಐಎಡಿಬಿ (ಮೆಟ್ರೋ ರೈಲು ಯೋಜನೆ), ನೃಪತುಂಗ ರಸ್ತೆ, ಬೆಂಗಳೂರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.
ಸಂ.: ಬಿಐಎಎಪಿಎ/ಟಿಪಿ/ಭೂಉಬ/83/2022–23/2045 ದಿನಾಂಕ: 20.15.2022
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸಿ.ಎಸ್. ವೆಂಕಟೇಶ್ ಬಿನ್ ಲೇ॥ ಸಿ.ಎಸ್. ನಾರಾಯಣಪ್ಪ	ದೇವನಹಳ್ಳಿ	ಚನ್ನರಾಯಪಟ್ಟಣ	ತಮ್ಮೇನಹಳ್ಳಿ	7/2	2–06	ವ್ಯವಸಾಯ	ವಾಣಿಜ್ಯ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ/ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಾಣಿಜ್ಯ ಉದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ. ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ವಾಸಾಸಂಇ/ಉನಿಕ/ಬೆಂ.ಗ್ರಾಜಿ/3657/ಆಕಾರ್/2022–23

ಗ್ರಾಮೀಣ ಶಾಲೆಗಳಲ್ಲೇ ವಿಶೇಷ ಶಿಕ್ಷಣ, ಲಿಂಗ ತಾರತಮ್ಯಕ್ಕೆ ಸಡ್ಡು

ವಿದ್ಯಾರ್ಥಿನಿಯರ ವಿಜ್ಞಾನದ ಕನಸಿಗೆ 'ಕಲಿಸು' ರೆಕ್ಕೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 'ಅಪ್ಪ, ಅಮ್ಮ ಕೂಲಿ ಅರಸಿ ನಾಲ್ಕು ವರ್ಷಗಳ ಹಿಂದೆ ಬೆಳಗಾವಿ ಜಿಲ್ಲೆಯಿಂದ ದೊಡ್ಡಬಳ್ಳಾಪುರಕ್ಕೆ ಬಂದಿದ್ದರು. ನಾನು ಅಲ್ಲೇ ಕನ್ನಡ ಮಾಧ್ಯಮದಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿದೆ. ವಿಜ್ಞಾನ ಕ್ಷೇತ್ರದಲ್ಲಿ ಸಾಧಿಸಬೇಕೆಂಬ ಕನಸಿಗೆ 'ಕಲಿಸು' ರೆಕ್ಕೆ ತೊಡಿಸಿದೆ. ಭವಿಷ್ಯದಲ್ಲಿ ಜಗತ್ತೇ ಮೆಚ್ಚುವ ಕೆಲಸ ಮಾಡುವ ಭರವಸೆ ಮೂಡಿದೆ'

–ಇದು ದೊಡ್ಡಬಳ್ಳಾಪುರ ಸಮೀಪದ ತೂಬುಗೆರೆ ದೇವರಾಜ ಅರಸು ಪಿಯು ಕಾಲೇಜು ಪ್ರಥಮ ವರ್ಷದ ವಿದ್ಯಾರ್ಥಿನಿ ಲಕ್ಷ್ಮಿ ಆನಂದ ಕುಂಬಾರ್ ಅವರ ಮಾತು.

ಹುಕ್ಕೇರಿ ತಾಲ್ಲೂಕು ಕೋಟಬಾಗಿಯ ಆನಂದ ಕುಂಬಾರ್ ಅವರು ಮೇವಿನ ಹುಲ್ಲು ಕತ್ತರಿಸುವಾಗ ಯಂತ್ರಕ್ಕೆ ಕೈಕೊಟ್ಟು ಬೆರಳು ಕಳೆದುಕೊಂಡಿದ್ದರು. ದುಡಿಮೆ ಇಲ್ಲದೆ ಸಾಲ ಹೆಚ್ಚಾದಾಗ ಕೆಲಸ ಹುಡುಕಿಕೊಂಡು ಪತ್ನಿ ಮಹಾನಂದ ಅವರ ಜತೆ ದೊಡ್ಡಬಳ್ಳಾಪುರಕ್ಕೆ ಬಂದಿದ್ದರು. ಅಲ್ಲಿ ತೋಟವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಒಬ್ಬಳೇ ಮಗಳನ್ನು ಕಷ್ಟಪಟ್ಟು ಓದಿಸುತ್ತಿದ್ದಾರೆ.

'ಪ್ರೌಢಶಾಲೆಯಲ್ಲಿ ಇದ್ದಾಗ ಕ್ವೆಸ್ಟ್ ಅಲಯನ್ಸ್ ಸಂಸ್ಥೆಯ ವಿಶೇಷ ತಜ್ಞ ಅಭಿರಾಮ್ ಅವರು ನೀಡಿದ ಮಾಹಿತಿ ವಿಜ್ಞಾನ ಕ್ಷೇತ್ರದ ಬಗ್ಗೆ ಕುತೂಹಲ ಮೂಡಿಸಿತು. ಐಐಎಸ್ಸಿಯಲ್ಲಿ ನಡೆಯುತ್ತಿರುವ 10 ದಿನಗಳ ಕಾರ್ಯಾಗಾರ ಕನಸನ್ನು ಮತ್ತಷ್ಟು ವಿಸ್ತಾರಗೊಳಿಸಿದೆ' ಎನ್ನುತ್ತಾರೆ ಲಕ್ಷ್ಮಿ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ), ಐಬಿಎಂ ಕಂಪನಿ ಹಾಗೂ ಕ್ವೆಸ್ಟ್ ಅಲಯನ್ಸ್ ಸಂಸ್ಥೆ ಸಹಯೋಗದಲ್ಲಿ ಗ್ರಾಮೀಣ ವಿದ್ಯಾರ್ಥಿನಿಯರಿಗೆ ವಿಜ್ಞಾನ ವಿಷಯಗಳು ಹಾಗೂ 21ನೇ ಶತಮಾನದ ಕೌಶಲಗಳನ್ನು ಅನ್ವೇಷಿಸಲು ಅನುಕೂಲವಾಗುವಂತೆ 'ಕಲಿಸು' (ಕರ್ನಾಟಕ ಲರ್ನಿಂಗ್ ಇನಿಶಿಯೇಟಿವ್ ಫಾರ್ ಸೈನ್ಸ್ ಅಂಡರ್ ಗ್ರಾಜುಯೇಟ್ಸ್) ಯೋಜನೆ ರೂಪಿಸಲಾಗಿದೆ. ಪಿಯುಸಿ ಮುಗಿದ ತಕ್ಷಣ ವೈದ್ಯಕೀಯ, ಎಂಜಿನಿಯರಿಂಗ್ ಎನ್ನುವ ವಿದ್ಯಾರ್ಥಿಗಳಿಗೆ ವಿಜ್ಞಾನ ಕ್ಷೇತ್ರದ ಆಗಾಧ ಅವಕಾಶಗಳನ್ನ ಪರಿಚಯಿಸುವ ಕಾರ್ಯ ಮಾಡಲಾಗುತ್ತಿದೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳ ಮಧ್ಯೆ ವಿಜ್ಞಾನ ಕಲಿಕೆಯಲ್ಲಿ ಭಾರಿ ಅಂತರವಿದೆ. ಅದರಲ್ಲೂ, ವಿಶೇಷವಾಗಿ ಹೆಣ್ಣುಮಕ್ಕಳಲ್ಲಿ ಈ ಅಂತರ ಅತಿ ಹೆಚ್ಚು. ವಿಜ್ಞಾನ ಹೆಣ್ಣು ಮಕ್ಕಳಿಗಲ್ಲ ಎಂಬ ಸಾಮಾಜಿಕ ಧೋರಣೆಯ ಕಾರಣ ಬಹುತೇಕ ಗ್ರಾಮೀಣ ಶಾಲೆಗಳಲ್ಲಿ ಇಂದಿಗೂ ವಿದ್ಯಾರ್ಥಿನಿಯರು ವಿಜ್ಞಾನ ಕಲಿಕೆಯಿಂದ ದೂರ ಉಳಿದಿದ್ದಾರೆ.

ರಾಜ್ಯದ ಅಂತಹ 306 ಶಾಲೆಗಳನ್ನು ಕ್ವೆಸ್ಟ್ ಅಲಯನ್ಸ್ ಸಂಸ್ಥೆ ಗುರುತಿಸಿದ್ದು, ಎರಡು ಶಾಲೆಗಳಿಗೆ ಒಬ್ಬರಂತೆ ವಿಶೇಷ ತಜ್ಞರನ್ನು ನೇಮಕ ಮಾಡಿದೆ. 8ನೇ ತರಗತಿಯಿಂದಲೇ ಮಕ್ಕಳಿಗೆ ವಿಜ್ಞಾನ, ಕೌಶಲ ತರಬೇತಿ ನೀಡಲಾಗುತ್ತಿದೆ. ಮೂರು ವರ್ಷಗಳಲ್ಲಿ 62,283 ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ಪ್ರತಿ ವರ್ಷ 20 ವಿದ್ಯಾರ್ಥಿನಿಯರಿಗೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಕ್ಯಾಂಪಸ್‌ನಲ್ಲಿ 10 ದಿನಗಳು ವಿಶೇಷ ಕಾರ್ಯಾಗಾರ ಆಯೋಜಿಸಲಾಗುತ್ತದೆ. ಈ ಕಾರ್ಯಕ್ರಮವನ್ನು ದೇಶದ 20 ರಾಜ್ಯಗಳಿಗೂ ವಿಸ್ತರಿಸಲಾಗಿದ್ದು, ಇದುವರೆಗೂ 1 ಲಕ್ಷಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ನೆರವು ನೀಡಲಾಗಿದೆ.

ಕಾರ್ಯಾಗಾರದಲ್ಲಿ ಭಾಗಿಯಾದ ಎಂ.ಬಿ.ಪ್ರಿಯಾ ಚಿಕ್ಕ ವಯಸ್ಸಿಗೇ ತಂದೆ ಕಳೆದುಕೊಂಡು ತಾಯಿಯ ಆಸರೆಯಲ್ಲಿ ಬೆಳೆದಿದ್ದಾರೆ. ತಾಯಿ ಅಕ್ಕಮ್ಮ ಬೆಂಗಳೂರಿನಲ್ಲಿ ಕೆಲಸ ಮಾಡಿ ಮೂವರು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. 'ಚಿಕ್ಕವಳಿದ್ದಾಗ ಆರೋಗ್ಯ ಸಮಸ್ಯೆಗೆ ವೈದ್ಯರ ಬಳಿ ಹೋಗುತ್ತಿದ್ದೆ. ನಾನೂ ಅವರಂತೆ ವೈದ್ಯಳಾಗಬೇಕು ಎಂದು ಕನಸು ಕಂಡಿದ್ದೆ. ಐಐಎಸ್ಸಿಗೆ ಬಂದಮೇಲೆ ವಿಜ್ಞಾನ ಇನ್ನಷ್ಟು ಹತ್ತಿರವೆನಿಸಿದೆ' ಎಂದರು.

ಗದಗ ಜಿಲ್ಲೆಯ ಜಯಶ್ರೀ, ಕೋಲಾರದ ಸಾಯಿ ಲಿಖಿತ ಸೇರಿದಂತೆ ಎಲ್ಲರಿಗೂ ಅಲ್ಲಿನ ವಿಜ್ಞಾನ ಪ್ರಯೋಗಾಲಯ, ಪ್ರಾಧ್ಯಾಪಕರ ವಿದ್ವತ್ತು, ವಿಜ್ಞಾನದ ವೈವಿಧ್ಯ ವಿಷಯಗಳು, ಸಮಾಜಮುಖಿ ಚಿಂತನೆ, ಗೌರವದ ನಡೆಗಳು ಗಾಢವಾಗಿ ಸೆಳೆದಿವೆ.

ಗ್ರಾಮೀಣ ಮಕ್ಕಳಲ್ಲೂ ಅಪಾರ ಪ್ರತಿಭೆ ಇರುತ್ತದೆ. ಸೂಕ್ತ ಅವಕಾಶ, ಸೌಲಭ್ಯ ದೊರೆತರೆ ಅವರೂ ಮೇರು ಸಾಧನೆ ಮಾಡಬಲ್ಲರು. 'ಕಲಿಸು' ಅಂತಹ ಅವಕಾಶ ಒದಗಿಸಿದೆ.

ಪ್ರೊ.ದೀಪಕ್ ಸೈನಿ, ಪ್ರಾಧ್ಯಾಪಕರು, ಜೈವಿಕ ವಿಜ್ಞಾನ ವಿಭಾಗ, ಐಐಎಸ್ಸಿ

ಲಕ್ಷ್ಮಿ

ಸಹನಾ

ಬಾಲ್ಯ ವಿವಾಹ ತಡೆದಿದ್ದ ಬಾಲೆ

ಸಂಸ್ಥೆ ಪಠ್ಯೇತರ ಚಟುವಟಿಕೆಗಳಿಗೂ ಒತ್ತು ನೀಡಿದೆ. ಸಾಮಾಜಿಕ ಕಟ್ಟುಪಾಡು, ಲಿಂಗತಾರತಮ್ಯ, ಬಾಲ್ಯ ವಿವಾಹ ಮತ್ತಿತರ ಅಂಶಗಳ ಕುರಿತು ಮಾಹಿತಿ ನೀಡಿ, ಮಕ್ಕಳನ್ನು ಮಾನಸಿಕವಾಗಿಯೂ ಸದೃಢಗೊಳಿಸಲಾಗುತ್ತಿದೆ.

ಸಂಸ್ಥೆಯ ಬೋಧನೆಯಿಂದ ಪ್ರೇರಣೆಗೊಂಡ ವಿದ್ಯಾರ್ಥಿನಿಯೊಬ್ಬರು ತನ್ನ ಸಹಪಾಠಿಯ ಬಾಲ್ಯ ವಿವಾಹ ತಡೆದ ಶ್ರೇಯಕ್ಕೂ ಪಾತ್ರರಾಗಿದ್ದಾರೆ. ಯಾದಗಿರಿ ಜಿಲ್ಲೆಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಕಲಿಯುತ್ತಿದ್ದ ಸಹನಾ ಬಾಲ್ಯ ವಿವಾಹದ ಮಾಹಿತಿ ಪಡೆದಿದ್ದಳು. 9ನೇ ತರಗತಿಯಲ್ಲಿದ್ದಾಗ ತನ್ನ ಗೆಳತಿಯ ಮದುವೆ ನಿಶ್ಚಯವಾಗಿತ್ತು. ಈ ವಿಷಯವನ್ನು ಸಹಾಯವಾಣಿ ಮೂಲಕ ಅಧಿಕಾರಿಗಳ ಗಮನಕ್ಕೆ ತಂದು ಬಾಲ್ಯವಿವಾಹ ತಡೆದಿದ್ದರು.

ಇ–ಬೈಕ್ ಟ್ಯಾಕ್ಸಿಗೆ ವಿರೋಧ: 29ಕ್ಕೆ ವಿಧಾನಸೌಧ ಚಲೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಬೈಕ್ ಟ್ಯಾಕ್ಸಿ ಮತ್ತು ವೈಟ್ ಬೋರ್ಡ್ ಬೈಕ್ ಟ್ಯಾಕ್ಸಿ ಯೋಜನೆಗೆ ಅನುಮತಿ ನೀಡುವುದನ್ನು ವಿರೋಧಿಸಿ ಇದೇ 29ರಂದು ವಿಧಾನಸೌಧ ಚಲೊ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ಆಟೊರಿಕ್ಷಾ ಚಾಲಕರ ಸಂಘಟನೆಗಳ ಒಕ್ಕೂಟ ತಿಳಿಸಿದೆ.

'ನಗರ ಪ್ರದೇಶದ ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಸರ್ಕಾರ ವಿದ್ಯುತ್ ಬೈಕ್ ಟ್ಯಾಕ್ಸಿ ಯೋಜನೆ–2021 ಜಾರಿಗೆ ತಂದಿದೆ. ಇ-ಬೈಕ್ ಟ್ಯಾಕ್ಸಿಗೆ ನೀಡಿರುವ ಅನುಮತಿಯನ್ನು ಇದೇ 29ರೊಳಗೆ ಹಿಂಪಡೆಯಬೇಕು. ಇಲ್ಲದಿದ್ದರೆ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಆದರ್ಶ ಆಟೊ ಆ್ಯಂಡ್ ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ ಅಧ್ಯಕ್ಷ ಎಂ. ಮಂಜುನಾಥ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಗಡುವು ನೀಡಿದರು.

ಬೆಂಗಳೂರಿನಲ್ಲಿ ಕಳೆದ ಎರಡು ವರ್ಷಗಳಿಂದ ಕೆಲವು ಆ್ಯಪ್ ಆಧಾರಿತ ಅನಧಿಕೃತ ವೈಟ್‌ಬೋರ್ಡ್ ಬೈಕ್ ಟ್ಯಾಕ್ಸಿಗಳ ಹಾವಳಿ ಹೆಚ್ಚುತ್ತಿದ್ದು, ಆಟೊ ಚಾಲಕರ ಭವಿಷ್ಯಕ್ಕೆ ಮಾರಕವಾಗಿರುವ ಈ ಯೋಜನೆಗೆ ಸರ್ಕಾರ ಅನುಮತಿ ನೀಡಿರುವುದು ಖಂಡನೀಯ ಎಂದು ಆಟೊರಿಕ್ಷಾ ಡ್ರೈವರ್ಸ್ ಯೂನಿಯನ್ (ಸಿಐಟಿಯು) ಅಧ್ಯಕ್ಷ ಸಿ.ಎನ್. ಶ್ರೀನಿವಾಸ ತಿಳಿಸಿದರು.

'ಇದೇ 29ಕ್ಕೆ ಬೆಳಿಗ್ಗೆ 10 ಗಂಟೆಗೆ ಪ್ರತಿಭಟನಾ ರ್‍ಯಾಲಿ ಪ್ರಾರಂಭವಾಗಲಿದ್ದು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು. ನಂತರ ಸ್ವಾತಂತ್ರ್ಯ ಉದ್ಯಾನದಲ್ಲಿ ಮಧ್ಯಾಹ್ನ 3.30ರವರೆಗೂ ಪ್ರತಿಭಟನೆ ನಡೆಯಲಿದೆ. 21 ಸಂಘಟನೆಗಳ ಎಲ್ಲಾ ಸದಸ್ಯರು ಈ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾರೆ. ಆಟೊ ಚಾಲಕರ ಆದಾಯಕ್ಕೆ ಮಾರಕವಾಗಿರುವ ಈ ಯೋಜನೆಯನ್ನು ಸರ್ಕಾರ ಕೂಡಲೇ ಕೈಬಿಡಬೇಕು' ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳಿಗೆ ಶ್ರೀರಾಮಾಯಣ ಕೌಶಲ ಸ್ಪರ್ಧೆಗಳು

ಬೆಂಗಳೂರು: ಜಯರಾಮ ಸೇವಾ ಮಂಡಳಿ ಮತ್ತು ಸಮ್ಯಕ್ ಪ್ರತಿಷ್ಠಾನದ ಸಹಯೋಗದಲ್ಲಿ ತೇರಾಕೋಟಿ ರಾಮ ನಾಮ ಲೇಖನ ಯಜ್ಞದ ಅಂಗವಾಗಿ 'ರಾಮಾಯಣ ಕೌಶಲ ಸ್ಪರ್ಧೆ'ಗಳನ್ನು ಆಯೋಜಿಸಲಾಗಿದೆ.

ಬೆಂಗಳೂರು ನಗರದ ವಿದ್ಯಾರ್ಥಿಗಳಿಗಾಗಿ 2023ರ ಜನವರಿ 18ರಂದು ಜಯನಗರದ ಶ್ರೀಜಯರಾಮ ಸೇವಾ ಮಂಡಳಿಯಲ್ಲಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

'ಚಿತ್ರಕಲೆ, ಮೂಲ ರಾಮಾಯಣ ಶ್ಲೋಕ ಕಂಠ ಪಾಠ, ರಾಮಾಯಾಣ ಆಧಾರಿತ ಗೀತ ಗಾಯನ, ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸ್ಪರ್ಧೆಗಳನ್ನು ಪ್ರಾಥಮಿಕ, ಪ್ರೌಢ, ಮಹಾವಿದ್ಯಾಲಯ ಮತ್ತು ಸಾರ್ವಜನಿಕ ಎಂಬ ನಾಲ್ಕು ವಿಭಾಗಗಳಲ್ಲಿ ಆಯೋಜಿಸಲಾಗಿದೆ. ಆಸಕ್ತರು ಜನವರಿ 10ರೊಳಗೆ 9113235810 ಅಥವಾ 9483932180ಗೆ ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬೇಕು' ಎಂದು ಮಂಡಳಿಯ ಕಾರ್ಯದರ್ಶಿ ಎಸ್.ಕೆ. ಗೋಪಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಊಟದ ವಿಚಾರಕ್ಕೆ ಗಗನಸಖಿ–ಪ್ರಯಾಣಿಕನ ನಡುವೆ ವಾಗ್ವಾದ

ನವದೆಹಲಿ (ಪಿಟಿಐ): ಇದೇ 16ರಂದು ಇಸ್ತಾನ್‌ಬುಲ್‌ನಿಂದ ದೆಹಲಿಯತ್ತ ಬರುತ್ತಿದ್ದ ಇಂಡಿಗೊ ವಿಮಾನದಲ್ಲಿ ಊಟದ ಆಯ್ಕೆ ವಿಚಾರಕ್ಕೆ ಗಗನಸಖಿ ಹಾಗೂ ಪ್ರಯಾಣಿಕರೊಬ್ಬರ ನಡುವೆ ವಿಮಾನದಲ್ಲೇ ವಾಗ್ವಾದ ನಡೆದಿದೆ.

ಈ ವಿಡಿಯೊ ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಘಟನೆ ಕುರಿತು ಮಾಹಿತಿ ಪಡೆದು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯದ (ಡಿಜಿಸಿಎ) ಅಧಿಕಾರಿಯೊಬ್ಬರು ಹೇಳಿದ್ದಾರೆ.

'ನಿನ್ನಿಂದಾಗಿ ನನ್ನ ಸಹೋದ್ಯೋಗಿ ಅಳುತ್ತಿದ್ದಾರೆ' ಎಂದು ಗಗನಸಖಿ ಪ್ರಯಾಣಿಕನಿಗೆ ಹೇಳುತ್ತಿರುವುದು, 'ನೀನು ಪ್ರಯಾಣಿಕರ ಸೇವಕಿ' ಎಂದು ಪ್ರಯಾಣಿಕ ಪ್ರತ್ಯುತ್ತರ ನೀಡಿರುವುದು, 'ನಾನು ಉದ್ಯೋಗಿ ನಿನ್ನ ಸೇವಕಿಯಲ್ಲ' ಎಂದು ಗಗನಸಖಿ ಮಾರುತ್ತರ ನೀಡಿರುವ ದೃಶ್ಯ ವಿಡಿಯೊದಲ್ಲಿದೆ.

ವಾಗ್ವಾದ ತಾರಕಕ್ಕೇರಿದಾಗ ಪ್ರಯಾಣಿಕನು ಕೋಪದಿಂದ 'ಏಕೆ ಕಿರುಚುತ್ತಿದ್ದೀಯಾ.. ಬಾಯಿ ಮುಚ್ಚು' ಎಂದು ಗದರಿರುವುದು ಅದಕ್ಕೆ ಪ್ರತಿಯಾಗಿ ಗಗನಸಖಿಯು 'ನೀನು ಬಾಯಿ ಮುಚ್ಚು' ಎಂದು ಹೇಳಿರುವ ದೃಶ್ಯವೂ ವಿಡಿಯೊದಲ್ಲಿ ದಾಖಲಾಗಿದೆ.

ಅನಧಿಕೃತ ವಾಸ:14 ವಿದೇಶಿಯರು ವಶಕ್ಕೆ

ಬೆಂಗಳೂರು: ಅನಧಿಕೃತವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ಈಶಾನ್ಯ ವಿಭಾಗದ ಪೊಲೀಸರು ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಆಫ್ರಿಕಾ ಮೂಲದ 14 ಮಂದಿ ಪ್ರಜೆಗಳನ್ನು ವಶಕ್ಕೆ ಪಡೆಯಲಾಗಿದೆ.

'14 ಮಂದಿ ಪೈಕಿ ಒಂಬತ್ತು ಪುರುಷರು ಹಾಗೂ ಐವರು ಮಹಿಳೆಯರು ಇದ್ದಾರೆ. ಇವರು ನೈಜೀರಿಯಾ, ತಾಂಜಾನಿಯ, ಕೀನ್ಯಾ, ಉಗಾಂಡ ಮತ್ತಿತರ ದೇಶಗಳಿಂದ ಬಂದು ಈಶಾನ್ಯ ವಿಭಾಗದ ವಿವಿಧ ಬಡಾವಣೆಗಳಲ್ಲಿ ಅನಧಿಕೃತವಾಗಿ ನೆಲೆಸಿದ್ದರು' ಎಂದು ಡಿಸಿಪಿ ಅನೂಪ್ ಶೆಟ್ಟಿ ಅವರು ಮಾಹಿತಿ ನೀಡಿದ್ದಾರೆ.

ಸ್ಪರ್ಧಾ ವಾಣಿ

ಮಾದರಿ ಪ್ರಶ್ನೋತ್ತರಗಳು

ಸಾಮಾನ್ಯ ಜ್ಞಾನ

ಯುಪಿಎಸ್‌ಸಿ, ಕೆಪಿಎಸ್‌ಸಿ, ಕೆಎಸ್‌ಆರ್‌ಪಿ ಸೇರಿದಂತೆ ಮುಂದೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆಯ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ.

1. ಕೇಂದ್ರ ಸರ್ಕಾರ ಆನೆಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಕೆಳಗಿನ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

1. ಗಜ ಯಾತ್ರ ಕಾರ್ಯಕ್ರಮದ ಅಡಿಯಲ್ಲಿ ಅರಿವು ಮೂಡಿಸುವ ಅಭಿಯಾನ.
2. MIKE ಕಾರ್ಯಕ್ರಮದ ಅಡಿಯಲ್ಲಿ ಸಂರಕ್ಷಣೆ ಸಂಬಂಧಿತ ಕ್ರಮಗಳ ಅವಲೋಕನ.
3. ಆನೆ ಸಂರಕ್ಷಿತ ಪ್ರದೇಶಗಳ ಘೋಷಣೆ.
4. ಪ್ರಾಜೆಕ್ಟ್ ಎಲಿಫೆಂಟ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ.1, 2 ಮತ್ತು 3 ಸರಿ ಬಿ. 1 ಮತ್ತು 3 ಸರಿ
ಸಿ. 1 ಮತ್ತು 4 ಸರಿ ಡಿ. 1, 2, 3 ಮತ್ತು 4 ಸರಿ

ಉತ್ತರ : ಡಿ

2. ಏಷ್ಯಾದ ಆನೆಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಏಷ್ಯಾದ ಆನೆಗಳ ವರ್ಗದಲ್ಲಿ ಮೂರು ಉಪ ತಳಿಗಳನ್ನು ಕಾಣಬಹುದಾಗಿದೆ.
2. ಮೂರು ಉಪ ತಳಿಗಳಲ್ಲಿ ಭಾರತೀಯ ಆನೆಗಳು, ಶ್ರೀಲಂಕಾದ ಆನೆಗಳು ಮತ್ತು ಸುಮಾತ್ರ ಆನೆಗಳು ಕಂಡುಬರುತ್ತವೆ.
3. ಪ್ರಸ್ತುತ ಭಾರತದಲ್ಲಿ 27,000 ಆನೆಗಳಿವೆ ಎಂದು ಪರಿಗಣಿಸಬಹುದು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮಾತ್ರ.

ಉತ್ತರ : ಎ

3. ಕಲ್ಲಿದ್ದಲು ನಿಕ್ಷೇಪಗಳನ್ನು ಹೊಂದಿರುವ ಪ್ರದೇಶಗಳ ಕಾಯ್ದೆ-1957ರ ಅನ್ವಯ ಈ ಕೆಳಗಿರುವ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಕಲ್ಲಿದ್ದಲು ನಿಕ್ಷೇಪಗಳು ಹೊಂದಿರುವ ಸ್ಥಳಗಳನ್ನು ಈ ಕಾಯ್ದೆಯ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.
2. ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಂಡ ನಂತರ ಕಲ್ಲಿದ್ದಲು ಸಂಬಂಧಿತ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳಬಹುದು.
3. ವಸತಿ ಕಲ್ಪಿಸಲು ಮತ್ತು ಕಚೇರಿಗಳನ್ನು ನಿರ್ಮಿಸಲು ಈ ಕಾಯ್ದೆಯ ಅಡಿಯಲ್ಲಿ ವಶಪಡಿಸಿಕೊಂಡಿರುವ ಭೂಮಿಯನ್ನು ಬಳಸಿಕೊಳ್ಳಲಾಗುವುದಿಲ್ಲ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 2 ಮತ್ತು 3
ಸಿ. 3 ಮಾತ್ರ ಡಿ. 1 ಮಾತ್ರ.

ಉತ್ತರ : ಎ

4. ಕೆಳಗಿನ ಯಾವ ರಾಷ್ಟ್ರಗಳನ್ನು ಕಲ್ಲಿದ್ದಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳು ಎಂದು ಪರಿಗಣಿಸಬಹುದು?

1. ಚೀನಾ ಮತ್ತು ಅಮೆರಿಕ
2. ಆಸ್ಟ್ರೇಲಿಯಾ, ಇಂಡೋನೇಷ್ಯಾ ಮತ್ತು ಭಾರತ
3. ದಕ್ಷಿಣ ಕೊರಿಯಾ ಮತ್ತು ಉತ್ತರ ಕೊರಿಯಾ
4. ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ.1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. 3 ಮತ್ತು 4.

ಉತ್ತರ : ಸಿ

5. ರಾಷ್ಟ್ರೀಯ ಗ್ರಾಮ ಸ್ವರಾಜ್ಯ ಅಭಿಯಾನಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ರಾಷ್ಟ್ರೀಯ ಗ್ರಾಮ ಸ್ವರಾಜ್ಯ ಅಭಿಯಾನವನ್ನು ಕೇಂದ್ರ ಸಚಿವ ಸಂಪುಟ 2018 ರಲ್ಲಿ ಅನುಮೋದಿಸಿತು.
2. ರಾಷ್ಟ್ರೀಯ ಗ್ರಾಮಸ್ವರಾಜ್ಯ ಅಭಿಯಾನವನ್ನು ಮೊದಲ ಹಂತದಲ್ಲಿ 2018-19 ರಿಂದ 2021-22 ರ ಅವಧಿಗೆ ಅನುಷ್ಠಾನ ಗೊಳಿಸಲಾಯಿತು.
3. ಪ್ರಸ್ತುತ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 1 ಮತ್ತು 3
ಸಿ. 1 ಮತ್ತು 2 ಡಿ. 3 ಮಾತ್ರ.

ಉತ್ತರ : ಎ

6. ರಾಷ್ಟ್ರೀಯ ಗ್ರಾಮಸ್ವರಾಜ್ಯ ಅಭಿಯಾನದ ಅಡಿಯಲ್ಲಿ ಕೆಳಗಿನ ಯಾವುದನ್ನು ಆದ್ಯತೆಗಳು ಎಂದು ಪರಿಗಣಿಸತಕ್ಕದ್ದು?

1. ಆರೋಗ್ಯಕರ ಗ್ರಾಮದ ನಿರ್ಮಾಣ
2. ಮಕ್ಕಳ ಸ್ನೇಹಿ ಗ್ರಾಮದ ನಿರ್ಮಾಣ
3. ಸಾಮಾಜಿಕ ಭದ್ರತೆಯನ್ನು ಕಲ್ಪಿಸುವ ಗ್ರಾಮದ ನಿರ್ಮಾಣ
4. ಉತ್ತಮ ಆಡಳಿತದ ಆಚರಣೆಗಳನ್ನು ಅಳವಡಿಸಿ ಕೊಳ್ಳುವ ಗ್ರಾಮದ ನಿರ್ಮಾಣ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ.1 ಮಾತ್ರ ಬಿ. 2 ಮಾತ್ರ
ಸಿ.1, 2 ಮತ್ತು 3 ಡಿ. 2 ಮತ್ತು 3.

ಉತ್ತರ: ಸಿ

7. ಇತ್ತೀಚಿಗೆ ಭಾರತೀಯ ರಕ್ಷಣಾ ಸಚಿವಾಲಯ ಯಶಸ್ವಿಯಾಗಿ ಪ್ರಯೋಗ ನಡೆಸಿರುವ ಹೆಲಿನಾ ಕ್ಷಿಪಣಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಈ ಕ್ಷಿಪಣಿ ವ್ಯವಸ್ಥೆಯ ಪ್ರಾಥಮಿಕ ಹಂತದ ಪ್ರಯೋಗವನ್ನು ಮೊಟ್ಟಮೊದಲನೆಯದಾಗಿ 2018 ರಲ್ಲಿ ನಡೆಸಲಾಯಿತು.
2 ಈ ಕ್ಷಿಪಣಿ ವ್ಯವಸ್ಥೆಯ ವಿನ್ಯಾಸವನ್ನು ಡಿಆರ್‌ಡಿಒ ನಿರ್ವಹಿಸಿದೆ.
3. ಈ ಕ್ಷಿಪಣಿ ವ್ಯವಸ್ಥೆಯನ್ನು ಹೈದರಾಬಾದ್‌ನ ಡಿಆರ್‌ಡಿಒ ಅಭಿವೃದ್ಧಿಪಡಿಸಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮಾತ್ರ.

ಉತ್ತರ : ಎ

8. ಭಾರತದ ಸಂವಿಧಾನದ ಏಳನೇ ಅನುಸೂಚಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಭಾರತದ ಸಂವಿಧಾನದ ಏಳನೇ ಅನುಸೂಚಿಯಲ್ಲಿ ಮೂರು ಪಟ್ಟಿಗಳಿವೆ.
2. ಕೇಂದ್ರ ಪಟ್ಟಿಯಲ್ಲಿ 100 ವಿಷಯಗಳಿದ್ದು ಸಂಸತ್ತಿಗೆ ಪೂರ್ಣಪ್ರಮಾಣದ ಶಾಸನೀಯ ಅಧಿಕಾರವಿರುತ್ತದೆ.
3. ರಾಜ್ಯ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತು ಕೆಲ ವಿಶೇಷ ಸಂದರ್ಭಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿರುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 2 ಮತ್ತು 3 ಸಿ. 1 ಮತ್ತು 2
ಡಿ. 3 ಮಾತ್ರ.

ಉತ್ತರ: ಎ

9. ರಾಜ್ಯಗಳಲ್ಲಿ ಕಾರ್ಯನಿರ್ವಹಿಸುವ ರಾಜ್ಯಪಾಲರು ಮತ್ತು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್ ನಡುವಿನ ಭಿನ್ನತೆಗಳನ್ನು ಗುರುತಿಸಿ?

1. ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಾರೆ.
2. ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೆಫ್ಟಿನೆಂಟ್ ಗವರ್ನರ್ ರಾಷ್ಟ್ರಪತಿಯ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಾರೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

10. ಸಂವಿಧಾನದ ವಿಧಿ 239AA ಗೆ ಅನುಗುಣವಾಗಿ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಸಂವಿಧಾನದ ವಿಧಿ 239AA ಅನ್ವಯ ದೆಹಲಿಯನ್ನು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಎಂದು ಮರುನಾಮಕರಣ ಮಾಡಲಾಯಿತು.
2. ಸಂವಿಧಾನದ ವಿಧಿ 239AA ಅನ್ವಯ ರಾಷ್ಟ್ರೀಯ ರಾಜಧಾನಿ ದೆಹಲಿಯ ಆಡಳಿತವನ್ನು ನಡೆಸಲು ಲೆಫ್ಟಿನೆಂಟ್ ಗವರ್ನರ್ ನೇಮಕಾತಿಗೆ ಅವಕಾಶವಿರುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ ಸಿ. 1 ಮತ್ತು 2
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ: ಸಿ

ಇನ್ನಷ್ಟು ಪ್ರಶ್ನೋತ್ತರಗಳಿಗೆ https://www.prajavani.net/education-career ಗೆ ಭೇಟಿ ನೀಡಿ

EXAM DH ಪ್ರಜಾವಾಣಿ MASTERMIND™
ಮತ್ತಷ್ಟು ಮಾಹಿತಿಗಾಗಿ
'ಸಾಮಾನ್ಯ ಜ್ಞಾನ' ಸೇರಿದಂತೆ ವಿವಿಧ ವಿಷಯಗಳ ಬಹು ಆಯ್ಕೆ ಪ್ರಶ್ನೆಗಳು. ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಚಲಿತ ವಿದ್ಯಮಾನ ಹಾಗೂ ಇನ್ನಿತರ ಮಾಹಿತಿಯ ಲೇಖನಗಳು, ವಿಡಿಯೊಗಳಿಗಾಗಿ 'ಡೆಕ್ಕನ್‌ಹೆರಾಲ್ಡ್- ಪ್ರಜಾವಾಣಿ ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
www.exammastermind.com

ಪಿಜಿಸಿಐಎಲ್‌ನಲ್ಲಿ 211 ಡಿಪ್ಲೊಮಾ ಟ್ರೈನಿ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಪಾವರಗ್ರಿಡ POWERGRID

ಕೇಂದ್ರ ಇಂಧನ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯಲ್ಲಿ (PGCIL) 'ಡಿಪ್ಲೊಮಾ ಟ್ರೈನಿ' ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಒಟ್ಟು 211 ಡಿಪ್ಲೊಮಾ ಟ್ರೈನಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಡಿ.31 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸುವ ವಿವರಕ್ಕಾಗಿ www.powergrid.in ಜಾಲತಾಣಕ್ಕೆ ಭೇಟಿ ನೀಡಿ.

ವಿದ್ಯಾರ್ಹತೆ: ಡಿಪ್ಲೊಮಾ ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಹಾಗೂ ಸಿವಿಲ್ ವಿಷಯಗಳಲ್ಲಿ ಶೇ 70 ಅಂಕಗಳೊಂದಿಗೆ ಉತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದು. ಡಿಪ್ಲೊಮಾ ಕೋರ್ಸ್ ಪೂರ್ಣಗೊಳಿಸದೇ ಬಿ.ಇ, ಬಿ.ಟೆಕ್, ಎಂ.ಟೆಕ್ ಮಾಡಿದವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ವಯೋಮಿತಿ: ಕನಿಷ್ಠ 18 ವರ್ಷ, ಗರಿಷ್ಠ 27 ವರ್ಷ. ಎಸ್.ಸಿ/ಎಸ್‌ಟಿ, ಒಬಿಸಿ ವರ್ಗದವರಿಗೆ ವಯಸ್ಸಿನಲ್ಲಿ ಸಡಿಲಿಕೆ ಇದೆ.

ಅರ್ಜಿ ಸಲ್ಲಿಕೆ ಶುಲ್ಕ ₹300.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಆಧಾರಿತ 2 ಗಂಟೆಯ ಪರೀಕ್ಷೆ ಇರುತ್ತದೆ. ಇದರಲ್ಲಿ ಎರಡು ಭಾಗಗಳಿರುತ್ತವೆ. 120 ಅಂಕಗಳ ಟೆಕ್ನಿಕಲ್ ನಾಲೆಡ್ಜ್ ಟೆಸ್ಟ್ ಹಾಗೂ 50 ಅಂಕಗಳಿಗೆ ಆಪ್ಟಿಟ್ಯೂಡ್ ಟೆಸ್ಟ್ ಇರುತ್ತದೆ. 4 ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ(ನೆಗೆಟಿವ್ ಕರೆಕ್ಷನ್). ಕಂಪ್ಯೂಟರ್ ಆಧಾರಿತ ಪರೀಕ್ಷೆಯು ನಿಗದಿತ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ನಡೆಯಲಿದೆ.

ಈ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಹಾಗೂ ಡಿಪ್ಲೊಮಾದಲ್ಲಿನ ಅಂಕಗಳನ್ನು ಪರಿಗಣಿಸಿ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

PGCIL ನಲ್ಲಿ ಡಿಪ್ಲೊಮಾ ಟ್ರೈನಿಯಾಗಿ ಆಯ್ಕೆಯಾದವರು ಒಂದು ವರ್ಷ ತರಬೇತಿ ಪೂರೈಸಬೇಕು. ಈ ಅವಧಿಯಲ್ಲಿ ಪ್ರತಿ ತಿಂಗಳು ₹27,000 ಗೌರವಧನ ಇರುತ್ತದೆ. ನಂತರ ಯಶಸ್ವಿಯಾಗಿ ತರಬೇತಿ ಪೂರೈಸಿದವರನ್ನು PGCIL ನಲ್ಲಿ ಜೂನಿಯರ್ ಎಂಜಿನಿಯರ್‌ಗಳು ಎಂದು ಬಡ್ತಿ ನೀಡಲಾಗುತ್ತದೆ. ❖

ಏನಿದು ಪಿಜಿಸಿಐಎಲ್ ?

ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಕೇಂದ್ರ ಇಂಧನ ಸಚಿವಾಲಯ ಮಾಲೀಕತ್ವದ ಸಾರ್ವಜನಿಕ ವಲಯದ ಉದ್ಯಮವಾಗಿದೆ. ಮುಖ್ಯವಾಗಿ ಇದು ಭಾರತದ ವಿವಿಧ ರಾಜ್ಯಗಳೊಂದಿಗೆ ಸಮನ್ವಯ ಕಾಯ್ದುಕೊಂಡು ರಾಜ್ಯ ರಾಜ್ಯಗಳ ನಡುವೆ ವಿದ್ಯುತ್ ಹಂಚಿಕೆಯ ಕೆಲಸವನ್ನು ನೋಡಿಕೊಳ್ಳುತ್ತದೆ. ಇದರ ಪ್ರಧಾನ ಕಚೇರಿ ದೆಹಲಿ ಬಳಿಯ ಗುರುಗ್ರಾಮದಲ್ಲಿದೆ.

'ಸಂವಹನ' ಪರೀಕ್ಷೆಗಷ್ಟೇ ಅಲ್ಲ..

ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ-10

ಡಾ. ನಿರಂಜನ ವಾನಳ್ಳಿ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂವಹನ ಕುರಿತಾಗಿ ಆರಂಭವಾದ ಈ ಅಂಕಣ ಹತ್ತು ವಾರ ಹರಿದು ಬಂತು. ಸಂವಹನ ಕೇವಲ ಪರೀಕ್ಷೆಗೆ ಗಮನಿಸಬೇಕಾಗಿದ್ದಲ್ಲ. ಇದು ಎಲ್ಲರಿಗೂ ಬೇಕಾದುದು, ಎಲ್ಲಾ ಸಂದರ್ಭಗಳಲ್ಲಿ ಎಚ್ಚರಿಕೆಯಿಂದ ಬಳಸಬೇಕಾಗಿದ್ದು. ನಾವು ಜೀವಂತ ಇರುವುದಕ್ಕೆ ಸಂವಹನವೇ ಸಾಕ್ಷಿ. ಅದು ಇಲ್ಲದಿದ್ದರೆ ನಮಗೂ ಕಲ್ಲಿಗೂ ಏನೂ ವ್ಯತ್ಯಾಸವಿರುವುದಿಲ್ಲ.

ಅಷ್ಟೊಂದು ಪ್ರಮುಖವಾಗಿದ್ದರೂ ದಿನ ನಿತ್ಯದ ವ್ಯವಹಾರಗಳಲ್ಲಿ ನಾವು ಸಂವಹನಕ್ಕೆ ಕೊಡಬೇಕಾದ ಪ್ರಾಮುಖ್ಯತೆ ಕೊಡುವುದಿಲ್ಲ. ಪರಿಣಾಮ- ಇದಕ್ಕೆ ನಾವು ಬಹಳ ಬೆಲೆ ತೆರಬೇಕಾಗುತ್ತದೆ. ಮುಖದಲ್ಲಿ ಸದಾ ಮಿನುಗುವ ಒಂದು ನಸುನಗೆ ಅದೆಷ್ಟೋ ಸಮಸ್ಯೆಗಳನ್ನು ಪರಿಹರಿಸಬಲ್ಲದು, ಜಗಳಗಳನ್ನು ತಪ್ಪಿಸಬಲ್ಲದು. ಇದು ಗೊತ್ತಿದ್ದೂ ಜನ ಮುಖ ಗಂಟಿಕ್ಕಿಕೊಂಡು ಇರುತ್ತಾರೆ. ಇನ್ನೊಬ್ಬರನ್ನು ಮಾತನಾಡಿಸಲು ಪ್ರತಿಷ್ಠೆ ಅಡ್ಡಿ ಬರುತ್ತದೆ! ಸಂದೇಶ ರಹಿತರಾಗಿ ಕುಳಿತುಕೊಳ್ಳುವುದರಲ್ಲಿ ದೊಡ್ಡಸ್ತಿಕೆ ತೋರಿಸುತ್ತೇವೆ. ಆದರೆ ಜೀವನದಲ್ಲಿ ನಾವು ಏನು ಮಾಡಿದರೂ, ಮಾಡದಿದ್ದರೂ ಅದು ಸಂದೇಶ ನೀಡುತ್ತದೆ ಎಂಬುದನ್ನು ಮರೆಯುತ್ತೇವೆ.

ಜೀವನದಲ್ಲಿ ಹೇಗೋ ಪರೀಕ್ಷೆಗಳಲ್ಲೂ ಹಾಗೇ, ಸಂವಹನ ನಿರ್ಣಾಯಕವಾಗುತ್ತದೆ ಎಂಬುದನ್ನು ಈ ಹತ್ತು ವಾರಗಳ ಅಂಕಣದಲ್ಲಿ ಸ್ಥಾಪಿಸುವುದು ನನ್ನ ಉದ್ದೇಶವಾಗಿತ್ತು. ಬರವಣಿಗೆಯೇ ಮೊತ್ತಮೊದಲಿಗೆ ನಿಮ್ಮನ್ನು ಪರೀಕ್ಷಕನಿಗೆ ಪರಿಚಯಿಸುವ ಸಾಧನ. ಬರವಣಿಗೆಯ ಅಂದವೇ ಸೆಳೆಯಬಲ್ಲದು ಅಥವಾ ಗೌರವ ಮೂಡಿಸಬಲ್ಲದು. ಅದು ಓದಲು ಅಸಾಧ್ಯವಾಗಿದ್ದರೆ ನೀವು ಎಷ್ಟೇ ಸರಿಯುತ್ತರ ಬರೆದಿದ್ದರೂ ನಿಮ್ಮ ಬಗ್ಗೆ ನಿಕೃಷ್ಟವಾಗಿ ನೋಡಲು ಕಾರಣವಾಗಬಹುದು. ಅದರ ಪರಿಣಾಮವಾಗಿ ಕಡಿಮೆಯಾಗುವ ಒಂದು ಅಂಕ ಸ್ಪರ್ಧಾತ್ಮಕ ಪರೀಕ್ಷೆ ಯಲ್ಲಿ ನಿಮ್ಮನ್ನು ಸೋಲಿಸಬಲ್ಲದು ಎಂಬುದನ್ನು ಒತ್ತಿ ಒತ್ತಿ ಹೇಳಿದ್ದೇನೆ. ನಿಮ್ಮ ಅಕ್ಷರ, ನಿಮ್ಮ ಬರವಣಿಗೆಯ ರೀತಿ, ವಾದಸರಣಿ, ಸರಳತೆ, ನೇರವಾಗಿ ಹೇಳುವ ವಿಧಾನ ಇವೆಲ್ಲವೂ ಪರೀಕ್ಷೆಯಲ್ಲಿ ಸರಿಯುತ್ತರ ಗೊತ್ತಿದೆಯೇ ಎಂಬುದನ್ನು ಉಳಿದೂ ಸಂವಹನದ ದೃಷ್ಟಿಯಿಂದ ಗಮನಿಸಲೇಬೇಕಾದ ಅಂಶಗಳು.

ಕೊನೆಗೆ ನಿಮ್ಮ ಸಮಯ ನಿರ್ವಹಣೆ ಕೂಡ ಈ ಪರೀಕ್ಷೆಗಳಲ್ಲಿ ಬಹಳ ನಿರ್ಣಾಯಕ. ಇಪ್ಪತ್ತು ಪ್ರಶ್ನೆಗಳಿಗೆ ಮೂರು ಗಂಟೆಗಳಲ್ಲಿ ಉತ್ತರ ಬರೆಯಬೇಕಾದ ಸಂದರ್ಭದಲ್ಲಿ ಪ್ರತಿಯೊಂದು ಪ್ರಶ್ನೆಗೂ ಸಮಯವಿರಿಸಿ ಕೊಳ್ಳುವವರು ಬುದ್ಧಿವಂತರು. ಮೊದಲ ಆರು ಉತ್ತರಗಳನ್ನು ಬಹಳ ಚೆನ್ನಾಗಿ ಬರೆದು, ಆಮೇಲೆ ಸಮಯದ ಅಭಾವದಿಂದ ಬೇಕಾಬಿಟ್ಟಿ ಗೀಚುವವರು ಅದಕ್ಕೆ ತಕ್ಕ ಅಂಕಗಳನ್ನೇ ಗಳಿಸುತ್ತಾರೆ. ಅಶಾಬ್ದಿಕ ಸಂವಹನದಲ್ಲಿ ಸಮಯವೂ ಒಂದು ಅಂಶ. ನಿಮ್ಮ ಉತ್ತರವಲ್ಲ, ಈ ರೀತಿಯ ಸಮಯ ನಿರ್ವಹಣೆಯ ವೈಫಲ್ಯವೇ ಬಹಳ ದುಬಾರಿಯಾಗಬಲ್ಲದು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತರ ಬರೆಯುವ ಮುನ್ನ ಇವೆಲ್ಲ ಎಚ್ಚರಗಳು ಇರಲಿ.

ಹಾಗೆಯೇ ಕೆಲವು ಪರೀಕ್ಷೆಗಳ ಭಾಗವಾಗುವ ಸಂದರ್ಶನಗಳೂ ಮುಖ್ಯವಾಗಿ ನಿಮ್ಮ ಸಂವಹನದ ಮೇಲೇ ನಿಂತಿವೆ. ಸಂದರ್ಶನ ಪದವೇ ಹೇಳುವಂತೆ ಅದು ಸಂದರ್ಶಕರಿಗೆ ಒಳ್ಳೆಯ ದರ್ಶನವಾಗಬೇಕು, ದುರ್ದಶನವಾ ಗಬಾರದು. ಉತ್ತರಗಳಿಗಿಂತ ನಿಮ್ಮ ಹಾವಭಾವ ಸೇರಿದಂತೆ ಪ್ರತಿಯೊಂದು ನಡೆ ನುಡಿಗೂ ಅರ್ಥವಿರುತ್ತದೆ. ಕೊನೆಗೆ ನೀವು ಏನು ಹೇಳುತ್ತೀರಿ ಎಂಬುದು ಮುಖ್ಯವಾಗದೇ ಹೇಗೆ ಹೇಳುತ್ತೀರಿ ಎಂಬುದೇ ಸಂದರ್ಶಕರ ಮನಸ್ಸಲ್ಲಿ ಉಳಿದುಬಿಡುತ್ತದೆ. ಸಂದರ್ಶನದಲ್ಲಿ ಸರಿಯುತ್ತರ ಕೊಡುವಷ್ಟೇ ಅವನ್ನು ಹೇಳುವ ರೀತಿಯೂ ಆಗಿನ ಹಾವಭಾವಗಳೂ ನಿಮ್ಮನ್ನು ಗೆಲ್ಲಿಸುತ್ತವೆ ಅಥವಾ ಸೋಲಿಸುತ್ತವೆ.

ಈ ಎಲ್ಲ ಕಾರಣದಿಂದ, ಎಲ್ಲರ ಸಂವಹನ ಬದಲಾಗಲಿ, ಹೊಸವರ್ಷಕ್ಕೆ ಪ್ರತಿಯೊಬ್ಬರೂ ಹೊಸ ಮನುಷ್ಯರಾಗಲು ದಾರಿಯಾಗಲಿ.

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

'ಪರೀಕ್ಷೆಗಳಲ್ಲಿ ಸಂವಹನ ಕೌಶಲ'- ಲೇಖನ ಸರಣಿ ಈ ಸಂಚಿಕೆಗೆ ಮುಕ್ತಾಯವಾಯಿತು. ಈ ಸರಣಿಯ ಲೇಖನಗಳಿಗೆ ಸಂಬಂಧಿಸಿದ ಪ್ರಶ್ನೆಗಳು, ಪ್ರತಿಕ್ರಿಯೆಗಳಿದ್ದರೆ shikshana@prajavani.co.in ಮೇಲ್‌ಗೆ ಕಳುಹಿಸಬಹುದು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ವಿಜ್ಞಾನ

ಎಸ್ಸೆಸ್ಸೆಲ್ಸಿ

14) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:- ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ

(i) **ಭೌತ ಸ್ಥಿತಿ :** ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) **ಕರಗುವ ಮತ್ತು ಕುದಿಬಿಂದುಗಳು :** ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) **ವಿಲೀನತೆ :** ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) **ವಿದ್ಯುದ್ವಾಹಕತೆ :** ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್‌ಅನ್ನು ಹರಿಯಲು ಬಿಡುತ್ತವೆ.

15) ನರಕೋಶದ ಅಂದವಾದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:-



16) ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯ ಬಗ್ಗೆ ಬರೆಯಿರಿ

ಉತ್ತರ:- ಒಂದು ಜೀವಕೋಶದಿಂದ ಎರಡು ಜೀವಕೋಶಗಳ ಉಂಟಾಗುವಿಕೆಯು ಡಿಎನ್‌ಎ ಮತ್ತು ಕೋಶೀಯ ರಚನೆಗಳ ಪ್ರತೀಕರಣವನ್ನು ಒಳಗೊಂಡಿದೆ. ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯು ನಾವು ಗಮನಿಸಿರುವಂತೆ ಸಂಪೂರ್ಣವಾಗಿ ನಿಖರವಾಗಿರುವುದಿಲ್ಲ ಮತ್ತು ಇದರಲ್ಲುಂಟಾಗುವ ದೋಷಗಳು ಜೀವಿಸಂದಣಿಯಲ್ಲಿನ ಭಿನ್ನತೆಗಳ ಆಕರವಾಗಿರುತ್ತದೆ. ಭಿನ್ನತೆಗಳು ಉಂಟಾಗದಂತೆ ಪ್ರತಿಯೊಂದು ಜೀವಿಯನ್ನು ರಕ್ಷಿಸಲಾಗುವುದಿಲ್ಲ. ಆದರೆ ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ. ಆದ್ದರಿಂದ ಹೆಚ್ಚು ಹೆಚ್ಚು ಭಿನ್ನತೆಗಳನ್ನು ಉಂಟುಮಾಡಲು ಸಾಧ್ಯವಾಗುವ ಸಂತಾನೋತ್ಪತ್ತಿ ವಿಧಾನಗಳೊಂದಿಗೆ ಜೀವಿಗಳು ಸಜ್ಜುಗೊಂಡವು ಎಂಬ ಅರ್ಥವನ್ನು ಇದು ಉಂಟುಮಾಡುತ್ತದೆ. ಡಿಎನ್‌ಎ ಸ್ವಪ್ರತೀಕರಣವು ಸಂಪೂರ್ಣ ನಿಖರವಾಗಿಲ್ಲದಿದ್ದರೂ ನಿಧಾನಗತಿಯಲ್ಲಿ ಭಿನ್ನತೆಗಳು ಉಂಟಾಗುವಷ್ಟರ ಮಟ್ಟಿಗೆ ಅವು ನಿಖರವಾಗಿರುತ್ತವೆ. ಒಂದು ವೇಳೆ ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಗಳು ಕಡಿಮೆ ನಿಖರತೆಯನ್ನು ಹೊಂದಿದ್ದರೆ ಅನೇಕ ಫಲಿತ ಡಿಎನ್‌ಎ ಪ್ರತಿಗಳು ಕೋಶೀಯ ರಚನೆಗಳೊಂದಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅವು ಸಾಯುತ್ತವೆ. ಈಗಾಗಲೇ ಹಿಂದಿನ ಪೀಳಿಗೆಗಳಿಂದ ಸಂಗ್ರಹಿತವಾದ ಭಿನ್ನತೆಗಳನ್ನು ಹೊಂದಿರುವ ಡಿಎನ್‌ಎ ತನ್ನ ಪ್ರತಿಯೊಂದು ಜೀವಿಸಂದಣಿಯ ಪ್ರತಿಯಲ್ಲಿ ಹೊಸ ಭಿನ್ನತೆಯನ್ನು ಉಂಟುಮಾಡುತ್ತದೆ. ಹೀಗೆ ಎರಡು ವಿಭಿನ್ನ ಜೀವಿಗಳು ಸಂಗ್ರಹಿತ ಭಿನ್ನತೆಗಳ ಸಾಕಷ್ಟು ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಿನ್ನತೆಗಳು ಜೀವಂತ ಜೀವಿಗಳಲ್ಲಿರುವುದರಿಂದ ಅವು ಯಾವುದೇ ಕೆಟ್ಟ ಪರಿಣಾಮಗಳನ್ನು ಹೊಂದಿಲ್ಲವೆಂಬುದು ನಿಶ್ಚಿತ. ಹೀಗೆ ಎರಡು ಅಥವಾ ಹೆಚ್ಚು ಜೀವಿಗಳಲ್ಲಿನ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ. ಪ್ರತಿ ಸಂಯೋಜನೆಯೂ ಅಪೂರ್ವವಾಗಿರುತ್ತದೆ ಏಕೆಂದರೆ ಅಲ್ಲಿ ಎರಡು ವಿಭಿನ್ನ ಜೀವಿಗಳ ಒಳಗೊಳ್ಳುವಿಕೆ ಇದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

17) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಓಮ್‌ನ ನಿಯಮಗಳನ್ನು ನಿರೂಪಿಸಿ
2) ವಾಹಕ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ವಿವರಿಸಿ (ಜೂನ್ 2019 ಪರೀಕ್ಷೆ)

ಉತ್ತರ:- (1) ಓಮ್‌ನ ನಿಯಮ ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರŒಗಿಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರಾನುಪಾತದಲ್ಲಿ ಇರುತ್ತದೆ

(2) ವಾಹಕದ ರೋಧವು ಈ ಕೆಳಗಿನ ಅಂಶಗಳ ಮೇಲೆ ಅವಲಂಬಿಸಿದೆ

ಅ) ವಾಹಕದ ಉದ್ದ
ಬ) ವಸ್ತುವಿನ ಪ್ರಾಕೃತಿಕ ಗುಣ
ಕ) ವಾಹಕದ ಅಡ್ಡ ಕೊಯ್ತ ವಾಹಕದ ರೋಧವು ಅದರ ಉದ್ದಕ್ಕೆ ನೇರ ಅನುಪಾತದಲ್ಲಿರುತ್ತದೆ. ವಾಹಕದ ರೋಧವು ಅದರ ಅಡ್ಡ ಕೊಯ್ತಕ್ಕೆ ವಿಲೋಮ ಅನುಪಾತದಲ್ಲಿರುತ್ತದೆ.

18) ಜೀವ ವಿಕಾಸ ಎಂದರೇನು? ಜೀವ ವಿಕಾಸಕ್ಕೆ ಆಧಾರಗಳನ್ನು ವಿವರಿಸಿ (ಮಾರ್ಚ್-2020)

ಉತ್ತರ:- ಸರಳ ರೀತಿಯ ಜೀವಿಗಳು ಸಂಕೀರ್ಣ ಜೀವಿಗಳಾಗಿ ದೀರ್ಘಾವಧಿಯಲ್ಲಿ ರೂಪಾಂತರಗೊಳ್ಳುವ ವಿದ್ಯಮಾನಕ್ಕೆ ಜೀವ ವಿಕಾಸ ಎನ್ನುವರು ಜೀವ ವಿಕಾಸಕ್ಕೆ ಆಧಾರಗಳು

ಅ) **ಸಮರೂಪಿ ಅಂಗ:-** ರಚನೆ ಒಂದೇ ಆಗಿದ್ದು ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸುವ ಅಂಗಗಳಿಗೆ ಸಮರೂಪಿ ಅಂಗಗಳು ಎನ್ನುವರು. ವಿವಿಧ ಪ್ರಭೇದಗಳಲ್ಲಿಯೆ ಜೀವಿಗಳು ಒಂದೇ ಪೂರ್ವಜನಿಂದ ಉಗಮವಾಗಿರಬಹುದು ಎಂಬ ಮಾಹಿತಿಯನ್ನು ಒದಗಿಸುತ್ತವೆ.

ಬ) **ಕಾರ್ಯಾನುರೂಪಿ ಅಂಗಗಳು:-** ಬೇರೆ ಬೇರೆ ರಚನೆಗಳನ್ನು ಹೊಂದಿದ್ದು ಒಂದೇ ಕಾರ್ಯವನ್ನು ನಿರ್ವಹಿಸುವ ಅಂಗಗಳಿಗೆ ಕಾರ್ಯಾನುರೂಪಿ ಅಂಗಗಳು ಎನ್ನುವರು. ವಿವಿಧ ಜೀವಿಗಳಲ್ಲಿ ಅಂಗಗಳ ಕಾರ್ಯ ಒಂದೇ ಆಗಿದ್ದರೂ ಒಂದೇ ಪೂರ್ವಜನಿಂದ ವಿಕಾಸವಾಗದೇ ಇರಬಹುದು.

ಕ) **ಪಳೆಯುಳಿಕೆ:-** ಹಿಂದೆಅಸ್ತಿತ್ವದಲ್ಲಿದ್ದ ಅಳಿದು ಹೋದ ಜೀವಿಗಳ ಅವಶೇಷಗಳನ್ನು ಪಳೆಯುಳಿಕೆ ಎನ್ನುವರು. ಇವು ಅಳಿದುಹೋದ ಜೀವಿಗಳ ಕುರಿತ ಪುರಾವೆಯಾಗಿದೆ. ಹಾಗೂ ವಿವಿಧ ಜೀವಿಗಳ ಪ್ರಭೇದಗಳ ನಡುವಣ ಸಂಬಂಧವನ್ನು ತಿಳಿಸುತ್ತದೆ. ಅಲ್ಲದೇ ಜೀವಿಗಳ ವಿಕಾಸದ ಕಾಲಾನುಕ್ರಮ ಮತ್ತು ವರ್ಗೀಕರಣವನ್ನು ಮಾಡಲು ಸಹಾಯ ಮಾಡುತ್ತದೆ.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಭೌತವಿಜ್ಞಾನ

ಪಿಯುಸಿ

29) ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ

1) ....ಎಂಬ ವಿಜ್ಞಾನಿಯು ಪ್ರಯೋಗಗಳ ಮೂಲಕ ವಕ್ರೀಭವನದ ಈ ಕೆಳಗಿನ ನಿಯಮಗಳನ್ನು ಪ್ರತಿಪಾದಿಸಿದನು.

ಬೆಳಕಿನ ಆಪಾತ ಕೋನದ ಸೈನ್ (Sine) ಹಾಗೂ ವಕ್ರೀಭವನ ಕೋನದ ಸೈನ್‌ಗಳ ಅನುಪಾತವು ಸ್ಥಿರಾಂಕವಾಗಿರುತ್ತದೆ.

ಎ) ಸ್ನೆಲ್ ಬಿ) ಸಿ ವಿ ರಾಮನ್
ಸಿ) ಲೆಂಜ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- (ಎ) ಸ್ನೆಲ್

2) ....ನಿಯಮದ ಪ್ರಕಾರ ಪ್ರೇರಿತ ವಿದ್ಯುತ್ ಚಾಲಿತ ಬಲದ ಧೃವೀಯತೆ ವಿದ್ಯುತ್ ಪ್ರವಾಹವನ್ನುಂಟು ಮಾಡುವ ವಿದ್ಯುತ್ ಕಾಂತೀಯ ಹರಿವಿನ ಬದಲಾವಣೆಯ ದಿಕ್ಕಿಗೆ ವಿರುದ್ಧವಾಗಿರುತ್ತದೆ.

ಎ) ಲೆಂಜನ ಬಿ) ಕಿರ್ಚಾಫ್
ಸಿ) ಸ್ನೇಲ್ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- ಎ) ಲೆಂಜನ

3) ಒಂದು ಲೋಹದ ಮೇಲೆ ನಿರ್ದಿಷ್ಟ ಆವೃತ್ತಿಯ ವಿಕಿರಣವನ್ನು ಹಾಯಿಸಿದಾಗ ಲೋಹದ ಮೇಲ್ಮೈಯಿಂದ ಎಲೆಕ್ಟ್ರಾನುಗಳ ಉತ್ಸರ್ಜನೆ ಸಂಭವಿಸುತ್ತದೆ. ಇದನ್ನು ....ಎನ್ನುತಾರೆ.

ಎ) ದ್ಯುತಿ ವಿದ್ಯುತ್ ವಿಸರ್ಜನ
ಬಿ) ದ್ಯುತಿ ವಿದ್ಯುತ್ ಉತ್ಸರ್ಜನ
ಸಿ) ದ್ಯುತಿ ಎಳೆಗಳು
ಡಿ) ಮೇಲಿನ ಯಾವುದು

ಉತ್ತರ:- (ಬಿ) ದ್ಯುತಿ ವಿದ್ಯುತ್ ಉತ್ಸರ್ಜನ

4) 1897ರಲ್ಲಿ ....ನ ಆವಿಷ್ಕಾರದ ನಂತರ, ಉತ್ಸರ್ಜಕ ತಟ್ಟೆಯ ಮೇಲೆ ಬೆಳಕು ಬಿದ್ದಾಗ ಎಲೆಕ್ಟ್ರಾನುಗಳು ಹೊರಬರುತ್ತವೆ ಎಂಬ ವಿಚಾರವು ಸ್ಫುಟವಾಯಿತು.

ಎ) ನ್ಯೂಟ್ರಾನ್ ಬಿ) ಪ್ರೋಟಾನ್
ಸಿ) ಎಲೆಕ್ಟ್ರಾನ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಸಿ) ಎಲೆಕ್ಟ್ರಾನ್

5) ಭೂಮಿಯ ವಾತಾವರಣದಲ್ಲಿ ಸೂರ್ಯನ ಬೆಳಕು ಚಲಿಸುವಾಗ ಅದು ವಾತಾವರಣದಲ್ಲಿರುವ ....ಚದುರಲ್ಪಡುತ್ತದೆ. ಕಡಿಮೆ ತರಂಗಾಂತರವಿರುವ ಬೆಳಕು ಹೆಚ್ಚು ತರಂಗ ಉದ್ದವಿರುವ ಬೆಳಕಿಗಿಂತ ಹೆಚ್ಚು ಚದುರುತ್ತದೆ.

ಎ) ಕಣಗಳಿಂದ ಬಿ) ಪರಮಾಣುಗಳಿಂದ
ಸಿ) ಕಿರಣಗಳಿಂದ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಕಣಗಳಿಂದ

30) ಪ್ರಭಾಮಾಪನದ (Photometry) ಮುಖ್ಯ ಭೌತ ಪರಿಮಾಣಗಳನ್ನು ತಿಳಿಸಿ

ಉತ್ತರ:- ಮಾನವನ ಕಣ್ಣು ಗ್ರಹಿಸುವ ಬೆಳಕನ್ನು ಅಳೆಯುವ ವಿಭಾಗವನ್ನು ಪ್ರಭಾಮಾಪನ (Photometry) ಎನ್ನುತ್ತೇವೆ. ಪ್ರಭಾಮಾಪನವು ಶರೀರಿಕ ಪರಿಣಾಮದ ಅಳತೆಯಾಗಿರುತ್ತದೆ. ಪ್ರಭಾಮಾಪನದ ಮುಖ್ಯ ಭೌತ ಪರಿಮಾಣಗಳೆಂದರೆ

(1) ಆಕರದ ದೀಪ್ತಿ ತೀವ್ರತೆ (Luminous Intensity)
(2) ದೀಪ್ತಿ ಹೊನಲು (Luminus Flux)) ಅಥವಾ ಆಕರದಿಂದ ಹರಿವ ಬೆಳಕಿನ ವೇಗ
3) ಮೇಲ್ಮೈಯ ದೀಪನ (Iluminance)). {ದೀಪ್ತಿ ತೀವ್ರತೆಯ ಮೂಲಮಾನ ಕ್ಯಾಂಡೆಲಾ ಆಗಿದೆ.}

31) ಯಾವುದಕ್ಕೆ ಪೋಲರಾಯಿಡ್‌ನ ಪಾಸ್- ಅಕ್ಷ ಎನ್ನುವರು?

ಉತ್ತರ:- ಒಂದು ಪೋಲರಾಯಿಡ್ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಜೋಡಿಸಲ್ಪಟ್ಟ ಅಣುಗಳ ಉದ್ದನೆಯ ಸರಪಣಿಯನ್ನು ಹೊಂದಿದೆ. ಈ ಅಣುಗಳ ದಿಕ್ಕಿನಲ್ಲಿರುವ ವಿದ್ಯುತ್ ಸದಿಶಗಳು (ಸಂಚರಣೆಯ ದಿಕ್ಕಿನಲ್ಲಿರುವ ಬೆಳಕಿನ ತರಂಗದ) ಹೀರಿಕೊಳ್ಳಲ್ಪಡುತ್ತವೆ. ಹೀಗೆ, ಅಂತಹ ಪೋಲರಾಯಿಡ್‌ಗೆ ಅಧ್ರುವೀಕೃತ ಬೆಳಕಿನ ತರಂಗವು ಆಪಾತವಾದರೆ, ಆ ತರಂಗವು ರೇಖೀಯವಾಗಿ ಧ್ರುವೀಕೃತ ಹೊಂದಿ ಅಣುಗಳ ಲಂಬ ದಿಕ್ಕಿನಲ್ಲಿ ವಿದ್ಯುತ್ ಸದಿಶಗಳು ಕಂಪನ ಹೊಂದಿರುತ್ತದೆ; ಈ ದಿಕ್ಕನ್ನು ಪೋಲರಾಯಿಡ್‌ನ ಪಾಸ್-ಅಕ್ಷ ಎನ್ನುವರು.

32) ಆಕಾಶವು ನಮಗೆ ನೀಲಿಯಾಗಿ ಗೋಚರಿಸುತ್ತದೆ. ಏಕೆ?

ಉತ್ತರ:- ಭೂಮಿಯ ವಾತಾವರಣದಲ್ಲಿ ಸೂರ್ಯನ ಬೆಳಕು ಚಲಿಸುವಾಗ ಅದು ವಾತಾವರಣದಲ್ಲಿರುವ ಕಣಗಳಿಂದ ಚದುರಲ್ಪಡುತ್ತದೆ. ಕಡಿಮೆ ತರಂಗಾಂತರವಿರುವ ಬೆಳಕು ಹೆಚ್ಚು ತರಂಗ ಉದ್ದವಿರುವ ಬೆಳಕಿಗಿಂತ ಹೆಚ್ಚು ಚದುರುತ್ತದೆ. (ಚದುರುವಿಕೆಯ ಪ್ರಮಾಣವು ತರಂಗಾಂತರದ ನಾಲ್ಕನೇ ಘಾತಕ್ಕೆ ವಿಲೋಮ ಅನುಪಾತದಲ್ಲಿ ಇರುತ್ತದೆ. ಇದನ್ನು ರ್‍ಯಾಲಿಯ ಚದುರುವಿಕೆ ಎನ್ನುತ್ತಾರೆ.) ಆದ್ದರಿಂದ, ಆಕಾಶದಲ್ಲಿ ನೀಲಿ ಬಣ್ಣವು ಅಧಿಕವಾಗಿದೆ. ನೀಲಿ ಬಣ್ಣದ ತರಂಗಾಂತರವು ಕೆಂಪು ಬಣ್ಣದ ತರಂಗಾಂತರಕ್ಕಿಂತ ಕಡಿಮೆಯಾಗಿರುವುದರಿಂದ ನೀಲಿ ಬಣ್ಣವು ಹೆಚ್ಚು ಚದುರುತ್ತದೆ. ವಾಸ್ತವವಾಗಿ ನೇರಳೆ ಬಣ್ಣವು ನೀಲಿ ಬಣ್ಣ ಕ್ಕಿಂತ ಅಧಿಕ ಚದುರುತ್ತದೆ. ನೇರಳೆ ಬಣ್ಣದ ತರಂಗಾಂತರವು ನೀಲಿ ಬಣ್ಣ ಕ್ಕಿಂತ ಕಡಿಮೆ. ಆದರೆ ನಮ್ಮ ಕಣ್ಣಿನ ಗ್ರಹಿಕೆ ನೀಲಿ ಬಣ್ಣಕ್ಕೆ ನೇರಳೆ ಬಣ್ಣಕ್ಕಿಂತ ಅಧಿಕವಾಗಿರುವುದರಿಂದ ಆಕಾಶವು ನಮಗೆ ನೀಲಿಯಾಗಿ ಗೋಚರಿಸುತ್ತದೆ.

ನೆನಪಿಡಿ

- ಉದ್ದದ ಲೋಹದ ಸರಳು ಲಂಬವಾಗಿ ಸಮನಾದ ಕಾಂತಕ್ಷೇತ್ರದಲ್ಲಿ v ವೇಗದಲ್ಲಿ ಚಲಿಸಿದರೆ ಪ್ರೇರಿತ ವಿದುತ್ ಚಲನ ಶಕ್ತಿ ಅದರ ಅಂಚುಗಳಲ್ಲಿ ಉಂಟಾಗುತ್ತದೆ. ಇದನ್ನು ಚಾಲಿತ ವಿದ್ಯುತ್ ಚಲನ ಶಕ್ತಿ ಎನ್ನುತ್ತಾರೆ. $\varepsilon = Blv$
- ಬದಲಾಗುವ ಕಾಂತಕ್ಷೇತ್ರಗಳು ಹತ್ತಿರವಿರುವ ಲೋಹದ ತುಂಡುಗಳಲ್ಲಿ ವಿದ್ಯುತ್‌ಪ್ರವಾಹದ ಸುಳಿಗಳನ್ನುಂಟು ಮಾಡುತ್ತದೆ, ನಂತರದಲ್ಲಿ ಶಾಖವಾಗಿ ಚದುರಿ ಹೋಗುತ್ತದೆ. ಇಂತಹ ವಿದ್ಯುತ್ ಪ್ರವಾಹವನ್ನು ಎಡ್ಡಿ ವಿದ್ಯುತ್ ಪ್ರವಾಹ ಎನ್ನುವರು.
- ಎ. ಸಿ. ವಿದ್ಯುತ್ ಜನಕದಲ್ಲಿ ವಿದ್ಯುತ್ ಕಾಂತೀಯ ಪ್ರೇರಣೆ ಮೇರೆಗೆ ಯಾಂತ್ರಿಕ ಶಕ್ತಿಯು ವಿದ್ಯುತ್ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ. ಸುರುಳಿಯಲ್ಲಿ ಸುತ್ತುಗಳಿದ್ದು ಅದರ ವಿಸ್ತೀರ್ಣ ಆಗಿದ್ದರೆ, ಆವರ್ತನದಲ್ಲಿ ಕಾಂತಕ್ಷೇತ್ರದಲ್ಲಿ ಸುತ್ತುದ್ದಿದ್ದರೆ ಪೇರಿತ ವಿದ್ಯುತ್ ಚಲನ ಶಕ್ತಿ. $\varepsilon = NBA\,(2\pi v)\,\sin(2\pi vt)$

ಇಲ್ಲಿ $t = 0$ ಆಗಿರುವಾಗ ಸುರುಳಿಯು ಕಾಂತಕ್ಷೇತ್ರಕ್ಕೆ ಲಂಬವಾಗಿರುತ್ತದೆ

ತಿದ್ದುಪಡಿ: ನಿನ್ನೆ(ಡಿ.21) ಸಂಚಿಕೆಯಲ್ಲಿ ಪ್ರಕಟಿತ ಗಣಿತ ಪತ್ರಿಕೆಯ 23ನೇ ಪ್ರಶ್ನೆಯಲ್ಲಿ ಬಂದ ಪರಿಹಾರದಲ್ಲಿ $v(x) = 0$ ಆದಾಗ $x = 3$, ಆದರೆ $x \neq 3$ ಎಂದು ತಪ್ಪಾಗಿ ಪ್ರಕಟವಾಗಿತ್ತು. ಅದನ್ನು "ಈಗ $V'(x) = 0$ ಆದಾಗ $x = 3, 2/3$, ಆದರೆ $x \neq 3$ ಎಂದು ಓದಿಕೊಳ್ಳುವುದು.

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ರಸಾಯನವಿಜ್ಞಾನ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಕ್ರಿಸ್‌ಮಸ್ ರಜೆ: ಗೋವಾ ಪ್ರಯಾಣಕ್ಕೆ ಬೆಂಗಳೂರಿನಿಂದ ₹7 ಸಾವಿರ!

ಬಸ್ ಪ್ರಯಾಣ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್‌ಮಸ್ ಹಬ್ಬದ ಸಾಲು ಸಾಲು ರಜೆಗಳಲ್ಲಿ ಪ್ರವಾಸಕ್ಕೆ ತೆರಳುವ ಯೋಚನೆಯಲ್ಲಿ ಇರುವವರಿಗೆ ಖಾಸಗಿ ಬಸ್ ಪ್ರಯಾಣ ದರ ಏರಿಕೆ ಬಿಸಿ ತಟ್ಟಿದೆ. ಸಾಮಾನ್ಯ ದಿನಗಳ ದರಕ್ಕೆ ಹೋಲಿಸಿದರೆ ಮೂರರಿಂದ ನಾಲ್ಕು ಪಟ್ಟು ಹೆಚ್ಚಿಸಲಾಗಿದ್ದು, ವಿಮಾನ ಪ್ರಯಾಣದಷ್ಟೇ ದುಬಾರಿಯಾಗಿದೆ.

ಕ್ರಿಸ್‌ಮಸ್ ಪ್ರಯುಕ್ತ ಮುಂದಿನ ವಾರ ಬಹುತೇಕ ಖಾಸಗಿ ಶಾಲೆಗಳಿಗೆ ರಜೆ ಇದ್ದು, ಹೊರ ಊರುಗಳಿಗೆ ತೆರಳಲು ಖಾಸಗಿ ಬಸ್‌ಗಳನ್ನು ಹತ್ತಲು ಮುಂದಾದವರು ಪ್ರಯಾಣ ದರ ನೋಡಿ ಗಾಬರಿಗೊಳ್ಳುತ್ತಿದ್ದಾರೆ. ಹಬ್ಬ ಮತ್ತು ಸರ್ಕಾರಿ ರಜೆಗಳ ಸಂದರ್ಭದಲ್ಲಿ ಪ್ರಯಾಣ ದರ ಹೆಚ್ಚಳವಾಗದಂತೆ ಕ್ರಮ ಕೈಗೊಳ್ಳುವುದಾಗಿ ಸಾರಿಗೆ ಸಚಿವ ಬಿ. ಶ್ರೀರಾಮುಲು ಭರವಸೆ ನೀಡಿದ್ದರು. ಈ ಸಂಬಂಧ ಬಸ್ ಮಾಲೀಕರ ಸಭೆಗಳನ್ನೂ ನಡೆಸಿ ಸಾರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದರು. ಅದ್ಯಾವುದಕ್ಕೂ ಕಿಮ್ಮತ್ತು ನೀಡದ ಖಾಸಗಿ ಬಸ್ ಆಪರೇಟರ್‌ಗಳು ಮನಸೋಇಚ್ಛೆ ಪ್ರಯಾಣ ದರ ಹೆಚ್ಚಳ ಮಾಡಿದ್ದಾರೆ.

ಎಲ್ಲಿಂದ–ಎಲ್ಲಿಗೆ	ಪ್ರಯಾಣ ದರ(ಗರಿಷ್ಠ)
ಬೆಂಗಳೂರು–ಎರ್ನಾಕುಲಂ	₹7,000
ಬೆಂಗಳೂರು–ಗೋವಾ	₹7,000
ಬೆಂಗಳೂರು–ಮಂಗಳೂರು	₹3,500
ಹುಬ್ಬಳ್ಳಿ–ಮೈಸೂರು	₹5,000
ಬೆಂಗಳೂರು–ಮೈಸೂರು	₹5,000
ಬೆಂಗಳೂರು–ಮಡಿಕೇರಿ	₹1,600

ಕ್ರಿಸ್‌ಮಸ್ ರಜೆಗೆ ಕೇರಳ, ಗೋವಾ, ಆಂಧ್ರಪ್ರದೇಶ ಸೇರಿ ಹೊರ ರಾಜ್ಯಗಳಿಗೆ ತೆರಳುವ ಪ್ರಯಾಣಿಕರ ಸಂಖ್ಯೆಯೇ ಹೆಚ್ಚಿದೆ. ಇದನ್ನೇ ನೋಡಿಕೊಂಡು ಬೇಡಿಕೆ ಇರುವ ಮಾರ್ಗಗಳಲ್ಲೇ ಪ್ರಯಾಣ ದರ ಹೆಚ್ಚಿಸಲಾಗಿದೆ.

ಹುಬ್ಬಳ್ಳಿ ಮತ್ತು ಬೆಳಗಾವಿಗೆ ಶುಕ್ರವಾರ(ಡಿ.23) ಪ್ರಯಾಣ ಮಾಡುವವರಿಗೆ ಗರಿಷ್ಠ ದರ ₹5,000 ಇದೆ. ಗೋವಾಕ್ಕೆ ಕೆಲವು ಬಸ್‌ಗಳಲ್ಲಿ ₹7 ಸಾವಿರ ಇದ್ದರೆ, ಕೆಲ ಬಸ್‌ಗಳಲ್ಲಿ ₹5467 ಪ್ರಯಾಣ ದರ ಇದೆ.

ಬೆಂಗಳೂರಿನಿಂದ ಎರ್ನಾಕುಲಂ ಪ್ರಯಾಣಕ್ಕೂ ₹7 ಸಾವಿರ ದರ ಇದೆ. ಮಂಗಳೂರಿಗೆ ₹3,500, ಮೈಸೂರಿಗೆ ₹5,000, ಮಡಿಕೇರಿಗೆ ₹1,600 ದರ ಇದೆ. ಹುಬ್ಬಳ್ಳಿ ಮತ್ತು ಬೆಳಗಾವಿಗೆ 25ರಂದು ಪ್ರಯಾಣ ಮಾಡಲು ಟಿಕೆಟ್ ಕಾಯ್ದಿರಿಸಲು ಬಯಸಿದರೆ ₹8 ಸಾವಿರ ಗರಿಷ್ಠ ದರ ನಿಗದಿಯಾಗಿರುವುದು ವೆಬ್‌ಸೈಟ್‌ಗಳಲ್ಲಿ ಗೋಚರಿಸುತ್ತಿದೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಾತ್ರ ಪ್ರಯಾಣ ದರ ಸಾಮಾನ್ಯ ದಿನಗಳಷ್ಟೇ ಇದೆ. ಹೊರ ರಾಜ್ಯಗಳಿಗೆ ವಿಶೇಷ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸುವುದು ಕೆಎಸ್‌ಆರ್‌ಟಿಸಿಗೆ ಕಷ್ಟದ ಕೆಲಸ. ಬೇಡಿಕೆ ಆಧರಿಸಿ ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಿದರೆ ಅಂತರರಾಜ್ಯ ಒಪ್ಪಂದ ಉಲ್ಲಂಘನೆಯಾಗುತ್ತದೆ. ಆದ್ದರಿಂದ ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆ ಮಾಡುವುದು ಕಷ್ಟ. ಇದರ ನಡುವೆಯೂ ಕ್ರಿಸ್‌ಮಸ್ ರಜೆಯಲ್ಲಿ ಪ್ರಯಾಣಿಕರಿಗೆ ಅನುಕೂಲ ಮಾಡಲು ಹೆಚ್ಚುವರಿ 300 ವಿಶೇಷ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

‘ಗಾಂಧಿಗಿಂತ ಕೊಂದವರಿಗೆ ಹೆಚ್ಚು ಗೌರವ’

ಕಾಂಗ್ರೆಸ್ ಮುಖಂಡ ಪಾಟೀಲ ಬೇಸರ • ‘ಗಾಂಧಿ ಕಥನ’ ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಗಾಂಧೀಜಿ ಅವರಿಗಿಂತ ಅವರನ್ನು ಕೊಂದವರಿಗೇ ಹೆಚ್ಚು ಗೌರವ ನೀಡಲಾಗುತ್ತಿದೆ. ಗಾಂಧೀಜಿ ಅವರ ಮೌಲ್ಯಗಳನ್ನು ಯುವಜನರಲ್ಲಿ ಸ್ಥಾಪಿಸುವ ಮೂಲಕ ಜನರ ಮನೋಭಾವ ಬದಲಾಯಿಸಬೇಕು’ ಎಂದು ಕಾಂಗ್ರೆಸ್ ಮುಖಂಡ ಡಿ.ಆರ್. ಪಾಟೀಲ ತಿಳಿಸಿದರು.

ಎಂ. ಚಂದ್ರಶೇಖರ ಪ್ರತಿಷ್ಠಾನ ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಡಿ.ಎಸ್. ನಾಗಭೂಷಣ ಅವರ ‘ಗಾಂಧಿ ಕಥನ’ 25ನೇ ಆವೃತ್ತಿ ಬಿಡುಗಡೆ ಮಾಡಲಾಯಿತು.

‘ಗ್ರಾಮೀಣ ಭಾಗದಲ್ಲಿ ಎಲ್ಲ ಧರ್ಮ, ಜಾತಿಯವರು ಸಹಬಾಳ್ವೆಯಿಂದ ಜೀವನ ಸಾಗಿಸುತ್ತಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಮುಸ್ಲಿಂರು ಹನುಮಂತನ ದೇವಾಲಯ ನಿರ್ಮಿಸಿದ್ದಾರೆ. ಆದರೆ, ರಾಜಕೀಯ ಲಾಭಕ್ಕಾಗಿ ಹಳ್ಳಿಗಳಲ್ಲಿಯೂ ದ್ವೇಷದ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ಧರ್ಮದ ಹಿನ್ನೆಲೆಯಲ್ಲಿ ಏನೇನೋ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಗಾಂಧಿ ಮೌಲ್ಯಗಳನ್ನು ಸಾರಬೇಕು’ ಎಂದು ಡಿ. ಆರ್. ಪಾಟೀಲ ಹೇಳಿದರು.

‘ಗಾಂಧಿ ಕಥನ’ ಕೃತಿಯ 25ನೇ ಆವೃತ್ತಿಯನ್ನು ರಾಮಚಂದ್ರ ಗುಹಾ ಬಿಡುಗಡೆ ಮಾಡಿದರು. ವಿಮರ್ಶಕ ರಾಜೇಂದ್ರ ಚೆನ್ನಿ,ಡಿ. ಆರ್‌ಪಾಟೀಲ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಶಾಸಕ ಎಚ್‌.ಕೆ. ಪಾಟೀಲ, ಎಂ. ಚಂದ್ರಶೇಖರ್ ಪ್ರತಿಷ್ಠಾನದ ಗೌರವಾಧ್ಯಕ್ಷೆ ಸರೋಜಾ ಎಂ. ಚಂದ್ರಶೇಖರ್, ಕವಯಿತ್ರಿ ಸವಿತಾ ನಾಗಭೂಷಣ ಹಾಗೂ ಹೋರಾಟಗಾರ್ತಿ ವಾಣಿ ಪೆರಿಯೋಡಿ ಇದ್ದಾರೆ. – ಪ್ರಜಾವಾಣಿ ಚಿತ್ರ

‘ರೈತರನ್ನು ಆರ್ಥಿಕವಾಗಿ ಸದೃಢಗೊಳಿಸಬೇಕೆಂಬ ಮನಸ್ಥಿತಿ ಕಾಂಗ್ರೆಸ್ ಸೇರಿ ಯಾವುದೇ ಪಕ್ಷಕ್ಕೂ ಇಲ್ಲ. ಈಗಲೂ ಬೆಳೆದ ಬೆಳೆಗೆ ಸೂಕ್ತ ಬೆಲೆಗಾಗಿ ಸರ್ಕಾರವನ್ನು ಅಂಗಲಾಚಬೇಕೆ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು. ಆದರೆ, ಈಗ ಪ್ರತಿನಿಧಿಗಳು ಪ್ರಭುಗಳಾಗಿದ್ದಾರೆ. ಪ್ರತಿನಿಧಿಗಳನ್ನು ಆರಿಸುವ ನಾವು, ಅಧಿಕಾರವನ್ನು ಕಸಿದುಕೊಳ್ಳಬೇಕು. ಅಂತಹ ವಾತಾವರಣ ನಿರ್ಮಾಣಕ್ಕೆ ಯುವಪೀಳಿಗೆ ಗಾಂಧೀಜಿ ಅವರನ್ನು ಓದಬೇಕು’ ಎಂದರು.

ಗಾಂಧಿ ಪ್ರಸ್ತುತ: ಇತಿಹಾಸಕಾರ ರಾಮಚಂದ್ರ ಗುಹಾ, ‘ಗಾಂಧೀಜಿ ಅವರು ಮರಣಹೊಂದಿ 75 ವರ್ಷಗಳಾದರೂ ಅವರು ಇಂದಿಗೂ ಪ್ರಸ್ತುತರಾಗಿದ್ದಾರೆ. ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಗಳ ವಿರುದ್ಧದ ಹೋರಾಟ, ಅಹಿಂಸಾ ಚಳವಳಿ, ಕೋಮು ದ್ವೇಷ ತಗ್ಗಿಸುವುದನ್ನು ಅವರು ವೃತ್ತಿಯಂತೆ ಪಾಲಿಸಿದರು. ತಂತ್ರಗಾರಿಕೆ ಇಲ್ಲದೆ ಮಾತನಾಡುತ್ತಿದ್ದ ಗಾಂಧಿ, ವಿಶೇಷವಾದ ವ್ಯಕ್ತಿತ್ವ ಹೊಂದಿದ್ದರು. ಅವರ ಜೀವನ ಪಾರದರ್ಶಕವಾಗಿತ್ತು. ಎಲ್ಲರೊಂದಿಗೂ ಸಮಾಲೋಚನೆ ನಡೆಸುತ್ತಿದ್ದರು’ ಎಂದು ಹೇಳಿದರು.

‘ಸ್ವಾತಂತ್ರ್ಯ ಭಾರತದ ಪ್ರಭಾವಿ ಪ್ರಧಾನಿಗಳಾದ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಹಾಗೂ ನರೇಂದ್ರ ಮೋದಿ ಅವರಿಗೆ ಅಧಿಕಾರ ಇದ್ದರೂ ಮಾಡಲು ಸಾಧ್ಯವಾಗದ್ದನ್ನು ಗಾಂಧೀಜಿ ಅವರು ಏನೂ ಇಲ್ಲದೆ ಸಾಧಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಕಾಶಕಎಂ.ಸಿ.ನರೇಂದ್ರ, ‘ಇತ್ತೀಚಿನ ದಿನಗಳಲ್ಲಿ ಮಕ್ಕಳು ಪುಸ್ತಕಗಳನ್ನು ಓದಲು ನಿರಾಸಕ್ತಿ ತೋರುತ್ತಿರುವುದು ವಿಪರ್ಯಾಸ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕು. ಉನ್ನತ ಶಿಕ್ಷಣ ಪಡೆದವರು ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳುತ್ತಿದ್ದಾರೆ. ಇದರಿಂದಾಗಿ ಪಾಲಕರು ಅನಾಥ ಆಗುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪುಸ್ತಕ ಪರಿಚಯ

ಪುಸ್ತಕ: ‘ಗಾಂಧಿ ಕಥನ’
ಲೇಖಕ: ಡಿ.ಎಸ್. ನಾಗಭೂಷಣ
ಪುಟಗಳು: 744
ಬೆಲೆ: ₹ 450
ಪ್ರಕಾಶನ: ಎಂ. ಚಂದ್ರಶೇಖರ ಪ್ರತಿಷ್ಠಾನ

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟಕ್ಕೆ ಬೆಂಬಲ

ರಾಜಕೀಯ ಪ್ರಾತಿನಿಧ್ಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿಯು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಈ ಹೋರಾಟಕ್ಕೆ ದಲಿತ ಸಂರಕ್ಷ ಸಮಿತಿ ಸದಸ್ಯರು ಬೆಂಬಲ ಸೂಚಿಸಿ ಬುಧವಾರ ಪ್ರತಿಭಟಿಸಿದರು.

ಎ.ಜೆ.ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ನಾಗಮೋಹನ್‌ದಾಸ್ ಮತ್ತು ಕಾಂತರಾಜು ವರದಿಯನ್ನು ಬಹಿರಂಗಪಡಿಸಿ ಯಥಾವತ್ ಜಾರಿಗೆ ತರಬೇಕು. ಎಲ್ಲ ರಾಜಕೀಯ ಪಕ್ಷಗಳು ಪರಿಶಿಷ್ಟ ಜಾತಿಗಳಲ್ಲಿ ಬಹುಸಂಖ್ಯಾತರಾಗಿರುವ ಮಾದಿಗ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು. ಎಲ್ಲ ರಾಜಕೀಯ ಪಕ್ಷಗಳು 15 ಸ್ಥಾನಗಳನ್ನು ಮೀಸಲಿಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ರಾಜ್ಯದಲ್ಲಿರುವ 43 ಸಾವಿರ ಪೌರಕಾರ್ಮಿಕರು ಹಾಗೂ ವಾಹನ ಚಾಲಕರನ್ನು ಕಾಯಂಗೊಳಿಸಬೇಕು. ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿ ಅನುಷ್ಠಾನಕ್ಕೆ ಹೋರಾಟ ನಡೆಸುತ್ತಿರುವ ಹೋರಾಟಗಾರರ ಮೇಲೆ ಹಾಕಿರುವ ರೌಡಿಶೀಟರ್ ಪ್ರಕರಣಗಳನ್ನು ರದ್ದುಪಡಿಸಬೇಕು. ದಲಿತ ಸಂಘಟನೆಗಳ ಮೇಲೆ ದಾಖಲಾದ ಎಲ್ಲ ಕ್ರಿಮಿನಲ್ ಪ್ರಕರಣ ರದ್ದು ಪಡಿಸಬೇಕು ಎಂದು ಕೋರಿದರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ದಲಿತ ಸಂರಕ್ಷ ಸಮಿತಿ ಸದಸ್ಯರು ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪರಿಶಿಷ್ಟ ಜಾತಿಗಳ ಎಸ್‌ಸಿಪಿ – ಟಿಎಸ್‌ಪಿ ಅನುದಾನವನ್ನು ಮಾದಿಗ ಹಾಗೂ ಮಾದಿಗ ಸಂಬಂಧಿತ ಸಮುದಾಯಗಳಿಗೆ ಸಮರ್ಪಕವಾಗಿ ಹಂಚಿಕೆ ಮಾಡಬೇಕು. ರಾಜ್ಯದ ಪೌರಕಾರ್ಮಿಕರು ಪಡೆದಿರುವ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ರಾಜ್ಯ ಅಧ್ಯಕ್ಷ ಡಾ.ಕೆ.ವಿ.ಬಾಲಕೃಷ್ಣ, ರಾಜ್ಯ ಗೌರವಾಧ್ಯಕ್ಷ ಡಾ.ವೈ.ಮರಿಸ್ವಾಮಿ, ರಾಜ್ಯ ಉಪಾಧ್ಯಕ್ಷ ಭೀಮರಾಯ ಬಳಗಾನೂರು, ರಾಜ್ಯ ವಕ್ತಾರ ಬಾಲಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಜೇಶ್ ಮಾಸ್ಟರ್, ಎನ್.ವೆಂಕಟೇಶ್, ಎಸ್.ಮಾರುತಿ ಹಾಜರಿದ್ದರು.

‘ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳದ ಇಲಾಖೆಗಳು’

ಪ್ರಜಾವಾಣಿ ವಾರ್ತೆ

ಜಿತೇಂದ್ರ ಸಿಂಗ್

ನವದೆಹಲಿ (ಪಿಟಿಐ): ‘ಭ್ರಷ್ಟಾಚಾರಕ್ಕೆ ಸಂಬಂಧಿಸಿ ಹೋದ ವರ್ಷ ದಾಖಲಾಗಿದ್ದ ಪ್ರಕರಣಗಳ ಪೈಕಿ 55 ಪ್ರಕರಣಗಳಲ್ಲಿ ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವಂತೆ ಕೇಂದ್ರ ಜಾಗೃತ ಆಯೋಗ (ಸಿವಿಸಿ) ಸಲಹೆ ನೀಡಿತ್ತು. ಹೀಗಿದ್ದರೂ ಸಂಬಂಧಪಟ್ಟ ಇಲಾಖೆಗಳು ಕ್ರಮ ಜರುಗಿಸಿಲ್ಲ’ ಎಂದು ಕೇಂದ್ರ ಸರ್ಕಾರವು ಬುಧವಾರ ಲೋಕಸಭೆಗೆ ತಿಳಿಸಿದೆ.

‘ಆಯೋಗದ ಸಲಹೆ ಆಧಾರದಲ್ಲಿ ಸಂಬಂಧಪಟ್ಟ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳು 2,274 ಪ್ರಕರಣಗಳಲ್ಲಿ ಅಂತಿಮ ತೀರ್ಮಾನ ಕೈಗೊಂಡಿವೆ. ಈ ಮಾಹಿತಿಯನ್ನು ಆಯೋಗ ನಮಗೆ ಒದಗಿಸಿದೆ’ ಎಂದು ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ನಂದಿಬೆಟ್ಟದ ಬಳಿ ಹೊಸ ಜೇಡ ಪ್ರಭೇದ ಪತ್ತೆ

ಹೊಸ ಜೇಡ ಪ್ರಭೇದಕ್ಕೆ ‘ಅರ್ಕಾವತಿ’ ಹೆಸರು

• ನಟರಾಜ ನಾಗಸಂದ್ರ

ದೊಡ್ಡಬಳ್ಳಾಪುರ: ತಾಲ್ಲೂಕಿಗೆ ಸಮೀಪದ ನಂದಿಬೆಟ್ಟದ ತಪ್ಪಲಿನ ಹೆಗ್ಗಡಿಹಳ್ಳಿಯಲ್ಲಿ ಹೊಸ ಜೇಡ ಪ್ರಭೇದವನ್ನು ಪರಿಸರಾಸಕ್ತರು ಪತ್ತೆ ಹಚ್ಚಿದ್ದಾರೆ. ನಂದಿ ಬೆಟ್ಟದಲ್ಲಿ ಹುಟ್ಟುವ ಅರ್ಕಾವತಿ ನದಿಯ ಹೆಸರನ್ನು ಈ ಹೊಸ ಜೇಡ ಪ್ರಬೇಧಕ್ಕೆ ಇಡಲಾಗಿದೆ.

ಸಾಲ್ಟಿಸಿಡೆ(salticidae) ಕುಟುಂಬಕ್ಕೆ ಸೇರಿರುವ ಈ ಜೇಡವು ಎಗರುವ ಜೇಡಗಳ ಕುಟುಂಬಕ್ಕೆ ಸೇರಿದೆ. ಅರ್ಧ ಸೆಂಟಿಮೀಟರ್‌ಗೂ ಸ್ವಲ್ಪ ಕಡಿಮೆ ಅಳತೆಯ ಈ ಜೇಡ ಹೆಚ್ಚಿನ ಚುರುಕಾಗಿದ್ದು ಎಗರಿ ಕ್ಷಣಾರ್ಧದಲ್ಲಿ ಕಣ್ಮರೆಯಾಗುತ್ತದೆ. ಹೊಸ ಪ್ರಬೇಧದ ಜೇಡದ ಕುರಿತಂತೆ ರಷ್ಯಾ ಮೂಲದ ಅಂತರರಾಷ್ಟ್ರೀಯ ಜರ್ನಲ್ ‘ಅರ್ಥೋಪೋಡಾ ಸೆಲೆಕ್ಟಾ’ದಲ್ಲಿ ವೈಜ್ಞಾನಿಕ ಬರಹ ಪ್ರಕಟವಾಗಿದೆ.

ಈ ಜೇಡದ ಜಾತಿ ಕೂಡ ಅಪರೂಪದ್ದಾಗಿದೆ. ಭಾರತ, ಚೀನಾ, ಶ್ರೀಲಂಕಾ ಮತ್ತು ವಿಯಟ್ನಾಂ ಸೇರಿದಂತೆ ಜಗತ್ತಿನ 4 ದೇಶಗಳಲ್ಲಿ ಮಾತ್ರ ಕಾಣಬಹುದಾಗಿದೆ. ಈಗ ಸಿಕ್ಕಿರುವ ಈ ಜಾತಿಯ ಹೊಸ ಪ್ರಭೇದವು ಇನ್ನೂ ಅಪರೂಪವೆಂದು ನಮ್ಮ ಅಧ್ಯಯನದ ಮೂಲಕ ತಿಳಿಯಲಾಗಿದೆ ಎಂದು ಜೇಡ ಪತ್ತೆ ಹಚ್ಚಿದ ತಂಡದಲ್ಲಿದ್ದ ವೈ.ಟಿ. ಲೋಹಿತ್ ಮಾಹಿತಿ ನೀಡಿದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸಮೀಪದ ನಂದಿಬೆಟ್ಟದ ತಪ್ಪಲಿನ ಹೆಗ್ಗಡಿಹಳ್ಳಿ ಸಮೀಪ ಎಲೆಗಳ ಹಾಗೂ ಮರದ ಕೊಂಬೆಗಳ ಮೇಲೆ ಪತ್ತೆಯಾಗಿರುವ ‘ಅರ್ಕಾವತಿ’ ಜೇಡ

ಜೇಡ ಪತ್ತೆ ಹಚ್ಚುವಲ್ಲಿ ಹಾಗೂ ಅದರ ಜೀವನಕ್ರಮ ಕುರಿತು ಚೆನ್ನೈನ ಎಂಟಮಾಲಜಿ ಇನ್‌ಸ್ಟಿಟ್ಯೂಟ್‌ನ ಡಾ.ಜಾನ್ ಕೆಲಬ್ ಹಾಗೂ ಮರಿಯಾ ಪ್ಯಾಕಿಯಂ, ತಂಡದ ಸದಸ್ಯ ಡಾ.ಅಭಿಜಿತ್ ಎಪಿಸಿ ಒಂದು ವರ್ಷ ಅಧ್ಯಯನ, ಸಂಶೋಧನೆ ನಡೆಸಿದ್ದಾರೆ.

ಚಿನ್ಮಯ್ ಸಿ.ಮಳಿಯೆ, ಎಸ್. ಆಶಾ, ಆರ್.ಜನಾರ್ದನ, ಜೆ. ಚೇತನ್, ಎಸ್.ಪಿ. ಹರಿಚರನ್, ನವೀನ್ ಐಯ್ಯರ್, ಕೆ. ಸಾಕ್ಷಿ ಮತ್ತು ಅಕ್ಷಯ್ ದೇಶಪಾಂಡೆ ತಂಡ ಐದು ತಿಂಗಳ ವಾರಾಂತ್ಯಗಳಲ್ಲಿ ಜೇಡ ಹುಡುಕಾಟ ಮತ್ತು ಜೇಡದ ಮಾದರಿ ಸಂಗ್ರಹಣೆಯಲ್ಲಿ ತೊಡಗಿಸಿಕೊಂಡಿತ್ತು.

ಈ ಬಗ್ಗೆ ತಂಡ ಇನ್ನು ಹೆಚ್ಚಿನ ಸಂಶೋಧನೆ ನಡೆಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ 500 ಜೇಡ ಪ್ರಭೇದ

ಇದು ಜಗತ್ತಿನಲ್ಲಿ ಗುರುತಿಸಲಾಗಿರುವ ಸುಮಾರು 50,000 ಜೇಡ ಪ್ರಭೇದಗಳ ಪಟ್ಟಿಗೆ ಹೊಸ ಸೇರ್ಪಡೆಯಾಗಿದೆ. ಭಾರತದಲ್ಲಿ ಸುಮಾರು 2,000 ಜೇಡ ಪ್ರಭೇದಗಳಿವೆ ಎಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಸುಮಾರು 500 ಜೇಡದ ಪ್ರಭೇದಗಳಿವೆ.

‘ಅರ್ಕಾವತಿ’ ಜೇಡದ ವಿಶೇಷತೆ

ಈ ಜೇಡವನ್ನು ಸಾಮಾನ್ಯವಾಗಿ ಬೆಟ್ಟದ ತಪ್ಪಲಿನ ಎಲ್ಲಾ ಪ್ರದೇಶದಲ್ಲೂ ನೋಡಲು ಸಾಧ್ಯವಾಗಿಲ್ಲ. ಸಂಖ್ಯೆಯೂ ವಿರಳವಾಗಿರುವುದು ಕಂಡುಬಂದಿದೆ. ತರಗೆಲೆ ಉದುರಿದ ಬಂಡೆಯಿರುವ ನೆಲ ಮತ್ತು ಸುತ್ತ ಸ್ವಲ್ಪ ಕುರುಚಲು ಮತ್ತು ಒಣ ಹುಲ್ಲು ಇರುವ ಪ್ರದೇಶದಲ್ಲಿ ಜೇಡ ಕಂಡುಬಂದಿದೆ. ಆದರೆ, ಗಿಡ, ಮರಗಳ ಮೇಲೆ ಕಾಣಿಸಿಲ್ಲ. ಕಾಡು ಮಲ್ಲಿಗೆ ಮತ್ತು ನೀಲಗಿರಿಯ ಸುರಳಿ ಸುತ್ತಿದ ಎಲೆಗಳಲ್ಲಿ ಸಣ್ಣ ಗೂಡು ನಿರ್ಮಿಸಿ ರಾತ್ರಿ ವಿಶ್ರಮಿಸುತ್ತದೆ.

ಇದು ಹಗಲು ಚಟುವಟಿಕೆಯಿಂದ ಕೂಡಿರುತ್ತದೆ. ಸುರಳಿ ಸುತ್ತಿರುವ ಒಣ ಎಲೆಗಳಲ್ಲಿ ಹೆಣ್ಣು ಜೇಡ ಬಲೆಯ ಗೂಡು ನಿರ್ಮಿಸಿ ಮೊಟ್ಟೆಯಿಟ್ಟು ಮರಿಗಳು ಆಗುವವರೆಗೂ ಕಾಯುತ್ತದೆ.

ವಿಧಾನ ಪರಿಷತ್‌ನಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ

‘ಸುರಕ್ಷತಾ ನಿಯಂತ್ರಣ ಪ್ರಾಧಿಕಾರ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಸ್ತೆ ಸುರಕ್ಷತಾ ನಿಯಂತ್ರಣ ಪ್ರಾಧಿಕಾರ ಸ್ಥಾಪಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ’ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದಾದ್ಯಂತ 942 ಅಪಘಾತ ಸ್ಥಳಗಳನ್ನು (ಬ್ಲ್ಯಾಕ್ ಸ್ಪಾಟ್) ಗುರುತಿಸಲಾಗಿದೆ. ಇವುಗಳಲ್ಲಿ 214 ಸ್ಥಳಗಳು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿವೆ. ಇದರಲ್ಲಿ 186 ಸ್ಥಳಗಳನ್ನು ಸರಿಪಡಿಸುವ ಕಾಮಗಾರಿ ಪೂರ್ಣಗೊಂಡಿದೆ’ ಎಂದು ಅವರು ತಿಳಿಸಿದರು.

‘ಇಲಾಖೆ ವತಿಯಿಂದ ಭಾರತೀಯ ರಸ್ತೆ ಕಾಂಗ್ರೆಸ್ ನೀತಿಯ ಅನುಸಾರ ₹10 ಕೋಟಿಗೂ ಹೆಚ್ಚಿನ ರಸ್ತೆ ಕಾಮಗಾರಿಗಳ ಸುರಕ್ಷತಾ ಆಡಿಟ್ ನಡೆಸಲಾಗುವುದು. ನಿಯಮಾನುಸಾರ 5 ಅಪಘಾತಗಳು ಅಥವಾ 10 ಜನರಿಗೂ ಅಧಿಕ ಸಾವುಗಳು ಸಂಭವಿಸಿದರೆ 10 ಮೀಟರ್ ವ್ಯಾಪ್ತಿಯ ವಲಯಗಳನ್ನು ಅಪಘಾತದ ಸ್ಥಳಗಳನ್ನಾಗಿ ಗುರುತಿಸಲಾಗುತ್ತಿದೆ’ ಎಂದು ಅವರು ವಿವರಿಸಿದರು.

‘10 ಕೋಟಿಗೂ ಅಧಿಕ ರಸ್ತೆ ಕಾಮಗಾರಿಗಳಲ್ಲಿ ಶೇ3 ರಿಂದ 5 ರಷ್ಟು ಮೊತ್ತವನ್ನು ರಸ್ತೆ ಸುರಕ್ಷತೆಗೆ ಮೀಸಲಿರಿಸಲಾಗಿದೆ. ರಸ್ತೆ ಸುರಕ್ಷತೆ ಚಿಹ್ನೆ, ಫಲಕ ಅಳವಡಿಕೆ, ತಿರುವು ರಕ್ಷಣೆ ಗೋಡೆಗಳನ್ನು ನಿರ್ಮಿಸಲಾಗುತ್ತಿದೆ’ ಎಂದರು.

ಅಪಘಾತಗಳಲ್ಲಿ ಹೆಚ್ಚಿದ ಸಾವು: ‘ರಾಜ್ಯದಾದ್ಯಂತ 2019ರಲ್ಲಿ 40,658 ಅಪಘಾತಗಳು ಸಂಭವಿಸಿದ್ದು, 10,958 ಮಂದಿ ಸಾವಿಗೀಡಾಗಿದ್ದಾರೆ. 2020ರಲ್ಲಿ 34,178 ಅಪಘಾತಗಳಲ್ಲಿ 9,760 ಜನರು ಸಾವಿಗೀಡಾಗಿದ್ದಾರೆ. 2021ರಲ್ಲಿ 34,647 ಅಪಘಾತಗಳಲ್ಲಿ 10,038 ಮಂದಿ ಸಾವಿಗೀಡಾಗಿದ್ದಾರೆ’ ಎಂದು ಸಚಿವರು ನೀಡಿರುವ ಉತ್ತರದಲ್ಲಿ ವಿವರಿಸಿದ್ದಾರೆ.

ಅಪಘಾತ: 2022ರಲ್ಲಿ 9,857 ಮಂದಿ ಸಾವು

2022ರ ನವೆಂಬರ್‌ವರೆಗೆ ರಾಜ್ಯದಲ್ಲಿ 36,100 ಅಪಘಾತಗಳು ಸಂಭವಿಸಿದ್ದು, 9,857 ಮಂದಿ ಸಾವಿಗೀಡಾಗಿದ್ದಾರೆ.

ಅತಿ ಹೆಚ್ಚು ಅಪಘಾತಗಳು ಬೆಂಗಳೂರು ನಗರದಲ್ಲಿ ಸಂಭವಿಸಿವೆ. 3,479 ಅಪಘಾತಗಳು ಬೆಂಗಳೂರು ನಗರದಲ್ಲಿ ಸಂಭವಿಸಿದ್ದು, 670 ಮಂದಿ ಸಾವಿಗೀಡಾಗಿದ್ದಾರೆ ಎಂದು ಲೋಕೋಪಯೋಗಿ ಸಚಿವರು ಉತ್ತರದಲ್ಲಿ ವಿವರಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ 2,064 ಅಪಘಾತಗಳು ಸಂಭವಿಸಿದ್ದು 677 ಮಂದಿ ಸಾವಿಗೀಡಾಗಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ 1,764 ಅಪಘಾತಗಳು ನಡೆದಿದ್ದು, 602 ಮಂದಿ ಮೃತಪಟ್ಟಿದ್ದಾರೆ.

ಹೆದ್ದಾರಿಯಲ್ಲಿ ಗುಂಡಿ ಮುಚ್ಚಿಸಿ: ಅಬ್ದುಲ್ ಜಬ್ಬಾರ್

‘ಬೆಂಗಳೂರು–ತುಮಕೂರು ರಾಷ್ಟ್ರೀಯ ಹೆದ್ದಾರಿ ಹದಗೆಟ್ಟಿದೆ. ಈ ಹೆದ್ದಾರಿಯಲ್ಲಿ ಸಾಕಷ್ಟು ಗುಂಡಿಗಳಿವೆ. ಆದರೆ, ಟೋಲ್ ವಸೂಲಿ ಮಾತ್ರ ಅವ್ಯಾಹತವಾಗಿ ನಡೆಯುತ್ತಿದೆ’ ಎಂದು ವಿಧಾನ-ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬಾರ್ ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಸಿ.ಸಿ. ಪಾಟೀಲ್, ‘ಗುಂಡಿಗಳು ಬಿದ್ದಿರುವುದು ನಿಜ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಕರೆಯಿಸಿ ಗುಂಡಿ ಮುಚ್ಚುವಂತೆ ಸೂಚಿಸಿದ್ದೇನೆ’ ಎಂದು ತಿಳಿಸಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಘೋಷಣೆ

‘ಯಾವುದೇ ರೀತಿಯ ವಿಶೇಷ ಭೋಜನ, ಸೌಲಭ್ಯ ಬೇಕಿಲ್ಲ. ಸಮ್ಮೇಳನ ನಡೆಯುವ ಸ್ಥಳಕ್ಕೆ ನಡೆದುಕೊಂಡು ಹೋಗುವುದು ನನ್ನ ಆದ್ಯತೆ’

‘ಸಮ್ಮೇಳನ: ಜನಸಾಮಾನ್ಯರ ಮನೆಯಲ್ಲಿ ವಾಸ್ತವ್ಯ’

ಬೆಂಗಳೂರು: ‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡಿಗರ ಜಾತ್ರೆಯಾಗಬೇಕು. ಆ ಕಾರಣ ಹಾವೇರಿಯ ಜನಸಾಮಾನ್ಯರ ಮನೆಯಲ್ಲಿ ವಾಸ್ತವ್ಯ ಮಾಡುತ್ತೇನೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

‘2023ರ ಜ. 6, 7 ಹಾಗೂ 8ರಂದು ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಜ.4ರಿಂದ ಜ.8ರವರೆಗೆ ಹಾವೇರಿಯಲ್ಲಿ ವಾಸ್ತವ್ಯ ಮಾಡಲಿದ್ದೇನೆ. ಸಮ್ಮೇಳನ ನಡೆಯುವ ಸ್ಥಳಕ್ಕೆ ಹತ್ತಿರ ಇರುವ ಅಜ್ಜಯ್ಯನ ಗುಡಿಯ ಸುತ್ತಮುತ್ತಲಿನ ಯಾವುದಾದರೂ ಒಂದು ಮನೆಯಲ್ಲಿ ಉಳಿದುಕೊಳ್ಳಲು ನಿರ್ಧಾರ ಮಾಡಿದ್ದೇನೆ. ಹಾವೇರಿ ನನ್ನ ತವರೂರಾಗಿದ್ದು, ಅಲ್ಲಿನ ಯಾವುದೇ ಮನೆಯಲ್ಲಿ ಇದ್ದರೂ ಅದು ನನ್ನ ಮನೆ ಎಂದೇ ಭಾವಿಸುತ್ತೇನೆ’ ಎಂದು ಹೇಳಿದ್ದಾರೆ.

ಮಹೇಶ ಜೋಶಿ

‘ಹಾವೇರಿಯ ಜನರ ಮನೆಯಲ್ಲಿ ವಾಸ್ತವ್ಯ ಮಾಡಿ, ಅವರಿಗೆ ಇನ್ನಷ್ಟು ಹತ್ತಿರ ಆಗಬೇಕು ಎಂಬ ಅಪೇಕ್ಷೆ ನನ್ನದು. ಸಮ್ಮೇಳನ ನಡೆಯುವ ಸ್ಥಳದ ಹತ್ತಿರ ಇರುವ ಅಜ್ಜಯ್ಯನ ದೇವಸ್ಥಾನದ ಸುತ್ತಮುತ್ತ ಇರುವ ಯಾವುದಾದರೂ ಮನೆಯವರು ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಲು ಇಚ್ಛಿಸಿದಲ್ಲಿ, ತಮ್ಮ ಮನೆಯ ವಿಳಾಸ ನೀಡಬಹುದು’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಬಿಬಿಎಂಪಿಯ ನಕಲಿ ಖಾತೆ ತನಿಖೆಗೆ ಸಿದ್ಧ– ಅಶೋಕ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಕಟ್ಟಿಗೇನಹಳ್ಳಿಯಲ್ಲಿ ಖಾಸಗಿ ಬಡಾವಣೆ ನಿರ್ಮಿಸಿ, ಬಿಬಿಎಂಪಿಯ ನಕಲಿ ಖಾತೆಗಳನ್ನು ಸೃಷ್ಟಿಸಿ ನಿವೇಶನಗಳ ನೋಂದಣಿ ಮಾಡಿಕೊಟ್ಟ ಇಬ್ಬರು ಉಪ ನೋಂದಣಾಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಈ ಪ್ರಕರಣವನ್ನು ಯಾವುದೇ ತನಿಖೆಗೆ ವಹಿಸಲು ಸಿದ್ಧ’ ಎಂದು ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನಸಭೆಯಲ್ಲಿ ಗಮನಸೆಳೆಯುವ ಸೂಚನೆಯ ವೇಳೆ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, ‘ಕಟ್ಟಿಗೇನಹಳ್ಳಿಯ 16 ಎಕರೆ ಪ್ರದೇಶದಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿ, ಈಗಾಗಲೇ 70 ಜನರಿಗೆ ನಿವೇಶನ ನೋಂದಣಿ ಮಾಡಿಕೊಡಲಾಗಿದೆ. ಈ ಬಗ್ಗೆ ಬಿಬಿಎಂಪಿ ಕಂದಾಯ ಅಧಿಕಾರಿಗಳು ಜಿಲ್ಲಾ ಉಪನೋಂದಣಾಧಿಕಾರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ದೂರು ದಾಖಲಾಗಿದೆ’ ಎಂದರು.

ಅದಕ್ಕೆ ಉತ್ತರಿಸಿದ ಸಚಿವರು, ‘ಈಗಾಗಲೇ ಇಬ್ಬರು ಉಪ ನೋಂದಣಾಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಈ ಅಕ್ರಮದಲ್ಲಿ ಭಾಗಿಯಾದ ಇತರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಮೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಮಾಫಿಯಾವನ್ನು ಮಟ್ಟ ಹಾಕಲು ಗೃಹ ಸಚಿವರ ಜತೆ ಚರ್ಚಿಸಿ, ತನಿಖೆ ನಡೆಸಲಾಗುವುದು’ ಎಂದು ಭರವಸೆ ನೀಡಿದರು.

‘ನಕಲಿ ಖಾತೆ ಸೃಷ್ಟಿ ಪ್ರಕರಣವನ್ನು ಸಿಐಡಿ ತನಿಖೆಗೆ ಕೊಡಲು ಸಿದ್ಧ’ ಎಂದು ಸಚಿವ ಆರ್. ಅಶೋಕ ಹೇಳಿದಾಗ, ‘ಪೊಲೀಸ್ ತನಿಖೆ ಮಾಡಿಸಿದರೆ ಸಾಕು. ಸಿಐಡಿ ತನಿಖೆ ಅಗತ್ಯವಿಲ್ಲ’ ಎಂದರು.

ಆಗ ಮಧ್ಯಪ್ರವೇಶಿಸಿದ ಬಿಜೆಪಿಯ ಗೂಳಿಹಟ್ಟಿ ಶೇಖರ್, ‘ನನಗೆ, ನರೇಂದ್ರ ಸ್ವಾಮಿ ಮತ್ತು ಅಭಯ್ ಪಾಟೀಲಗೆ ಸರ್ಕಾರ ಜಿ– ಕೆಟಗರಿಯಲ್ಲಿ ನೀಡಿದ ನಿವೇಶನಗಳಿಗೆ ಕೆಲವರು ನಕಲಿ ಖಾತೆ ಮಾಡಿಸಿ, ನೋಂದಣಿ ಮಾಡಿಕೊಂಡಿದ್ದಾರೆ. ಕೋರ್ಟ್‌ನಿಂದ ತಡೆಯಾಜ್ಞೆಯನ್ನೂ ತಂದಿದ್ದಾರೆ. ಶಾಸಕರ ನಿವೇಶನಗಳೇ ಈ ರೀತಿಯಾದರೆ, ಸಾರ್ವಜನಿಕರ ಸ್ಥಿತಿ ಹೇಗೆ’ ಎಂದು ಪ್ರಶ್ನಿಸಿದರು.

ಅದಕ್ಕೆ ಧ್ವನಿಗೂಡಿಸಿದ ಅರವಿಂದ ಲಿಂಬಾವಳಿ, ‘ಪ್ರತಿಭಾ ಪ್ರಹ್ಲಾದ್ ಅವರಿಗೆ ಸರ್ಕಾರ ಕೊಟ್ಟ ಜಾಗಕ್ಕೆ ಕೂಡಾ ಯಾರೋ ನಕಲಿ ಖಾತೆ ಸೃಷ್ಟಿಸಿಕೊಂಡಿದ್ದಾರೆ’ ಎಂದರು.

ಆಗ ಆರ್. ಅಶೋಕ, ‘ಪ್ರದೇಶ, ಸರ್ವೆ ನಂಬರ್, ನಿವೇಶನ ಸಂಖ್ಯೆ, ಯಾವ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿದೆ ಎಂಬ ಮಾಹಿತಿ ನೀಡಿದರೆ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಫಾರ್ಮ್‌ನಲ್ಲಿ ವನ್ಯಜೀವಿಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಶಾಮನೂರು ಶಿವಶಂಕರಪ್ಪ ಅವರ ಪುತ್ರ, ಕಾಂಗ್ರೆಸ್ ಮುಖಂಡ ಎಸ್. ಎಸ್. ಮಲ್ಲಿಕಾರ್ಜುನ್ ಅವರ ದಾವಣಗೆರೆಯ ಕಲ್ಲೇಶ್ವರ ಮಿಲ್ ಹಿಂಭಾಗದ ಫಾರ್ಮ್ ಹೌಸ್ ಮೇಲೆ ಸಿಸಿಬಿ ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ದಾಳಿ ನಡೆಸಿದ್ದು, ಜೀವಂತ ವನ್ಯಜೀವಿಗಳು ಪತ್ತೆಯಾಗಿವೆ.

ಮಲ್ಲಿಕಾರ್ಜುನ್

ಏಳು ಚುಕ್ಕೆ ಜಿಂಕೆಗಳು, 10 ಕೃಷ್ಣಮೃಗಗಳು, ಏಳು ಕಾಡುಹಂದಿಗಳು, ಮೂರು ಮುಂಗುಸಿಗಳು, ಎರಡು ನರಿಗಳು ಸಿಕ್ಕಿವೆ. ಅವುಗಳನ್ನು ರಕ್ಷಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ನಗರದ ಹೆಬ್ಬಾಳದಲ್ಲಿ ಡಿ.18 ರಂದು ಜಿಂಕೆ ಚರ್ಮ, ಕೊಂಬು, ಮೂಳೆ ಮಾರಾಟ ಮಾಡಲು ಬಂದಿದ್ದ ಸೆಂಥಿಲ್ ಎಂಬ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದ ಸಿಸಿಬಿ ಪೊಲೀಸರು ಆತನ ವಿಚಾರಣೆಗೆ ಒಳಪಡಿಸಿದ್ದರು. ದಾವಣಗೆರೆಯಿಂದ ಚರ್ಮ ತಂದಿರುವುದಾಗಿ ಆತ ಬಾಯ್ಬಿಟ್ಟಿದ್ದ. ಈ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದಾಗ ಜೀವಂತ ವನ್ಯಪ್ರಾಣಿಗಳು ಸಿಕ್ಕಿವೆ’ ಎಂದು ಮೂಲಗಳು ತಿಳಿಸಿವೆ.

ಫಾರ್ಮ್‌ನಲ್ಲಿದ್ದ ಕಾರ್ಮಿಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಪ್ರಕರಣವನ್ನು ಸ್ಥಳೀಯ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದಿವೆ.

ವನ್ಯಜೀವಿ ಕಾಯ್ದೆಯಡಿ ಪ್ರಕರಣ

ದಾವಣಗೆರೆ: ಫಾರ್ಮ್ ಹೌಸ್‌ನಲ್ಲಿ ಪತ್ತೆಯಾಗಿರುವ ವನ್ಯಜೀವಿಗಳನ್ನು ಈಗಾಗಲೇ ಇಲಾಖೆಯ ವಶಕ್ಕೆ ಪಡೆಯಲಾಗಿದ್ದು, ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ವನ್ಯಜೀವಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲು ನ್ಯಾಯಾಲಯವನ್ನು ಕೋರಲಾಗಿದೆ. ಆದೇಶದ ಪ್ರತಿ ಸಿಗುತ್ತದ್ದಂತೆಯೇ ತನಿಖಾಧಿಕಾರಿಯನ್ನು ನೇಮಿಸಿ ಪ್ರಕರಣದ ತನಿಖೆ ಆರಂಭಿಸಿ ಶೀಘ್ರವೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು’ ಎಂದು ದಾವಣಗೆರೆ ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಚ್. ಜಗನ್ನಾಥ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ನ್ಯಾಯಾಲಯದ ಅನುಮತಿ ಪಡೆದು ವನ್ಯಜೀವಿಗಳನ್ನು ಅರಣ್ಯಕ್ಕೆ ಬಿಡಬೇಕೇ ಅಥವಾ ಪ್ರಾಣಿ ಸಂಗ್ರಹಾಲಯಕ್ಕೆ ರವಾನಿಸಬೇಕೇ ಎಂಬ ಕುರಿತು ನಿರ್ಧರಿಸಲಾಗುವುದು’ ಎಂದರು.

‘ಪರವಾನಗಿ ಪಡೆದೇ ಸಾಕಿದ್ದೆವು’

‘ಪರವಾನಗಿ ಪಡೆದೇ 2000ರಿಂದಲೇ ನಮ್ಮ ಫಾರ್ಮ್ ಹೌಸ್‌ನಲ್ಲಿ ಜಿಂಕೆ ಸಾಕುತ್ತಿದ್ದೆವು. ಇವುಗಳನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿ ಕಾನೂನು ಬಾಹಿರವಾಗಿ ಪ್ರಾಣಿಗಳ ಚರ್ಮ, ಕೊಂಬು ಮಾರಾಟ ಮಾಡಿದ್ದಾನೆ ಎಂಬ ಆರೋಪ ಕೇಳಿ ಬಂದಿದೆ. ಪರವಾನಗಿ ಪಡೆದು ಸಾಕುತ್ತಿದ್ದ ನಾಲ್ಕೈದು ಜಿಂಕೆಗಳು ಮರಿ ಹಾಕಿದ್ದರಿಂದ ಇವುಗಳ ಸಂಖ್ಯೆ ಈಗ ಹೆಚ್ಚಾಗಿದೆ. ಕಾನೂನು ಪ್ರಕಾರವೇ ನಾವು ಸಾಕುತ್ತಿದ್ದೇವೆ’ ಎಂದು ಎಸ್. ಎಸ್. ಮಲ್ಲಿಕಾರ್ಜುನ್ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

25ರಂದು ಎಲ್ಲದಕ್ಕೂ ಉತ್ತರ ಜನಾರ್ದನ ರೆಡ್ಡಿ

ಮಸ್ಕಿ (ರಾಯಚೂರು ಜಿಲ್ಲೆ): ‘ರಾಜಕೀಯದ ಎಲ್ಲಾ ಊಹಾಪೋಹಗಳಿಗೆ ಬೆಂಗಳೂರಿನಲ್ಲಿ ಡಿ.25ರಂದು ಉತ್ತರ ನೀಡಲಾಗುವುದು’ ಎಂದು ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಹೇಳಿದರು.

‘ಉತ್ತರ ಕರ್ನಾಟಕದ ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡುವೆ. ಬಳ್ಳಾರಿಯಲ್ಲಿ ನನಗೆ ಇರಲು ಅವಕಾಶವಿರದ ಕಾರಣ ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚು ತಿರುಗಾಡಬೇಕಿದೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಸಚಿವ ಬಿ.ಶ್ರೀರಾಮುಲು, ಬಿಜೆಪಿ ಮುಖಂಡರು ಸೇರಿ ಯಾರ ಜೊತೆಗೂ ನನ್ನ ವೈಮನಸ್ಸು ಇಲ್ಲ. ಕೆಲ ಕಾರಣಗಳಿಂದ ನಾನು ಸಕ್ರಿಯ ರಾಜಕಾರಣ ಮತ್ತು ಜನರಿಂದ ದೂರವಿದ್ದೆ’ ಎಂದರು.

ಕಾಂಗ್ರೆಸ್ ಹಾಗೂ ಬಿಜೆಪಿಯ ಕೆಲ ಮುಖಂಡರು ರೆಡ್ಡಿ ಅವರನ್ನು ಭೇಟಿಯಾಗಿ, ಗೋಪ್ಯ ಮಾತುಕತೆ ನಡೆಸಿದರು. ಕೆಲ ಮುಖಂಡರ ಮನೆಗಳಿಗೂ ರೆಡ್ಡಿ ಭೇಟಿ ನೀಡಿದರು.

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅಭಿಮತ

‘ಪಾಣಿನಿ ಸೂತ್ರ ಪರಿಹಾರ: ತರ್ಕಬದ್ಧವಲ್ಲ’

ಪ್ರಜಾವಾಣಿ ವಾರ್ತೆ

ಸಿರಿಗೆರೆ: ‘ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಪಿಎಚ್.ಡಿ ವಿದ್ಯಾರ್ಥಿ ರಿಷಿ ಅತುಲ್ ರಾಜಪೋಪಟ್ ಅವರು ‘ಪಾಣಿನಿ ಮಹರ್ಷಿಯ’ ಸೂತ್ರದ ಸಮಸ್ಯೆಯೊಂದಕ್ಕೆ ಪರಿಹಾರ ಹುಡುಕಿರುವುದು ತರ್ಕಬದ್ಧವಲ್ಲ ಮತ್ತು ಅಮಾನ್ಯವಾದುದಾಗಿದೆ’ ಎಂದು ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಪಾಣಿನಿ ಮಹರ್ಷಿಯ ‘ಅಷ್ಟಾಧ್ಯಾಯಿ’ ಸಂಸ್ಕೃತ ವ್ಯಾಕರಣ ಗ್ರಂಥವನ್ನು ಆಳವಾಗಿ ಅಧ್ಯಯನ ಮಾಡಿ, ಜಗತ್ತಿನಲ್ಲಿಯೇ ಮೊಟ್ಟ ಮೊದಲು ಸಾಫ್ಟ್‌ವೇರ್ ರೂಪಿಸಿರುವ ಸ್ವಾಮೀಜಿ, ರಾಜಪೋಪಟ್ ಸಲ್ಲಿಸಿರುವ ಪ್ರಬಂಧದ ಮೂಲ ಪ್ರತಿಯನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ಪಡೆದುಕೊಂಡು ಪರಿಶೀಲಿಸಿದ್ದಾರೆ.

‘ಪಾಣಿನಿ ಸೂತ್ರದಲ್ಲಿ ‘1.4.2 – ವಿಪ್ರತಿಷೇದೇ ಪರಮ್ ಕಾರ್ಯಂ’ ಭೇದಿಸಲು ಯಾವುದೇ ಒಗಟಿಲ್ಲ. ಭಾರತೀಯ ಸಂಪ್ರದಾಯದಲ್ಲಿ ಇದನ್ನು ಚೆನ್ನಾಗಿ ಅರ್ಥೈಸಿರುವ ಸಾಂಪ್ರದಾಯಿಕ ತಿಳಿವಳಿಕೆ ಹೀಗಿದೆ– ‘ಸಮಾನ ಸಾಮರ್ಥ್ಯದ ಎರಡು ನಿಯಮಗಳ ನಡುವಿನ ಸಂಘರ್ಷದ ಸಂದರ್ಭದಲ್ಲಿ, ವ್ಯಾಕರಣದ ಸರಣಿ ಕ್ರಮದಲ್ಲಿ ನಂತರ ಬರುವ ನಿಯಮವು ಗೆಲ್ಲುತ್ತದೆ. ಆದರೆ, ಪೋಪಟ್ ಅವರ ವಿಚಾರ ಬೇರೆಯದೇ ಆಗಿದೆ’ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

‘ಪ್ರಸ್ತುತ ಸಂಶೋಧಕರ ಪ್ರಬಂಧವನ್ನು ಅನುಮೋದಿಸುವ ಮೊದಲು ವಿಶ್ವವಿದ್ಯಾಲಯದ ಮಾರ್ಗದರ್ಶಿಗಳು ಮತ್ತು ಪ್ರಾಧ್ಯಾಪಕರು ಕಾಳಜಿ ವಹಿಸಬೇಕಾಗಿತ್ತು’ ಎಂದು ಸ್ವಾಮೀಜಿ ತಿಳಿಸಿದ್ದಾರೆ.

‘ನಾವು ಆಳವಾದ ಅಧ್ಯಯನ, ಸಂಶೋಧನೆಗಳ ಮೂಲಕ 1993ರಲ್ಲಿಯೇ ಈ ಗ್ರಂಥಕ್ಕೆ ಸಾಫ್ಟ್‌ವೇರ್ ರೂಪಿಸಿ, ‘ಗಣಕಾಷ್ಟಾಧ್ಯಾಯಿ’ ಎಂದು ನಾಮಕರಣ ಮಾಡಿ ಆಸ್ಟ್ರೇಲಿಯಾದ ಮೆಲ್ಬರ್ನ್ ವಿಶ್ವವಿದ್ಯಾಲಯದಲ್ಲಿ 1994ರಲ್ಲಿ ಜರುಗಿದ 9ನೆಯ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ತಮ್ಮ ಸಂಶೋಧನೆಯ ವಿವರಗಳನ್ನು ಮಂಡಿಸಿ, ಸಾಫ್ಟ್‌ವೇರ್ ಪ್ರಾತ್ಯಕ್ಷಿಕೆ ತೋರಿಸಿದ್ದಕ್ಕೆ ಸಂಸ್ಕೃತ ವಿದ್ವಾಂಸರು ಸಂತಸ ವ್ಯಕ್ತಪಡಿಸಿದ್ದರು’ ಎಂದರು.

http://www.taralabalu.org/panini ವೆಬ್‌ಸೈಟ್ ಬಳಕೆ ಮಾಡಿ ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ವಿದ್ವಾಂಸರು ಗಮನಿಸಬಹುದು ಎಂದು ಅವರು ವಿವರಿಸಿದ್ದಾರೆ.

ಮುಖ್ಯಾಂಶಗಳು

- ಕೇಂಬ್ರಿಡ್ಜ್‌ನ ರಿಷಿ ಅತುಲ್ ರಾಜಪೋಪಟ್ ನೀಡಿದ್ದ ಪರಿಹಾರ
- ಪ್ರಬಂಧ ಅನುಮೋಸನೆಗೆ ಮೊದಲು ಕಾಳಜಿ ವಹಿಸಬೇಕಿತ್ತು: ಸ್ವಾಮೀಜಿ
- ‘ಅಷ್ಟಾಧ್ಯಾಯಿ’ ಅಧ್ಯಯನ ನಡೆಸಿ, ಜಗತ್ತಿನ ಮೊದಲ ಸಾಫ್ಟ್‌ವೇರ್ ರೂಪಿಸಿರುವ ಸ್ವಾಮೀಜಿ

ಮಲೆನಾಡಿನ ಹೋಮ್‌ಸ್ಟೇ ಹಾಗೂ ರೆಸಾರ್ಟ್‌ನಲ್ಲಿ ಶೇ 90ರಷ್ಟು ಕೊಠಡಿ ಕಾಯ್ದಿರಿಸಿದ ಪ್ರವಾಸಿಗರು

ಕ್ರಿಸ್‌ಮಸ್, ಹೊಸವರ್ಷ: ಪ್ರವಾಸೋದ್ಯಮಕ್ಕೆ ಶುಕ್ರದೆಸೆ

• ಆದಿತ್ಯ ಕೆ.ಎ.

ಬೆಂಗಳೂರು: ಮಲೆನಾಡಿನ ಮಡಿಲಿನಲ್ಲಿ ಕ್ರಿಸ್‌ಮಸ್ ಆಚರಣೆ ಹಾಗೂ ಹೊಸವರ್ಷ ಸ್ವಾಗತಿಸಲು ಮಹಾನಗರಗಳ ಜನರು ಸಜ್ಜಾಗಿದ್ದು, ಚಿಕ್ಕಮಗಳೂರು, ಸಕಲೇಶಪುರ ಹಾಗೂ ಕೊಡಗಿನ ಹೋಮ್‌ಸ್ಟೇ ಹಾಗೂ ರೆಸಾರ್ಟ್‌ಗಳಿಗೆ ಈಗ ಶುಕ್ರದೆಸೆ ಬಂದಿದೆ.

ಕೋವಿಡ್, ಪ್ರಾಕೃತಿಕ ವಿಕೋಪ ಕಾರಣದಿಂದ ಮಲೆನಾಡು ಭಾಗದಲ್ಲಿ ಕಳೆಗುಂದಿದ್ದ ಪ್ರವಾಸೋದ್ಯಮಕ್ಕೆ ಈಗ ಸುಗ್ಗಿಯ ಕಾಲ. ಪ್ರವಾಸಿ ಚಟುವಟಿಕೆಗಳು ಚಿಗುರಿವೆ. ಶಾಲಾ ಮಕ್ಕಳ ಪ್ರವಾಸದಿಂದ ಗಿಜಿಗುಡುತ್ತಿರುವ ಪ್ರವಾಸಿ ಸ್ಥಳಗಳು ಮತ್ತಷ್ಟು ಕಳೆಗಟ್ಟಲಿವೆ.

ಪ್ರಕೃತಿ ಮಡಿಲಿನಲ್ಲಿರುವ ಹೋಮ್‌ಸ್ಟೇಗಳಲ್ಲಿ ಬಹುತೇಕ ಕೊಠಡಿಗಳನ್ನು ಪ್ರವಾಸಿಗರು ಆನ್‌ಲೈನ್ ಕಾಯ್ದಿರಿಸಿದ್ದಾರೆ. ಮಹಾನಗರಗಳ ಜನರ ಆನ್‌ಲೈನ್ ಸಲ್ಲಾಪರು ಅನೇಕ ಪ್ರವಾಸಿ ತಾಣಗಳಲ್ಲಿ ವಿಚಾರಿಸಿದರೆ 'ರೂಂ ಲಭ್ಯವಿಲ್ಲ' ಎಂಬ ಉತ್ತರ ಸಿಗುತ್ತಿದೆ.

ಈ ವರ್ಷ ವಿಶೇಷ ಖಾದ್ಯ, ಸಾಂಸ್ಕೃತಿಕ ಕಾರ್ಯಕ್ರಮದ ರಸದೌತಣ ಸಿಗಲಿದೆ. ತೀವ್ರ ಚಳಿಯೂ ಮುದ ನೀಡಲಿದೆ.
ನಾಗೇಂದ್ರ ಪ್ರಸಾದ್, ಅಧ್ಯಕ್ಷ, ಹೋಟೆಲ್ ಹಾಗೂ ರೆಸಾರ್ಟ್ ಮಾಲೀಕರ ಸಂಘ, ಕೊಡಗು

'ಚಿಕ್ಕಮಗಳೂರಿನ 800 ಹೋಮ್‌ಸ್ಟೇಗಳ ಪೈಕಿ ಶೇ 90ರಷ್ಟು ಮುಂಗಡವಾಗಿ ಬುಕ್ ಆಗಿವೆ' ಎಂದು ಅಸೋಸಿಯೇಷನ್ ಕಾರ್ಯದರ್ಶಿ ಗಿರೀಶ್ ತಿಳಿಸಿದರು. ಮೈಸೂರಿನಲ್ಲೂ ಶೇ 80ರಷ್ಟು ಹೋಟೆಲ್‌ಗಳಲ್ಲಿ ಕೊಠಡಿಗಳು ಬುಕ್ ಆಗಿವೆ ಎನ್ನುತ್ತಾರೆ ಸಂಘದವರು.

'ಸಿಲಿಕಾನ್ ಸಿಟಿ'ಯ ಟೆಕ್ಕಿಗಳು ಮಲೆನಾಡಿನ ಊರುಗಳಲ್ಲದೆ ರಾಜ್ಯದ ಕರಾವಳಿ ಪ್ರದೇಶ, ಗೋವಾದತ್ತಲೂ ತೆರಳಲು ಸಿದ್ಧತೆ ನಡೆಸಿದ್ದಾರೆ.

'2023 ಅನ್ನು ಸ್ಮರಣೀಯವಾಗಿ ಸ್ವಾಗತಿಸಲು ಹಲವು ಯೋಜನೆ ರೂಪಿಸಿಕೊಂಡಿದ್ದೇವೆ. ಕಳೆದ ಬಾರಿ ಕೋವಿಡ್ ಭಯದಿಂದ ಬೇರೆ ಸ್ಥಳಕ್ಕೆ ಹೋಗಿರಲಿಲ್ಲ. ಈ ಬಾರಿ ಸ್ನೇಹಿತರೆಲ್ಲರೂ ಗೋವಾದ ಸಮುದ್ರ ತೀರದಲ್ಲಿ ಹೊಸ ವರ್ಷ ಬರ ಮಾಡಿಕೊಳ್ಳುತ್ತೇವೆ' ಎಂದು ಬೆಂಗಳೂರಿನ 'ಇನ್ಫೋಸಿಸ್' ಉದ್ಯೋಗಿ ಸಂತೋಷ್ ಹೇಳುತ್ತಾರೆ.

'ಡಿ.24ರಿಂದ 31ರ ನಡುವೆ ದಿಢೀರ್ ಯೋಜನೆ ರೂಪಿಸಿ ಕೊಡಗಿಗೆ ಬಂದರೆ ರೂಂಗಳು ಸಿಗುವುದಿಲ್ಲ. ಮುಂಗಡವಾಗಿ ಹೋಮ್‌ಸ್ಟೆ ಕಾಯ್ದಿರಿಸಿದವರಿಗೆ ಮಾತ್ರ ಕೊಠಡಿ ಸಿಗಲಿವೆ. ಮಹಾರಾಷ್ಟ್ರ, ಕೇರಳದಿಂದ ಹೆಚ್ಚಿನ ಜನರು ಕಾಫಿ ಕಣಿವೆಯಲ್ಲಿ ಕೊಠಡಿ ಕಾಯ್ದಿರಿಸಿದ್ದಾರೆ' ಎಂದು ಪ್ರವಾಸಿ ಏಜೆಂಟ್ ಹೇಳಿದರು.

'ಕೊಡಗಿನಲ್ಲಿ ರೆಸಾರ್ಟ್, ಲಾಡ್ಜ್, ಹೋಟೆಲ್‌ಗಳು ಸೇರಿ 250 ಇವೆ. 3,500 ಹೋಮ್‌ಸ್ಟೇಗಳಿವೆ. ಡಿ.31ರಂದು ಜಿಲ್ಲೆಗೆ ಮೂರು ಲಕ್ಷ ಪ್ರವಾಸಿಗರು ಬರುವ ನಿರೀಕ್ಷೆಯಿದೆ. ರಾತ್ರಿ 2ರ ವರೆಗೂ ಸಂಭ್ರಮಕ್ಕೆ ಅವಕಾಶ ಕಲ್ಪಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿದೆ. ಕಾಫಿನಾಡಿಗೆ ಬಂದವರಿಗೆ ನಿರಾಸೆ ಆಗುವುದಿಲ್ಲ' ಎಂದು ಕೂರ್ಗ್ ಹೋಟೆಲ್ ಹಾಗೂ ರೆಸಾರ್ಟ್ ಮಾಲೀಕರ ಸಂಘದ ಅಧ್ಯಕ್ಷ ನಾಗೇಂದ್ರ ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರವಾಸಿಗರ ಸ್ವಾಗತಕ್ಕೆ ಸಜ್ಜುಗೊಂಡಿರುವ ಹೋಮ್‌ಸ್ಟೇ

2019ಕ್ಕಿಂತಲೂ ಹೆಚ್ಚಿನ ಪ್ರವಾಸಿಗರು ಚಿಕ್ಕಮಗಳೂರಿಗೆ ಬರುವ ಅಂದಾಜಿದೆ. ಎರಡು ತಿಂಗಳ ಹಿಂದೆ ಕೆಲವು ಹೋಮ್‌ಸ್ಟೇಗಳು ಬುಕ್ ಆಗಿವೆ.
ಗಿರೀಶ್, ಕಾರ್ಯದರ್ಶಿ, ಹೋಮ್‌ಸ್ಟೆ ಅಸೋಸಿಯೇಷನ್, ಚಿಕ್ಕಮಗಳೂರು

ದರ ಏರಿಕೆ: ಪ್ರವಾಸಿಗರಿಗೆ ಬರೆ

ಸಾಮಾನ್ಯ ದಿನಗಳಲ್ಲಿ ₹ 1 ಸಾವಿರದಿಂದ ₹1,500 ಒಳಗಿದ್ದ ಹೋಮ್‌ಸ್ಟೇಗಳ ಕೊಠಡಿ ದರವು ಈಗ ₹ 3 ಸಾವಿರಕ್ಕೆ ಏರಿಕೆಯಾಗಿದೆ. ಪ್ರಕೃತಿ ಮಡಿಲಿನ ವಾಸ್ತವ್ಯದ ತಾಣಗಳಿಗೆ ₹5 ಸಾವಿರದಿಂದ ₹ 6 ಸಾವಿರದ ತನಕ ದರ ಏರಿಕೆಯಾಗಿದೆ. 'ಪ್ರವಾಸಿಗರ ಸುಲಿಗೆ ಮಾಡಲಾಗುತ್ತಿದೆ' ಎಂಬ ಆರೋಪ ಇದೆ.



ಹುಬ್ಬಳ್ಳಿಯ ಬೈರಿದೇವರಕೊಪ್ಪದ ಬಳಿಯ ದರ್ಗಾದ ಕಟ್ಟಡವನ್ನು ಬುಧವಾರ ಜೆಸಿಬಿಗಳ ಸಹಾಯದಿಂದ ತೆರವುಗೊಳಿಸಲಾಯಿತು. /ಪ್ರಜಾವಾಣಿ ಚಿತ್ರ

ದರ್ಗಾ ತೆರವು; ಗೋರಿಗಳ ಸ್ಥಳಾಂತರಕ್ಕೆ ಸಿದ್ಧತೆ

ಹುಬ್ಬಳ್ಳಿ: ಇಲ್ಲಿನ ಬೈರಿದೇವರಕೊಪ್ಪದ ಸಾರ್ವಜನಿಕ ಸ್ಥಳದಲ್ಲಿದ್ದ ಹಜರತ್ ಸೈಯದ್ ಮೆಹಬೂಬ್ ಶಾ ಖಾದ್ರಿ ದರ್ಗಾದ ಪ್ರಾರ್ಥನಾ ಸ್ಥಳ, ವಾಣಿಜ್ಯ ಮಳಿಗೆಗಳ ತೆರವು ಮತ್ತು ಮೂರು ಗೋರಿಗಳ ಸ್ಥಳಾಂತರ ಕಾರ್ಯ ಬುಧವಾರ ಪೊಲೀಸ್ ಸರ್ಪಗಾವಲಿನಲ್ಲಿ ಆರಂಭವಾಯಿತು.

ಬಿಆರ್‌ಟಿಎಸ್ ಯೋಜನೆಯ ಅನುಷ್ಠಾನಕ್ಕಾಗಿ ಭೂಸ್ವಾಧೀನ ಮಾಡಿಕೊಳ್ಳುವಾಗ 2012ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶದಲ್ಲಿ ಈ ದರ್ಗಾದ ಪಾರ್ಶ್ವ ಭಾಗವೂ ಒಳಪಟ್ಟಿತ್ತು. ದರ್ಗಾದ ಆಡಳಿತ ಮಂಡಳಿ 2022ರವರೆಗೂ ಕಾನೂನು ಹೋರಾಟ ನಡೆಸಿತ್ತು. ಡಿ.16ರಂದು ಧಾರವಾಡ ಹೈಕೋರ್ಟ್ ಪೀಠ ಭೂಸ್ವಾಧೀನದ ಪ್ರಕಾರ ಬಿಆರ್‌ಟಿಎಸ್‌ಗೆ ಒಳಪಡುವ ಜಾಗವನ್ನು ವಶಪಡಿಸಿಕೊಳ್ಳಲು ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಬಿಆರ್‌ಟಿಎಸ್ ಸಂಸ್ಥೆಯು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ನೆರವು ಪಡೆದು ತೆರವು ಕಾರ್ಯಾಚರಣೆ ನಡೆದಿದೆ.

ಬೆಳಿಗ್ಗೆ 6.30ರ ಸುಮಾರು ಆರಂಭವಾದ ತೆರವು ಕಾರ್ಯ ಸತತವಾಗಿ ರಾತ್ರಿವರೆಗೂ ನಡೆಯಿತು. ಮುಂಜಾಗ್ರತಾ ಕ್ರಮವಾಗಿ ಅವಳಿ ನಗರದಲ್ಲಿ ನಿಷೇಧಾಜ್ಞೆ (ಬುಧವಾರ ಬೆಳಿಗ್ಗೆ 6ರಿಂದ ಗುರುವಾರ ಬೆಳಿಗ್ಗೆ 6ರವರೆಗೆ) ಹೊರಡಿಸಿ, ದರ್ಗಾದ ಸುತ್ತ ಮತ್ತು ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

'ದರ್ಗಾದ ಆವರಣದಲ್ಲಿರುವ ಗೋರಿಗಳನ್ನು ತೆರವು ಮಾಡಬೇಕೆ. ಕಾಲಾವಕಾಶ ನೀಡಿದರೆ ನಾವೇ ಸ್ಥಳಾಂತರಿಸುತ್ತೇವೆ' ಎಂದು ಅಂಜುಮನ್ ಸಂಸ್ಥೆ ಪದಾಧಿಕಾರಿಗಳು, ಮುಸ್ಲಿಂ ಸಮುದಾಯದ ಪಾಲಿಕೆ ಸದಸ್ಯರು, ಧರ್ಮಗುರುಗಳು ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಮಸೀದಿಯ ಪ್ರಾರ್ಥನಾ ಮಂದಿರ, ತಡೆಗೋಡೆ, ಚಾವಣಿಯನ್ನು ತೆರವುಗೊಳಿಸಿದ ಜಿಲ್ಲಾಡಳಿತ, ಗೋರಿಗಳ ಸ್ಥಳಾಂತರಕ್ಕೆ ಬುಧವಾರ ಸಂಜೆವರೆಗೆ ಕಾಲಾವಕಾಶ ನೀಡಿತು.

ಕೋಟಿಗಾನಹಳ್ಳಿ ರಾಮಯ್ಯಗೆ 'ಎಚ್ಚೆಲ್ಲೆ ವೈಚಾರಿಕ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಮಂಡ್ಯ: ಪ್ರೊ. ಎಚ್. ಎಲ್. ಕೇಶವಮೂರ್ತಿ ಪ್ರತಿಷ್ಠಾನ ನೀಡುವ 5ನೇ ವರ್ಷದ 'ಎಚ್ಚೆಲ್ಲೆ ವೈಚಾರಿಕ ಪ್ರಶಸ್ತಿ'ಗೆ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಡಿ.28ರಂದು ಬೆಳಿಗ್ಗೆ 10.30ಕ್ಕೆ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಪ್ರದಾನ ಮಾಡಲಾಗುವುದು. ಪ್ರತಿಷ್ಠಾನದ ಅಧ್ಯಕ್ಷ ಗುರುಪ್ರಸಾದ್ ಕೆರಗೋಡು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪಿಎಸ್‌ಐ ನೇಮಕಾತಿ; ಮತ್ತೊಬ್ಬ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳ ತಂಡವು ಬುಧವಾರ ನಗರದ ಅಕ್ಕಮಹಾದೇವಿ ಕಾಲೊನಿಯಲ್ಲಿ ಕುಪೇಂದ್ರ ಶಿವಣ್ಣ ಭಾಸಗಿ ಎಂಬ ಆರೋಪಿಯನ್ನು ಬಂಧಿಸಿದೆ.



ಕುಪೇಂದ್ರ

ಅಫಜಲಪುರ ತಾಲ್ಲೂಕಿನ ದೇಸಾಯಿ ಕಲ್ಲೂರು ಗ್ರಾಮದ ಕುಪೇಂದ್ರ, ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮದಲ್ಲಿ ಪ್ರಮುಖ ಆರೋಪಿ ಆರ್.ಡಿ.ಪಾಟೀಲ ಮತ್ತು ಅಭ್ಯರ್ಥಿಗಳ ನಡುವೆ ಮಧ್ಯಸ್ಥಿಕೆ ವಹಿಸಿದ್ದ' ಎಂದು ಸಿಐಡಿ ಅಧಿಕಾರಿಗಳು ತಿಳಿಸಿದ್ದಾರೆ.

'ಪರೀಕ್ಷಾ ಅಭ್ಯರ್ಥಿಯಾದ ಜೇವರ್ಗಿ ತಾಲ್ಲೂಕಿನ ಸುಪ್ರಿಯಾ ಮಲ್ಲಿಕಾರ್ಜುನ ಹುಂಡೇಕರ್ ಅವರನ್ನು ಆರ್.ಡಿ.ಪಾಟೀಲಗೆ ಕುಪೇಂದ್ರ ಪರಿಚಯಿಸಿದ್ದ. ಈ ಬಳಿಕ ಸುಪ್ರಿಯಾ, ಸರ್ಕಾರಿ ಪದವಿ ಕಾಲೇಜಿನಲ್ಲಿ ಬ್ಲೂಟೂತ್ ಡಿವೈಸ್ ಬಳಸಿ ಪರೀಕ್ಷೆ ಬರೆದು, ಕಲ್ಯಾಣ ಕರ್ನಾಟಕ ಮಹಿಳಾ ವಿಭಾಗದಲ್ಲಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದರು. ಅವರನ್ನು ನವೆಂಬರ್ 2ರಂದು ಬಂಧಿಸಿದ್ದು, ಜಾಮೀನಿನ ಮೇಲೆ ಹೊರಬಂದಿದ್ದಾರೆ. ತಲೆಮರೆಸಿಕೊಂಡಿದ್ದ ಕುಪೇಂದ್ರ ಅಕ್ರಮದಲ್ಲಿ ಭಾಗಿಯಾಗಿದ್ದು ಗೊತ್ತಾಯಿತು' ಎಂದು ಅವರು ತಿಳಿಸಿದ್ದಾರೆ.

ಆರ್.ಡಿ. ಪಾಟೀಲಗೆ ನೋಟಿಸ್: ಷರತ್ತುಬದ್ಧ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾದ ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ಆರ್.ಡಿ ಪಾಟೀಲ ಅವರಿಗೆ ಸಿಐಡಿ ಅಧಿಕಾರಿಗಳು ಬುಧವಾರ ಎರಡನೇ ನೋಟಿಸ್ ಜಾರಿ ಮಾಡಿದ್ದಾರೆ.

ನ್ಯಾಯಾಲಯದ ಷರತ್ತು ಉಲ್ಲಂಘಿಸಿ, ಬಾಕಿ ಇರುವ ಕೆಲ ಮಾಹಿತಿ ಪಡೆಯಲು ವಿಚಾರಣೆಗೆ ಬಾರದ ಕಾರಣ ಮಂಗಳವಾರ ನೋಟಿಸ್ ನೀಡಲಾಗಿತ್ತು.

ಮತದಾರರ ಸಮೀಕ್ಷೆ: 7 ಮಂದಿ ವಶ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಅನುಮತಿ ಪಡೆಯದೇ ತಾಲ್ಲೂಕಿನ ಕೊಂಡನಾಯಕನಹಳ್ಳಿಯಲ್ಲಿ ಮತದಾರರ ಸಮೀಕ್ಷೆ ನಡೆಸುತ್ತಿದ್ದ ಏಳು ಜನರನ್ನು ಇಲ್ಲಿನ ಗ್ರಾಮೀಣ ಠಾಣೆ ಪೊಲೀಸರು ಬುಧವಾರ ವಶಕ್ಕೆ ಪಡೆದಿದ್ದಾರೆ.

ನವದೆಹಲಿಯ 'ಧ್ರುವ' ಸರ್ವೆ ಸಂಸ್ಥೆಗೆ ಇವರೆಲ್ಲ ಸೇರಿದ್ದಾರೆ ಎಂದು ಗೊತ್ತಾಗಿದೆ. ಇಬ್ಬರು ಮಹಿಳೆಯರು ಸೇರಿದಂತೆ ಒಟ್ಟು ಏಳು ಜನರು ಸರ್ವೆ ಕಾರ್ಯದಲ್ಲಿ ತೊಡಗಿದ್ದರು. ಈ ಸಂಸ್ಥೆಯವರು ಈಗಾಗಲೇ ರಾಜ್ಯದ 12 ವಿಧಾನಸಭಾ ಕ್ಷೇತ್ರಗಳಲ್ಲಿ ಸಮೀಕ್ಷೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

'ನಾವು ಗುಪ್ತಚರ ಸಂಸ್ಥೆಯಿಂದ ಬಂದಿದ್ದೇವೆ. ವಿಧಾನಸಭೆ ಚುನಾವಣೆ ಕುರಿತು ಪ್ರತಿಯೊಬ್ಬರಿಂದ ಮಾಹಿತಿ ಕಲೆ ಹಾಕುತ್ತಿದ್ದೇವೆ. ಬರುವ ಚುನಾವಣೆಯಲ್ಲಿ ನೀವು ಯಾವ ಪಕ್ಷಕ್ಕೆ ಮತ ಚಲಾಯಿಸುತ್ತೀರಿ? ಯಾವ ಪಕ್ಷ ಗೆದ್ದರೆ ಉತ್ತಮ? ಹೀಗೆ ಹಲವು ರೀತಿಯ ಪ್ರಶ್ನೆಗಳನ್ನು ಕೇಳಿ ಮಾಹಿತಿ ದಾಖಲಿಸುತ್ತಿದ್ದರು. ಅನುಮಾನ ಬಂದು ಅವರಿಗೆ ಘೇರಾವ್ ಹಾಕಿದೆವು. ಅನಂತರ ಠಾಣೆಗೆ ಕರೆ ಮಾಡಿ ತಿಳಿಸಿದಾಗ ಪೊಲೀಸರು ಬಂದು ಅವರನ್ನು ಜೀಪಿನಲ್ಲಿ ಕರೆದೊಯ್ದಿದ್ದಾರೆ' ಎಂದು ಗ್ರಾಮಸ್ಥರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಮತದಾರರಿಂದ ಮಾಹಿತಿ ಸಂಗ್ರಹಿಸುತ್ತಿದ್ದವರಿಗೆ ಗ್ರಾಮಸ್ಥರು ಘೇರಾವ್ ಹಾಕಿದರು.

'ಮತದಾರರ ಸರ್ವೆ ನಡೆಸಲು ಯಾರು ಅನುಮತಿ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗಿಲ್ಲ. ಗ್ರಾಮಸ್ಥರು ವಿಷಯ ತಿಳಿಸಿದ್ದರಿಂದ ತಕ್ಷಣವೇ ಅಲ್ಲಿಗೆ ತೆರಳಿ ಅವರನ್ನು ವಶಕ್ಕೆ ಪಡೆಯಲಾಗಿದೆ. ನವದೆಹಲಿಯ 'ಧ್ರುವ' ಸರ್ವೆ ಸಂಸ್ಥೆಯವರು ಎಂಬುದು ಪ್ರಾಥಮಿಕ ವಿಚಾರಣೆಯಿಂದ ಗೊತ್ತಾಗಿದೆ' ಎಂದು ಎಸ್ಪಿ ಶ್ರೀಹರಿಬಾಬು ಬಿ.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಸಂಘ– ಸಂಸ್ಥೆಗಳಿಂದ ಸಮೀಕ್ಷೆ ನಡೆಸಲು ಅವಕಾಶ ಇಲ್ಲ. ಸರ್ವೆ ನಡೆಸುತ್ತಿದ್ದವರ ಬಳಿ ಖಾಸಗಿ ಕಂಪನಿ ಐ.ಡಿ. ಕಾರ್ಡ್‌ಗಳಿವೆ. ಆದರೆ, ಅನುಮತಿ ಪಡೆದಿಲ್ಲ. ಮತದಾರರ ನೋಂದಣಿ ಕುರಿತಷ್ಟೇ ಮಾಹಿತಿ ಸಂಗ್ರಹಿಸುತ್ತವೆ. ಇವರಿಗೆ ಯಾರು ಅನುಮತಿ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ರಾಜ್ಯ ಚುನಾವಣಾ ಆಯೋಗದ ಗಮನಕ್ಕೆ ತರಲಾಗುವುದು' ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

Ref. VTU/BGM/SAP/CW5/T-518& T-488/2022-23/5183 dtd.19-12-2022

ಇ–ಟೆಂಡರ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ ಇ–ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ.

Sl No:1:Name of the tenders:T-518:Tender for Procurement of Reasearch Equipments to Dept. of Nanotechnolgy, VTU CPGS,Muddenahalli under VGST- CESEM (L2) Grants, Estimated Amount:Rs.5,94,366/-,EMD Amount:Rs.15,000/-, Sl No:2:Name of the tenders:T-488: Tender for Procurement of Reasearch Equipments to Dept. of Nanotechnolgy, VTU CPGS, Muddenahalli under VGST- CESEM (L2) Grants, Estimated Amount:Rs.12,74,400/-,EMD Amount: Rs.32,000/-

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:03–01–2023 ರ 2.30 ರ ವರೆಗೆ.
ಟೆಂಡರ ತೆರೆಯುವ ದಿನಾಂಕ:–04–01–2023 ರ 4.00 ಘಂಟೆಗೆ.
ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.

DIPR/BGM/RO-NO-1417/MCA/2022-23 ಸಹಿ/–ಕುಲಸಚಿವರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ : ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 43/2022–23 ದಿನಾಂಕ : 19.12.2022

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೋಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ **ಹಾನಗಲ್** ಉಪವಿಭಾಗದ ಈ ಕೆಳಗಿನ ಕಾಮಗಾರಿಯನ್ನು **ಕೆ.ಡ್ಲ್ಯೂ–1, 2, 3 & 4** (ಏಕ ಮತ್ತು ದ್ವಿ–ಲಕೋಟೆ) ಪದ್ಧತಿಯಲ್ಲಿ **"ಇ–ಪ್ರೊಕ್ಯೂರ್‌ಮೆಂಟ್"** ಮುಖಾಂತರ ಟೆಂಡರ್ ಕರೆಯಲಾಗಿದೆ. **ಲೆಕ್ಕ ಶೀರ್ಷಿಕೆ: 4702 ಕೆರೆಗಳ ಆಧುನೀಕರಣ–ಪ್ರಧಾನ ಕಾಮಗಾರಿಗಳು (ಒಟ್ಟು 10 ಕಾಮಗಾರಿಗಳು); 4702–ಏತ ನೀರಾವರಿ ಯೋಜನೆ–ಪ್ರಧಾನ ಕಾಮಗಾರಿಗಳು (ಒಟ್ಟು 02 ಕಾಮಗಾರಿಗಳು); 4711–ಪ್ರವಾಹ ನಿಯಂತ್ರಣ–ಸಣ್ಣ ಕಾಮಗಾರಿ (ಒಟ್ಟು 01 ಕಾಮಗಾರಿ);** ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. **200.00** ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ. **3.00** ಲಕ್ಷಗಳು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. **10.00** ಲಕ್ಷಗಳು; ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ. **0.25** ಲಕ್ಷಗಳು; ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ : **http://eproc.karnataka.gov.in** ನಲ್ಲಿ ದಿನಾಂಕ : **26/12/2022** ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೊರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು **ದಿನಾಂಕ : 10.01.2023** ರ 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ : **11.01.2023** ಸಂಜೆ 17.45 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ವಿ.ಸೂ : ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.

ವಾಸಾಸಂಇ/ಹಾವೇರಿ/ಎಂ.ಸಿ.ಎ/445/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.

ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಆಆವಿ/ಡಿ.ಬಿ/ಟೆಂಡರ್/2022–23/3262 ದಿನಾಂಕ:20.12.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ (1) **Bagalkote District (Bagalkot Constiuency) (SCP Potential) Indent No.23434 of Rs. 79.72 Lakhs (1) Bagalkote District (Bagalkot Constituency) (TSP Potential) Indent No.23431 of Rs. 79.73 Lakhs** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ **1.1** ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡದಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 23.12.2022 ರಿಂದ 06.01.2023 ಸಾಯಂಕಾಲ 5.00 ಘಂಟೆಯವರೆಗೆ 2)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 09.01.2023 ರಂದು ಮುಂಜಾನೆ 11.00 ಗಂಟೆಗೆ. 3)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 12.01.2023 ರಂದು ಮುಂಜಾನೆ 11.00 ಗಂಟೆಗೆ.**

ಟೆಂಡರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರಿನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/689/ಎಂಸಿಎ/2022–23

CENTRAL UNIVERSITY OF KARNATAKA

(Established by an Act of the Parliament in 2009)

SH-10, Aland Road, Kalaburagi - 585 367. Phone (08477) – 226722
Website: www.cuk.ac.in, Email: registrar@cuk.ac.in

NOTIFICATION NO. 30/2022

The University invites applications through an online mode from eligible candidates for the appointment of Group A, B & C Non-Teaching positions through direct recruitment /deputation basis. Interested candidates may please visit: **www.cuk.ac.in** for more details. The last date for submission of online application is **23/01/2023** and last date of receipt of hardcopy of online application along with all enclosures is **31/01/2023** up to **5:00 p.m.** and last date of receipt of applications through proper channel (for In-service candidates) is **08/02/2023** up to **5:00 p.m.**

Place : Kalaburagi **Sd/-**
Date : 20/12/2022 **Registrar**

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ. ಇ. ಪೂರಕ ಕಟ್ಟಡ, ಕೆ. ಆರ್. ವೃತ್ತ, ಬೆಂಗಳೂರು - 560 001. ದೂ.: 080-22133370 ಫ್ಯಾಕ್ಸ್: 080-22133365
ಇ-ಮೇಲ್: eepwdbngdn@yahoo.com Web: http/www.kpwd.gov.in

ಟೆಂಡರ್ ಪ್ರಕಟಣೆ ಸಂಖ್ಯೆ : 38/2022–23 ದಿನಾಂಕ : 19–12–2022

ಟೆಂಡರ್ ಪ್ರಕಟಣೆ

"The Quotation called for non SR item rates for preparation of Estimate purpose for the development of Central Park near 108 feet Statue of Nadaprabhu Kempegowda near Kempegowda International Airport" Indent No. : KPWD/KIAL_QUOTATIONS/02/2022-23 ಕಾಮಗಾರಿಗೆ ಅಗತ್ಯವಿರುವ ಅಂಶಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸುವ ಸಲುವಾಗಿ ಅವಶ್ಯವಿರುವ ದರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೆ.ಟಿ.ಟಿ.ಪಿ. ನಿಯಮ 2000 ರನ್ವಯ ಅರ್ಹ ಗುತ್ತಿಗೆದಾರರ / ಏಜೆನ್ಸಿರವರಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ **ದಿನಾಂಕ : 20–12–2022** ರಿಂದ.
(2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ **ದಿನಾಂಕ : 27–12–2022 ಸಂಜೆ 4.00 ಗಂಟೆಯವರೆಗೆ.**
(3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ **ದಿನಾಂಕ : 28–12–2022 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಷರತ್ತುಗಳು : 1) ಮೇಲ್ಕಂಡ ಅಂಶಗಳಿಗೆ ದರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿ ಸಲ್ಲಿಸುವುದು. 2) ಐಟಂಗಳ ಸ್ಪೆಸಿಫಿಕೇಷನ್‌ನಲ್ಲಿ ಯಾವುದೇ ಬದಲಾವಣೆ ಮಾಡುವಂತಿಲ್ಲ. 3) ಸದರಿ ಟೆಂಡರ್ ದರಗಳ ಅವಶ್ಯಕತೆಗಾಗಿ ಮಾತ್ರ ಆಹ್ವಾನಿಸಿದ್ದು, ಗುತ್ತಿಗೆದಾರರಿಗೆ ಯಾವುದೇ ಕೆಲಸಗಳನ್ನು ವಹಿಸಲಾಗುವುದಿಲ್ಲ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

ವಾಸಾಇ/ಬೆಂ.ನ./3647/ಮಣಿಪಾಲ್/2022–23

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ.) ಕಲಬುರಗಿ ವಿಭಾಗ ಕಲಬುರಗಿ

ಐವಾನ–ಏ–ಶಾಹಿ ರಸ್ತೆ, ಜಿಲ್ಲಾಧಿಕಾರಿಗಳ ಕಚೇರಿ ಎದುರುಗಡೆ, ಕಲಬುರಗಿ
Email: kkseckl b@gmail.com Ph.: 08472-227712

ಸಂಖ್ಯೆಃ ಕಕಮಾಸಂಕೃಸಾಂಸಂ/ ಅಭಿವೃದ್ಧಿ/ ಸಿ.ಆರ್–135/ 2022–23 ದಿನಾಂಕಃ09.12.2022

ಸಂಕ್ಷಿಪ್ತ ಟೆಂಡರ ಪ್ರಕಟಣೆ

ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿ ಸಂಘ, ಕಲಬುರಗಿ ವಿಭಾಗ, ಕಲಬುರಗಿ ಇವರ ಕಚೇರಿಯಿಂದ ಕೃಷಿ ಅಭಿವೃದ್ಧಿ ವಿಭಾಗದಲ್ಲಿ ಅರಣ್ಯೀಕರಣ ಮತ್ತು ಹಣ್ಣಿನ ಸಸಿಗಳನ್ನು **ಕಲಬುರಗಿ ಜಿಲ್ಲೆಯ** ರೈತರಿಗೆ ವಿತರಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಮೇಲೆ ನಮೂದಿಸಿದಂತೆ, ಆಸಕ್ತ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ದಿನಾಂಕಃ **26.12.2022 [ಸೋಮವಾರ] ಸಂಜೆಃ 4.30ಕ್ಕೆ** ಒಳಗಾಗಿ ಸಲ್ಲಿಸುವುದು. ತಾಂತ್ರೀಕ ಬಿಡ್ ತೆರೆಯುವ ದಿನಾಂಕಃ **27.12.2022 [ಮಂಗಳವಾರ] ಸಂಜೆಃ 05.00 ಕ್ಕೆ** ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕಃ **28.12.2022 [ಬುಧವಾರ] ಬೆಳಗ್ಗೆ 11.00 ಗಂಟೆಗೆ** ಇರುತ್ತದೆ.ಟೆಂಡರ ಪ್ರಕಟಣೆಯ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿರುತ್ತದೆ.

ಕ್ರಸಂ.	ವಿವರಗಳು	ಸಂಖ್ಯೆ	ಬ್ಯಾಗ ಅಳತೆ
1	2	3	4
01]	ಮಾವು (ಕೆಸರ)	1000	8x10
02]	ಸಪೋಟ (ಕ್ರಿಕೇಟ್ ಬಾಲ)	1000	7x8
03]	ತೆಂಗು (ತಿಪಟೂರ)	1000	13x13
04]	ಪೇರಲ (ಲಖನೌ–49)	1000	7x8
05]	ಲಿಂಬು (ಬಾಲಾಜಿ)	1000	5x6
06]	ಸೀತಾಫಲ (ಬಾಲನಗರ)	1000	7x8
07]	ಮಹಾಗನಿ	1000	8x10
08]	ನೇರಳೆ ಹಣ್ಣು	1000	8x10
	ಒಟ್ಟು	8000	

ಸೂಚನೆಃ 1) ಷರತ್ತುಗಳು ಹಾಗೂ ಅರ್ಹತೆ ಮಾನದಂಡಗಳು ಬಿಡ್‌ದಾಖಲೆಯಲ್ಲಿ ನಮೂದಿಸಿದಂತೆ. 2) ಜಿಲ್ಲೆಯಲ್ಲಿರುವ ಪ್ರತಿ ತಾಲ್ಲೂಕಿಗೆ ತಲಾ ಒಟ್ಟು 8000 ಸಸಿಗಳನ್ನು ಪೂರೈಸಬೇಕಾಗಿರುತ್ತದೆ. [ಟೆಂಡರ ಪುಸ್ತಕದ [Annexure –XI]ರ ವಿವರ ಅವಲೋಕಿಸುವುದು]. 3) ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಬಹುದು.

ಸಹಿ/– ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ [ರಿ] ಕಲಬುರಗಿ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/992/ಎಂ.ಸಿ.&ಎ/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

REF:1)No: EE /KNNL/UTP/DN/TND/Balance 233 to 237 / PB-1/2022-23/ 1972 Date:- 20-12-2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701ರಡಿ1 ಕಾಲುವೆ ನಿರ್ಮಾಣ ಕಾಮಗಾರಿಯ (Balance main Canal work 233KM to 237KM) ಟೆಂಡರ್‌ನ್ನುಉಲ್ಲೇಖಿತ ಪತ್ರ (1)ರನ್ವಯ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯ ಟೆಂಡರ್ ಮೊತ್ತ ರೂ. 278.38ಲಕ್ಷ (GSTಸೇರಿ)ಹಾಗೂಇ.ಎಮ.ಡಿ. ಮೊತ್ತರೂ. 4.18ಲಕ್ಷ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) www.eproc.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. ಟೆಂಡರ್ ಅಕ್ಸೆಸ್ ಮಾಡುವ ದಿ:21–12–2022 ರಿಂದ 30–12–2022 ರ ಸಂಜೆ 5.30ರ ವರೆಗೆ ಇರುವುದು. ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ:27–12–2022 ಸಂಜೆ 5.30ರ ವರೆಗೆಇರುತ್ತದೆ. ಫ್ರೀ–ಬಿಡ್ ಸಬೆಯನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರ ಕಛೇರಿಯಲ್ಲಿ ದಿನಾಂಕ 27–12–2022 ಬೆಳಿಗ್ಗೆ 11.30 ಗಂಟೆಗೆಇರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವಕೊನೆಯ ದಿ:30–12–2022ರ ಸಂಜೆ5.30ರ ವರೆಗೆ ಸಲ್ಲಿಸತಕ್ಕದ್ದು. ದಿನಾಂಕ:31–12–2022ರಂದು ಸಂಜೆ5.35 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಅಥವಾ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

1512

ಆಯುಕ್ತರವರ ಕಚೇರಿ,
ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ

ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101
ದೂರವಾಣಿ ಸಂಖ್ಯೆ: 08392–273479/278168
ವೆಬ್‌ಸೈಟ್: www.ballaricity.mrc.ggov.in ಇ–ಮೇಲ್: ballarycommissioner@yahoo.co.in

ಸಂಖ್ಯೆ: ಮನಪಾಬ/ತಾಂ/ಡಿ.ಎಂ/ಡಿ.ಎಂ.ಎಫ್/05/2022–23/5ನೇ ಕ್ರಿಯೋ(ಬ.ಕಾ) ದಿನಾಂಕ: 20–12–2022

ಕಾಲ್–2 ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬಳ್ಳಾರಿ ಬಳ್ಳಾರಿ ಮಹಾನಗರ ಪಾಲಿಕೆ ವತಿಯಿಂದ 2021–22ನೇ ಸಾಲಿನ ಅವಧಿಗಾಗಿ ಅನುಮೋದನೆಗೊಂಡ ಪರಿಷ್ಕೃತ 5ನೇ ಕ್ರಿಯಾಯೋಜನೆಯ ರಲ್ಲಿನ ಬಳ್ಳಾರಿ ಜಿಲ್ಲೆ ಗಣಿಗಾರಿಕೆ ಪ್ರದೇಶಗಳ ಅಭಿವೃದ್ಧಿ (ಜಿಲ್ಲಾ ಖನಿಜ ಫೌಂಡೇಶನ್ ನಿಧಿ) (District Mineral Foundation Fund) ರಲ್ಲಿ ಕಾಮಗಾರಿಗಳ ಗುತ್ತಿಗೆ ಇಟ್ಟ ಮೊತ್ತ ರೂ. 75.05 ಲಕ್ಷಗಳು, INDENT 140015/Call-2 ಟೆಂಡರ್ ಸಲ್ಲಿಸಲು **ದಿನಾಂಕ: 21–12–2022 ರಿಂದ 04–01–2023 ರ 16:30 ಗಂಟೆಯೊಳಗಾಗಿ** ಡೌನ್‌ಲೋಡ್ ಮಾಡಿಕೊಂಡು, ದಿನಾಂಕ: 04–01–2023 ರಂದು 17:30 ಗಂಟೆಯೊಳಗಾಗಿ ಸಲ್ಲಿಸಬಹುದು, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06–01–2023 ಬೆಳಿಗ್ಗೆ 11:00 ಗಂಟೆಗೆ** ಹಾಗೂ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 12–01–2023 ಬೆಳಿಗ್ಗೆ 11:30 ಗಂಟೆಗೆ** ಕಾಮಗಾರಿಗಳ ಎಲ್ಲಾ ವಿವರಗಳನ್ನು ಮೀಸಲಾತಿ ಟೆಂಡರ್ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್ **http://eproc.karnataka.gov.in** ಅನ್ನು ಮತ್ತು **www.ballaricity.mrc.gov.in** ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ

ನಗರಸಭೆ ಕಾರ್ಯಾಲಯ, ನಿಪ್ಪಾಣಿ

ನಂ.ನಸನಿ/ತಾಂತ್ರಿಕ/ಸಿಆರ–2022–23/ ದಿನಾಂಕ:19.12.2022

ಟೆಂಡರ ಪ್ರಕಟಣೆ

ನಿಪ್ಪಾಣಿ ನಗರಸಭೆಯಲ್ಲಿ ಸನ 2017–18 ನೇ ಎಸ್.ಎಸಿ.ಎಸ್.ಪಿ/ಟಿಎಸಪಿ ಮತ್ತು ನಗರಸಭೆ ಅನುದಾನದಡಿಯಲ್ಲಿ ಕಾಮಗಾರಿಗಳ ಕುರಿತು ಇ–ಪ್ರೊಕ್ಯುರಮೆಂಟ್ ಪೋರ್ಟಲ್ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ ಕರ್ನಾಟಕ ಲೋಕೋಪಯೋಗಿ ಮತ್ತು ಇ–ಪ್ರೊಕ್ಯುರಮೆಂಟ್‌ನಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರಗಳನ್ನು ಅಹ್ವಾನಿಸಲಾಗಿದ್ದು, ಕಾಮಗಾರಿ ವಿವರ ಹಾಗೂ ಟೆಂಡರ ಪ್ರಕಟಣೆ ವಿವರಗಳನ್ನು ನಗರಸಭೆ ನಿಪ್ಪಾಣಿ ಕಛೇರಿ ಸೂಚನಾ ಫಲಕದಲ್ಲಿ, ವೆಬ್‌ಸೈಟ www.nippanicity.mrc.gov.in ಮತ್ತು www.eproc.karnataka.gov.in ನಲ್ಲಿ ವಿಕ್ಷಿಸಬಹುದು ಹಾಗೂ ದೂರವಾಣಿ 08338–220053 ರಿಂದ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಸಂಪರ್ಕಿಸಬಹುದು. ಟೆಂಡರ ಸಲ್ಲಿಸಲು ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿಪಡಿಸಿಲಾಗಿದೆ.

S. No	Description of work	Estimate Amount	EMD
1	Construction of City Municipal School Building at Municipal High School Campus, Nipani DMA/2022-23/BD/WORK_INDENT143724	126.04	1.89

1	Period of Completion	16 Months
2	Last Date & Time for receipt of tenders	19-01-2023 up to 16.00 pm
3	Date & Time for Opening of Technical Bid	20-01-2023 up to 16.30 pm
4	Date & Time for Opening of Financial Bid	27-01-2023 up to 15.00 pm

ಸಹಿ/–ಪೌರಾಯುಕ್ತರು ನಗರಸಭೆ ನಿಪ್ಪಾಣಿ DIPR/BGM/RO-NO-1426/MCA/2022-23 ಸಹಿ/–ಅಧ್ಯಕ್ಷರು ನಗರಸಭೆ ನಿಪ್ಪಾಣಿ

(ಕರ್ನಾಟಕ ಸರ್ಕಾರ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಅಭಿಯಂತರವರ ಕಚೇರಿ, ಹಾಸನ ವಿಭಾಗ, ಹಾಸನ,
Ph:08172-261640 Email ID:eerdwsd.hsn@gmail.com

ಏಕ ಹಾಗೂ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವದಿಟೆಂಡರ್ ಪ್ರಕಟಣೆ:17/2022–23 ದಿನಾಂಕ:20.12.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನರವರಿಂದ 2022–23ನೇ ಸಾಲಿನಲ್ಲಿ MVS ಯೋಜನೆಯಡಿ ಅನುಮೋದನೆಯಾಗಿರುವ ಅರಕಲಗೂಡು ತಾಲ್ಲೂಕಿನ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ದ್ವಿ–ಲಕೋಟೆ ಪದ್ಧತಿ ಕಾಮಗಾರಿಗಳು ಅರಕಲಗೂಡು ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ ವರ್ಗದ ಕಾಮಗಾರಿ). ಸದರಿ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ:20–12–2022ರ ಸಂಜೆ 5.30 ರಿಂದ www.e-procurement.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 30–12–2022 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 29–12–2022ರಂದು ಪೂರ್ವಾಹ್ನ 11.00 ಗಂಟೆಗೆ ಈ ಕಛೇರಿಯಲ್ಲಿ ಸದರಿ ಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ : ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು–560009. ದಿನಾಂಕ:22–01–2023 ರಂದು ಸಂಜೆ 17:30 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ:26–01–2023ರ ಬೆಳಿಗ್ಗೆ 11:00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ,ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/873/2022–23

ಚಿನ್ಮಯಾನಂದ್‌ಗೆ ಜಾಮೀನು

ಪ್ರಯಾಗ್‌ರಾಜ್ (ಪಿಟಿಐ): ಅತ್ಯಾಚಾರ ಪ್ರಕರಣದ ಆರೋಪಿ ಕೇಂದ್ರದ ಮಾಜಿ ಸಚಿವ ಸ್ವಾಮಿ ಚಿನ್ಮಯಾನಂದ್ ಅವರಿಗೆ ಮುಂದಿನ ವಿಚಾರಣೆವರೆಗೂ ಅಲಹಾಬಾದ್ ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿದೆ. ಈ ಬಗ್ಗೆ 4 ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಸಂತ್ರಸ್ತೆ ಹಾಗೂ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶನ ನೀಡಿದೆ.

ನ್ಯಾ. ಸಮಿತ್ ಗೋಪಾಲ್ ಅವರು ಸೋಮವಾರ ಈ ಆದೇಶ ನೀಡಿದ್ದಾರೆ. 'ಚಿನ್ಮಯಾನಂದ್ ಅವರನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ' ಎಂದು ವಕೀಲ ಅನೂಪ್ ತ್ರಿವೇದಿ ವಾದಿಸಿದರು.

ಹೃದಯ ಸಂಬಂಧಿ ಕಾಯಿಲೆ: ಕಾರಿನಲ್ಲಿ ಟೆಕಿ ಆತ್ಮಹತ್ಯೆ

ವಿಜಯ್ ಕುಮಾರ್

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಕುರುಬರಹಳ್ಳಿ ಜಂಕ್ಷನ್ ಬಳಿ ಸಾಫ್ಟ್‌ವೇರ್ ಎಂಜಿನಿಯರ್ ವಿಜಯ್ ಕುಮಾರ್ (51) ಎಂಬುವವರು ತಮ್ಮ ಕಾರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾಲಕ್ಷ್ಮಿ ಲೇಔಟ್‌ನಲ್ಲಿ ಅವರು ನೆಲೆಸಿದ್ದರು.

'ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಇತ್ತೀಚಿಗೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ತಮಗಿದ್ದ ಕಾಯಿಲೆ ಹಾಗೂ ಅದರ ಪರಿಣಾಮದ ಬಗ್ಗೆ ಗೂಗಲ್‌ನಲ್ಲಿ ಹುಡುಕಾಟ ನಡೆಸುತ್ತಿದ್ದರೆಂದು ಕುಟುಂಬಸ್ಥರು ಹೇಳಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾರನ್ನು ಸರ್ವಿಸ್‌ಗೆ ಕೊಡುವುದಾಗಿ ಮನೆಯಲ್ಲಿ ಹೇಳಿ ಕುರುಬರಹಳ್ಳಿ ಜಂಕ್ಷನ್‌ಗೆ ಬಂದಿದ್ದ ವಿಜಯಕುಮಾರ್ ಪಾದಚಾರಿ ಒಬ್ಬರನ್ನು ಕರೆದು, 'ನನಗೆ ತುಂಬಾ ಸುಸ್ತಾಗುತ್ತಿದೆ. ಕಾರಿನಲ್ಲಿ ಸ್ವಲ್ಪ ವಿಶ್ರಾಂತಿ ಪಡೆಯುತ್ತೇನೆ. ನಾನು ಕಾರಿನ ಒಳಗೆ ಕುಳಿತ ಮೇಲೆ ಕವರ್ ಮುಚ್ಚಿ' ಎಂದು ವಿನಂತಿಸಿದ್ದರು. ಅದರಂತೆ ಅವರು ಕವರ್ ಮುಚ್ಚಿ ತೆರಳಿದ್ದರು. ಇದನ್ನು ಪಕ್ಕದಲ್ಲಿ ಪಾನೀಪೂರಿ ಮಾರಾಟ ಮಾಡುತ್ತಿದ್ದ ವ್ಯಕ್ತಿ ಗಮನಿಸಿದ್ದರು. ಅದೇ ಸ್ಥಳದಲ್ಲಿ ನಿತ್ಯ ಕಾರು ನಿಲುಗಡೆ ಮಾಡುತ್ತಿದ್ದ ವ್ಯಕ್ತಿಯೊಬ್ಬರು ಬಂದು ಕಾರು ಯಾರದ್ದು ಎಂದು ಪಾನೀಪೂರಿ ಮಾರಾಟಗಾರರನ್ನು ಪ್ರಶ್ನಿಸಿದ್ದರು. ಕಾರಿನ ಮಾಲೀಕರು ಕಾರಿನಲ್ಲಿ ಇದ್ದಾರೆ ಎಂದು ತಿಳಿದಾಗ ಬಾಗಿಲು ತೆರೆದು ಪರಿಶೀಲನೆ ನಡೆಸಿದರು. ಒದ್ದಾಟ ನಡೆಸುತ್ತಿರುವುದು ಕಂಡುಬಂದಿತ್ತು. ಪೊಲೀಸರ ನೆರವಿನಿಂದ ಆಸ್ಪತ್ರೆಗೆ ಕೊರೆದೊಯ್ಯುವ ಮಾರ್ಗ ಮಧ್ಯದಲ್ಲಿ ಟೆಕಿ ಮೃತಪಟ್ಟರು' ಎಂದು ಹೇಳಿವೆ.

'ಕಾರಿನಲ್ಲಿದ್ದ ನೈಟ್ರೋಜನ್ ಸಿಲಿಂಡರ್ ಆನ್ ಮಾಡಲಾಗಿತ್ತು. ಮುಖಕ್ಕೆ ಪ್ಲಾಸ್ಟಿಕ್ ಕವರ್ ಕಟ್ಟಿಕೊಂಡು ಪೈಪ್‌ವೊಂದರ ಸಹಾಯದಿಂದ ಗಾಳಿ ಸೇವಿಸುತ್ತಿದ್ದ ಸ್ಥಿತಿಯಲ್ಲಿ ಅವರು ಪತ್ತೆಯಾಗಿದ್ದರು. ಈ ಗಾಳಿ ಸೇವಿಸಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಶಂಕಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

My client intends to purchase the Schedule Property from one **Mr. R N Naveen** who is Absolute owner vide Registered Sale Deed Doc no. BDA-1-00570-2020-21 dated 23-06-2020 at the Office of Additional District Registrar, Bangalore.
Any person/s banks, financial institutions, claiming an interest in the said property or against the Owner, are hereby required to register their claims / objections in writing with documentary evidence to the undersigned **within 10-days** from date **22-DEC-2022,** failing which the said sale will be completed. Any objections / claims received thereafter will not be entertained / binding on our client.

SCHEDULE PROPERTY

BDA site No. 108, BDA Khata No. 108 (PID 1560) situated at **Block-IX, Arkavathi Layout,** Sy no. 50/1 of Amrutahalli, Yelahanka Hobli, Bengaluru, measuring **6x9 meters (54.00 SQM in total)** and bounded on **East**: BDA Property, **West**: Road, **North**: Site 107, **South**: Site 109.

Advocate Mrs. T K PARVATHI
No.2, C-Sector, Amruth Nagar, Sahakar Nagar Post, Bengaluru 560092,
Ph: 98806 82806 /7975521728
E-Mail: parvathiadvo@gmail.com

NOTICE

NOTICE is hereby given that the Certificate (s) for 337 Equity Shares of Certificate No. 229089, 350620, 447682, 1368601 of Larsen & Toubro Ltd Standing in the name (s) of B.N. LATHA and P.VEENA, has/ have been lost or mislaid and the undersigned has/ have applied to the Company to issue duplicate Certificate(s) for the said shares. Any person who has any claim in respect of the said shares should write to our Registrar, KFin Technologies Limited. Selenium Tower B, Plot 31-32, Gachibowli, Financial District, Hyderabad-500032 within one month from this date else the company will proceed to issue duplicate certificate (s)
B. N. LATHA and P. VEENA
Name of Shareholder
Date: 22.12.2022 - Place : Bangalore

NOTICE

NOTICE is hereby given that the Certificate (s) for 450 Equity Shares of Certificate No. 64502,229090, 350621,447683, 1368874 of Larsen & Toubro Ltd Standing in the name (s) of P.VEENA and B.N. LATHA has/ have been lost or mislaid and the undersigned has/ have applied to the Company to issue duplicate Certificate(s) for the said shares. Any person who has any claim in respect of the said shares should write to our Registrar, KFin Technologies Limited. Selenium Tower B, Plot 31-32, Gachibowli, Financial District, Hyderabad-500032 within one month from this date else the company will proceed to issue duplicate certificate (s)
P. VEENA and B. N. LATHA
Name of Shareholder
Date: 22.12.2022 - Place : Bangalore

JOB OPPORTUNITIES

Teachers/ Professors

KANNADA, SCIENCE TEACHERS For High School. Prefer Candidate Residing Near Yelachenahalli Metro Station WhatsApp CV: 9980944566

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Marketing & Sales

REQUIRED MARKETING Executives (Female/ Male) for an Advertising Agency, Fluency in English, having 2 wheeler, Walk-in- Interview on December 21 & 22nd between 11:00 am- 02:00 pm, Adverto Advertising Pvt Ltd., No. 97, RV Road, Basavanagudi, Near Lalbagh Metro Stn, Ph: 26575020, email: advertoalert@gmail.com

RENTAL PROPERTIES

Accommodation Available

Commercial

ANJANAPURA 2ND Block Rental space, No.25, 4650 Sq feet 30 H P Power Vitrified Tiles RCC Building 80 feet Road J.P.Nagar 9th Phase Contact 9916471377, 7624825444

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PERSONAL

Change of Name

CHANGE OF NAME
I **Madhu M** S/o **Mahadeva Gowda** Residing at kammasandra, Bangalore-100. declare that my name is wrongly mentioned in the LIC policy as **Madhusudhan** S/o. **Mahadeva,** instead of **Madhu M** S/o. **Mahadeva Gowda,** vide affidavit dated 27/11/2022, before notary Chanchala Lakshmi, Bangalore. Henceforth i shall be called Madhu M S/o. Mahadeva Gowda only. Bengaluru.

I, VIJAYAMMA Residing at No. 101, Ramasagara Village, Muthanallur Post Anekal, Bangalore Rural- 560099, have changed my name to VIJAYAMMA THIMMAREDDY MUNIREDDY vide affidavit dated 21st Dec 2022, before notary L. Gopalakrishna, Bangalore

I, SANGITHA RAMANAND Residing at 394, 3rd Block, 57th Cross, Rajajinagar, Bangalore shall hereafter be known as SANGITHA R BARATH vide affidavit dated 20.12.2022 sworn before notary L. Gopalakrishna.

I, VENKATARAMAPAA alias B. Venkatanarayana, S/o Late Vanta Channappa (Aadhaar No. 296702425644), Presently R/a.#1/208, Raj Residence, Near Om Shakthi Temple, Kattigenahalli, Bengaluru-560064 & Permanently R/a Gummanayakanapalya village, Thollapalli Post Pathapalya Hobli & S.O-561212 Bagepalli Taluk Chikkaballapura Dist Karnataka hereby declare that above mentioned both the names are one and the same person. Vide affidavit dated: 09/12/2022 before Notary D.Sarala Kumari Bangalore.

K VISNU DEVI, Wife/o, 14849978W, SEP/MT, R MUTHAMIL SELVAN, Vill- Chockalingapuram, Rajapalayam, Virudhu Nagar, Tamil Nadu changed name K VISNU DEVI to M VISHNU DEVI 19/12/2022 Notary K.V. Mani Bangalore

14844396M, HAV/MT, Shilesh Kumar Rai 1ATC mother name Record's Janiwati Devi instead of Jadawati Devi notary B.M. Chandrashekar.

I, REKA R @ REKHA R R/a. #B102, SLV Meadows, Hesaraghatta Main Road, Vidyaranyapura, Bangalore-560097, declare that both the names belong to me and henceforth I shall be known as REKHA. R, vide affidavit dated 06.12.2022 before notary Chandrashekaraiah.B.S. Bangalore.

I, GOWRAMMA Residing at No. 283, Muthanallur Circle and Post Anekal Taluk, Bangalore Rural- 560099, have changed my name to GOWRAMMA NAGARAJA THIPPA REDDY vide affidavit dated 21st Dec 2022, before notary L. Gopalakrishna, Bangalore

I, SHOBHA Residing at Muthanallur Anekal Taluk, Bangalore Rural- 560099, have changed my name to SHOBHA MUNI REDDY vide affidavit dated 21st Dec 2022, before notary N. Kanchivaradaraju, Bangalore

ಹೆಸರು ಬದಲಾವಣೆ
ಬ್ಯಾಂಕ್ ಹೌಸ್, ಗೇಟ್ 01, ಎಸ್‌ಬಿಐ, ಸ್ಥಳೀಯ ಪ್ರಧಾನ ಕಚೇರಿ ಆವರಣ, ಸಂಖ್ಯೆ.65, ಸಂತ ಮಾರ್ಕ್‌ರ್ ರಸ್ತೆ, ಬೆಂಗಳೂರು ಜಿಪಿಒ, ಬೆಂಗಳೂರು, ಕರ್ನಾಟಕ 560001 ವಿಳಾಸದಲ್ಲಿ ವಾಸಿಸುತ್ತಿರುವ ನಿತ್ಯಾ ಎಂಬ ನಾನು, ನನ್ನ ಹೆಸರನ್ನು ದಿನಾಂಕ 16.12.2022 ರಂದು ಅಫಿಡವಿಟ್ ಮೂಲಕ ನೋಟರಿ ಜಿ. ದಯಾನಂದ ಬೆಂಗಳೂರು ಅವರ ಮುಂದೆ ನಿತ್ಯಾ ನೆದುಂಗಡಿ ಎಂದು ಬದಲಾಯಿಸಿಕೊಂಡಿದ್ದೇನೆ.

CHANGE OF NAME
I, **JESSICA MRIDULA FERNANDES** Residing at E 805, Cumin Estates Genesis, Kalkere Main Raod, Horamavu, Bengaluru-560043 have changed my name to **JESSICA MRIDULA DSOUZA** vide affidavit dated 19 Dec 2022 before notary Y.R. Chandrasekar, Bengaluru. Henceforth I shall be known as **JESSICA MRIDULA DSOUZA**

CHANGE OF NAME
We **PRASHANTH H.K** and **ANUSHA. M** Residing Address: No. 59,1st main, 1st cross VSR Layout, Near Tin Factory, Udayanagar, Dooravani Nagar, Bengaluru North, Bengaluru 560016. Have change our minor Daughter's name from **VAANYA SPARSHA to VIHARIKA** wide affidavit dated 21.12.2022 before Notary L Gopalakrishna Bengaluru.

9 ಕಾರಿಡಾರ್ ಅಭಿವೃದ್ಧಿಗೆ ₹400 ಕೋಟಿ ಅನುದಾನ

• ನವೀನ್ ಮಿನೇಜಸ್

ಬೆಂಗಳೂರು: ರಾಜ್ಯ ಸರ್ಕಾರದ ₹400 ಕೋಟಿ ಅನುದಾನದಲ್ಲಿ ನಗರದಲ್ಲಿ ಹೆಚ್ಚು ವಾಹನ ದಟ್ಟಣೆ ಇರುವ ಒಂಬತ್ತು ಕಾರಿಡಾರ್‌ಗಳನ್ನು ಟೆಂಡರ್ ಶ್ಯೂರ್ ಅಥವಾ ಸ್ಮಾರ್ಟ್ ಸಿಟಿ ರಸ್ತೆಗಳ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಬಿಬಿಎಂಪಿ ಮುಂದಾಗಿದೆ.

ಬಿಬಿಎಂಪಿ ಈ ಯೋಜನೆಯಲ್ಲಿ 44 ಕಿಮೀ ರಸ್ತೆ ಹಾಗೂ 110 ಕಿಮೀ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸಲಿದೆ. ಬಿಬಿಎಂಪಿ ಪ್ರಕಾರ, 12 ಹೆಚ್ಚು ವಾಹನದಟ್ಟಣೆ ಕಾರಿಡಾರ್ ಗಳಲ್ಲಿ ವೆಸ್ಟ್ ಆಫ್ ರಸ್ತೆ, ಬನ್ನೇರುಘಟ್ಟ ರಸ್ತೆಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಅವುಗಳನ್ನು ಹೊರತುಪಡಿಸಿ 9 ಕಾರಿಡಾರ್ ಗಳನ್ನು ವಾಹನ ಸವಾರರು ಹಾಗೂ ಪಾದಚಾರಿ ಸ್ನೇಹಿಯಾಗಿ ಅಭಿವೃದ್ಧಿ ಪಡಿಸಲಾಗುತ್ತದೆ.

ಒಂಬತ್ತು ಕಾರಿಡಾರ್‌ಗಳನ್ನೂ ಮರು ವಿನ್ಯಾಸಗೊಳಿಸಿ, ಏಕರೂಪದಲ್ಲಿ ಅಭಿವೃದ್ಧಿ ಮಾಡಲಾಗುತ್ತದೆ. ಅಮೆರಿಕ ಹಾಗೂ ಯುರೋಪ್‌ನಲ್ಲಿ ಹೆಚ್ಚು ಬಳಕೆಯಲ್ಲಿರುವ ಸ್ಟೋನ್ ಮಾಸ್ಟಿಕ್ ಅಸ್ಫಾಲ್ಟ್ (ಎಸ್‌ಎಂಎ) ತಂತ್ರಜ್ಞಾನದಲ್ಲಿ ಈ ಕಾರಿಡಾರ್‌ಗಳನ್ನು ಅಭಿವೃದ್ಧಿ ಮಾಡಲಾಗುತ್ತದೆ. ಈ ತಂತ್ರಜ್ಞಾನ ರಸ್ತೆಗಳು ಸ್ಥಿರ, ಜಾರುರಹಿತ, ಅತ್ಯುತ್ತಮ ಸಾಮರ್ಥ್ಯದಲ್ಲಿ ಇರಲಿವೆ.

ರಾಜ್ಯ ಸರ್ಕಾರದ ಈ ಅನುದಾನದಲ್ಲಿ ಹೆಚ್ಚು ಭಾಗವನ್ನು ಪಾದಚಾರಿ ಮಾರ್ಗ ಅಭಿವೃದ್ಧಿ ಪಡಿಸಲು ಉಪಯೋಗಿಸಲಾಗುತ್ತದೆ. ರಸ್ತೆ ಅಗಲ ಇರುವ ಸ್ಥಳದಲ್ಲಿ ಸೈಕಲ್ ಟ್ರಾಕ್ ನಿರ್ಮಿಸಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದರು.

ರಾಜ್ಯ ಸರ್ಕಾರ ಈ ಯೋಜನೆಗೆ ಡಲ್ಟ್ ಅನ್ನು ಸಲಹೆಗಾರ ಸಂಸ್ಥೆಯಾಗಿ ನೇಮಿಸಿದ್ದು, ಕಾಮಗಾರಿ ಗುಣಮಟ್ಟ ಪರಿಶೀಲಿಸಲಿದೆ. ಹೊರ ವರ್ತುಲ ರಸ್ತೆ (ಒಆರ್‌ಆರ್) ರಸ್ತೆ ಸೇರಿದಂತೆ ಮುಖ್ಯ ರಸ್ತೆಗಳ ಅಭಿವೃದ್ಧಿ ಜವಾಬ್ದಾರಿ ಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಈ ಮೊದಲು ಹೊಂದಿತ್ತು.

ಜನಪ್ರತಿನಿಧಿಗಳ ಒತ್ತಡದ ಮೇರೆಗೆ ರಾಜ್ಯ ಸರ್ಕಾರ ಈ ರಸ್ತೆಗಳ ನಿರ್ವಹಣೆ ಜವಾಬ್ದಾರಿಯನ್ನು ಬಿಬಿಎಂಪಿಗೆ ವಹಿಸಿ ಕಳೆದ ತಿಂಗಳು ಆದೇಶ ಹೊರಡಿಸಿದೆ.

₹400 ಕೋಟಿಯಲ್ಲಿ ₹273 ಕೋಟಿಯನ್ನು 9 ಕಾರಿಡಾರ್ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿದೆ. ಉಳಿದ ಹಣ ನಿರ್ವಹಣೆಗೆ ಮೀಸಲಿಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ರಸ್ತೆ	ವೆಚ್ಚ (₹ಕೋಟಿಗಳಲ್ಲಿ)
ಬಳ್ಳಾರಿ ರಸ್ತೆ	15
ಹಳೆ ಮದ್ರಾಸ್ ರಸ್ತೆ	40
ಹಳೆ ಏರ್‌ಪೋರ್ಟ್ ರಸ್ತೆ	48
ಹೊಸೂರು ರಸ್ತೆ	26
ಕನಕಪುರ ರಸ್ತೆ	15
ಮೈಸೂರು ರಸ್ತೆ	15
ಮಾಗಡಿ ರಸ್ತೆ	25
ತುಮಕೂರು ರಸ್ತೆ	15
ಹೊರ ವರ್ತುಲ ರಸ್ತೆ	74
ಒಟ್ಟು	273

₹10.36 ಕೋಟಿ ಮೌಲ್ಯದ ವಸ್ತುಗಳ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಅವಧಿಯಲ್ಲಿ ವೈಟ್‌ಫೀಲ್ಡ್ ವಿಭಾಗದ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ₹10.36 ಕೋಟಿ ಮೌಲ್ಯದ ಕಳವು ಮಾಡಿದ್ದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಎಚ್‌ಎಎಲ್ ಪೊಲೀಸ್ ಠಾಣೆ ಎದುರಿನ ಮೈದಾನದಲ್ಲಿ ಬುಧವಾರ ನಗರ ಪೊಲೀಸ್ ಆಯುಕ್ತ ಪ್ರತಾಪ ರೆಡ್ಡಿ ಅವರು ವಶಕ್ಕೆ ಪಡೆದ ವಸ್ತುಗಳನ್ನು ವಾರಸುದಾರರಿಗೆ ಹಸ್ತಾಂತರಿಸಿದರು.

₹1.88 ಕೋಟಿ ಮೌಲ್ಯದ ಚಿನ್ನಾಭರಣ, 4 ಕೆ.ಜಿ. ಬೆಳ್ಳಿಯ ಸಾಮಗ್ರಿ, ₹ 24 ಲಕ್ಷ ಮೌಲ್ಯದ ವಜ್ರದ ಆಭರಣ, ₹ 1.44 ಕೋಟಿಯ ವಿವಿಧ ಕಂಪನಿಯ 700 ಮೊಬೈಲ್, ₹ 62.40 ಲಕ್ಷದ 96 ಲ್ಯಾಪ್‌ಟಾಪ್‌ಗಳು, ₹ 2.37 ಕೋಟಿಯ 313 ಬೈಕ್‌ಗಳನ್ನು ಒಂದು ವರ್ಷದ ಅವಧಿಯಲ್ಲಿ ವಶಕ್ಕೆ ಪಡೆಯಲಾಗಿತ್ತು. ವಾರಸುದಾರರಿಗೆ ವಿತರಣೆ ಮಾಡಲಾಯಿತು.

ಇದೇ ಅವಧಿಯಲ್ಲಿ 41 ಮಾದಕ ವಸ್ತು ಮಾರಾಟ ಪ್ರಕರಣ ಪತ್ತೆಹಚ್ಚಿ 159 ಕೆ.ಜಿ. ಗಾಂಜಾ ವಶಕ್ಕೆ ಪಡೆಯಲಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವೈಟ್‌ಫೀಲ್ಡ್, ಕಾಡುಗೋಡಿ, ಮಹದೇವಪುರ, ಕೆ.ಆರ್.ಪುರ, ಮಾರತಹಳ್ಳಿ, ಎಚ್‌ಎಎಲ್, ಬೆಳ್ಳಂದೂರು, ವರ್ತೂರು, ವೈಟ್‌ಫೀಲ್ಡ್‌ನ ಸೈಬರ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು.

ಬೈಕ್ ಕಳವು: ಆರೋಪಿ ಬಂಧನ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಎದುರು ನಿಲ್ಲಿಸಿದ್ದ ಬೈಕ್ ಕಳವು ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ರಾಮನಗರ ಜಿಲ್ಲೆಯ ಜೋಗಮನಸಹಳ್ಳಿ ಗ್ರಾಮದ ಕೆ.ಸೂರ್ಯ (22) ಬಂಧಿತ ಆರೋಪಿ. ₹ 6 ಲಕ್ಷ ಮೌಲ್ಯದ 10 ದಿಚಕ್ರ ವಾಹನ ಜಪ್ತಿ ಮಾಡಲಾಗಿದೆ. 'ಸೂರಜ್ ಎಂಬುವರು ತಮ್ಮ ಮನೆಯ ಎದುರು ನಿಲುಗಡೆ ಮಾಡಿದ್ದ ಪಲ್ಸರ್ ಬೈಕ್ ಅನ್ನು ಆರೋಪಿ ಕಳವು ಮಾಡಿದ್ದ. ಇವರು ನೀಡಿದ್ದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ನೆಲಮಂಗಲ–ತುಮಕೂರು 6 ಪಥ: 2025ಕ್ಕೆ ಕಾಮಗಾರಿ ಪೂರ್ಣ

ಪ್ರಜಾವಾಣಿ ವಾರ್ತೆ

ನವದೆಹಲಿ: ನೆಲಮಂಗಲ–ತುಮಕೂರು ನಡುವಿನ ಆರು ಪಥದ ಹೆದ್ದಾರಿ ಕಾಮಗಾರಿ 2025ರ ಆಗಸ್ಟ್‌ನಲ್ಲಿ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಜಗ್ಗೇಶ್ ಬುಧವಾರ ಕೇಳಿರುವ ಲಿಖಿತ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಆರು ಪಥದ ಕಾಮಗಾರಿಯಲ್ಲಿ ತುಮಕೂರು ಬೈಪಾಸ್ ಕಾಮಗಾರಿಯೂ ಸೇರಿದೆ. ಈ ಕಾಮಗಾರಿಯನ್ನು ಎರಡು ಹಂತಗಳಾಗಿ ವಿಭಜಿಸಲಾಗಿದೆ. ಮೊದಲ ಹಂತದಲ್ಲಿ ಸರ್ವಿಸ್ ರಸ್ತೆ ಹಾಗೂ ಎರಡನೇ ಹಂತದಲ್ಲಿ ಮುಖ್ಯ ರಸ್ತೆ ನಿರ್ಮಾಣ ಮಾಡಲಾಗಿದೆ. ಮೊದಲ ಹಂತದ ಕಾಮಗಾರಿಗೆ ಈಗಾಗಲೇ ಚಾಲನೆ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ದೇಶದಲ್ಲಿ 2021ರಲ್ಲಿ ಸಂಭವಿಸಿದ ಒಟ್ಟು ರಸ್ತೆ ಅಪಘಾತಗಳಲ್ಲಿ ಶೇ 54ರಷ್ಟು ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಆಗಿವೆ' ಎಂದು ತಿಳಿಸಿದ್ದಾರೆ.

ನಾಮನಿರ್ದೇಶಿತ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ಕರ್ನಾಟಕದಲ್ಲಿ ಈ ವರ್ಷದ ಮಳೆಗಾಲದಲ್ಲಿ ಹಾನಿಗೀಡಾದ ರಾಷ್ಟ್ರೀಯ ಹೆದ್ದಾರಿಗಳನ್ನು ಪರಿಶೀಲನೆ ನಡೆಸಿ ದುರಸ್ತಿ ಮಾಡಲಾಗಿದ್ದು, ಈಗ ಸಂಚಾರ ಯೋಗ್ಯ ವಾಗಿವೆ. ಕರ್ನಾಟಕದಲ್ಲಿ ಹೆದ್ದಾರಿಗಳ ನಿರ್ವಹಣೆಗೆ ಈ ವರ್ಷ ₹52.51 ಕೋಟಿ ಮೀಸಲಿಡಲಾಗಿದೆ. ಈ ಪೈಕಿ ₹19.08 ಕೋಟಿಯನ್ನು ಖರ್ಚು ಮಾಡಲಾಗಿದೆ' ಎಂದಿದ್ದಾರೆ.

ವಿದ್ಯಾರ್ಥಿಗಳ ಹೊಡೆದಾಟ

ಯಲಹಂಕ: ರಾಜಾನುಕುಂಟೆ ಸಮೀಪದ ದಿಬ್ಬೂರು ಗ್ರಾಮದ ಕಾಲೇಜೊಂದರ ವಿದ್ಯಾರ್ಥಿಗಳು ಪರಸ್ಪರ ಬಡಿಗೆ ಹಾಗೂ ವಿಕೆಟ್ ಹಿಡಿದು ಹೊಡೆದಾಡಿದ್ದಾರೆ. ಘಟನೆಯಲ್ಲಿ ಕಾರು ಜಖಂಗೊಂಡಿದೆ. ಗಲಾಟೆಯ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ರಾಜಾನುಕುಂಟೆ ಠಾಣೆಯಲ್ಲಿ ದೂರು ದಾಖಲಾಗಿದೆ.

ನಡುರಸ್ತೆಯಲ್ಲೇ ಎರಡು ಗುಂಪುಗಳಲ್ಲಿ ವಿದ್ಯಾರ್ಥಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿಕೊಂಡಿದ್ದಾರೆ. ಇತ್ತೀಚೆಗೆ ಇದೇ ಕಾಲೇಜಿನ ವಿದ್ಯಾರ್ಥಿಗಳು ದ್ವಿಚಕ್ರ ವಾಹನಗಳನ್ನು ರಸ್ತೆಯಲ್ಲಿ ಅತಿವೇಗವಾಗಿ ಚಲಾಯಿಸಿಕೊಂಡು ಕರ್ಕಶ ಧ್ವನಿ ಮಾಡಿದ್ದರಿಂದ ಗ್ರಾಮಸ್ಥರು, ಠಾಣೆಗೆ ದೂರು ನೀಡಿದ್ದರು. ಈ ಘಟನೆ ಮಾಸುವ ಮುನ್ನವೇ ಮತ್ತೆ ಹೊಡೆದಾಟ ಮಾಡಿಕೊಂಡಿದ್ದಾರೆ.

ಕಾಲೇಜು ಬಳಿ ಆಗಾಗ ಗಲಾಟೆಗಳಾದರೂ ಪೊಲೀಸರು ಎಚ್ಚೆತ್ತುಕೊಂಡಿಲ್ಲ ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ. ವಿಡಿಯೊ ಆಧರಿಸಿ ವಿದ್ಯಾರ್ಥಿಗಳ ಪತ್ತೆಹಚ್ಚಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಗೌರವಧನ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಶಾ ಕಾರ್ಯಕರ್ತೆಯರ ಮೂರು ತಿಂಗಳ ಬಾಕಿ ಇರುವ ಗೌರವಧನ ಬಿಡುಗಡೆ ಹಾಗೂ ಗೌರವಧನ ಹೆಚ್ಚಿಸಲು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಪ್ರತಿಭಟಿಸಿದರು.

ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಕೆ.ವಿ. ಭಟ್ ಮಾತನಾಡಿ, 'ಸರ್ಕಾರದ ಎಲ್ಲ ಯೋಜನೆ, ಚುನಾವಣೆ ಕಾರ್ಯ ಹೀಗೆ ನಾನಾ ಕೆಲಸಕ್ಕೆ ಆಶಾ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ, ಗೌರವಧನ ಮಾತ್ರ ಪುಡಿಗಾಸು. ಕಾರ್ಮಿಕ ಕಾನೂನಿನ ಅಡಿ ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ನಿಗದಿ ಮಾಡಬೇಕೆಂದು ಹೋರಾಟ ನಡೆಸುತ್ತ ಬರುತ್ತಿದ್ದೇವೆ. ಆದರೆ, ದುಡಿಯುವ ಕಾರ್ಮಿಕರ ಬಗ್ಗೆ ಸರ್ಕಾರವು ಕಿಂಚಿತ್ತೂ ಕಾಳಜಿ ತೋರುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಟಿ.ಸಿ.ರಮಾ ಅವರು, 'ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ₹ 12 ಸಾವಿರ ನಿಗದಿ ಮಾಡಬೇಕು. ಮೂರು ತಿಂಗಳ ಗೌರವಧನ ಬಿಡುಗಡೆ ಮಾಡಬೇಕೆಂದು ಕಳೆದ ತಿಂಗಳು ಪ್ರತಿಭಟನೆ ನಡೆಸಲಾಗಿತ್ತು. ಒಂದು ವಾರದಲ್ಲಿ ಬಾಕಿ ಬಿಡುಗಡೆ ಮಾಡುತ್ತೇವೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದರು. ಮೂರು ವಾರ ಕಳೆದರೂ ಬಿಡುಗಡೆ ಆಗಿಲ್ಲ' ಎಂದು ದೂರಿದರು.

ಜಿ.ಎಚ್. ಹನುಮೇಶ್, ಶ್ರೀಕಾಂತ್, ದುರ್ಗೇಶ್, ಫರ್ಹಾನಾ, ನಾಗಲಕ್ಷ್ಮಿ ಉಪಸ್ಥಿತರಿದ್ದರು.

ಕರ್ನಾಟಕ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಸದಸ್ಯರು ಬುಧವಾರ ನಗರದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ/ ಪ್ರಜ್ವಲ್ ಭಾರದ್ವಾಜ್ ಎನ್‌.ವಿ.

ನಗರದಲ್ಲಿ ಇಂದು

ಸರ್ಕ್ಯೂಟ್ಸ್, ಕಂಟ್ರೋಲ್, ಕಮ್ಯುನಿಕೇಷನ್ ಆ್ಯಂಡ್ ಕಂಪ್ಯೂಟಿಂಗ್ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ನವಕಾಂತ ಭಟ್, ಜಿ. ರವಿ, ಎಂ.ಆರ್. ಜಯರಾಮ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

ಸ್ಕಿಲ್ ಟೆಕ್ ಎಕ್ಸ್‌ಪೊ: ಅತಿಥಿಗಳು: ಕೆ. ಜ್ಯೋತಿ, ಎಸ್. ಯೋಗೇಶ್ವರ, ಭಾವೇಶ್ ಕುಮಾರ್, ರಾಮಕೃಷ್ಣಯ್ಯ ಎಚ್.ಎನ್. ಆಯೋಜನೆ: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಸ್ಥಳ: ಸರ್ಕಾರಿ ಮಾದರಿ ತರಬೇತಿ ಸಂಸ್ಥೆ, ಡೇರಿ ಸರ್ಕಲ್, ಹೊಸೂರು ರಸ್ತೆ, ಬೆಳಿಗ್ಗೆ 10.30

12ನೇ ವರ್ಷದ ವಾರ್ಷಿಕೋತ್ಸವ: ಉದ್ಘಾಟನೆ: ಸಿ.ಎಸ್. ಷಡಾಕ್ಷರಿ, ಅತಿಥಿಗಳು: ಅಶೋಕ್.ಎನ್. ಚಲವಾದಿ, ನೀಲಮ್ಮ, ಸುಧೀಂದ್ರ ವೆಂಕಟೇಶ್, ಎಲ್. ಮೋಹನ್ ಕುಮಾರ್, ಆಯೋಜನೆ: ಸಂಗೀತನಾದ ಟ್ರಸ್ಟ್, ಸ್ಥಳ: ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರದ ಆವರಣ, ಸಂಜೆ 4.30

ನಾಗಲೋಕದ ಅದ್ಭುತ ಕಲಾಕೃತಿ ಅನಾವರಣ: ಆಯೋಜನೆ ಮತ್ತು ಸ್ಥಳ: ಮಲ್ಲೇಶ್ವರ ಆರ್ಯವೈಶ್ಯ ಸಂಘ, ಕನ್ಯಕಾಪರಮೇಶ್ವರಿ ದೇವಾಲಯ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5

ಜಾನಪದ ತತ್ವರಸಾನುಭವ: ಉದ್ಘಾಟನೆ: ಬಸವರಾಜ್ ಸಬರದ, ಅತಿಥಿಗಳು: ದೇವೇಂದ್ರಕುಮಾರ್ ಪತ್ತಾರ್, ಆರ್. ಚಂದ್ರಶೇಖರ್, ಬೇಲೂರ್ ರಘುನಂದನ್, ಜಿಪಿಒ ಚಂದ್ರು, ಮಾಗಡಿ ಗಿರೀಶ್, ಸ್ಥಳ: ಅವ್ವಾ ಸಭಾಂಗಣ, ಬನಶಂಕರಿ 3ನೇ ಹಂತ, ಸಂಜೆ 5.30

'ಗಾಂಧಿ ಸರ್ಕಲ್' ನಾಟಕ ಪ್ರದರ್ಶನ: ಕಥೆ: ನಾಗತಿಹಳ್ಳಿ ಚಂದ್ರಶೇಖರ್, ರಂಗರೂಪ: ಮಹೇಶ್ ಸಾಗರ್, ನಿರ್ದೇಶನ: ಆದರ್ಶ ಎಸ್., 'ಕನಕಾಪುರ' ನಾಟಕ ಪ್ರದರ್ಶನ: ರಂಗರೂಪ ಪರಿಕಲ್ಪನೆ: ಮಂಜುನಾಥ ನಾಗನೂರ, ನಿರ್ದೇಶನ: ಕೃಷ್ಣಮೂರ್ತಿ, ಆಯೋಜನೆ: ಕಲಾ ಸಾಗರ, ಸ್ಥಳ: ಕಲಾಗ್ರಾಮ ರಂಗಮಂದಿರ ಮಲ್ಲತ್ತಹಳ್ಳಿ, ಸಂಜೆ 5.30

'ಕುವೆಂಪು ಮತ್ತು ಕನ್ನಡತನ'ದ ಉಪನ್ಯಾಸ: ಉಪನ್ಯಾಸಕರು: ಎಂ. ಪ್ರಕಾಶ್ ಮೂರ್ತಿ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

‘ಶೀಘ್ರವೇ 2 ಸಾವಿರ ಚಾಲಕರ ನೇಮಕ’

ಶ್ರೀರಾಮುಲು

ಬೆಳಗಾವಿ: ರಾಜ್ಯದ ವಿವಿಧ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಖಾಲಿ ಇರುವ ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವೇ 2,000 ಚಾಲಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸಿದ್ದು ಸವದಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಚಾಲಕರಿಗೆ ಈವರೆಗೆ ತರಬೇತಿ ಅವಧಿಯಲ್ಲಿ ₹10 ಸಾವಿರ ನೀಡಲಾಗುತ್ತಿತ್ತು. ಆ ಮೊತ್ತವನ್ನು ₹20 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದು ಅವರು ತಿಳಿಸಿದರು.

ಕೋವಿಡ್ ಸಂದರ್ಭದಲ್ಲಿ ರಾಜ್ಯದ ಹಲವು ಕಡೆಗಳಲ್ಲಿ ಸಾರಿಗೆ ಸಂಸ್ಥೆಗಳ ಬಸ್ ಸಂಚಾರವನ್ನು ನಿಲ್ಲಿಸಲಾಗಿತ್ತು. ಹಲವು ಕಡೆಗಳಲ್ಲಿ ಪುನಃ ಸಂಚಾರ ಆರಂಭಿಸಲಾಗಿದೆ. ಅಲ್ಲದೆ, ಕೆಲವು ಕಡೆಗಳಲ್ಲಿ ರಸ್ತೆಗಳು ಸರಿ ಇಲ್ಲದ ಕಾರಣ ಬಸ್‌ಗಳು ಸಂಚರಿಸುತ್ತಿಲ್ಲ. ಚಾಲಕರು ಮತ್ತು ಕಂಡಕ್ಟರ್‌ಗಳ ಕೊರತೆಯೂ ಇದೆ ಎಂದು ಹೇಳಿದರು. ಸಚಿವರ ಈ ಉತ್ತರದ ಬಗ್ಗೆ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಿಜೆಪಿ–ಕಾಂಗ್ರೆಸ್ ಜಟಾಪಟಿ, ಗದ್ದಲ, ಕಾಂಗ್ರೆಸ್ ಧರಣಿ

ಏಯ್ ನಿಂದೇನು ಸ್ಪೆಷಲ್ ಕೂತ್ಕೋ...

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನಸಭಾಧ್ಯಕ್ಷರ ಪೀಠದ ಮುಂದೆ ಧರಣಿಯಲ್ಲಿದ್ದ ಕಾಂಗ್ರೆಸ್ ಸದಸ್ಯ ಎಚ್‌.ಡಿ.ರಂಗನಾಥ್ ಅವರನ್ನು ಉದ್ದೇಶಿಸಿ ಸಚಿವರಾದ ಜೆ.ಸಿ. ಮಾಧುಸ್ವಾಮಿ ಮತ್ತು ಗೋವಿಂದಕಾರಜೋಳ ಅವರು ‘ಏಯ್ ನಿಂದೇನು ಸ್ಪೆಷಲ್ ಹೋಗಾಚೆ, ಕೂತ್ಕೋ’ ಎಂದು ಗದರಿದ್ದು, ಬುಧವಾರ ವಿಧಾನಸಭೆಯಲ್ಲಿ ಭಾರಿ ಗದ್ದಲ ಮತ್ತು ಧರಣಿಗೆ ಕಾರಣವಾಯಿತು. ಇದರಿಂದ ಕಲಾಪ ಎರಡು ಬಾರಿ ಮುಂದೂಡಿಕೆ ಆಯಿತು.

ಧರಣಿಯಲ್ಲಿದ್ದ ಶಾಸಕಿ ಅಂಜಲಿ ನಿಂಬಾಳ್ಕರ್ ಅವರು ತಮ್ಮ ವಿರುದ್ಧ ಹರಿಹಾಯ್ದ ಕಾರಣ ಅವರನ್ನು ಸದನದಿಂದ ಹೊರಹಾಕಬೇಕು ಎಂದು ಸಚಿವ ಮಾಧುಸ್ವಾಮಿ ಸಭಾಧ್ಯಕ್ಷರನ್ನು ಪಟ್ಟು ಹಿಡಿದ ಘಟನೆಗೂ ವಿಧಾನಸಭೆ ಸಾಕ್ಷಿ ಆಯಿತು. ಏಕವಚನಗಳ ಪದಗಳ ಬಳಕೆಯೂ ಆಯಿತು.

ಗದ್ದಲಕ್ಕೆ ಕಾರಣವೇನು?

ಬಿಜೆಪಿಯ ಸಿದ್ದು ಸವದಿ ಅವರು ಗ್ರಾಮಾಂತರ ಪ್ರದೇಶದಲ್ಲಿ ಕೆಎಸ್ಆರ್‌ಟಿಸಿ ಬಸ್‌ಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗಿದೆ ಎಂಬ ವಿಷಯವನ್ನು ಪ್ರಶ್ನೋತ್ತರ ಅವಧಿಯಲ್ಲಿ ಪ್ರಸ್ತಾಪಿಸಿದರು. ಜೆಡಿಎಸ್ ಮತ್ತು ಕಾಂಗ್ರೆಸ್ ಶಾಸಕರು ಧ್ವನಿಗೂಡಿಸಿದರು. ಇದಕ್ಕೆ ಉತ್ತರ ನೀಡಿದ ಸಾರಿಗೆ ಸಚಿವ ಬಿ.ಶ್ರೀರಾಮುಲು, ರಸ್ತೆಗಳು ಸರಿ ಇಲ್ಲದ ಕಾರಣ ಮತ್ತು ಡ್ರೈವರ್–ಕಂಡಕ್ಟರ್‌ಗಳ ಕೊರತೆ ಇರುವುದರಿಂದ ಬಸ್ ಬಿಡಲು ಆಗಿಲ್ಲ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸಚಿವ ಗೋವಿಂದ ಕಾರಜೋಳ ಅವರನ್ನು ತರಾಟೆಗೆ ತೆಗೆದುಕೊಂಡರು

ಕೃಪೆ: ವಾರ್ತಾ ಇಲಾಖೆ

ಈ ಉತ್ತರದಿಂದ ಕೆರಳಿದ ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದತ್ತ ಧಾವಿಸಿದರು. ಕಾಂಗ್ರೆಸ್ ಸದಸ್ಯರೂ ಅವರನ್ನು ಹಿಂಬಾಲಿಸಿದರು. ಎಚ್ಚೆತ್ತುಕೊಂಡ ಸಚಿವ ಶ್ರೀರಾಮುಲು ಅವರು, ತಕ್ಷಣವೇ ನಾಲ್ಕು ವಿಭಾಗಗಳ ಶಾಸಕರ ಸಭೆಯನ್ನು ಕರೆದು ಸಮಸ್ಯೆಯನ್ನು ಇದೇ ಅಧಿವೇಶನ ಮುಗಿಯುವುದರೊಳಗೆ ಇತ್ಯರ್ಥ ಮಾಡುವುದಾಗಿ ಭರವಸೆ ನೀಡಿದ್ದೂ ಅಲ್ಲದೆ, ವಿಸ್ತೃತ ಚರ್ಚೆಗೂ ಅವಕಾಶ ನೀಡುವುದಾಗಿ ಹೇಳಿದರು.

ಇದರಿಂದ ತೃಪ್ತರಾದ ಎರಡೂ ಪಕ್ಷಗಳ ಸದಸ್ಯರು ತಮ್ಮ ಆಸನಗಳಿಗೆ ಹಿಂದಿರುಗಿದರು. ಆದರೆ, ರಂಗನಾಥ್ ಮಾತ್ರ ಅಲ್ಲೇ ನಿಂತಿದ್ದರು. ಧರಣಿ ಮಾಹಿತಿ ತಿಳಿದು ಅಲ್ಲಿಗೆ ಧಾವಿಸಿದ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾತನಾಡಲು ನಿಂತರು. ಅದೇ ವೇಳೆ ರಂಗನಾಥ್ ತಮ್ಮ ಪಕ್ಷದ ಸದಸ್ಯರತ್ತ ನೋಡಿ ಮಾತನಾಡಿ... ಮಾತನಾಡಿ ಎಂದು ಸಂಜ್ಞೆ ಮಾಡಿದ್ದು ಮಾಧುಸ್ವಾಮಿ ಅವರನ್ನು ಕೆರಳಿಸಿತು. ‘ಏಯ್ ನಿಂದೇನು ಸ್ಪೆಷಲ್ ಹೋಗು ಆಚೆಗೆ, ಕೂತ್ಕೋ’ ಎಂದರು. ಗೋವಿಂದ ಕಾರಜೋಳ ಕೂಡ ಎದ್ದು ನಿಂತು ಹೋಗಾಚೆ ಎಂದು ಗದರಿದರು. ಸಚಿವರ ಮಾತುಗಳಿಂದ ಸಿಟ್ಟಿಗೆದ್ದ ಕಾಂಗ್ರೆಸ್ ಸದಸ್ಯರು, ಸಭಾಧ್ಯಕ್ಷರ ಪೀಠದತ್ತ ಧಾವಿಸಿ ಬಂದರು.

ಸಚಿವರು ವಿಷಾದ ವ್ಯಕ್ತಪಡಿಸಬೇಕು ಎಂದು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರು. ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಮತ್ತು ಸಚಿವರ ಮಧ್ಯೆ ವಾಗ್ವಾದ ನಡೆಯಿತು.

ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ಸ್ಥಾನದಲ್ಲಿದ್ದ ಕುಮಾರ್ ಬಂಗಾರಪ್ಪ ಅವರು, ಸಚಿವರು ಉತ್ತರ ಕೊಟ್ಟ ಮೇಲೆ ಎಲ್ಲ ಸದಸ್ಯರು ತಮ್ಮ ಸ್ಥಾನಗಳಿಗೆ ಹಿಂದಿರುಗಿದರು. ರಂಗನಾಥ್ ಒಬ್ಬರೇ ಉಳಿದಿದ್ದರು. ಇದು ಸರಿಯಾದ ರೀತಿ ಅನ್ನಿಸಲಿಲ್ಲ ಎಂದು ಅತೃಪ್ತಿ ವ್ಯಕ್ತಪಡಿಸಿದರು.

‘ಕಾರಜೋಳ ಅವರ ಹಾವಭಾವ ನೋಡಿದರೆ ಹೆದರಿಸುವ ಹಾಗೆ ಇತ್ತು. ಒಬ್ಬ ಸಚಿವ ಶಾಸಕರನ್ನು ಈ ರೀತಿ ಹೆದರಿಸುವುದೇ? ನೀವು ನಮಗೆ ಮಾತ್ರ ನೀತಿ ಪಾಠ ಮಾಡುತ್ತೀರಿ, ಸಚಿವರಿಗೆ ಏಕೆ ಹೇಳಲ್ಲ’ ಎಂದು ಸಿದ್ದರಾಮಯ್ಯ ಅವರು ಸಭಾಧ್ಯಕ್ಷ ಸ್ಥಾನದಲ್ಲಿದ್ದ ಕುಮಾರ್ ಬಂಗಾರಪ್ಪ ಅವರನ್ನು ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರ ವಾಗ್ದಾಳಿಯಿಂದ ಉತ್ತೇಜಿತರಾದ ಕಾಂಗ್ರೆಸ್‌ನ ಪ್ರಿಯಾಂಕ ಖರ್ಗೆ, ಯತೀಂದ್ರ ಸಿದ್ದರಾಮಯ್ಯ, ಕೃಷ್ಣ ಬೈರೇಗೌಡ ಅವರು, ಗೂಂಡಾಗಿರಿ ಸರ್ಕಾರ, ರೌಡಿಗಳ ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗಿದರು. ‘ಕೂಗಿ ಕೂಗಿ’ ಎಂದು ಸಿದ್ದರಾಮಯ್ಯ ಅವರು ಶಾಸಕರನ್ನು ಹುರಿದುಂಬಿಸುತ್ತಿದ್ದದ್ದೂ ಕಂಡು ಬಂದಿತು. ಅಂಜಲಿ ನಿಂಬಾಳ್ಕರ್ ಮತ್ತು ಇತರರು ಚೋರ್..ಚೋರ್ (ಕಳ್ಳರು) ಎಂದೂ ಘೋಷಣೆ ಕೂಗಿದರು.

ಭೋಜನ ವಿರಾಮದ ಬಳಿಕ ಸಭಾಧ್ಯಕ್ಷರ ಕೊಠಡಿಯಲ್ಲಿ ಆಡಳಿತ ಮತ್ತು ವಿರೋಧಪಕ್ಷದ ನಾಯಕರ ಮಧ್ಯೆ ಮಾತುಕತೆ ನಡೆದು, ಗದ್ದಲಕ್ಕೆ ತೆರೆ ಹಾಕಲು ನಿರ್ಣಯಿಸಿದರು. ಬಳಿಕ ಕಲಾಪ ಸಮಾವೇಶಗೊಂಡ ಬಳಿಕ, ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಸಿದ್ದರಾಮಯ್ಯ ಅವರು, ಪರಸ್ಪರ ಶಾಸಕರು ಮತ್ತು ಸಚಿವರು ಗೌರವದಿಂದ ನಡೆದುಕೊಳ್ಳಬೇಕು. ಜನರ ಸಮಸ್ಯೆಗಳ ವಿಚಾರವಾಗಿ ಹೆಚ್ಚು ಚರ್ಚೆ ನಡೆಯಬೇಕು ಎಂದು ಧರಣಿಗೆ ಮುಕ್ತಾಯ ಹಾಡಿದರು.

ಧರಣಿ ವೇಳೆ ಪರಸ್ಪರ ಬೈದಾಡಿಕೊಂಡ ಪದಗಳನ್ನು, ಅಂಜಲಿ ನಿಂಬಾಳ್ಕರ್‌ಗೆ ಬಗ್ಗೆ ಬಳಸಿದ ಪದಗಳನ್ನು ಕಡತದಿಂದ ತೆಗೆದುಹಾಕುವಂತೆ ಸಿದ್ದರಾಮಯ್ಯ ಮನವಿ ಮಾಡಿದರು. ಪರಿಶೀಲಿಸಿ ತೆಗೆದುಹಾಕುವುದಾಗಿ ಸಭಾಧ್ಯಕ್ಷರು ಹೇಳಿದರು.

> ಇಲ್ಲಿ ಯಾರೂ ದಾಳಿ, ದೌರ್ಜನ್ಯ ನಡೆಸಿಲ್ಲ. ಹಿಂದೆ ನಿಮ್ಮವರು ಸಭಾಧ್ಯಕ್ಷರ ಮೈಕ್ ಕಿತ್ತುಕೊಂಡಿದ್ದರು, ಇಲ್ಲಿ ಏನೇನೋ ಆಗಿರುವುದನ್ನು ನೋಡಿದ್ದೇನೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಇಂತಹ ಪಾಳೆಗಾರಿಕೆಗೆ ಹೆದರುವುದಿಲ್ಲ. ಇವರನ್ನೆಲ್ಲಾ ನೋಡಿಕೊಂಡು ಬಂದಿದ್ದೇನೆ. ಪಾಳೆಗಾರಿಕೆ, ಗಲಾಟೆ ಮತ್ತು ಬೆದರಿಕೆಗಳಿಗೆ ನಾನು ಮಣಿಯುವುದಿಲ್ಲ
> **ಗೋವಿಂದ ಕಾರಜೋಳ,** ಜಲಸಂಪನ್ಮೂಲ ಸಚಿವ

> ಕಲಾಪದ ವೇಳೆ ಸದಸ್ಯರು ಹೇಗೆ ವರ್ತಿಸಬೇಕು ಎಂಬ ನಿಯಮಾವಳಿ ಇದೆ. ಅದರಂತೆಯೇ ವರ್ತಿಸಬೇಕು. ಅದನ್ನು ಮೀರಿ ವರ್ತಿಸುವುದು ಎಷ್ಟು ಸರಿ?
> **ಜೆ.ಸಿ. ಮಾಧುಸ್ವಾಮಿ,** ಕಾನೂನು– ಸಂಸದೀಯ ಸಚಿವ

> ಸದನದಿಂದ ಆಚೆಗೆ ಹೋಗು ಎಂದು ಹೇಳಲು ನೀವ್ಯಾರು? ನಿಮಗೆ ಎಷ್ಟು ಹಕ್ಕು ಇದೆಯೋ ಶಾಸಕರಿಗೂ ಅಷ್ಟೇ ಹಕ್ಕುಗಳಿವೆ. ದಾಳಿ, ದೌರ್ಜನ್ಯ ನಡೆಸುವಂತಿಲ್ಲ
> **ಸಿದ್ದರಾಮಯ್ಯ,** ವಿರೋಧಪಕ್ಷದ ನಾಯಕ

ಸುದ್ದಿ 2 ನಿಮಿಷ

ವಿಸ್ತೃತರೂಪ ಹೇಳಲು ಪರದಾಡಿದ ಸಚಿವ ಪ್ರಭು ಬಿ. ಚವ್ಹಾಣ

ಬೆಳಗಾವಿ: ಜಾನುವಾರುಗಳ ಕಾಯಿಲೆ ನಿಯಂತ್ರಣದ ಯೋಜನೆಗೆ ಸಂಬಂಧಿಸಿದಂತೆ ಪಶು ಸಂಗೋಪನಾ ಸಚಿವ ಪ್ರಭು ಬಿ. ಚವ್ಹಾಣ ಅವರು ಇಂಗ್ಲಿಷ್‌ನಲ್ಲಿ ವಿಸ್ತೃತ ರೂಪ ಹೇಳಲು ಪರದಾಡಿದ ಪ್ರಸಂಗ ವಿಧಾನ ಪರಿಷತ್‌ನಲ್ಲಿ ಬುಧವಾರ ನಡೆಯಿತು.

ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಅವರು ಪಶು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಗಳನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಪ್ರಶ್ನೆ ಕೇಳಿದರು.

ಇದಕ್ಕೆ ಉತ್ತರಿಸಿದ ಸಚಿವರು, ‘ಪ್ರಸ್ತುತ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. 290 ಪಶು ವೈದ್ಯರನ್ನು ಕೇಂದ್ರ ಸರ್ಕಾರದ ಎಲ್‌ಎಚ್‌ಡಿಸಿ ಕಾರ್ಯಕ್ರಮದ ಅಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ’ ಎಂದು ವಿವರಿಸಿದರು.

‘ಎಲ್‌ಎಚ್‌ಡಿಸಿ ಅಂದರೇನು? ಇದರ ವಿಸ್ತೃತ ವಿವರ ಏನು’ ಎಂದು ಭೋಜೇಗೌಡ ಪ್ರಶ್ನಿಸಿದರು. ಚರ್ಮ ಗಂಟು ರೋಗ ಎಂದು ಸಚಿವರು ಪ್ರತಿಕ್ರಿಯಿಸಿದರು. ಇಂಗ್ಲಿಷ್‌ನಲ್ಲಿ ಹೇಳಿ ಎಂದು ಪದೇ, ಪದೇ ಕೇಳಿದರೂ ಚರ್ಮ ಗಂಟು ರೋಗ ಎಂದೇ ಉತ್ತರಿಸಿದರು. ಆಗ ಸದಸ್ಯರು ನಗೆಗಡಲಲ್ಲಿ ತೇಲಿದರು.

ಕೊನೆಗೆ ಅಧಿಕಾರಿಗಳು ನೀಡಿದ ವಿವರವನ್ನು ಓದಿದ ಸಚಿವರು ‘ಲೈವ್‌ಸ್ಟಾಕ್ ಹೆಲ್ತ್ ಡಿಸೀಸ್ ಕಂಟ್ರೋಲ್’ (ಜಾನುವಾರು ಆರೋಗ್ಯ ಕಾಯಿಲೆ ನಿಯಂತ್ರಣ) ಎಂದು ಓದಿದರು.

ಮರಾಠಾ ಸಮುದಾಯ 2ಎ ಪಟ್ಟಿಗೆ: ವರದಿ ಪಡೆದು ಕ್ರಮ– ಸಿಎಂ

ಬೆಳಗಾವಿ: ‘ಮರಾಠಾ ಸಮುದಾಯವನ್ನು ಪ್ರವರ್ಗ ‘3ಬಿ’ಯಿಂದ ‘2ಎ’ ಪಟ್ಟಿಗೆ ಸೇರ್ಪಡೆಗೊಳಿಸುವ ಕುರಿತಂತೆ ಶಂಕರಪ್ಪ ಆಯೋಗ 2012ರಲ್ಲಿ ಶಿಫಾರಸು ಮಾಡಿದೆ. ಅದನ್ನು ಮರು ಶಿಫಾರಸು ಮಾಡುವಂತೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗಕ್ಕೆ ತಿಳಿಸಿ, ಮಧ್ಯಂತರ ವರದಿ ಪಡೆದು ನ್ಯಾಯ ಒದಗಿಸಲು ಬದ್ಧ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ ಮತ್ತು ಶ್ರೀನಿವಾಸ ಮಾನೆ ವಿಷಯ ಪ್ರಸ್ತಾಪಿಸಿದಾಗ ಉತ್ತರಿಸಿದ ಮುಖ್ಯಮಂತ್ರಿ, ‘ಶಂಕರಪ್ಪ ಆಯೋಗ ವರದಿ ನೀಡುವ ಸಂದರ್ಭದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಇರಲಿಲ್ಲ. ಈಗ ಆಯೋಗದಿಂದ ವರದಿ ಪಡೆದು, ಈ ಬಗ್ಗೆ ವಿರೋಧ ಪಕ್ಷದವರ ಜೊತೆಗೂ ಚರ್ಚಿಸುತ್ತೇನೆ’ ಎಂದರು.

ನೂತನ ತಾಲ್ಲೂಕು: ‘ಮಹಾಲಿಂಗಪುರ ಹೋಬಳಿಯನ್ನು ತಾಲ್ಲೂಕು ಎಂದು ಘೋಷಿಸಬೇಕು ಎಂದು ಬಿಜೆಪಿಯ ಸಿದ್ದು ಸವದಿ ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಾಗ ಉತ್ತರಿಸಿದ ಮುಖ್ಯಮಂತ್ರಿ, ಆಡಳಿತ ಸುಧಾರಣಾ ಸಮಿತಿಯ ಸಲಹೆ ಪಡೆದು ಈ ಬಗ್ಗೆ ತೀರ್ಮಾನಿಸಲಾಗುವುದು’ ಎಂದರು.

ಆರೋಗ್ಯ ವಿಚಾರಣೆ...

ಎಡವಿ ಬಿದ್ದು ಕೈ ಗಾಯ ಮಾಡಿಕೊಂಡಿರುವ ಸಚಿವ ವಿ. ಸೋಮಣ್ಣ ಬುಧವಾರ ವಿಧಾನ ಪರಿಷತ್ತಿನಲ್ಲಿ ಸಚಿವ ಬಿ.ಸಿ. ನಾಗೇಶ್ ಜೊತೆ ಸಮಾಲೋಚನೆ ನಡೆಸಿದರು. ಬಿಜೆಪಿ ಸದಸ್ಯರಾದ ಪುಟ್ಟಣ್ಣ, ಪ್ರತಾಪ ಸಿಂಹ ನಾಯಕ, ಛಲವಾದಿ ನಾರಾಯಣಸ್ವಾಮಿ, ಸಚಿವ ಹಾಲಪ್ಪ ಆಚಾರ್ ಇದ್ದರು.

- ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಪರಿಶಿಷ್ಟರ ಮೀಸಲು ಹೆಚ್ಚಳಕ್ಕೆ ಶಿಫಾರಸು?

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಅವಕಾಶ ಕಲ್ಪಿಸಲು ಮಸೂದೆ ಮಂಡಿಸಿರುವ ಸರ್ಕಾರ, ಉಭಯಸದನಗಳಲ್ಲಿ ಅನುಮೋದನೆ ಪಡೆದು ಕೇಂದ್ರಕ್ಕೆ ಶಿಫಾರಸು ಮಾಡುವ ದಾರಿ ಹಿಡಿಯುವ ಸಾಧ್ಯತೆ ಇದೆ.

ಪರಿಶಿಷ್ಟ ಜಾತಿಯವರ ಮೀಸಲಾತಿಯನ್ನು ಶೇ 17ಕ್ಕೆ ಪರಿಶಿಷ್ಟ ಪಂಗಡದವರ ಮೀಸಲಾತಿಯನ್ನು ಶೇ 7ಕ್ಕೆ ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಅದಕ್ಕೆ ರಾಜ್ಯಪಾಲರ ಅನುಮೋದನೆ ಪಡೆದು ನೇಮಕಾತಿಯಲ್ಲಿ ಮೀಸಲಾತಿ ಪ್ರಕ್ರಿಯೆ ಕಲ್ಪಿಸುವ ಆದೇಶವನ್ನೂ ಹೊರಡಿಸಿತ್ತು.

‘ಕೇಂದ್ರ ಸರ್ಕಾರವು ಸಂವಿಧಾನದ 9 ನೇ ವಿಧಿಗೆ ತಿದ್ದುಪಡಿ ತರದ ಹೊರತು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದ್ದ ಕಾಂಗ್ರೆಸ್, ಕೇಂದ್ರದ ಮೇಲೆ ಒತ್ತಡ ಹೇರುವ ತಾಕತ್ತನ್ನು ಸರ್ಕಾರ ಪ್ರದರ್ಶಿಸಲಿ ಎಂದೂ ಆಗ್ರಹಿಸಿತ್ತು.

ಈ ಬೆಳವಣಿಗೆಗಳ ಮಧ್ಯೆಯೇ ಮೀಸಲಾತಿ ಹೆಚ್ಚಳವು ಸಂವಿಧಾನಕ್ಕೆ ಸಂಬಂಧಿಸಿದ ವಿಷಯವಾಗಿದ್ದರಿಂದ, ಈ ಬಗ್ಗೆ ವಿಶೇಷ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನಿಲುವಳಿ ಸೂಚನೆ ಮಂಡಿಸಿದ್ದರು. ಚರ್ಚೆಗೆ ನಿಯಮ 69ರ ಅಡಿ ಅವಕಾಶ ನೀಡುವುದಾಗಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದ್ದರು.

ಮೀಸಲಾತಿ ಹೆಚ್ಚಳ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವೇ ಇಲ್ಲ; ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಹೆಚ್ಚಿಸಿದ್ದೇವೆ ಎಂದು ಜನರನ್ನು ನಂಬಿಸಿ, ಚುನಾವಣೆಯಲ್ಲಿ ಮತಗಿಟ್ಟಿಸುವ ದಾರಿಯನ್ನು ಬಿಜೆಪಿ ಹುಡುಕಿದೆ ಎಂದು ಚರ್ಚೆ ವೇಳೆ ಸಿದ್ದರಾಮಯ್ಯ ಪ್ರತಿಪಾದಿಸುವ ಸಾಧ್ಯತೆ ಇದೆ.

ಇದಕ್ಕೆ ಪ್ರತಿತಂತ್ರ ಹೆಣೆದಿರುವ ಮುಖ್ಯಮಂತ್ರಿ ಬೊಮ್ಮಾಯಿ, ‘ಮಸೂದೆಗೆ ಅನುಮೋದನೆ ಪಡೆದು ರಾಜ್ಯಪಾಲರಿಗೆ ಕಳುಹಿಸುತ್ತೇವೆ. ಜತೆಗೆ ಕೇಂದ್ರಕ್ಕೆ ಶಿಫಾರಸು ಮಾಡಿದ್ದೇವೆ; ಚುನಾವಣೆಯೊಳಗೆ ಕೇಂದ್ರ ಸರ್ಕಾರ ಈ ವಿಷಯದಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಭರವಸೆ ಇದೆ’ ಎಂದು ಸದನದಲ್ಲಿಯೇ ಹೇಳಿಕೆ ನೀಡುವ ಮಾರ್ಗವನ್ನು ಹುಡುಕಿದ್ದಾರೆ ಎಂದು ಗೊತ್ತಾಗಿದೆ.

ಕೇಂದ್ರವೇ ಸಂವಿಧಾನಕ್ಕೆ ತಿದ್ದುಪಡಿ ತರಬೇಕು ಎಂಬ ವಿರೋಧ ಪಕ್ಷದವರ ಬೇಡಿಕೆಯನ್ನು ಈಡೇರಿಸಿದಂತೆಯೂ ಆಯಿತು. ಮೀಸಲಾತಿಯ ಭಾರವನ್ನು ಕೇಂದ್ರದ ಮೇಲೆ ಹೊರಿಸಿದಂತೆಯೂ ಆಯಿತು. ವಿರೋಧ ಪಕ್ಷದವರು ರಾಜಕೀಯ ದೊಣ್ಣೆ ಬೀಸಿದರೆ, ನಿಮ್ಮ ಸರ್ಕಾರ ಇದ್ದಾಗ ಲಿಂಗಾಯತ ಸ್ವತಂತ್ರಧರ್ಮ, ಕರ್ನಾಟಕಕ್ಕೆ ಪ್ರತ್ಯೇಕ ಧ್ವಜದ ವಿಚಾರವನ್ನು ಕೇಂದ್ರದ ಮೇಲೆ ಹೊತ್ತು ಹಾಕಿರಲಿಲ್ಲವೇ ಎಂಬ ಪ್ರತಿ ದೊಣ್ಣೆಯನ್ನು ಬಳಸುವ ಅವಕಾಶವನ್ನೂ ಇಟ್ಟುಕೊಂಡಂತಾಯಿತು ಎಂಬುದು ಬೊಮ್ಮಾಯಿಯವರ ಲೆಕ್ಕಾಚಾರ ಎಂದು ಹೇಳಲಾಗಿದೆ.

ಕುಲಪತಿ ನೇಮಕಾತಿಗೆ ₹6 ಕೋಟಿ: ಕಾಂಗ್ರೆಸ್ ಧರಣಿ

ಬೆಳಗಾವಿ: ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಯ ನೇಮಕಾತಿಗೆ ₹6 ಕೋಟಿ ಲಂಚ ನೀಡಲಾಗುತ್ತಿದೆ ಎಂದು ಸಂಸದರೊಬ್ಬರು ನೀಡಿರುವ ಹೇಳಿಕೆ ಬಗ್ಗೆ ಚರ್ಚಿಸಲು ಅವಕಾಶ ನೀಡಬೇಕು ಎಂದು ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದು, ಧರಣಿ ನಡೆಸಿದರು.

ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಇದು ಗಂಭೀರವಾದ ವಿಷಯ. ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಮತ್ತು ಪಾರದರ್ಶಕತೆ ಕಾಪಾಡಬೇಕು. ಮುಖ್ಯಮಂತ್ರಿ ಮತ್ತು ಸಚಿವರು ಈ ಬಗ್ಗೆ ಹೇಳಿಕೆ ನೀಡಬೇಕು’ ಎಂದು ಒತ್ತಾಯಿಸಿದರು,

ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ, ‘ಎಷ್ಟು ಭ್ರಷ್ಟಾಚಾರ ನಡೆದಿದೆ ಎನ್ನುವ ಬಗ್ಗೆ ತನಿಖೆಯಾಗಲಿ. ಮಹತ್ವದ ವಿಷಯದ ಬಗ್ಗೆ ಚರ್ಚೆ ಅಗತ್ಯ’ ಎಂದು ಪ್ರತಿಪಾದಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮಿಸಳ್ ಹಾಪ್ಚಾ

ಐನಾಪುರ ಪೇಡೆ ಹಿಂದಿನ ಕಹಾನಿ

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ಕನ್ನಡ ಧ್ವನಿ

ಕರ್ನಾಟಕದ ವಿರುದ್ಧ ಕಠಿಣ ನಿಲುವಿಗೆ ಎಂವಿಎ ಆಗ್ರಹ

ಪ್ರಜಾವಾಣಿ ವಾರ್ತೆ

ಮುಂಬೈ: ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದದ ಕುರಿತು ಕಠಿಣ ನಿಲುವು ತೆಗೆದುಕೊಳ್ಳುವಂತೆ ಮಹಾರಾಷ್ಟ್ರ ಸರ್ಕಾರವನ್ನು ವಿರೋಧ ಪಕ್ಷಗಳ ಮೈತ್ರಿಕೂಟವಾದ ಮಹಾ ವಿಕಾಸ ಅಘಾಡಿ (ಎಂವಿಎ) ಬುಧವಾರ ಒತ್ತಾಯಿಸಿದೆ.

ಗಡಿ ವಿಚಾರವಾಗಿ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿರುವ ತೀಕ್ಷ್ಣವಾದ ಹೇಳಿಕೆಗಳ ಹಿನ್ನೆಲೆಯಲ್ಲಿ ಮೈತ್ರಿಕೂಟದ ಹಲವು ನಾಯಕರು ಪ್ರತಿಕ್ರಿಯೆ ನೀಡಿದ್ದಾರೆ. ಜೊತೆಗೆ, ಸರ್ಕಾರ ತೆಗೆದುಕೊಳ್ಳುವ ಕ್ರಮ ಮತ್ತು ನಿರ್ಣಯವನ್ನು ಬೆಂಬಲಿಸುವುದಾಗಿಯೂ ಅವರು ಭರವಸೆ ನೀಡಿದ್ದಾರೆ.

‘ಬೊಮ್ಮಾಯಿ ಅವರ ಹೇಳಿಕೆ ಮತ್ತು ನಡೆಗಳ ವಿರುದ್ಧ ಕಠಿಣ ನಿಲುವು ತೆಗೆದುಕೊಳ್ಳಲೇಬೇಕು. ಕರ್ನಾಟಕ ಗಡಿ ಭಾಗದಲ್ಲಿರುವ ಮರಾಠಿ ಭಾಷಿಕರ ಪರವಾಗಿ ಮತ್ತು ಕೆಲ ಭೂಪ್ರದೇಶದ ಮೇಲಿನ ನಮ್ಮ ಹಕ್ಕನ್ನು ಸ್ಥಾಪಿಸಲು ಸರ್ವಾನುಮತದ ಗೊತ್ತುವಳಿಯನ್ನು ಉಭಯ ಸದನಗಳು ಹೊರಡಿಸಬೇಕು’ ಎಂದು ಎನ್‌ಸಿಪಿ ನಾಯಕ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಹೇಳಿದರು.

ರಾವುತ್ ಹೇಳಿಕೆ: ಗಡಿ ವಿವಾದವನ್ನು ಚೀನಾ ಅತಿಕ್ರಮಣಕ್ಕೆ ಹೋಲಿಸಿರುವ ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ನಾಯಕ ಸಂಜಯ್ ರಾವುತ್, ‘ಭಾರತದ ಭೂ ಪ್ರದೇಶವನ್ನು ಚೀನಾ ಪ್ರವೇಶಿಸಿರುವಂತೆ ನಾವು ಕರ್ನಾಟಕವನ್ನು ಪ್ರವೇಶಿಸೋಣ. ನಮಗೆ ಯಾರ ಅನುಮತಿಯೂ ಬೇಕಾಗಿಲ್ಲ. ನಾವು ಈ ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ನಿರ್ಧರಿಸಿದ್ದೆವು. ಆದರೆ ಬೊಮ್ಮಾಯಿ ಅವರು ಬೆಂಕಿ ಹೊತ್ತಿಸುತ್ತಿದ್ದಾರೆ’ ಎಂದು ಸುದ್ದಿಗಾರರಿಗೆ ಹೇಳಿದ್ದಾರೆ.

‘ಶಿಂದೆ– ಫಡಣವೀಸ್ ನೇತೃತ್ವದ ಸರ್ಕಾರವು ಬೊಮ್ಮಾಯಿ ಅವರನ್ನು ಏಕೆ ರಕ್ಷಿಸುತ್ತಿದೆ’ ಎಂದು ಕಾಂಗ್ರೆಸ್ ಹಿರಿಯ ನಾಯಕ ಅಶೋಕ್ ಚೌಹಾಣ್ ಪ್ರಶ್ನಿಸಿದ್ದಾರೆ.

ಮರುಪರಿಶೀಲನೆ ಎಚ್ಚರಿಕೆ: (ನಾಗ್ಪುರ ವರದಿ) ಬೊಮ್ಮಾಯಿ ಅವರು ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸದಿದ್ದರೆ ಕರ್ನಾಟಕಕ್ಕೆ ನದಿ ನೀರು ಪೂರೈಕೆ ಮಾಡುವ ಕುರಿತು ಮಹಾರಾಷ್ಟ್ರ ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಮಹಾರಾಷ್ಟ್ರ ಸಚಿವ ಶಂಭುರಾಜ್ ದೇಸಾಯ್ ಅವರು ಎಚ್ಚರಿಸಿದ್ದಾರೆ.

ಅಣೆಕಟ್ಟುಗಳ ಎತ್ತರ ಹೆಚ್ಚಿಸಿ: ಕರ್ನಾಟಕದ ಕಡೆ ಹರಿಯುವ ನದಿಗಳಿಗೆ ಕಟ್ಟಲಾಗಿರುವ ಅಣೆಕಟ್ಟುಗಳ ಎತ್ತರವನ್ನು ಹೆಚ್ಚಿಸಿ ನದಿಗಳ ನೀರು ಕರ್ನಾಟಕಕ್ಕೆ ಹರಿಯುವುದನ್ನು ತಡೆಯುವಂತೆ ಎನ್‌ಸಿಪಿ ನಾಯಕ ಜಯಂತ್ ಪಾಟೀಲ್ ಅವರು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಂಗಳವಾರ ಕರೆ ನೀಡಿದ್ದಾರೆ.

> **ರಾಜಕೀಯ ಲಾಭಕ್ಕಾಗಿ ರಾವುತ್ ಹೇಳಿಕೆ ಕೊಟ್ಟಿದ್ದಾರೆ. ಭಾರತ–ಚೀನಾ ಮತ್ತು ಕರ್ನಾಟಕ–ಮಹಾರಾಷ್ಟ್ರ ಗಡಿಗಳ ಕುರಿತು ವ್ಯತ್ಯಾಸವೇ ಗೊತ್ತಿಲ್ಲದ ಬಾಲಿಶ ಹೇಳಿಕೆ**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

‘ಮಹಾ’ ತರಲೆ: ಅಮಿತ್ ಶಾ ಗಮನಕ್ಕೆ– ಬೊಮ್ಮಾಯಿ

ಬೆಳಗಾವಿ: ‘ಚೀನಾ ರೀತಿಯಲ್ಲಿ ಕರ್ನಾಟಕದ ಮೇಲೆ ಆಕ್ರಮಣ ಮಾಡುತ್ತೇವೆ ಎಂದು ಮಹಾರಾಷ್ಟ್ರದ ಕೆಲವು ನಾಯಕರು ಹೇಳಿರುವುದು ಅಪ್ರಬುದ್ಧ ಹೇಳಿಕೆ. ಈ ವಿಷಯವನ್ನು ಕೇಂದ್ರ ಗೃಹ ಸಚಿವರ ಗಮನಕ್ಕೆ ತರುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಚೀನಾವು ಮತ್ತೊಂದು ದೇಶವಾಗಿದ್ದು, ನಮ್ಮ ಸೈನಿಕರು ಚೀನಾ ಆಕ್ರಮಣವನ್ನು ಹಿಮ್ಮೆಟ್ಟಿಸಿದ್ದಾರೆ. ನಾವೆಲ್ಲ ಒಂದೇ ದೇಶದೊಳಗೆ ಇದ್ದೇವೆ. ಕನ್ನಡಿಗರು ಆಕ್ರಮಣ ಮಾಡಲು, ಅವರು ನಮ್ಮ ಮೇಲೆ ಆಕ್ರಮಣ ಮಾಡಲು ಮತ್ತೊಂದು ದೇಶವಲ್ಲ. ಅವರು ಮಾತನಾಡುತ್ತಿರುವುದನ್ನು ನೋಡಿದರೆ ಮಾನಸಿಕ ಸಮತೋಲನ ಕಳೆದುಕೊಂಡಂತೆ ಕಾಣಿಸುತ್ತಿದೆ. ಇದಕ್ಕೆಲ್ಲ, ವಿಧಾನಸಭೆಯಲ್ಲಿ ಗುರುವಾರ ಉತ್ತರ ನೀಡುತ್ತೇನೆ’ ಎಂದರು.

ಮಹಾರಾಷ್ಟ್ರದ ವಿರೋಧ ಪಕ್ಷದ ನಾಯಕರು ಶಾಸನಸಭೆ ಹಾಗೂ ಹೊರಗಡೆ ಹದ್ದುಮೀರಿ ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಈ ವಿಷಯ ಮುಂದಿಟ್ಟು ರಾಜಕಾರಣ ಮಾಡುತ್ತಿದ್ದಾರೆ. ಇದೇ ರೀತಿಯ ರಾಜಕಾರಣವನ್ನು ಮಾಡಲು ಹೋಗಿದ್ದ ಎನ್‌ಸಿಪಿ ನಾಯಕರು ವಿಫಲರಾಗಿದ್ದರು. ಈಗಲೂ ಅವರಿಗೆ ಜಯ ಸಿಗುವುದಿಲ್ಲ ಎಂದರು.

‘ರಾಜ್ಯದ ಗಡಿಯೊಳಗೆ ಬರುವ ಯತ್ನವನ್ನು ಅವರು ಮಾಡಿದ್ದರು. ಅವರನ್ನು ಹಿಮ್ಮೆಟ್ಟಿಸಿದ್ದೇವೆ. ರಾಜಕೀಯ ಪಕ್ಷಗಳ ಧ್ವಜ ಹಿಡಿದುಬಂದಿರುವುದನ್ನು ನೋಡಿದರೆ, ರಾಜಕೀಯ ಪ್ರೇರಿತ ಎಂಬುದು ಸ್ಪಷ್ಟವಾಗುತ್ತದೆ’ ಎಂದು ಹೇಳಿದರು.

ಕೊಲ್ಹಾಪುರದಲ್ಲಿ ಪ್ರತಿಭಟನೆ 26ರಂದು: ಕಿಣೇಕರ್

ಬೆಳಗಾವಿ: ‘ಮರಾಠಿಗರ ಮೇಲೆ ರಾಜ್ಯ ಸರ್ಕಾರ ಮಾಡುತ್ತಿರುವ ಅನ್ಯಾಯ ಖಂಡಿಸಿ ಡಿ.26ರಂದು ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದೇವೆ’ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ್ ಹೇಳಿದರು.

‘ಮಹಾಮೇಳಾವ್ ಆಯೋಜಿಸಲು ಮುಂದಾಗಿದ್ದೆವು. ಆದರೆ, ಜಿಲ್ಲಾಡಳಿತ ಅನುಮತಿ ಕೊಡದೆ ಮರಾಠಿಗರಿಗೆ ಅನ್ಯಾಯ ಮಾಡಿದೆ’ ಎಂದರು.

ಪರಿಷತ್ತು: ಸಭಾಪತಿಯಾಗಿ ಬಸವರಾಜ ಹೊರಟ್ಟಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಿಜೆಪಿಯಿಂದ ಪರಿಷತ್ತಿಗೆ ಆಯ್ಕೆಯಾಗಿದ್ದ ಬಸವರಾಜ ಹೊರಟ್ಟಿ, ಮೂರನೇ ಬಾರಿ ಸಭಾಪತಿಯಾಗಿ ಆಯ್ಕೆಯಾದರು.

ಸಭಾಪತಿ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಗೆ ಹೊರಟ್ಟಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಹಂಗಾಮಿ ಸಭಾಪತಿಯಾಗಿದ್ದ ರಘುನಾಥರಾವ್ ಮಲ್ಕಾಪುರೆ ಅವರು ಚುನಾವಣೆ ಪ್ರಕ್ರಿಯೆ ನಡೆಸಿದರಲ್ಲದೇ, ಹೊರಟ್ಟಿ ಅವರು ಸರ್ವಾನುಮತದಿಂದ ಆಯ್ಕೆಯಾಗಿರುವುದನ್ನು ಘೋಷಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಭಾನಾಯಕ ಕೋಟ ಶ್ರೀನಿವಾಸಪೂಜಾರಿ, ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹಾಗೂ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಅವರು ಹೊರಟ್ಟಿ ಅವರನ್ನು ಸಭಾಪತಿ ಸ್ಥಾನದಲ್ಲಿ ಕೂರಿಸಿದರು.

ಹೊರಟ್ಟಿಯವರನ್ನು ಅಭಿನಂದಿಸಿ ಮಾತನಾಡಿದ ಎಲ್ಲರೂ ಅವರ ಪಕ್ಷಾತೀತ ನಿಲುವು, ಸುದೀರ್ಘ ಅವಧಿಯ ರಾಜಕೀಯ ಜೀವನದ ವೈಶಿಷ್ಟ್ಯವನ್ನು ಕೊಂಡಾಡಿದರು.

1946ರಲ್ಲಿ ಬಾಗಲಕೋಟೆ ಜಿಲ್ಲೆಯ ಚಿಕಲಗುಂದಿಯಲ್ಲಿ ಜನಿಸಿದ ಹೊರಟ್ಟಿ ಹುಬ್ಬಳ್ಳಿಯನ್ನು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡಿದ್ದಾರೆ. ಈಗ ಅವರಿಗೆ 76 ವರ್ಷ.

ಸಭಾಪತಿಯಾಗಿ ಆಯ್ಕೆಯಾದ ಬಸವರಾಜ ಹೊರಟ್ಟಿ ಅವರನ್ನು ಹಂಗಾಮಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಅಭಿನಂದಿಸಿದರು. ಆಡಳಿತ ಪಕ್ಷದ ಮುಖ್ಯಸಚೇತಕ ವೈ.ಎ. ನಾರಾಯಣ ಸ್ವಾಮಿ, ಸಭಾನಾಯಕ ಕೋಟ ಶ್ರೀನಿವಾಸಪೂಜಾರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕರಾದ ಬಿ.ಕೆ. ಹರಿಪ್ರಸಾದ್ ಹಾಗೂ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಇದ್ದಾರೆ

ಪ್ರಜಾವಾಣಿ ಚಿತ್ರ

> **ರಾಜ್ಯಸಭೆ, ಲೋಕಸಭೆಯಲ್ಲಿ ಎಲ್ಲದಕ್ಕೂ ಸಮಯ ಇರುತ್ತದೆ. ಸರಿಯಾದ ಸಮಯಕ್ಕೆ ಆರಂಭವಾಗಿ, ಪ್ರಶ್ನೋತ್ತರ ಒಂದೇ ಗಂಟೆಯಲ್ಲಿ ಮುಕ್ತಾಯವಾಗುತ್ತದೆ. ಅದನ್ನು ಇಲ್ಲಿ ಅನುಸರಿಸಿ.**
> **ಎ.ಎಚ್. ವಿಶ್ವನಾಥ್,** ಬಿಜೆಪಿ ಸದಸ್ಯ

1980ರಲ್ಲಿ ಮೊದಲ ಬಾರಿಗೆ ಪಕ್ಷೇತರರಾಗಿ ಸ್ಪರ್ಧಿಸಿ ವಿಧಾನಪರಿಷತ್ ಪ್ರವೇಶಿಸಿದ ಹೊರಟ್ಟಿ ಅವರು ಸತತ ಎಂಟು ಬಾರಿ ಗೆಲುವು ಸಾಧಿಸಿದ್ದಾರೆ. ಜನತಾ ಪಕ್ಷ, ಜನತಾದಳ, ಲೋಕಶಕ್ತಿ, ಜೆಡಿಎಸ್‌ನಿಂದ ಗೆದ್ದಿದ್ದಾರೆ. ಎಂಟು ತಿಂಗಳ ಹಿಂದೆ ಪರಿಷತ್ತಿಗೆ ನಡೆದ ಚುನಾವಣೆ ವೇಳೆ ಜೆಡಿಎಸ್ ತೊರೆದು, ಬಿಜೆಪಿ ಸೇರಿದ್ದರು.

ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್, ಜೆಡಿಎಸ್ ಸರ್ಕಾರದಲ್ಲಿ ಹಾಗೂ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಬಿಜೆಪಿ ಸರ್ಕಾರಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕಾನೂನು ಮತ್ತು ಸಂಸದೀಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಅವರು ಕಾರ್ಯ ನಿರ್ವಹಿಸಿದ್ದಾರೆ.

ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ

ಸಭಾಪತಿ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆಯಾಗಿರುವ ಬಸವರಾಜ ಹೊರಟ್ಟಿ, ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಸದನಕ್ಕೆ ತಿಳಿಸಿದರು.

ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟಿ ಸಭಾಪತಿ ನಿಲುವು ಸ್ವಾಗತಿಸಿದರು. ಸಭಾಪತಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದ್ದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು ಸಭಾಪತಿಯಾದವರು ಪಕ್ಷಾತೀತವಾಗಿ ಕೆಲಸ ಮಾಡುವ ಪರಂಪರೆ ಇದೆ. ಹೊರಟ್ಟಿಯವರು ಅದನ್ನು ಮುಂದುವರಿಸಬೇಕು ಎಂದು ಮನವಿ ಮಾಡಿದ್ದರು.

ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಅವರು, ಹೊರಟ್ಟಿಯವರು ಪಕ್ಷದ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿಯೇ ಬಂದಿದ್ದಾರೆ ಎಂಬ ವಿಶ್ವಾಸವಿದೆ. ಅವರು ಪಕ್ಷಾತೀತವಾಗಿ ನಡೆದುಕೊಳ್ಳುವ ಸದನದ ಪರಂಪರೆಯನ್ನು ಮುಂದುವರಿಸಲಿ ಎಂದು ಆಶಿಸಿದ್ದರು.

ಹಿರಿತನಕ್ಕೆ ಮನ್ನಣೆ: ಬೊಮ್ಮಾಯಿ

ಹೊರಟ್ಟಿಯವರ ಹಿರಿತನ, ಅನುಭವಕ್ಕೆ ಮನ್ನಣೆ ಸಿಕ್ಕಿದೆ. ಸರ್ವಾನುಮತದ ಆಯ್ಕೆಯು ಈ ಸದನದ ಗೌರವವನ್ನು ಹೆಚ್ಚಿಸಿದೆ. 1980ರಿಂದ ಸದನದ ಸದಸ್ಯರಾಗಿದ್ದಾರೆ. ಶಿಕ್ಷಕರಾಗಿ, ಶಿಕ್ಷಕ ಸಮುದಾಯದ ಸಂಘಟನೆಯಲ್ಲಿ ಒಳ್ಳೆಯ ಕೆಲ ಮಾಡಿರುವ ಅವರು, ಕಾರ್ಯಪ್ರವೃತ್ತಿ, ಕರ್ತವ್ಯಪ್ರಜ್ಞೆಯಿಂದಲೇ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. 42 ವರ್ಷಗಳ ಸುದೀರ್ಘ ರಾಜಕೀಯ ಬದುಕು ಆದರ್ಶಪ್ರಾಯವಾಗಿದೆ. ಶಿಕ್ಷಣ ಸಚಿವರಾಗಿ ಮಾಡಿದ ಕೆಲಸ ಶಿಕ್ಷಣ ಕ್ಷೇತ್ರಕ್ಕೆ ಸ್ಥಿರತೆಯನ್ನು ತಂದುಕೊಟ್ಟಿದೆ. ಕಾನೂನು ಸಚಿವರಾಗಿದ್ದಾಗ ಹುಬ್ಬಳ್ಳಿಗೆ ಕಾನೂನು ವಿಶ್ವವಿದ್ಯಾಲಯ ತಂದಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಸಭಾಪತಿಯಾಗಿ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಎಡಿಜಿಪಿ ಅಲೋಕ್ ವಿಚಾರಣೆ

ಒಂದನೇ ಪುಟದಿಂದ...

ಈ ಪ್ರಕರಣದ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಮೊಹಮ್ಮದ್ ಮುಖಾರಾಂ ಸಲ್ಲಿಸಿರುವ ಬಿ ವರದಿಯು ದುರುದ್ದೇಶದಿಂದ ಕೂಡಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಾಲಯ, ಅಲೋಕ್ ಕುಮಾರ್, ದಾನೇಶ್ವರ್ ರಾವ್, ಶಂಕರಾಚಾರಿ ಹಾಗೂ ವೈಯಾಲಿಕಾವಲ್ ಪೊಲೀಸ್ ಠಾಣೆಯ ಆಗಿನ ಕಾನ್‌ಸ್ಟೆಬಲ್ ಚಂದ್ರು ಅಲಿಯಾಸ್ ಚಂದ್ರಶೇಖರ್ ವಿರುದ್ಧ ವಿಚಾರಣೆ ನಡೆಯಲಿದ್ದು, 2023ರ ಜನವರಿ 31ರಂದು ದೂರುದಾರರ ಪ್ರಮಾಣೀಕೃತ ಹೇಳಿಕೆ ದಾಖಲಿಸಲು ಸಮಯ ನಿಗದಿಮಾಡಿದೆ.

2014ರಲ್ಲಿ ವೈಯಾಲಿಕಾವಲ್ ಪೊಲೀಸ್ ಠಾಣೆ ವ್ಯಾಪ್ತಿಯ ಆರೆಂಜ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ನಡೆದಿದ್ದ ಗಲಾಟೆಗೆ ಸಂಬಂಧಿಸಿದ ಪ್ರಕರಣದಲ್ಲಿ ಅಲ್ಲಿನ ಪೊಲೀಸ್ ಕಾನ್‌ಸ್ಟೇಬಲ್ ಚಂದ್ರು ಅಲಿಯಾಸ್ ಚಂದ್ರಶೇಖರ್ ₹5 ಲಕ್ಷ ಲಂಚ ಪಡೆದಿದ್ದು, ಆಗ ಬೆಂಗಳೂರಿನ ಕಾನೂನು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ಹುದ್ದೆಯಲ್ಲಿದ್ದ ಅಲೋಕ್ ಕುಮಾರ್ ಅವರು ದಾನೇಶ್ವರ್ ರಾವ್ ಹಾಗೂ ಶಂಕರಾಚಾರಿ ಮೂಲಕ ₹1 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿ ಮಲ್ಲಿಕಾರ್ಜುನ ಎಂ.ಬಿ. 2015ರ ಮೇ 30ರಂದು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು.

ಶಂಕರಾಚಾರಿ ಮತ್ತು ದಾನೇಶ್ವರ್ ರಾವ್ ಅವರಿಗಾಗಿ ಚಂದ್ರಶೇಖರ್ ಮೂಲಕ 2014ರ ಸೆಪ್ಟೆಂಬರ್ 1ರಂದು ₹ 5 ಲಕ್ಷ ಲಂಚ ನೀಡಲಾಗಿತ್ತು. ಮರುದಿನವೇ ದಾನೇಶ್ವರ್ ರಾವ್ ತಮ್ಮನ್ನು ಸಂಪರ್ಕಿಸಿ ಅಲೋಕ್ ಕುಮಾರ್ ಅವರಿಗೆ ₹1 ಕೋಟಿ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. 48 ಗಂಟೆಗಳೊಳಗೆ ಹಣ ಹೊಂದಿಸುವಂತೆ ಒತ್ತಡ ಹೇರಿದ್ದರು. ಲಂಚ ನೀಡದಿದ್ದರೆ ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಐಪಿಸಿ ಅಡಿಯಲ್ಲಿ ತೀವ್ರ ಸ್ವರೂಪದ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಒಡ್ಡಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಆರೋಪಿ ಕಾನ್‌ಸ್ಟೆಬಲ್ ಜತೆಗಿನ ಮಾತುಕತೆಯ ಆಡಿಯೊ ರೆಕಾರ್ಡಿಂಗ್ ತುಣುಕುಗಳಿದ್ದ ಮೂರು ಸಿ.ಡಿ ಗಳನ್ನೂ ದೂರುದಾರರು ತನಿಖಾ ಸಂಸ್ಥೆಗೆ ಸಲ್ಲಿಸಿದ್ದರು.

ತಮ್ಮ ಸಂಬಂಧಿ ಪುಟ್ಟೇಗೌಡ ಎಂಬುವವರು ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿದ್ದರು. ತನ್ನಿಂದ ₹1 ಕೋಟಿ ಲಂಚ ಪಡೆಯಲು ಒತ್ತಡ ಸೃಷ್ಟಿಸುವುದಕ್ಕಾಗಿ ಪುಟ್ಟೇಗೌಡ ಅವರನ್ನು ಅಮಾನತು ಮಾಡಲಾಗಿತ್ತು ಎಂದು ಮಲ್ಲಿಕಾರ್ಜುನ್ ದೂರಿನಲ್ಲಿ ಆರೋಪಿಸಿದ್ದರು. ಪುಟ್ಟೇಗೌಡ ಕೂಡ ಲೋಕಾಯುಕ್ತ ಪೊಲೀಸರ ಎದುರು ಹಾಜರಾಗಿ ಹೇಳಿಕೆ ದಾಖಲಿಸಿದ್ದರು.

ಪ್ರಾಥಮಿಕ ತನಿಖೆ ಬಳಿಕ ಕಾನ್‌ಸ್ಟೆಬಲ್ ಚಂದ್ರಶೇಖರ್ ವಿರುದ್ಧ ಮಾತ್ರ ಎಫ್‌ಐಆರ್ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿದ್ದರು. ಏಳು ವರ್ಷಗಳ ಬಳಿಕ 2022ರ ಮಾರ್ಚ್ 19ರಂದು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದ ತನಿಖಾಧಿಕಾರಿ, ‘ದೂರುದಾರರು ದಾನೇಶ್ವರ್ ರಾವ್ ಮತ್ತು ಶಂಕರಾಚಾರಿ ಅವರಿಗೆ 5 ಲಕ್ಷ ಲಂಚ ನೀಡಿರುವುದನ್ನು ಪುಷ್ಟೀಕರಿಸುವ ಸಾಕ್ಷ್ಯಗಳು ಲಭ್ಯವಾಗಿಲ್ಲ. ಅಂತಹ ಸಾಕ್ಷ್ಯಗಳನ್ನು ಹಾಜರುಪಡಿಸುವಲ್ಲಿ ದೂರುದಾರರು ವಿಫಲವಾಗಿದ್ದಾರೆ’ ಎಂದು ತಿಳಿಸಿದ್ದರು. ಸಬ್ ಇನ್‌ಸ್ಪೆಕ್ಟರ್ ಪುಟ್ಟೇಗೌಡ ನೀಡಿದ್ದ ಹೇಳಿಕೆಯನ್ನೂ ತನಿಖಾಧಿಕಾರಿ ಅಲ್ಲಗಳೆದಿದ್ದರು.

ತನಿಖಾಧಿಕಾರಿ ಸಲ್ಲಿಸಿದ್ದ ಬಿ ವರದಿಯನ್ನು ಪ್ರಶ್ನಿಸಿದ್ದ ದೂರುದಾರರು, ನ್ಯಾಯಾಲಯಕ್ಕೆ ಪ್ರತಿಭಟನಾ ಮೆಮೊ ಸಲ್ಲಿಸಿದ್ದರು. ಈ ಕುರಿತು ವಿಚಾರಣೆ ನಡೆಸಿದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, ಬಿ ವರದಿಯನ್ನು ತಿರಸ್ಕರಿಸಿ ಡಿಸೆಂಬರ್ 13ರಂದು ಆದೇಶ ಹೊರಡಿಸಿದ್ದಾರೆ.

ಸಂಜ್ಞೇಯ ಅಪರಾಧ ಪ್ರಕರಣ

ಅಪರಾಧ ದಂಡ ಪ್ರಕ್ರಿಯಾ ಸಂಹಿತೆ(ಸಿಆರ್‌ಪಿಸಿ) ಸೆಕ್ಷನ್ 200ರ ಅಡಿಯಲ್ಲಿ ಆರೋಪಿಗಳ ವಿರುದ್ಧ ಸಂಜ್ಞೇಯ ಅಪರಾಧ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸಲು ನ್ಯಾಯಾಲಯ ತೀರ್ಮಾನಿಸಿದೆ.

ಮೂಡುಬಿದಿರೆಯಲ್ಲಿ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ: ರಾಜ್ಯಪಾಲರಿಂದ ಉದ್ಘಾಟನೆ

‘ವಿಶ್ವಶಾಂತಿ, ವಿಶ್ವಕಲ್ಯಾಣದತ್ತ ನಡೆಯೋಣ’

• ಉದಯ ಯು.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿ ಬುಧವಾರದಿಂದ ಆರಂಭಗೊಂಡ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಉದ್ಘಾಟನಾ ಸಮಾರಂಭದಲ್ಲಿ ಕಲಾ ತಂಡಗಳಿಂದ ಮೆರವಣಿಗೆ ನಡೆಯಿತು —ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್.

ಮೂಡುಬಿದಿರೆ: ರಾಜ್ಯ ಮತ್ತು ದೇಶದ ಬೇರೆಬೇರೆ ಭಾಗಗಳಿಂದ ಮಾತ್ರವಲ್ಲ, ವಿದೇಶಗಳಿಂದಲೂ ಬಂದಿರುವ ಐವತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮಂಗಳೂರಿನ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಕ್ಯಾಂಪಸ್ ಬುಧವಾರ ಎರಡೂ ಬಾಹುಗಳನ್ನು ಚಾಚಿ ಸ್ವಾಗತಿಸಿತು.

ಮುಂಜಾನೆಯಿಂದಲೇ ರಾಜ್ಯ, ರಾಷ್ಟ್ರದ ವಿವಿಧ ಭಾಗಗಳಿಂದ ಮೂಡುಬಿದಿರೆಗೆ ಬಂದಿಳಿದ ವಿದ್ಯಾರ್ಥಿಗಳು, ವಿದ್ಯಾಗಿರಿಯಲ್ಲಿರುವ ಆಳ್ವಾಸ್ ಆವರಣ ಪ್ರವೇಶಿಸುತ್ತಿದ್ದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಹಾರ ಮೇಳ, ಕೃಷಿ ಪ್ರದರ್ಶನಗಳು ಅವರನ್ನು ಸ್ವಾಗತಿಸಿದವು.

ಇದೇ ಮೊದಲಬಾರಿಗೆ ನಡೆಯುತ್ತಿರುವ ಸ್ಕೌಟ್ಸ್-ಗೈಡ್ಸ್‌ನ ‘ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ–22’ಕ್ಕೆ ಬುಧವಾರ ಚಾಲನೆ ನೀಡಲಾಯಿತು. ಡಿ. 27ರವರೆಗೆ ಜಾಂಬೂರಿ ನಡೆಯಲಿದೆ.

25 ಎಕರೆಗೂ ವಿಸ್ತಾರದ ಪ್ರದೇಶದಲ್ಲಿ ಆಯೋಜಿಸಿದ್ದ ವಿವಿಧ ಪ್ರದರ್ಶನಗಳು, ಐದು ವೇದಿಕೆಗಳಲ್ಲಿ ಬೆಳಿಗ್ಗೆ 10 ಗಂಟೆಗೆ ಆರಂಭವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದಿನವಿಡೀ ಕಾಲ್ನಡಿಗೆಯಲ್ಲೇ ಓಡಾಡಿ ವೀಕ್ಷಿಸಿ ಸುಸ್ತಾಗಿದ್ದ ವಿದ್ಯಾರ್ಥಿಗಳು, ಸಂಜೆ ಸೂರ್ಯ ಮುಳುಗುವ ಹೊತ್ತಿಗೆ ಶ್ರೀಮತಿ ವನಜಾಕ್ಷಿ ಕೆ. ಶ್ರೀಪತಿ ಭಟ್ ವೇದಿಕೆಯ ಮುಂದೆ ಶಿಸ್ತುಬದ್ಧವಾಗಿ ಕುಳಿತು ಉದ್ಘಾಟನಾ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಭವ್ಯ ವೇದಿಕೆಯ ಮೇಲೆ ಜಾಂಬೂರಿಗೆ ಚಾಲನೆ ನೀಡಿದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ‘ಭಾರತದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಯುವ ಜನರನ್ನು ಗುರಿಯಾಗಿಟ್ಟುಕೊಂಡು ಅನೇಕ ಯೋಜನೆಗಳನ್ನು ರೂಪಿಸುತ್ತಿದೆ. ಮುಂದಿನ 25 ವರ್ಷಗಳ ಕಾಲ ನಾವು ಹೊಸ ಹಾದಿಯಲ್ಲಿ ನಡೆದು, ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆಗೆ ಅಭಿವೃದ್ಧಿಹೊಂದಿದ ರಾಷ್ಟ್ರ ಎನಿಸಬೇಕು. ವಿಶ್ವಶಾಂತಿ, ವಿಶ್ವಕಲ್ಯಾಣದ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕು’ ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ‘ಸ್ವಾತಂತ್ರ್ಯ ನಂತರ, ಇತ್ತೀಚಿನವರೆಗೂ ನಾವು ಕೀಳರಿಮೆಯ ಭಾವನೆಯಲ್ಲೇ ಇದ್ದೆವು. ಈಗ ಅದರಿಂದ ಹೊರಬರುತ್ತಿದ್ದೇವೆ. ಯುವ ಸಮುದಾಯದಲ್ಲಿ ಆತ್ಮವಿಶ್ವಾಸ ಹೆಚ್ಚುತ್ತಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ನಾವು ಕೀಳರಿಮೆಯಿಂದ ಸಂಪೂರ್ಣವಾಗಿ ಹೊರಬರಲಿದ್ದೇವೆ ಎಂಬ ವಿಶ್ವಾಸವಿದೆ’ ಎಂದರು.

ಸ್ಕೌಟ್ಸ್-ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ರಾಷ್ಟ್ರೀಯ ಆಯುಕ್ತ ಕೃಷ್ಣಕುಮಾರ್ ಕಾಂಡೇಲ್ವಾಲ್, ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕ ಉಮಾನಾಥ ಕೋಟ್ಯಾನ್, ಹೆಚ್ಚುವರಿ ಮುಖ್ಯ ಆಯುಕ್ತ ಖಾಲೀದ್ ಹಾಗೂ ಇತರರು ಇದ್ದರು.

ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಮುಖ್ಯ ಆಯುಕ್ತ ಮೋಹನ್ ಆಳ್ವ ವಂದಿಸಿದರು.

ಅಂಬೇಡ್ಕರ್ ನಿಗಮ: ₹ 25 ಕೋಟಿ ಅಕ್ರಮ

ಒಂದನೇ ಪುಟದಿಂದ...

ಗಂಗಾ ಕಲ್ಯಾಣ ಸೇರಿದಂತೆ ನಿಗಮ ದಡಿ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯಲ್ಲಿ ಅಕ್ರಮ, ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೇಲ್ವಿಚಾರಣೆ, ಬಲವರ್ಧನೆ ಸಮಿತಿಯು ಮುಖ್ಯ ಕಾರ್ಯದರ್ಶಿ, ಮುಖ್ಯಮಂತ್ರಿಗೆ ದೂರುಗಳನ್ನು ನೀಡಿತ್ತು. ಒಂದೂವರೆ ತಿಂಗಳಷ್ಟೆ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ನಿಭಾಯಿಸಿದ್ದ ಸುರೇಶ ನಾಯಕ ಅವರು ತಮ್ಮ ವರದಿಯಲ್ಲಿ ದಾಖಲೆಗಳ ಸಹಿತ ಅಕ್ರಮವನ್ನು ಬಹಿರಂಗಪಡಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ನಿಗಮ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ಕುಮಾರ್ ಅವರಿಗೆ ಕರೆ, ಸಂದೇಶ ಕಳುಹಿಸಿದರೂ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಶಾಸಕರ ಗಮನಕ್ಕೆ ತರದೇ ಫಲಾನುಭವಿ ಆಯ್ಕೆ

ಐರಾವತ ಯೋಜನೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅರ್ಜಿದಾರರ ಜ್ಯೇಷ್ಠತೆ, ಶಿಕ್ಷಣ, ಚಾಲನಾ ಪರವಾನಗಿ ಆಧರಿಸಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡಲಾಗುತ್ತದೆ. ಆದರೆ, ಅರ್ಜಿಯನ್ನೇ ಸಲ್ಲಿಸದವರನ್ನು ಆಯ್ಕೆ ಮಾಡಲಾಗಿದೆ. ಜಿಲ್ಲೆಗಳಲ್ಲಿ ಶಾಸಕರ ಅಧ್ಯಕ್ಷತೆಯ ಸಮಿತಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಬೇಕು. ವಿವಿಧ ಕಾರಣಗಳಿಗೆ ಆಯಾ ವರ್ಷಗಳಲ್ಲಿ ಅನುಷ್ಠಾನವಾಗದೆ ಬಾಕಿ ಇರುವ ಮೊತ್ತದ ವಿಷಯವನ್ನು ಆಯಾ ಶಾಸಕರ ಸಮಿತಿ ಮುಂದೆ ಮಂಡಿಸಿ, ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಆದರೆ, ನಿಗಮದ ಕೇಂದ್ರ ಕಚೇರಿಯಿಂದಲೇ ಫಲಾನುಭವಿಗಳನ್ನು ನೇರವಾಗಿ ಆಯ್ಕೆ ಮಾಡಲಾಗಿದೆ. ಆ ಮೂಲಕ, ಸರ್ಕಾರದ ಆದೇಶ ಮತ್ತು ನಿಯಮಗಳನ್ನು ಉಲ್ಲಂಘಿಸಿರುವುದು ತನಿಖೆಯಿಂದ ಬಹಿರಂಗವಾಗಿದೆ.

ಅಕ್ರಮದ ಒಳಸುಳಿ

- ಸ್ವಯಂ ಉದ್ಯೋಗಕ್ಕಾಗಿ ನೇರ ಸಾಲ ಯೋಜನೆಗೆ ಐದು ಸಾವಿರ ಫಲಾನುಭವಿಗಳ ಪೈಕಿ, ಶಾಸಕರ ಅಧ್ಯಕ್ಷತೆಯ ಸಮಿತಿ ಶೇ 80ರಷ್ಟು, ಸರ್ಕಾರದ ಸಾಂಸ್ಥಿಕ ಕೋಟಾದಡಿ ಸಮಾಜ ಕಲ್ಯಾಣ ಮತ್ತು ಹಿಂದುಳಿದ ಕಲ್ಯಾಣ ಸಚಿವರು ಶೇ 15ರಷ್ಟು ಮತ್ತು ನಿಗಮದ ನಿರ್ದೇಶಕ ಮಂಡಳಿ ಶೇ 5ರಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಆದರೆ, ವ್ಯವಸ್ಥಾಪಕ ನಿರ್ದೇಶಕರೇ ಎಲ್ಲ ಫಲಾನುಭವಿಗಳನ್ನು ಆಯ್ಕೆ ಮಾಡಿ ಸಾಲ ಮಂಜೂರು ಮಾಡಿದ್ದಾರೆ. ಬಹುತೇಕ ಫಲಾನುಭವಿಗಳನ್ನು ನಿಗಮದ ಅಧ್ಯಕ್ಷರ ಟಿಪ್ಪಣಿ ಆಧರಿಸಿ ಮಂಜೂರು ಮಾಡಲಾಗಿದೆ. ಯೋಜನೆಗೆ ₹ 25 ಕೋಟಿಯನ್ನು ಬಳಸಿಕೊಳ್ಳುವ ಬಗ್ಗೆ ಸರ್ಕಾರದ ಆದೇಶವೂ ಇಲ್ಲ. ಕ್ರಿಯಾಯೋಜನೆಗೆ ಅನುಮೋದನೆಯನ್ನೂ ಪಡೆದಿಲ್ಲ. ನಿಗಮದ ನಿರ್ದೇಶಕ ಮಂಡಳಿಯ ಸಭೆಯ ನಿರ್ಣಯ ಆಧರಿಸಿ ಹಣ ವೆಚ್ಚ ಮಾಡಿರುವುದು ಗೊತ್ತಾಗಿದೆ.
- ಐರಾವತ ಮತ್ತು ಸಮೃದ್ಧಿ ಯೋಜನೆಯಲ್ಲಿ ಯಾವುದೇ ಗುರಿ ಇಲ್ಲದಿದ್ದರೂ 72 ಫಲಾನುಭವಿಗಳನ್ನು ನೇರವಾಗಿ ಆಯ್ಕೆ ಮಾಡಿ ಮಂಜೂರಾತಿ ನೀಡಲಾಗಿದೆ. ಐರಾವತ ಯೋಜನೆಯಲ್ಲಿ ಸರ್ಕಾರದ ಆದೇಶದಂತೆ ಮೆರಿಟ್ ಆಧಾರದಲ್ಲಿ ಆಯ್ಕೆಯಾಗಿದ್ದ 92 ಫಲಾನುಭವಿಗಳ ಮಂಜೂರಾತಿ ರದ್ದುಪಡಿಸಿ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸದಿದ್ದರೂ ನೇರವಾಗಿ ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯ ಕಾರ್ಯನಿರ್ವಹಿಸಿರುವ ಅಧಿಕಾರಿ ಮತ್ತು ನೌಕರರು ಅಕ್ರಮ ತನಿಖೆಗೆ ಅಸಹಕಾರ ತೋರಿಸಿದ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.
- ಗಂಗಾ ಕಲ್ಯಾಣ ಯೋಜನೆಯಲ್ಲಿ ಪಂಪ್‌ಸೆಟ್ ಪೂರೈಕೆದಾರರಿಗೆ 2017ರ ವರ್ಷದ ವ್ಯಾಟ್ ಮತ್ತು ಜಿಎಸ್‌ಟಿ ವ್ಯತ್ಯಾಸದ ತೆರಿಗೆ ಹಣ ₹ 3 ಕೋಟಿಯನ್ನು ಪಾವತಿಗೆ ಸಂಬಂಧಿಸಿದಂತೆ ನ್ಯಾಯಾಲಯ ಆದೇಶ ನೀಡದಿದ್ದರೂ, ಆದೇಶ ನೀಡಿದೆ ಎಂದು ಪಾವತಿಸಲಾಗಿದೆ. ಈ ಹಣ ಪಾವತಿಗೆ ಸಂಬಂಧಿಸಿದಂತೆ ನಿಗಮದ ನಿರ್ದೇಶಕ ಮಂಡಳಿಯಲ್ಲಿ ಚರ್ಚೆ ನಡೆದಿದ್ದು, ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರ ಅಭಿಪ್ರಾಯ ಪಡೆಯಲು ನಿರ್ಣಯಿಸಲಾಗಿತ್ತು. ಆದರೆ, ಆಯುಕ್ತರು ಅಭಿಪ್ರಾಯ ನೀಡಲು ಒಪ್ಪಿಲ್ಲ. ಆದರೂ ವಿಷಯವನ್ನು ಮಂಡಳಿಯ ಸಭೆಯಲ್ಲಿ ಮಂಡಿಸದೆ, ತೆರಿಗೆ ಕನ್ಸಲ್ಟೆಂಟ್ ಅಭಿಪ್ರಾಯ ಪಡೆದು, ಟೆಂಡರ್ ಷರತ್ತು ಮತ್ತು ನ್ಯಾಯಾಲಯದ ಆದೇಶವನ್ನು ಸರಿಯಾಗಿ ಅರ್ಥೈಸದೆ ಪೂರೈಕೆದಾರರಿಗೆ ಹಣ ಪಾವತಿಸಲಾಗಿದೆ.

ಈ ವಿವರಗಳು ತನಿಖಾ ವರದಿಯಲ್ಲಿದೆ.

ಬೆಳಗಾವಿ ಸುವರ್ಣ ವಿಧಾನಸೌಧದ ಬಳಿ ಗುರುವಾರ ನಡೆಯಲಿರುವ ಲಿಂಗಾಯತ ಪಂಚಮಸಾಲಿ ಸಮಾವೇಶದಲ್ಲಿ ಪಾಲ್ಗೊಳ್ಳಲು, ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಗ್ರಾಮಸ್ಥರು ಬುಧವಾರ ರೊಟ್ಟಿ ಬುತ್ತಿ ಸಮೇತ ತೆರಳಿದರು —ಪ್ರಜಾವಾಣಿ ಚಿತ್ರ

‘ಬುತ್ತಿ ಸಮೇತ ಸುವರ್ಣಸೌಧಕ್ಕೆ ಮುತ್ತಿಗೆ’

ಒಂದನೇ ಪುಟದಿಂದ...

ಹರಿಹರದ ಮಾಜಿ ಶಾಸಕ ಶಿವಶಂಕರ ಅವರು 1,000 ಕ್ವಿಂಟಲ್ ಅಕ್ಕಿ ತರಿಸಿದ್ದಾರೆ. ಸಿ.ಸಿ. ಪಾಟೀಲ ಅವರು ಪದಾರ್ಥ ತರಿಸಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಜಿಲ್ಲಾ ಘಟಕದ ಅಧ್ಯಕ್ಷ ಆರ್.ಕೆ.ಪಾಟೀಲ ಎಲ್ಲರೂ ಸಿದ್ಧತೆ ಮಾಡಿದ್ದಾರೆ. ಸಮಾಜದ ಜನರು ಹಿಂಜರಿಯದೇ ಬನ್ನಿ’ ಎಂದು ಕರೆ ನೀಡಿದರು.

‘ಕನಿಷ್ಠ 20 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ವೇದಿಕೆಗೆ ರಾಣಿ ಚನ್ನಮ್ಮನ ಹೆಸರು, ಮಹಾದ್ವಾರಕ್ಕೆ ಬೆಳವಡಿ ಮಲ್ಲಮ್ಮನ ಹೆಸರು, ಪ್ರದೇಶಕ್ಕೆ ರಾವ್ ಬಹಾದ್ದೂರ ಅರಟಾಳ ರುದ್ರಗೌಡರ ಹೆಸರು ಇಡಲಾಗಿದೆ. ಲಿಂಗಾಯತ ಪಂಚಮಸಾಲಿ ಸಮಾಜದ ಐದೂ ಪಂಗಡಗಳ ಜನ ಸೇರುವ ಕಾರಣ ‘ವಿರಾಟ ಪಂಚಶಕ್ತಿ ಸಮಾವೇಶ’ ಎಂದು ಕರೆಯಲಾಗಿದೆ’ ಎಂದರು.

‘ಸಮಾವೇಶ ವಿಫಲಗೊಳಿಸುವ ಉದ್ದೇಶದಿಂದ ಆಯಾ ಜಿಲ್ಲೆಗಳ ಗಡಿಯಲ್ಲೇ ಜನರನ್ನು ತಡೆಯಲು ಚೆಕ್‌ಪೋಸ್ಟ್ ಹಾಕಲಾಗುತ್ತಿದೆ ಎಂಬ ಮಾಹಿತಿ ಬಂದಿದೆ. ನಾವು ಶಾಂತ ರೀತಿಯ ಹೋರಾಟ ಮಾಡುವವರು. ಯಾರನ್ನೂ ತಡೆಯಕೂಡದು’ ಎಂದು ಅವರು ಆಗ್ರಹಿಸಿದರು.

ಗಮಕ ಕಲಾವಿದ ಎಚ್.ಆರ್. ಕೇಶವಮೂರ್ತಿ ನಿಧನ

ಶಿವಮೊಗ್ಗ: ಗಮಕ ಕಲಾವಿದ ಎಚ್. ಆರ್. ಕೇಶವಮೂರ್ತಿ (88) ಅವರು ಬುಧವಾರ ಇಲ್ಲಿನ ಹೊಸಹಳ್ಳಿಯಲ್ಲಿ ನಿಧನರಾದರು.

ಅವರಿಗೆ ಪತ್ನಿ ರಾಜೇಶ್ವರಿ ಹಾಗೂ ಪುತ್ರಿ ಉಷಾ ಇದ್ದಾರೆ. ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. 1934ರ ಫೆ.22ರಂದು ಜನಿಸಿದ ಇವರು ಬಾಲ್ಯದಿಂದಲೇ ಗಮಕ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ತಂದೆ ಹೊಸಹಳ್ಳಿ ರಾಮಸ್ವಾಮಿ ಶಾಸ್ತ್ರಿ ಮತ್ತು ತಾಯಿ ಲಕ್ಷ್ಮೀದೇವಮ್ಮ ಅವರು ರಾಗವಾಗಿ ಹಾಡುತ್ತಿದ್ದ ಪುರಾಣದ ಕಥನಗಳಿಂದ ಉತ್ತೇಜಿತರಾಗಿ, 16ನೇ ವಯಸ್ಸಿನಿಂದ ಗ್ರಾಮದ ವೆಂಕಟೇಶಯ್ಯ ಅವರ ಬಳಿ ಗಮಕ ವಾಚನ ಅಧ್ಯಯನ ಆರಂಭಿಸಿದ್ದರು. ರಾಮಾಯಣ, ಮಹಾಭಾರತ, ಕನ್ನಡ ಹಾಗೂ ಸಂಸ್ಕೃತದ ಕಾವ್ಯಗಳನ್ನು ಹಲವು ರಾಗಗಳಲ್ಲಿ ವಾಚನ ಮಾಡುವುದನ್ನು ರೂಢಿಸಿಕೊಂಡಿದ್ದರು. 100ಕ್ಕೂ ಹೆಚ್ಚು ಶೈಲಿಯಲ್ಲಿ ವಾಚನ ಮಾಡುವ ಮೂಲಕ ‘ಶತರಾಗಿ’ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

‘ಶಾಂತಲ ನಾಟ್ಯಶ್ರೀ’ ಪ್ರಶಸ್ತಿ, ‘ಕುಮಾರವ್ಯಾಸ’ ಪ್ರಶಸ್ತಿ ಪುರಸ್ಕೃತರಾದ ಅವರು 2022ರಲ್ಲಿ ‘ಪದ್ಮಶ್ರೀ’ ಪ್ರಶಸ್ತಿಗೆ ಭಾಜನರಾಗಿದ್ದರು.

ಮೀಸಲಾತಿ ಅಧ್ಯಯನ ವರದಿ ಪೂರ್ಣವಾಗಿಲ್ಲ: ಜಯಪ್ರಕಾಶ್ ಹೆಗ್ಡೆ

ಒಂದನೇ ಪುಟದಿಂದ...

ಬೆಂಗಳೂರಿನಲ್ಲಿ ಬುಧವಾರ ಸುದ್ದಿಗಾರರ ಜತೆ ಅವರು, ‘ಸದಸ್ಯರೊಬ್ಬರ ಆರೋಗ್ಯ ಸಮಸ್ಯೆಯ ಕಾರಣ ಮಧ್ಯಂತರ ವರದಿಯ ಬಗ್ಗೆ ಚರ್ಚಿಸಲು ಬುಧವಾರ ಕರೆಯಲಾಗಿದ್ದ ಸಭೆ ಮುಂದೂಡಲಾಗಿದೆ. ಸರ್ಕಾರ ಕೇಳಿದರೆ ಇದುವರೆಗಿನ ಅಧ್ಯಯನದ ವಿವರ ನೀಡಲಾಗುವುದು. ಅಂತಿಮ ವರದಿ ಸಿದ್ಧಪಡಿಸಲು ಇನ್ನಷ್ಟು ಸಮಯ ಬೇಕಿದೆ. ಪೂರ್ಣ ವರದಿ ಯಾವಾಗ ಕೊಡಬಹುದು ಎಂಬ ಮಾಹಿತಿ ಖಚಿತಪಡಿಸಲು ಸಾಧ್ಯವಿಲ್ಲ. ಸಾಕಷ್ಟು ಸಮಯ ಬೇಕಾಗುತ್ತದೆ’ ಎಂದು ಪ್ರತಿಕ್ರಿಯಿಸಿದರು.

‘ಮೀಸಲಾತಿ ಬಗ್ಗೆ ಸರ್ಕಾರ ಅಧಿವೇಶನದಲ್ಲಿ ಉತ್ತರಿಸಲಿದೆ. ಸರ್ಕಾರದ ಪರವಾಗಿ ಆಯೋಗ ಪ್ರತಿಕ್ರಿಯಿಸಲು ಸಾಧ್ಯವಿಲ್ಲ. ಸರ್ಕಾರಕ್ಕೆ ಮಾಹಿತಿ, ವರದಿ ನೀಡುವುದು ಆಯೋಗದ ಕೆಲಸ ಅಷ್ಟೆ’ ಎಂದು ಹೇಳಿದರು.

ಹರಜಾತ್ರೆಯಲ್ಲಿ ‘ಮೀಸಲಾತಿ ಜನಜಾಗೃತಿ ಸಮಾವೇಶ’

ಹರಿಹರ: ‘ಜನವರಿ 14, 15ರಂದು ಇಲ್ಲಿ ನಡೆಯುವ ಹರಜಾತ್ರೆಯಲ್ಲಿ ‘ಮೀಸಲಾತಿ ಜನಜಾಗೃತಿ ಸಮಾವೇಶ’ ಹಮ್ಮಿಕೊಳ್ಳಲು ತಿರ್ಮಾನಿಸಲಾಗಿದೆ’ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಮಠಾಧೀಶ ವಚನಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಮಠದಲ್ಲಿ ನಡೆದ ಸಮಾಜದ ಹಾಗೂ ಗುರುಪೀಠದ ಪ್ರಮುಖರ ಸಭೆಯಲ್ಲಿ ಈ ಬಾರಿಯೂ ಪ್ರತಿ ವರ್ಷದಂತೆ ಹರಜಾತ್ರೆ ನಡೆಸುವ ಕುರಿತು ಚರ್ಚಿಸಲಾಯಿತು.

‘ಈ ಬಾರಿಯ ಹರಜಾತ್ರೆಯಲ್ಲಿ ಅಖಂಡ ವೀರಶೈವ ಲಿಂಗಾಯತರಿಗೆ ಕೇಂದ್ರದ ಇತರೆ ಹಿಂದುಳಿದ ವರ್ಗ (ಒಬಿಸಿ) ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಸಮಾವೇಶವನ್ನು ಆಯೋಜಿಸಲು ಒಮ್ಮತದಿಂದ ತೀರ್ಮಾನಿಸಲಾಗಿದೆ ಎಂದು ಸ್ವಾಮೀಜಿ ಹೇಳಿದ್ದಾರೆ.

‘ಭಾರತದ ವಿರುದ್ಧ ಬೊಗಳುತ್ತದೆ ಇಟಲಿ ಕಾಂಗ್ರೆಸ್‌ನ ನಾಯಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸದ್ಯ ಇಟಲಿ ಕಾಂಗ್ರೆಸ್ ಸಾಕಿರುವ ನಾಯಿ ಭಾರತದ ಪರವಾಗಿ ಒಮ್ಮೆಯೂ ಬೊಗಳಿಲ್ಲ, ಒಮ್ಮೆಯೂ ಬಾಲ ಅಲ್ಲಾಡಿಸಿಲ್ಲ. ಅದು ಚೀನಾದ ಪರವಾಗಿ, ಪಾಕಿಸ್ತಾನದ ಪರವಾಗಿ ಬಾಲ ಅಲ್ಲಾಡಿಸುತ್ತದೆ, ಬೊಗಳುತ್ತದೆ. ಮಲ್ಲಿಕಾರ್ಜುನ ಖರ್ಗೆ ಅವರೇ ಇಟಲಿ ಕಾಂಗ್ರೆಸ್‌ನ ನಾಯಿ ಪರವಾಗಿ ನಿಮ್ಮಂಥವರು ವಕಾಲತು ವಹಿಸುತ್ತಿದ್ದೀರಿ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕಿಡಿ ಕಾರಿದರು.

ಬಿಜೆಪಿಯ ಒಂದು ನಾಯಿಯೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ ಹೇಳಿಕೆಗೆ, ನಗರದಲ್ಲಿ ಬುಧವಾರ ಖಾರವಾಗಿ ಪ್ರತಿಕ್ರಿಯಿಸಿದ ಸಿ.ಟಿ.ರವಿ, ‘ಈಗ ಇರುವುದು ಮಹಾತ್ಮ ಗಾಂಧಿ ಅವರ ಕಾಂಗ್ರೆಸ್ ಅಲ್ಲ. ಇಟಲಿ ಕಾಂಗ್ರೆಸ್. ಈ ಇಟಲಿ ಕಾಂಗ್ರೆಸ್ ಸಾಕಿದ ನಾಯಿಗೆ ದೇಶದ ಬಗ್ಗೆ ಏನೂ ಗೊತ್ತಿಲ್ಲ. ಅದು ಚೀನಾ- ಪಾಕಿಸ್ತಾನದ ಎಂಜಲು ತಿಂದಿದೆ. ಹಾಗಾಗಿ, ಭಾರತದ ವಿರುದ್ಧ ಬೊಗಳುತ್ತದೆ. ನಮ್ಮ ಸೈನಿಕರ ಸರ್ಜಿಕಲ್ ಸ್ಟ್ರೈಕ್ ವಿರುದ್ಧ ಬೊಗಳುತ್ತದೆ. ತವಾಂಗ್‌ನಲ್ಲಿ ಚೀನಾ ಸೈನಿಕರು ದಾಳಿ ಮಾಡಿದಾಗ ಆ ನಾಯಿ ಭಾರತದ ಸೈನಿಕರ ವಿರುದ್ಧ ಬೊಗಳುತ್ತದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನೀವು ನಾಯಿ ಎಂದು ಸಂಬೋಧಿಸುತ್ತಿರುವುದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರ ಬಗ್ಗೆಯೇ’ ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಹಾಗೆಲ್ಲ ಅರ್ಥ ಮಾಡಿಕೊಳ್ಳಬೇಡಿ. ನನ್ನ ಮಾತು ಅವರವರ ಭಾವಕ್ಕೆ ಬಿಟ್ಟದ್ದು’ ಎಂದರು.

ರೇಷ್ಮೆ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ನಂ. 1ನೇ ವಿಭಾಗ, ರೇಷ್ಮೆ ಇಲಾಖೆ
ನಂ. 14, ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು–560 021.

ಸಂಖ್ಯೆ: ರೇಇ/ತಾಂಸ/ಸಅ.1/ಸರ್ವೀಸ್ ಟೆಂಡರ್–1/551/2022–23 ದಿನಾಂಕ:21.12.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ರೇಷ್ಮೆ ಇಲಾಖೆ, ಇವರು ಈ ಕೆಳಕಂಡ ಕಾಮಗಾರಿಗೆ ಸಂಬಂಧಿಸಿದಂತೆ ರೇಷ್ಮೆ ಕೃಷಿ ಇಲಾಖೆಯು ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ (QCBS) ವಿವರಗಳ ಆಧಾರದ ಮೇಲೆ ಈ ಕೆಳಗಿನ ಸೇವೆಗಳಿಗೆ ಹೆಸರಾಂತ ಸಲಹೆಗಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತದೆ

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಯೋಜನಾ ಮೊತ್ತ (ರೂ. ಕೋಟಿಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಅವಧಿ
1	2	3	4	5
ಪಿ.ಎಂ.ಸಿ -1	ಯೋಜನಾ ವ್ಯವಸ್ಥಾಪನೆ, ಕಾಮಗಾರಿ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣ ಕಾಮಗಾರಿಗಳಿಗೆ ಸಲಹಾ ಸೇವೆಗಳು.			
1	ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿರುವ ಸರ್ಕಾರಿ ರೇಷ್ಮೆ ಕೃಷಿ ತರಬೇತಿ ಸಂಸ್ಥೆಯ ಆವರಣದಲ್ಲಿ ಹೈಟೆಕ್ ಕಕೂನ್ ಮಾರುಕಟ್ಟೆ (ಹಂತ–1) ನಿರ್ಮಾಣ.	75.00	1,21,000/-	18 ತಿಂಗಳು (ಮಳೆಗಾಲ ಸೇರಿದಂತೆ)
2	ಚಿಕ್ಕಬಳ್ಳಾಪುರದ ಸರ್ಕಾರಿ ಕಕೂನ್ ಮಾರುಕಟ್ಟೆ ಆವರಣದಲ್ಲಿ ರೇಷ್ಮೆ ಕೃಷಿ ತರಬೇತಿ ಕೇಂದ್ರ ಮತ್ತು ಕಚೇರಿ ಕಟ್ಟಡ ನಿರ್ಮಾಣ.	4.90		11 ತಿಂಗಳು (ಮಳೆಗಾಲ ಸೇರಿದಂತೆ)

1) ಆಸಕ್ತ ಅರ್ಜಿದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಸಂಪೂರ್ಣ ಪ್ರಸ್ತಾವನೆ ದಾಖಲೆಯನ್ನು ವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಬಹುದು 2) ತಾಂತ್ರಿಕ ಪ್ರಸ್ತಾವನೆ, ಇಎಂಡಿ ಮತ್ತು ಹಣಕಾಸು ಬಿಡ್‌ಗಳನ್ನು RFQ ಡಾಕ್ಯುಮೆಂಟ್‌ನಲ್ಲಿನ ಸೂಚನೆಗಳ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. 3) ಪೂರ್ವಭಾವಿ ಸಭೆಯು **27.12.2022ರಂದು 15:30 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನಿಯರ್, ನಂ.1 ವಿಭಾಗ DOS, ಬೆಂಗಳೂರು. ಯಾವುದಾದರೂ ಪೂರ್ವ ಬಿಡ್ ಪ್ರಶ್ನೆಗಳು ಇದ್ದಲ್ಲಿ **27.12.2022 ರಂದು 11.00 ಗಂಟೆಗೆ** ಅಥವಾ ಅದಕ್ಕೂ ಮೊದಲು ಇ–ಪೋರ್ಟಲ್/ಇ–ಮೇಲ್ ಮೂಲಕ ಸಲ್ಲಿಸಬೇಕು: 4) ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **03.01.2023 ಅಥವಾ ಮೊದಲು 17:30 ಗಂಟೆಯವರೆಗೆ** ಸಲ್ಲಿಸಬೇಕು. 5) ತಾಂತ್ರಿಕ ಬಿಡ್‌ಗಳನ್ನು **05.01.2023 ರಂದು 11:30 ಗಂಟೆಗೆ** ತೆರೆಯಲಾಗುತ್ತದೆ. 6) ಯಾವುದೇ ಕಾರಣವನ್ನು ನೀಡದೇ ಯಾವುದೇ ಬಿಡ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ. 7) ಬಿಡ್ ಡಾಕ್ಯುಮೆಂಟ್‌ಗಳಿಗೆ ಸಂಬಂಧಿಸಿದ ಯಾವುದೇ ಅನುಬಂಧಗಳು / ಸ್ಪಷ್ಟೀಕರಣಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ / ಅಪ್‌ಲೋಡ್ ಮಾಡಲಾಗುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ವಾಪ್ರ/ಜಿಎ/3652/2022–23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಂಗಳೂರು ಜಲಮಂಡಳಿಯು, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರವರ ಕಛೇರಿ (ವಿನ್ಯಾಸ ಮತ್ತು ಗುಅ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ಆರ್‌ಬಿ–ಐಟಿ	ಬೆಂಜಮಂ/ಇಆರ್‌ಬಿ/495/2022–23 ದಿನಾಂಕ: 19–12–2022	- / ರೂ.85,050/-	07-01-2023 ಸಂಜೆ 5.00 ಗಂಟೆಯವರೆಗೆ	09-01-2023 ಬೆಳಗ್ಗೆ 11.00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆರ್‌ಬಿ–ಐಟಿ)

ಮುಖ್ಯ ಅಭಿಯಂತರರವರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
2.	ಉತ್ತರ ಪಶ್ಚಿಮ–2	ಬೆಂಜಮಂ/ಕಾನಿಅಉಪ–2/ತಾಂಅ/ಪಿಬಿ/1867/2022–23 ದಿನಾಂಕ: 19–12–2022 (2ನೇ ಕರೆ)	ರೂ.8,39,445/- / ರೂ.21,000/-	31-12-2022 ಸಂಜೆ 4.00 ಗಂಟೆಯವರೆಗೆ	02-01-2023 ಬೆಳಗ್ಗೆ 10.30 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪಶ್ಚಿಮ)–2

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/AAPL/RO3651/22-23

ರೇಷ್ಮೆ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ನಂ. 1ನೇ ವಿಭಾಗ, ರೇಷ್ಮೆ ಇಲಾಖೆ
ನಂ. 14, ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು–560 021.

ಸಂಖ್ಯೆ: ರೇಇ/ಕಾಅ.1/ತಾಂಸ/ಸಅ.1/ಹರಾಜು ಟೆಂಡರ್–1/552/2022–23 ದಿನಾಂಕ:21.12.2022

ಹರಾಜು ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ರೇಷ್ಮೆ ಇಲಾಖೆ, ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿರುವ ರೇಷ್ಮೆ ತರಬೇತಿ ಸಂಸ್ಥೆಯ ಆವರಣದಲ್ಲಿ ಹೈ–ಟೆಕ್ ಮಾರುಕಟ್ಟೆ ನಿರ್ಮಾಣ ಮಾಡುವ ಆವರಣದಲ್ಲಿ ಹಳೆಯ ಕಟ್ಟಡಗಳನ್ನು ಕೆಡವಿ ಲಭ್ಯವಿರುವ ಉಪಯುಕ್ತ ಸಾಮಗ್ರಿಗಳನ್ನು ಪಡೆದುಕೊಂಡು ಉಳಿಕೆ ಅನುಪಯುಕ್ತ ಸಾಮಗ್ರಿಗಳನ್ನು ಸ್ಥಳದಿಂದ ತೆರವುಗೊಳಿಸಿ ಸಮತಟ್ಟು ಮಾಡಿಕೊಡುವುದಕ್ಕೆ ಆಸಕ್ತ ಬಿಡ್ಡುದಾರರಿಂದ ಟೆಂಡರ್ ಕಂ ಬಹಿರಂಗ ಹರಾಜನ್ನು ಆಹ್ವಾನಿಸಲಾಗಿದೆ.

ಇ.ಎಂ.ಡಿ ಮೊತ್ತ: ರೂ. **11,4800/–**ಗಳು.

1) ಬಿಡ್ಡುದಾರರು ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 31.12.2022.** 2) ಈ ಕಛೇರಿಯಿಂದ ಖಾಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ನೀಡಲು ಕೊನೆಯ **ದಿನಾಂಕ: 02.01.2023.** 3) ಮೊಹರಾದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 06.01.2023 ಸಂಜೆ 4:00 ಗಂಟೆಯವರೆಗೆ.** 4) ಬಹಿರಂಗ ಹರಾಜಿನ **ದಿನಾಂಕ: 09.01.2023 ರಂದು ಮಧ್ಯಾಹ್ನ 12:00 ಗಂಟೆಗೆ** ಸ್ಥಳ: **ಚನ್ನಪಟ್ಟಣದಲ್ಲಿರುವ ರೇಷ್ಮೆ ತರಬೇತಿ ಸಂಸ್ಥೆರವರ ಕಛೇರಿ, ಚನ್ನಪಟ್ಟಣ.** 5) ಬಹಿರಂಗ ಹರಾಜಿನ ನಂತರ ಟೆಂಡರ್‌ಗಳನ್ನು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1ನೇ ಉಪ–ವಿಭಾಗ, ನಂ.14, ರೇಷ್ಮೆ ಭವನ, ರೇಷ್ಮೆ ಇಲಾಖೆ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರ, ಬೆಂಗಳೂರು–560021. ಈ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ವಾಪ್ರ/ಜಿಎ/3655/2022–23

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು – 570 010

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು–570 010
ಇಮೇಲ್: zoomysuru@gmail.com ವೆಬ್‌ಸೈಟ್: www.mysuruzoo.org

ಸಂಖ್ಯೆ:ಎಂವೈಜೆಡ್/ಆಹಾರಸಾಮಗ್ರಿ/2022–23 ದಿನಾಂಕ:20.12.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (3ನೇ ಕರೆ)

ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ಪ್ರಸಕ್ತ ಚಾಲ್ತಿಯಲ್ಲಿರುವ ಟೆಂಡರ್ ಅವಧಿಯು ಮುಕ್ತಾಯವಾದ ನಂತರದ ದಿನಗಳಿಗೆ (12 ತಿಂಗಳು) ಈ ಕೆಳಕಂಡ ಘಟಕವಾರು ಆಹಾರ/ಸಂಕೀರ್ಣ ಪದಾರ್ಥಗಳನ್ನು ಸರಬರಾಜು ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿಗಳ ಪ್ರಕಾರ ಈ ಮೃಗಾಲಯದಲ್ಲಿ ನೋಂದಾಯಿಸಿರುವ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ–ಪೋರ್ಟಲ್ (https://eproc.karnataka.gov.in(Dept.selection: Zoo Authority) ಮೂಲಕ ಘಟಕವಾರು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಘಟಕ ಸಂಖ್ಯೆ	ವಿವರ	ವಾರ್ಷಿಕ ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಇ.ಎಂ.ಡಿ ಲಕ್ಷ ರೂ. 10%ಜಿ.ಸಿ.ನಿರ್ಣಯ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಎಮ್ಮೆಯ ಶುದ್ಧವಾದ ಮಾಂಸ, ಲಿವರ್, ಹೃದಯ 3 ಐಟಂಗಳು/(ವಾರ್ಷಿಕ ಟೆಂಡರ್)	214.00	21.40	27.12.2022 ರಂದು ಸಂಜೆ 16.00 ಗಂಟೆಗೆ	ತಾಂತ್ರಿಕ ಟೆಂಡರ್ 28.12.2022ರಂದು ಸಂಜೆ 16.00 ಗಂಟೆಗೆ ಮತ್ತು ಆರ್ಥಿಕ ಟೆಂಡರ್ ದಿ:29.12.2022ರಂದು ಸಂಜೆ 17.00 ನಂತರ.
2.	ಜೀವ ಇಲ್ಲದ ತಾಜಾ ಮೀನು/ಸಿಗಡಿ/Dressed Skinless Chicken 5 ಐಟಂ(ವಾರ್ಷಿಕ ಟೆಂಡರ್)	53.00	5.30	27.12.2022 ರಂದು ಸಂಜೆ 16.00 ಗಂಟೆಗೆ	ತಾಂತ್ರಿಕ ಟೆಂಡರ್ 28.12.2022ರಂದು ಸಂಜೆ 16.00 ಗಂಟೆಗೆ ಮತ್ತು ಆರ್ಥಿಕ ಟೆಂಡರ್ ದಿ:29.12.2022ರಂದು ಸಂಜೆ 17.00 ನಂತರ.
3.	ಒಡಕೆ, ಹಸಿರು ಹುಲ್ಲು ಇತ್ಯಾದಿ 7 ಐಟಂಗಳು (ವಾರ್ಷಿಕ ಟೆಂಡರ್)	199.00	20.00	27.12.2022 ರಂದು ಸಂಜೆ 16.00 ಗಂಟೆಗೆ	ತಾಂತ್ರಿಕ ಟೆಂಡರ್ 28.12.2022ರಂದು ಸಂಜೆ 16.00 ಗಂಟೆಗೆ ಮತ್ತು ಆರ್ಥಿಕ ಟೆಂಡರ್ ದಿ:29.12.2022ರಂದು ಸಂಜೆ 17.00 ನಂತರ.
4.	ಸಂಕೀರ್ಣ ಸಾಮಗ್ರಿಗಳು 26 ಐಟಂ (ವಾರ್ಷಿಕ ಟೆಂಡರ್)	12.00	1.20	27.12.2022 ರಂದು ಸಂಜೆ 16.00 ಗಂಟೆಗೆ	ತಾಂತ್ರಿಕ ಟೆಂಡರ್ 28.12.2022ರಂದು ಸಂಜೆ 16.00 ಗಂಟೆಗೆ ಮತ್ತು ಆರ್ಥಿಕ ಟೆಂಡರ್ ದಿ:29.12.2022ರಂದು ಸಂಜೆ 17.00 ನಂತರ.

ಷರತ್ತುಗಳು: 1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ: 20.12.2022ರ** ನಂತರ. **2**. ಕರ್ನಾಟಕ ಮೃಗಾಲಯ ಪ್ರಾಧಿಕಾರ ನಿಯಮಾವಳಿಗಳಂತೆ ಇ–ಟೆಂಡರ್‌ನಲ್ಲಿ ಭಾಗವಹಿಸಲು ಈ ಮೃಗಾಲಯದಲ್ಲಿ ಕಡ್ಡಾಯವಾಗಿ ನೋಂದಾಯಿತರಾಗಿರಬೇಕು, ನೋಂದಣಿ ಮಾಡಲು ಕೊನೆಯ **ದಿನಾಂಕ 26.12.2022 ಸಂಜೆ 4.00 ಗಂಟೆವರೆಗೆ**. **3**. ಟೆಂಡರ್‌ದಾರರು **ದಿನಾಂಕ: 27.12.2022ರಂದು** ಯೂನಿಟ್–3ರ ಐಟಂಗಳ ಶಾಂಪಲ್‌ಗಳನ್ನು ಅಂದು ಮಧ್ಯಾಹ್ನ 12.00 ಗಂಟೆಗೆ ಸರಿಯಾಗಿ ವಲಯ ಅರಣ್ಯಾಧಿಕಾರಿಯವರು (ಪ್ರಾಣಿ ವಿಭಾಗ) ಕಾರ್ಯ ನಿರ್ವಾಹಕ ನಿರ್ದೇಶಕರ ಕಚೇರಿ ಇವರಿಗೆ ಸಲ್ಲಿಸುವುದು. **4**. ಆಡಳಿತಾತ್ಮಕ ಕಾರಣಗಳಿಂದ ಯಾವುದೇ ಟೆಂಡರುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕು ಹಾಗು ಷರತ್ತುಗಳನ್ನು ಸೇರಿಸುವ, ಪರಿಷ್ಕರಿಸುವ, ಕೈಬಿಡುವ ಅಧಿಕಾರ ಈ ಕೆಳಗೆ ಸಹಿ ಮಾಡಿರುವವರಿಗೆ ಇರುತ್ತದೆ. **5**. ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಹಾಕಿರುವ ಸವಿವರ ಪ್ರಕಟಣೆಯಿಂದ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು

DIPR/MYS/KAVITA/798/22-23

Office of the Director, Directorate of Economics and Statistics,

1st Gate, 7th Floor, M. S. Building, Dr. Ambedkar Veedhi, Bangalore - 560 001

No.DES/Stores/78/2022-23, Dated: 20.12.2022

SHORT TERM e-TENDER NOTIFICATION

e-TENDER DOCUMENT

PROVIDING MANPOWER SERVICES OF DATA COLLECTORS FOR NATIONAL BUILDING ORGANISATION WORK IN THE OFFICE OF THE DIRECTOR/ CHIEF REGISTRAR OF BIRTHS & DEATHS / ADDITIONAL DISTRICT REGISTRAR OF BIRTHS & DEATHS/DISTRICT STATISTICAL OFFICER THROUGH SKILLED MANPOWER UNDER E-PROCUREMENT SYSTEM.

SCHEDULE OF EVENTS:

Tender Reference Notification	No.DES/Stores/78/2022-23 Dt: 20.12.2022.
Commencement of download of e-tender forms from website http://eproc.karnataka.gov.in:	**22.12.2022.**
Last Date for Queries on or before: For queries contact Dr. V. Muniraju, Joint Director (Admin), Directorate of Economics and Statistics, 1st Gate, 7th Floor, M. S. Building, Dr. Ambedkar Veedhi, Bengaluru - 560001. Contact No.: 080-22353849:	**26.12.2022 at 5.30 p.m.**
Last date and time for uploading of tender documents on e-Procurement platform on or before:	**29.12.2022 at 5.30 p.m.**
Time and date of opening of Technical Bid:	**02.01.2023 at 11.30 a.m.**
Time and date of opening of Financial Bid:	**04.01.2023 at 11.30 a.m.**
Venue of opening of tenders and Address for communication:	**O/o Director, Directorate of Economics and Statistics, 1st Gate, 7th Floor, M. S. Building, Dr. B. R. Ambedkar Veedhi, Bengaluru-560 001. Phone No: 080-22353849, Fax No: 080-22353826. Website : www.des.kar.nic.in, e-mail : des-admin-ka@nic.in**
EMD Amount:	**Rs.2,12,500/-.**
APPROXIMATE PROJECT AMOUNT:	**Rs.85,00,000/-.**

Note: All communications regarding this “Tender” should carry the Tender Notification No. DES/Stores/78/2022-23, **Dated:** 20.12.2022.

Opening of Technical/Financial Bid: Financial bid of only those responsive tenderers of Technical bid will be opened on a date notified or on any further dates to be notified/ informed to the responsive bidders.

Sd/-
Director,
Directorate of Economics and Statistics

DIPR/CP/AAPL/RO3645/22-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಬೋಧನೆಯ ಮುಖ್ಯ ಉದ್ದೇಶವು ವಿವರಣೆ ನೀಡುವುದಲ್ಲ, ಮನಸ್ಸಿನ ಬಾಗಿಲುಗಳನ್ನು ತಟ್ಟುವುದು.

–ರವೀಂದ್ರನಾಥ ಟ್ಯಾಗೋರ್

ನ್ಯಾಯಾಂಗದ ವಿರುದ್ಧ ಟೀಕೆ ರಿಜಿಜು ಅವರಿಂದ ಸಲ್ಲದ ನಡೆ

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ಜಾರಿಯಲ್ಲಿ ಇರುವ ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಮತ್ತೆ ವಾಗ್ದಾಳಿ ನಡೆಸಿದ್ದಾರೆ. ನ್ಯಾಯಾಲಯಗಳಲ್ಲಿ ನ್ಯಾಯಮೂರ್ತಿಗಳ ಹುದ್ದೆಗಳು ಖಾಲಿ ಇರುವುದು ಹಾಗೂ ಸುಮಾರು ಐದು ಕೋಟಿ ಪ್ರಕರಣಗಳು ಬಾಕಿ ಇರುವುದಕ್ಕೆ ಸಂಬಂಧ ಕಲ್ಪಿಸಿ ರಿಜಿಜು ಅವರು ಮಾತನಾಡಿದ್ದಾರೆ. ನ್ಯಾಯಮೂರ್ತಿಗಳ ನೇಮಕಕ್ಕೆ ಹೊಸ ವ್ಯವಸ್ಥೆಯೊಂದನ್ನು ರೂಪಿಸುವವರೆಗೆ ಪ್ರಕರಣಗಳು ಬಾಕಿ ಉಳಿಯುವ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಅವರು ಹೇಳಿದ್ದಾರೆ. ವಸಾಹತುಶಾಹಿ ಕಾಲದಿಂದ ಜಾರಿಗೆ ಬಂದಿರುವ, 'ನ್ಯಾಯಾಲಯಗಳು ದೀರ್ಘ ಅವಧಿಗೆ ರಜೆ ತೆಗೆದುಕೊಳ್ಳುವ' ಪದ್ಧತಿ ಕೂಡ ಪ್ರಕರಣಗಳು ಬಾಕಿ ಇರುವುದಕ್ಕೆ ಒಂದು ಕಾರಣ ಎಂದು ಅವರು ಹೇಳಿದ್ದಾರೆ. ರಿಜಿಜು ಅವರು ಈಚೆಗೆ ಕೆಲವು ಸಮಯದಿಂದ ಕೊಲಿಜಿಯಂ ವ್ಯವಸ್ಥೆಯನ್ನು ಟೀಕಿಸುತ್ತಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ರಾಜ್ಯಸಭೆಯ ಸಭಾಪತಿಯಾಗಿ ಮಾಡಿದ ಮೊದಲ ಭಾಷಣದಲ್ಲಿಯೇ ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಟೀಕೆ ಮಾಡಿದ್ದಾರೆ. ಈಗ ಸಚಿವ ರಿಜಿಜು ಅವರು ವಾಗ್ದಾಳಿಯ ವ್ಯಾಪ್ತಿಯನ್ನು ಹಿಗ್ಗಿಸಿದ್ದಾರೆ, ಹೊಸ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಬಾಕಿ ಪ್ರಕರಣಗಳ ಸಂಖ್ಯೆ ದೊಡ್ಡಮಟ್ಟದಲ್ಲಿ ಇದ್ದರೂ ನ್ಯಾಯಾಲಯಗಳು 'ಜಾಮೀನು ಅರ್ಜಿಗಳನ್ನು ಹಾಗೂ ಹುರುಳಿಲ್ಲದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು' ವಿಚಾರಣೆಗೆ ಕೈಗೆತ್ತಿಕೊಳ್ಳುತ್ತವೆ ಎಂದು ಕೂಡ ಅವರು ಟೀಕಿಸಿದ್ದಾರೆ.

ಕೊಲಿಜಿಯಂ ವ್ಯವಸ್ಥೆ ಬಗ್ಗೆ ರಿಜಿಜು ಅವರು ಪ್ರಸ್ತಾಪಿಸಿರುವ ಯಾವ ವಿಷಯವೂ ಕೂಲಂಕಷ ಪರಿಶೀಲನೆಗೆ ಗುರಿಯಾಗುವ ಗಟ್ಟಿತನ ಹೊಂದಿಲ್ಲ

ರಿಜಿಜು ಅವರು ಈ ಹಿಂದೆ ಆಡಿದ್ದ ಮಾತುಗಳಿಗೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು. ಇಷ್ಟಾದರೂ ರಿಜಿಜು ಅವರು ವಾಗ್ದಾಳಿ ಮುಂದುವರಿಸಿರುವುದು ದುರದೃಷ್ಟಕರ. ಕೋರ್ಟ್ ಆಡಿದ್ದ ಮಾತುಗಳು ಅವರ ಅಭಿಪ್ರಾಯವೊಂದನ್ನೇ ಪ್ರತಿಫಲಿಸಲಿಲ್ಲ, ರಿಜಿಜು ಅವರು ತಮ್ಮ ಮೊನಚು ಮಾತುಗಳನ್ನು ಮುಂದುವರಿಸುವುದು ಸರಿಯಲ್ಲ, ಅದು ಸೂಕ್ತವಲ್ಲ ಎಂಬ ಅಭಿಪ್ರಾಯವೊಂದು ವ್ಯಾಪಕವಾಗಿದೆ. ರಿಜಿಜು ಅವರು ತಮ್ಮ ಅಭಿಪ್ರಾಯವನ್ನು ಮಾತ್ರ ಹೇಳುತ್ತಿಲ್ಲ. ಅವರು ಸರ್ಕಾರದ ನಿಲುವನ್ನು ಹೇಳುತ್ತಿರಬಹುದಾಗಿದೆ. ಹೀಗಾಗಿ ಈ ವಿಚಾರದಲ್ಲಿ ರಿಜಿಜು ಅವರು ಆಡುತ್ತಿರುವ ಮಾತುಗಳಿಗೆ ತಾನು ಉತ್ತರದಾಯಿ ಅಲ್ಲ ಎಂದು ಕೇಂದ್ರ ಸರ್ಕಾರ ಹೇಳುವಂತಿಲ್ಲ. ರಿಜಿಜು ಅವರು ಈಗ ಸಂಸತ್ತಿನ ವೇದಿಕೆಯನ್ನು ಬಳಸಿಕೊಂಡಿದ್ದಾರೆ, ಸುಪ್ರೀಂ ಕೋರ್ಟ್ ಬಗ್ಗೆ ಟೀಕೆ ಮಾಡಲು ಅವರು ಹೊಸದಾಗಿ ಒಂದಿಷ್ಟು ವಿಷಯಗಳನ್ನು ಕೂಡ ಪ್ರಸ್ತಾಪಿಸಿದ್ದಾರೆ. ಆದರೆ ಅವರು ಪ್ರಸ್ತಾಪಿಸಿರುವ ಎಲ್ಲ ವಿಷಯವೂ ಕೂಲಂಕಷ ಪರಿಶೀಲನೆಗೆ ಗುರಿಯಾಗುವ ಗಟ್ಟಿತನ ಹೊಂದಿಲ್ಲ. ಅವರು ತಮ್ಮ ನಿಲುವನ್ನು ತಪ್ಪಾಗಿ ವ್ಯಕ್ತಪಡಿಸಿರುವುದು ಅಥವಾ ಸಂಗತಿಗಳನ್ನು ಉತ್ಪ್ರೇಕ್ಷೆ ಮಾಡಿ ಪ್ರಸ್ತಾಪಿಸಿರುವುದು ಕೆಲವು ವಿಚಾರಗಳಲ್ಲಿ ಕಾಣುತ್ತದೆ. ಸುಪ್ರೀಂ ಕೋರ್ಟ್ ತನ್ನ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಿದೆ. ರಿಜಿಜು ಅವರ ಟೀಕೆಗೆ ಪರೋಕ್ಷವಾಗಿ ಉತ್ತರಿಸುವ ರೀತಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು, ಸುಪ್ರೀಂ ಕೋರ್ಟ್‌ಗೆ ಯಾವ ಪ್ರಕರಣವೂ ಸಣ್ಣದಲ್ಲ ಎಂದು ಹೇಳಿದ್ದಾರೆ. 'ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನಾವು ನ್ಯಾಯದಾನದ ಕೆಲಸ ಮಾಡದೆ ಇದ್ದರೆ, ಇಲ್ಲಿದ್ದು ಮಾಡುವುದು ಏನು' ಎಂದು ಕೂಡ ಸಿಜೆಐ ಪ್ರಶ್ನಿಸಿದ್ದಾರೆ.

ವಿಚಾರಣೆಯ ಹಂತದಲ್ಲಿರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದಕ್ಕೆ ನ್ಯಾಯಮೂರ್ತಿಗಳ ಹುದ್ದೆಗಳು ಭರ್ತಿಯಾಗದೇ ಇರುವುದು ಒಂದು ಕಾರಣ ಮಾತ್ರ. ಇತರ ಹಲವು ಕಾರಣಗಳು ಇವೆ. ಕೆಳ ಹಂತದ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ನೇಮಕಾತಿಯನ್ನು ಕೊಲಿಜಿಯಂ ನಡೆಸುವುದಿಲ್ಲ. ಅಲ್ಲಿಯೂ ಅಪಾರ ಪ್ರಮಾಣದಲ್ಲಿ ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಬಾಕಿ ಇವೆ. ಸರ್ಕಾರಗಳು ದೇಶದ ನ್ಯಾಯಾಲಯಗಳಲ್ಲಿ ಅತಿದೊಡ್ಡ ಸಂಖ್ಯೆಯ ಪ್ರಕರಣಗಳಲ್ಲಿ ವಾದಿಯೋ ಪ್ರತಿವಾದಿಯೋ ಆಗಿರುತ್ತವೆ. ಸರ್ಕಾರಗಳು ಕೂಡ ನೂರಾರು ಸಂಖ್ಯೆಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಬಾಕಿ ಇರುವ ಪ್ರಕರಣಗಳ ಸಂಖ್ಯೆ ಹೆಚ್ಚಲು ಕಾರಣವಾಗಿವೆ. ಬಾಕಿ ಪ್ರಕರಣಗಳ ಸಂಖ್ಯೆ ಹೆಚ್ಚು ಇರುವುದಕ್ಕೆ ನ್ಯಾಯಮೂರ್ತಿಗಳಿಗೆ ಸಿಗುವ ರಜೆ ಕಾರಣವಲ್ಲ. ಬೌದ್ಧಿಕ ಸಾಮರ್ಥ್ಯವನ್ನು ನೆಚ್ಚಿಕೊಂಡು ಕೆಲಸ ಮಾಡಬೇಕಿರುವ, ಸಾಂವಿಧಾನಿಕ ಮೌಲ್ಯಗಳನ್ನು ಹಾಗೂ ಕಾನೂನಿನ ಆಶಯಗಳನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕಿರುವ ನ್ಯಾಯಮೂರ್ತಿಗಳು ಇಂತಹ ರಜೆಗಳಿಗೆ ಅರ್ಹರು. ರಿಜಿಜು ಅವರು ನ್ಯಾಯಾಂಗದ ವಿರುದ್ಧ ಇಂತಹ ಟೀಕೆಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಅವರ ಮಾತುಗಳಿಂದ ನ್ಯಾಯಾಂಗ ಹಾಗೂ ಕಾರ್ಯಾಂಗದ ನಡುವಿನ ಸಂಬಂಧ ಇನ್ನಷ್ಟು ಹಾಳಾಗುತ್ತದೆ.

ದಿನದ ಟ್ವೀಟ್

ಪ್ರಶ್ನಿಸುವವರು ಯಾರು?



ಚೀನಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿರುವುದಕ್ಕೆ ಅಲ್ಲಿನ ಸರ್ಕಾರವು ಸಮಾಧಾನಕರವಲ್ಲದ ಲಸಿಕೆಗಳನ್ನು ಬಳಸಿದ್ದು ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ಅಸ್ಟ್ರಾ ಜೆನೆಕಾ (ಕೋವಿಶೀಲ್ಡ್) ಸೇರಿದಂತೆ ವಿದೇಶಿ ಲಸಿಕೆಗಳನ್ನು ನಿರ್ಬಂಧಿಸಿದ್ದು ಮುಖ್ಯ ಕಾರಣ. ಭಾರತದ ಕೋವ್ಯಾಕ್ಸಿನ್ ಲಸಿಕೆಗೆ ಒಪ್ಪಿಗೆ ನೀಡದ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಚೀನಾ ಮೂಲದ, ಲಸಿಕೆಗಳೇ ಅಲ್ಲದ ಲಸಿಕೆಗಳ ಬಳಕೆಗೆ ಅನುಮತಿ ನೀಡುವ ಮೂಲಕ ಹಗರಣವನ್ನೇ ಎಸಗಿದೆ. ಆದರೆ ಅಧಿಕಾರ ಇರುವ ಸಂಸ್ಥೆಯನ್ನು ಪ್ರಶ್ನಿಸುವ ಧೈರ್ಯ ಯಾರಿಗಿದೆ?

ಶೇಖರ್ ಗುಪ್ತಾ, ಪತ್ರಕರ್ತ

ಕಿಡಿನುಡಿ

ಕೇಂದ್ರ ಸರ್ಕಾರವು ನೋಟು ರದ್ದತಿಯ ವಾರ್ಷಿಕೋತ್ಸವವನ್ನು ಆಚರಿಸುತ್ತಿಲ್ಲವೇಕೆ? ಭಾರತ ಸರ್ಕಾರವು ಎಲ್ಲ ವಾರ್ಷಿಕೋತ್ಸವಗಳನ್ನೂ ಆಚರಿಸುತ್ತದೆ. ಆದರೆ, ನೋಟು ರದ್ದತಿ ವಾರ್ಷಿಕೋತ್ಸವದ ಬಗ್ಗೆ ಮಾತ್ರ ಯಾವೊಬ್ಬ ನಾಯಕರೂ ಕನಿಷ್ಠ ಒಂದು ಹೇಳಿಕೆಯನ್ನೂ ನೀಡಲಿಲ್ಲ. ಅವರು ಅದನ್ನು ಮರೆತಿದ್ದಾರೆಯೇ ಅಥವಾ ಮರೆಯಲು ಬಯಸಿದ್ದಾರೆಯೇ?!

ಜಾನ್ ಬ್ರಿಟ್ಟಾಸ್, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ — ಸೋಮವಾರ, 22-12-1997

● ಅಪರಾಧಿಗಳ ಸ್ಪರ್ಧೆ ತಡೆಗೆ ಕ್ರಮ ಸಂಭವ

ನವದೆಹಲಿ, ಡಿಸೆಂಬರ್ 21 (ಪಿಟಿಐ, ಯುಎನ್‌ಐ): ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಅಪರಾಧಿಗಳು ಸ್ಪರ್ಧಿಸುವುದನ್ನು ತಡೆಯಲು ಕ್ರಮ ತೆಗೆದುಕೊಳ್ಳುವುದು ಸೇರಿದಂತೆ, ಚುನಾವಣೆಗೆ ಸಂಬಂಧಿಸಿದ ಇತರ ಪ್ರಮುಖ ವಿಷಯಗಳನ್ನು ಚುನಾವಣಾ ಆಯೋಗ ನಾಳೆ ಇಲ್ಲಿ ಕರೆದಿರುವ ಏಳು ರಾಜಕೀಯ ಪಕ್ಷಗಳ ಸಭೆಯಲ್ಲಿ ಚರ್ಚಿಸಲಿದೆ.

ಈ ಸಭೆಯಲ್ಲಿ ಕಾಂಗ್ರೆಸ್, ಭಾರತೀಯ ಜನತಾ ಪಕ್ಷ, ಜನತಾದಳ, ಸಿಪಿಐ, ಸಿಪಿಎಂ, ಬಿಎಸ್‌ಪಿ,ಸಮತಾ ಪಾರ್ಟಿ ಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹಿಸಲಾಗುವುದು.

● 'ಬಿಜೆಪಿಗೆ ಕಾಂಗ್ರೆಸ್ಸೇ ಪ್ರಮುಖ ವೈರಿ'

ಭುವನೇಶ್ವರ, ಡಿಸೆಂಬರ್ 21– ಕಾಂಗ್ರೆಸ್ ಪಕ್ಷ 'ಮೊದಲ ವೈರಿ'. ಉಳಿದ ಪಕ್ಷಗಳು 'ರಾಜಕೀಯ ವಿರೋಧಿಗಳು' ಎಂಬುದು ಭಾರತೀಯ ಜನತಾ ಪಕ್ಷದ ಬಣ್ಣನೆ.

ಇಲ್ಲಿ ಮುಕ್ತಾಯಗೊಂಡ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಬಿಜೆಪಿ ತನ್ನ ವಿರೋಧಿಗಳನ್ನು ಚುನಾವಣೆಯಲ್ಲಿ ಸರಿಯಾದ ಕ್ರಮದಲ್ಲಿ ಸೆಣಸಿ ಸೋಲಿಸಲು ಬಯಸುತ್ತದೆ ಎಂದರು.

50 ವರ್ಷಗಳ ಹಿಂದೆ — ಶುಕ್ರವಾರ, 22-12-1972

● ವಿಯೆಟ್ನಾಂನಲ್ಲಿ ಅಮೆರಿಕದ ಸಮರ ವಿಸ್ತರಣೆಗೆ ಭಾರತದ ಅಸಂತೋಷ

ನವದೆಹಲಿ, ಡಿಸೆಂಬರ್ 21– ವಿದೇಶಾಂಗ ಖಾತೆ ಉಪಸಚಿವ ಸುರೇಂದ್ರ ಪಾಲ್ ಸಿಂಗ್ ಅವರು ಅಮೆರಿಕವು ವಿಯೆಟ್ನಾಂನಲ್ಲಿ ಸಮರ ವಿಸ್ತರಿಸುತ್ತಿರುವ ಬಗ್ಗೆ ಭಾರತದ ಅಸಂತೋಷ ಮತ್ತು ಆತಂಕವನ್ನು ಇಂದು ಲೋಕಸಭೆಯಲ್ಲಿ ವ್ಯಕ್ತಪಡಿಸಿದರು.

ಇಂಡೊ–ಚೀನಾ ಪ್ರದೇಶಕ್ಕೆ ಸಂಬಂಧಿಸಿದಂತೆ ಹೊಸ ಅಂತರ ರಾಷ್ಟ್ರೀಯ ನಿಯಂತ್ರಣ ಆಯೋಗದ ರಚನೆ ಆಗುವುದಿದ್ದು, ಆಯೋಗದಲ್ಲಿ ಭಾರತ ಇರುವ ಬಗ್ಗೆ ಅಮೆರಿಕ ವಿರೋಧವಾಗಿದೆಯೆಂದು ಹೇಳಲಾಗುತ್ತಿರುವ ಹಿನ್ನೆಲೆಯಲ್ಲಿ ಅಮೆರಿಕದ ಬೃಹತ್ ಪ್ರಮಾಣದ ಬಾಂಬ್ ದಾಳಿಯನ್ನು ತೀವ್ರವಾಗಿ ಪ್ರತಿಭಟಿಸುತ್ತಿಲ್ಲವೇ ಎಂಬ ಒಂದು ಪ್ರಶ್ನೆಗೆ ಅವರು ಉತ್ತರಿಸುತ್ತಿದ್ದರು.

● ಕಾಳಿ ನದಿ ಯೋಜನೆಯಲ್ಲಿ 10,000 ಮಂದಿಗೆ ಕೆಲಸ

ಬೆಂಗಳೂರು, ಡಿಸೆಂಬರ್ 21– ಬರಗಾಲ ಪೀಡಿತ ಪ್ರದೇಶದ ಹತ್ತು ಸಾವಿರ ಜನರಿಗೆ ಕಾಳಿ ನದಿ ಯೋಜನೆಯಲ್ಲಿ ಕೆಲಸ ಕೊಡಲು ಸಿದ್ಧತೆ ಮಾಡಲಾಗಿದೆಯೆಂದು ಲೋಕೋಪಯೋಗಿ ಸಚಿವ ಎಚ್.ಎಂ. ಚನ್ನಬಸಪ್ಪ ವಿಧಾನಸಭೆಯಲ್ಲಿ ಹೇಳಿದರು.

ಈ ಶುದ್ಧ ತರ್ಕ, ಕ್ರಿಯಾಶೀಲ ಕಲೆಯನ್ನು ಮೊದಲು ಗ್ರಹಿಸಬೇಕು, ಬಳಿಕ ಗೆಲ್ಲಬೇಕು

ಗಣಿತದ ಕಾಗುಣಿತ ತಿಳಿದರೆ...

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಸಂಜೆಯ ವಾಯುವಿಹಾರದಲ್ಲಿ ಸಿಕ್ಕ ಹಿರಿಯರೊಬ್ಬರು 'ಪಿಯುಸಿಯಲ್ಲಿರುವ ನನ್ನ ಮೊಮ್ಮಗ ಮ್ಯಾಥ್ಸ್‌ನ ಪ್ರತೀ ಟೆಸ್ಟ್‌ನಲ್ಲೂ ಫೇಲ್ ಆಗ್ತಾ ಇದ್ದಾನೆ, ಅದು ಅಷ್ಟು ಕಷ್ಟ ಇದೆಯಾ? ಅಥವಾ ಲೆಕ್ಚರರ್‌ಗಳು ಪಾಠ ಸರಿಯಾಗಿ ಮಾಡ್ತಾ ಇಲ್ಲವ? ಸಮಸ್ಯೆ ಏನಿರಬಹುದು' ಎಂದರು. ಪ್ರತಿಕ್ರಿಯಿಸಿದ ಇನ್ನೊಬ್ಬರು, 'ನಮ್ಮ ದೇಶದಲ್ಲಿ ಮಹಾ ಮಹಾ ಗಣಿತಜ್ಞರೆಲ್ಲ ಆಗಿಹೋಗಿದ್ದಾರೆ, ಆದ್ರೆ ನಮ್ಮ ಮಕ್ಕಳು ಮಾತ್ರ ಗಣಿತ ಅಂದರೆ ಬೆಚ್ಚಿಬೀಳ್ತಾರೆ. ಇದಕ್ಕೆ ಪರಿಹಾರವೇ ಇಲ್ಲವೇ?' ಎಂದು ದನಿಗೂಡಿಸಿದರು.

ಇದು ಮಕ್ಕಳನ್ನು ಶಾಲೆ, ಕಾಲೇಜಿಗೆ ಸೇರಿಸಿರುವ ಬಹುಪಾಲು ತಂದೆ-ತಾಯಂದಿರ ಪ್ರಶ್ನೆಯಾಗಿದೆ. ಶಾಲೆಯಲ್ಲಿ ಕಲಿಯುವುದು ಸಾಲದು ಎಂದು ಟ್ಯೂಷನ್, ಕೋಚಿಂಗ್ ಸೆಂಟರ್‌ಗಳಿಗೆ ಹಾಕುವವರ ಸಂಖ್ಯೆ ದೊಡ್ಡದಾಗಿದೆ. ಆದರೂ ಪರಿಸ್ಥಿತಿ ಸುಧಾರಿಸುತ್ತಿಲ್ಲ. ಎಂಜಿನಿಯರಿಂಗ್‌ನ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಗಣಿತ ವಿಷಯದಲ್ಲಿ ಫೇಲ್ ಆಗುವವರ ಸಂಖ್ಯೆ ಕಡಿಮೆಯೇನಿಲ್ಲ. ಗಣಿತದ ದಂತಕಥೆಗಳೆನಿಸಿರುವ ಆರ್ಯಭಟ, ಭಾಸ್ಕರಾಚಾರ್ಯ, ಪಿಂಗಳ, ಮಹಾವೀರ, ಬ್ರಹ್ಮಗುಪ್ತ, ಬೌಧಾಯನ, ಶ್ರೀನಿವಾಸ ರಾಮಾನುಜನ್ ಇವರೆಲ್ಲ ಈ ನೆಲದ ಪ್ರತಿಭೆಗಳೇ. ಗಣಿತದ ಮೂಲ ಭಾಷೆಯಾದ ತರ್ಕ ನಮಗೆ ಚೆನ್ನಾಗಿ ಗೊತ್ತಿರುವುದರಿಂದಲೇ ನಮ್ಮ ಕಂಪ್ಯೂಟರ್ ಎಂಜಿನಿಯರುಗಳೂ ಜಗತ್ತಿನ ಎಲ್ಲ ಮೂಲೆಗಳಿಗೂ ಸಲ್ಲುತ್ತಿದ್ದಾರೆ. ಆದರೆ ಅವರ ಸಂಖ್ಯೆ ಶೇಕಡ 5ರಷ್ಟು ಮಾತ್ರ. ಉಳಿದ ಬಹುಪಾಲು ಜನರಿಗೆ ಗಣಿತ ಕಬ್ಬಿಣದ ಕಡಲೆಯೇ.

ಕಲಿಸುವುದರಲ್ಲೇ ದೋಷವಿದೆ ಎಂಬುದು ತಜ್ಞರ ಅಂಬೋಣ. ಪಾಠಗಳಲ್ಲಿ ಬರುವ ಬಹುಪಾಲು ಪ್ರಮೇಯ, ಸಿದ್ಧಾಂತ, ಲೆಕ್ಕಗಳನ್ನು ಪ್ರಯೋಗದ ಪ್ರಾತ್ಯಕ್ಷಿಕೆ ರೀತಿಯಲ್ಲಿ ಕಲಿಸಿದಾಗ ಮಾತ್ರ ಮಕ್ಕಳಿಗೆ ಅವು ಅರ್ಥವಾಗುತ್ತವೆ, ನೆನಪಿನಲ್ಲಿ ಉಳಿಯುತ್ತವೆ ಎಂಬುದು ಕೆಲವರ ಸಲಹೆ. ಕೆಲವು ವಿಷಯಗಳನ್ನು ಹಾಗೆ ಹೇಳಬಹುದು, ಎಲ್ಲವೂ ಸಾಧ್ಯವಿಲ್ಲ ಎಂಬುದು ಕಲಿಸುವ ಶಿಕ್ಷಕರ ವಾದ. ಇಲ್ಲಿ ತೊಂದರೆಯಾಗುತ್ತಿರುವುದು ವಿದ್ಯಾರ್ಥಿಗಳಿಗೆ. ಅದಕ್ಕೆಂದೇ ಪಿಯುಸಿಯ ವಿಜ್ಞಾನದ ಎರಡು ವಿಷಯ ಸಂಯೋಜನೆಯಲ್ಲಿ ಗಣಿತವೇ ಇಲ್ಲ. ಆದರೆ ಶಾಲಾ ಹಂತದಲ್ಲಿ ಗಣಿತ ಕಲಿಯಲೇಬೇಕಾದ ಅನಿವಾರ್ಯ ಇದೆ.

ಗಣಿತವೆಂಬುದು ಕೇವಲ ಸಂಖ್ಯೆಯಾಗಲೀ ಆಕಾರವಾಗಲೀ ರೇಖೆಯಾಗಲೀ ಅಲ್ಲ. ಹಲವು ಸೂತ್ರಗಳ ಮೂಲಕ ಗುಡ್ಡ– ಗೋಪುರಗಳ ಎತ್ತರ ಕಂಡುಹಿಡಿಯುವುದಲ್ಲ. ಸರಳ ವಿಧಾನಗಳ ಅನ್ವಯ ಬಡ್ಡಿ, ಚಕ್ರಬಡ್ಡಿ ಲೆಕ್ಕ ಹಾಕುವುದಲ್ಲ. ಇವುಗಳೆಲ್ಲಾ ಗಣಿತ ಇದೆ. ಆದರೆ ಅದೇ ಪೂರ್ಣಾರ್ಥವಲ್ಲ. ಗಣಿತವು ತೀರಾ ಸಂಕ್ಷಿಪ್ತ ಸ್ವಭಾವವುಳ್ಳ, ತರ್ಕವನ್ನೇ ಮಾತನಾಡುವ ಎಲ್ಲ ವಿಜ್ಞಾನಗಳ ತಾಯಿ ಎನ್ನಿಸಿಕೊಂಡಿರುವ ಜ್ಞಾನ ಸಾಹಿತ್ಯ. ಸಾಮಾನ್ಯನಿಗೆ ಸುಲಭಕ್ಕೆ ನಿಲುಕದ, ಬುದ್ಧಿವಂತನಿಗೆ ಸದಾ ಸವಾಲಾಗಿರುವ ಇದು ಸರಳ ಭೌತಿಕ ವಿಧಾನಗಳಾದ ಎಣಿಕೆ ಮತ್ತು ಅಳತೆಗಳ ಮೂಲಕ ಜೀವತಳೆದಿದೆ. ವಿಕಾಸಗೊಂಡು ಅಂಕ, ಬೀಜ, ರೇಖಾಗಣಿತವಾಗಿ ಕೊನೆಗೆ ಶುದ್ಧ ಮತ್ತು ಆನ್ವಯಿಕ ಎಂಬ ಕವಲುಗಳಾಗಿ ಒಡೆದಿದೆ. ಎಣಿಸುವ ಕ್ರಿಯೆಯಿಂದ ಶುರುವಾಗಿ ಸಂಖ್ಯೆ, ಆಕಾರ, ಚಲನೆ, ಹೊಂದಾಣಿಕೆ, ಭಿನ್ನತೆ, ಏಕತೆ, ಮಿತಿ, ಮೂಲ, ವರ್ಗ, ಘನಮೂಲ ಕಲನ, ಹಿಂಕಲನ ಎಂದೆಲ್ಲ ಮುಂದುವರಿಯುತ್ತದೆ.

ಗಣಿತವು ಆರಂಭದಲ್ಲಿ ರಚನಾತ್ಮಕವಾಗಿ ಇರದಿದ್ದರೆ ಅದೊಂದು ಗೊಂದಲದ ಆರಂಭವೇ ಸರಿ. ಕೂಡುವ ಕ್ರಿಯೆ, ಗುಣಾಕಾರದ ಇನ್ನೊಂದು ಮುಖ ಎಂದಾಗ ಗೊಂದಲವಾಗುತ್ತದೆ. ಸೊನ್ನೆಯಿಂದ ಅನಂತದವರೆಗಿನ ಸಂಖ್ಯೆಗಳ ಗಣಿತ ಆಕಾಶದ ನಕ್ಷತ್ರಗಳನ್ನು ನೆನಪಿಸುತ್ತದೆ. ಆದರೆ ಇನ್‌ಫಿನಿಟಿಯನ್ನು ಕಂಡವರೇ ಇಲ್ಲ. ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಭಾಗಿಸಿದಾಗ ಉತ್ತರವಾಗಿ 'ಒಂದು' ಬರುತ್ತದೆ. ಇದು ಸೊನ್ನೆಗೆ ಅನ್ವಯಿಸುವುದಿಲ್ಲ. ಏಕೆ ಹೀಗೆ ಎಂದು ಪ್ರಶ್ನೆ ಮಾಡುವವರಿಗೆ ರಾಮಾನುಜನ್ ಕಾಣಿಸುತ್ತಾರೆ. ನ್ಯೂಟನ್, ಯೂಲರ್, ಯೂಕ್ಲಿಡ್, ಕಾರ್ಲ್ ಫ್ರೆಡರಿಕ್ ಗಾಸ್, ಲೆಬಿನಿಜ್... ಇವರೆಲ್ಲ ಅತ್ಯಂತ ತಾಳ್ಮೆಯಿಂದ ಕೆಲಸ ಮಾಡಿ ಗಣಿತಕ್ಕೆ ಕ್ರಿಯಾಶೀಲ ಗುಣ ತಂದುಕೊಟ್ಟಿದ್ದಾರೆ.

ಪ್ರಾಯೋಗಿಕ ಎಂಬ ಕಾರಣಕ್ಕಾಗಿ ಕ್ರಿಯಾಶೀಲವಾಗಿರುವ ಇದು ಸಹಜ ಬದುಕಿನ ಹಲವಾರು ಸಮಸ್ಯೆಗಳಿಗೆ ಉತ್ತರ ನೀಡಿದೆ. ಡಿಫರೆನ್ಷಿಯಲ್ ಸಮೀಕರಣಗಳಿಂದ ಸೇತುವೆ, ಗೋಪುರ, ಬಹುಮಹಡಿ ಕಟ್ಟಡ, ಅಣೆಕಟ್ಟು, ಮನೆಗಳನ್ನು ಕಟ್ಟಲಾಗಿದೆ. ಆಟಿಕೆಗಳಿಂದ ಹಿಡಿದು ಅಣುಬಾಂಬಿನವರೆಗೂ ಗಣಿತ ವ್ಯಾಪಿಸಿದೆ. ಮಕ್ಕಳಾಡುವ ಬಿಲ್ಲಿನಲ್ಲಿ ಪರವಲಯ (Parabola), ಚೆಂಡಿನಲ್ಲಿ ವೃತ್ತ ಮತ್ತು ಗೋಳ (Circle and Sphere), ಬಾಣದಲ್ಲಿ ದಿಶಾಯುಕ್ತ (Vector), ಕೋಳಿಮೊಟ್ಟೆ, ಸೌರವ್ಯೂಹದ ಸಂರಚನೆಯಲ್ಲಿ ಎಲಿಪ್ಸ್ (Ellipse) ಇದೆ. ಅಂಗರಚನೆಯ ಸಿಮಿಟ್ರಿ (ಸಮಮಿತಿ) ಗಣಿತದ ಕೊಡುಗೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮಷೀನ್ ಲ್ಯಾಂಗ್ವೇಜ್‌ಗಳಲ್ಲಿ ಇರುವುದು ಬರೀ ಗಣಿತವೇ!

ಗಣಿತದ ಸ್ವಭಾವ ಮತ್ತು ಚಿಂತನೆಗಳನ್ನು ಗಮನಿಸಿದರೆ ಅದು ಚದುರಂಗದಾಟವನ್ನು ನೇರವಾಗಿ ಹೋಲುತ್ತದೆ. ಚದುರಂಗ ನಿಯಮಬದ್ಧ ಆಟ ಹಾಗೆಯೇ ಗಣಿತ ಕೂಡ. ಚದುರಂಗ ಹೇಗೆ ಊಹಾತ್ಮಕವೋ ಹಾಗೆ ಗಣಿತ ಸಹ. ಚದುರಂಗಕ್ಕೆ ತನ್ನದೇ ಆದ ತಾಂತ್ರಿಕ ಭಾಷೆ ಇರುವಂತೆ ಗಣಿತಕ್ಕೆ ತನ್ನದೇ ಆದ ಸೂತ್ರಗಳಿವೆ, ಪ್ರಮೇಯಗಳಿವೆ. ಗಣಿತಕ್ಕೂ ಸಂಗೀತಕ್ಕೂ ಸುಂದರ ಹೋಲಿಕೆಯಿದೆ. ಸಂಗೀತದಲ್ಲಿ ಏಳು ಸ್ವರಗಳಿರುವಂತೆ ಗಣಿತದಲ್ಲಿ ಏಳು ಮೂಲಭೂತ ಚಿಹ್ನೆಗಳಿವೆ (+, -, x, ÷, >, <, =).

ಗಾಯಕ ಗಾಯನವನ್ನು ಮೆಚ್ಚಿಸಲು ವಿವಿಧ ರಾಗಗಳಲ್ಲಿ ಹಾಡುವಂತೆ ಗಣಿತಜ್ಞ ಅನೇಕಾನೇಕ ಸೂತ್ರಗಳ ಮೊರೆಹೋಗಿ ಉತ್ತರ ತೋರಿಸುತ್ತಾನೆ. ಆದರೆ ಹಾಡುವುದೆಲ್ಲ ಗಾಯನವಲ್ಲ, ಬಾರಿಸುವುದೆಲ್ಲ ವಾದ್ಯವಲ್ಲ, ಬರೆಯುವ ಸಂಖ್ಯೆಗಳೆಲ್ಲ ಗಣಿತವಲ್ಲ, ಸೂತ್ರಗಳೆಲ್ಲಾ ಉತ್ತರಗಳಲ್ಲ. ಸಂಗೀತ ಅರ್ಥಪೂರ್ಣವಾಗುವುದು ಶ್ರೋತೃವಿನ ಆಳಕ್ಕೆ ತಟ್ಟಿ ಸುಮಧುರ ಭಾವನೆಗಳನ್ನು ಎಬ್ಬಿಸಿದಾಗ. ಅಂತೆಯೇ ಗಣಿತ ಅರ್ಥ ಪಡೆಯುವುದು ನೈಜ ಸಮಸ್ಯೆಯೊಂದನ್ನು ವಿದ್ಯಾರ್ಥಿಯೊಬ್ಬ ಸ್ವಂತವಾಗಿ ಬಿಡಿಸಲು ಕಲಿತಾಗ. ಸಂಗೀತ ಹಾಡಿದಷ್ಟೂ ಇದೆ. ಗಣಿತ ಮಾಡಿದಷ್ಟೂ ಇದೆ. ಗಾಯಕ ಎತ್ತುವ ಅಪಸ್ವರಗಳಂತೆ ಗಣಿತಜ್ಞನೂ ತಪ್ಪು ಮಾಡುತ್ತಾನೆ.

ಗಣಿತಕ್ಕೂ ಸಾಹಿತ್ಯಕ್ಕೂ ವಿಶಿಷ್ಟ ಹೋಲಿಕೆ ಇದೆ. ಸಾಹಿತ್ಯದಲ್ಲಿರುವ ಕಾಲಮಾನದ ದ್ವಂದ್ವ ಮತ್ತು ಬದ್ಧತೆಗಳಂತೆ ಗಣಿತದಲ್ಲಿ ಶುದ್ಧ ಮತ್ತು ಆನ್ವಯಿಕ ವಿಭಾಗಗಳಿವೆ. ಶುದ್ಧಗಣಿತವು ಸಿದ್ಧಾಂತ ಮತ್ತು ಸೂತ್ರಗಳ ಮಟ್ಟದಲ್ಲೇ ಇರುವುದರಿಂದ ಓದುಗನನ್ನು ಹೆಚ್ಚು ಆಕರ್ಷಿಸಿಲ್ಲ. ಆನ್ವಯಿಕ ಗಣಿತವು ಭೌತ, ರಾಸಾಯನಿಕ, ಜೈವಿಕ ಮತ್ತು ಸಾಮಾಜಿಕ ರಂಗಗಳೆಲ್ಲದರಲ್ಲಿದ್ದು ಹೆಚ್ಚು ಪ್ರಸಿದ್ಧಿಯಾಗಿದೆ. ಕಾಲ, ಸಾಪೇಕ್ಷತೆ, ಕಾಂತತ್ವ, ತಳಿವಿಜ್ಞಾನ, ವಿದ್ಯುತ್ತು, ರೋಗವಿಜ್ಞಾನ, ಥರ್ಮೋಡೈನಮಿಕ್ಸ್... ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಗಣಿತ ವ್ಯಾಪಿಸಿದೆ.

ಗಣಿತ ಹೋಲುವ ಇನ್ನೊಂದು ವಿಷಯ ಚಿತ್ರಕಲೆ. ಚಿತ್ರಕಲಾವಿದನ ಮನಸ್ಸೇ ಒಂದು ಕ್ಯಾನವಾಸ್ ಇದ್ದಂತೆ. ಗಣಿತಜ್ಞನ ಮನಸ್ಸು ಸೂತ್ರವಿದ್ದಂತೆ. ಎಂ.ಎಫ್.ಹುಸೇನ್ ಬರೆದ ಚಿತ್ರಗಳಿಗೂ ಅಂದು ರಾಮಾನುಜನ್ ಬರೆದ ಸಂಖ್ಯೆಗಳಿಗೂ ಬಹಳ ಅರ್ಥಗಳಿವೆ, ಉಪಯೋಗಗಳಿವೆ, ಬೆಲೆಯೂ ಇದೆ. ನವ್ಯಕಲೆ ಹೇಗೆ ಸುಲಭವಾಗಿ ಅರ್ಥವಾಗುವುದಿಲ್ಲವೋ ರಾಮಾನುಜನ್ ಬರೆದದ್ದು ಪ್ರಪಂಚದ ಅನೇಕರಿಗೆ (ಗಣಿತಜ್ಞರಿಗೆ) ಇನ್ನೂ ಅರ್ಥವಾಗಿಲ್ಲ. ಚಿತ್ರಕಲೆಗೆ ವಸ್ತು ಆಧಾರವಾದರೆ, ಗಣಿತಕ್ಕೆ ತರ್ಕ.

ಕಲಿಕೆಯನ್ನು ಸುಲಭವಾಗಿಸುವುದು ಶಿಕ್ಷಕ, ಅಧ್ಯಾಪಕರ ಕೈಯಲ್ಲೇ ಇದೆ. ಬೋಧಿಸುವುದಕ್ಕಿಂತ ಮುಂಚೆ ಗಣಿತದ ಕಾಗುಣಿತ ಅವರಿಗೆ ಗೊತ್ತಿರಬೇಕು. ನೈಜ ಉದಾಹರಣೆ, ರೂಪಕ, ಚಟುವಟಿಕೆ, ಪ್ರಾತ್ಯಕ್ಷಿಕೆಗಳ ಮೂಲಕ ವಿಷಯದ ಕಲಿಕೆ ನಡೆಯಬೇಕು. ಅದೊಂದು ಶುದ್ಧ ತರ್ಕ ಮತ್ತು ಕ್ರಿಯಾಶೀಲ ಕಲೆ ಎಂಬುದನ್ನು ಅಧ್ಯಾಪಕರು ಮೊದಲು ಗ್ರಹಿಸಬೇಕು. ಇಂದು ಗಣಿತಕ್ಕಾಗಿ ಸಾವಿರಕ್ಕೂ ಹೆಚ್ಚು ವೆಬ್‌ಸೈಟುಗಳಿವೆ. ನೂರಾರು ಪತ್ರಿಕೆಗಳಿವೆ. ಲ್ಯಾಬ್‌ಗಳಿವೆ. ಸಾವಿರಾರು ಪುಸ್ತಕಗಳಿವೆ. ಬಳಸಿಕೊಂಡು ನಾವು ಗಣಿತವನ್ನು ಗೆಲ್ಲಬೇಕಿದೆ. ಅಂದಹಾಗೆ ಇಂದು (ಡಿ. 22) ರಾಷ್ಟ್ರೀಯ ಗಣಿತ ದಿನ.



ಲೇಖಕ: ಪ್ರಾಚಾರ್ಯ, ವಿದಿಯಾ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಬೆಂಗಳೂರು

ಚುರುಮುರಿ

ಫುಟ್‌ಬಾಲ್ ಧಾರಾವಾಹಿ

● ಆನಂದ

ವಿಶ್ವಕಪ್ ಫುಟ್‌ಬಾಲ್ ಎಂಬ ಧಾರಾವಾಹಿ ಮುಗಿದ ಮೇಲೆ ಅಸಂಖ್ಯಾತ ಓದುಗ ಅಭಿಮಾನಿಗಳಿಂದ ಬಂದ ಪತ್ರಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ಸಾರಾಂಶವಾಗಿ ಕೊಡಲಾಗಿದೆ:

- ಅಯ್ಯೋ! ಫುಟ್‌ಬಾಲ್ ಪಂದ್ಯಗಳು ಮುಗಿದೇ ಹೋದವೆ?
- ಟೂರ್ನಮೆಂಟ್ ಮುಂದುವರಿಸಿದ್ದಿದ್ದರೆ ಇವರ ಗಂಟೇನು ಹೋಗುತ್ತಿತ್ತು?
- ಈಗ ನಾನೇನು ನೋಡಲಿ?
- ಇನ್ನು ಮುಂದೆ ಕೆಲವು ದಿನ 8.30ರ ನಂತರ ರಾತ್ರಿ ಮನೆಯಲ್ಲಿ ಶೂನ್ಯ ಆವರಿಸುತ್ತದೆ.

-ಕೆಲವು ಗಂಡಸರು ಬರೆದ ಪತ್ರಗಳು

- ಇಷ್ಟು ದಿನ ನನ್ನ ಗಂಡ ಸರಿಯಾಗಿ ರಾತ್ರಿ 8.30ಕ್ಕೆ ಮೊದಲೇ ಮನೆಗೆ ಬರುತ್ತಿದ್ದರು. ಇನ್ನು ಮುಂದೆ ಹೇಗೋ ಏನೋ...
- ಸದ್ಯ ಮುಗಿಯಿತಲ್ಲ. ಮನೆಯಲ್ಲಿ ಕೂಗಾಟ, ಚೀರಾಟ ಇನ್ನು ಕಡಿಮೆಯಾಗುತ್ತದೆ.
- ಕರೆಂಟ್ ಬಿಲ್ ಉಳಿಯುತ್ತದೆ. 10 ಗಂಟೆಗೇ ದೀಪ ಆರಿಸಬಹುದು.
- ಈಗಲಾದರೂ ಮಕ್ಕಳು ಓದಿನ ಕಡೆ ಗಮನಹರಿಸುವರೇ?

-ಗೃಹಿಣಿಯರ ಅನಿಸಿಕೆ

- ಮೆಸ್ಸಿ ತಮ್ಮ ಸಂಸಾರದ ಕಡೆ ಹೆಚ್ಚು ಗಮನ ಕೊಡುವರೋ ಅಥವಾ ತಮ್ಮ ಫಾರ್ಮ್ ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಅಭ್ಯಾಸದ ಕಡೆ ಹೆಚ್ಚು ಗಮನ ಕೊಡುವರೋ ಕಾದು ನೋಡಬೇಕಿದೆ.

-ಒಬ್ಬ ಅಧಿಕ ಪ್ರಸಂಗಿ

- ಮುಂದಿನ ಟೂರ್ನಮೆಂಟ್‌ನಲ್ಲಿ ಆಟಗಾರರಿಗೆ ಸಂಭಾವನೆಯನ್ನು ಬಂಗಾರದ ರೂಪದಲ್ಲಿ ಕೊಡುವರೇ? ಏಕೆಂದರೆ ಈಗಾಗಲೇ ಅವರ ಬಳಿ ಬಹಳಷ್ಟು ಡಾಲರ್‌ಗಳಿವೆ.

-ಹಣಕಾಸು ತಜ್ಞ

- ಭಾರತ ಈ ಟೂರ್ನಿಯಲ್ಲಿ ಭಾಗವಹಿಸುವಂತೆ ಮಾಡಲು ಮೋದೀಜಿ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಖಂಡಿತ.

-ಉಟ್ಟು ಓರಾಟಗಾರ

- ಕಾಶಿ ಯಾತ್ರೆ, ಅಯೋಧ್ಯ ಯಾತ್ರೆ, ಉಜ್ಜಯಿನಿ ಯಾತ್ರೆಯಂತೆ ಫುಟ್‌ಬಾಲ್ ಯಾತ್ರೆಯನ್ನೂ ಸರ್ಕಾರ ಏರ್ಪಡಿಸಬೇಕು. ಇದರಲ್ಲಿ ಆಟಗಾರರು ಮಾತ್ರ ಭಾಗವಹಿಸಲಿ. ರಾಜಕಾರಣಿಗಳ ಮಕ್ಕಳು ಹೋಗದಂತೆ ತಡೆಯಬೇಕು.

-ಫುಟ್‌ಬಾಲ್ ಫ್ಯಾನ್

ಸಂಗತ

ವೃತ್ತಿಗೌರವ ಮತ್ತು ಅನುಚಿತ ವರ್ತನೆ

ವಿದ್ಯಾರ್ಥಿಗಳೊಂದಿಗೆ ಕೆಲವು ಶಿಕ್ಷಕರ ಅನುಚಿತ ವರ್ತನೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿರುವುದಕ್ಕೆ ಕಾರಣ ಏನು?

● ರಾಜಕುಮಾರ ಕುಲಕರ್ಣಿ

ನರಗುಂದ ತಾಲ್ಲೂಕಿನಲ್ಲಿ ಶಿಕ್ಷಕನೊಬ್ಬ ಹತ್ತು ವರ್ಷದ ಬಾಲಕನ ಮೇಲೆ ಕಬ್ಬಿಣದ ಸಲಾಕೆಯಿಂದ ಮಾರಣಾಂತಿಕ ಹಲ್ಲೆ ಮಾಡಿದ್ದನ್ನು ತಿಳಿದು ದಿಗ್ಭ್ರಮೆಯಾಯಿತು. 'ತಮಸೋಮಾ ಜ್ಯೋತಿರ್ಗಮಯ' ಎಂದು ವಿದ್ಯಾರ್ಥಿಗಳನ್ನು ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನೆಡೆ ಕೈಹಿಡಿದು ಕರೆದೊಯ್ದು ಮಾದರಿಯಾಗಬೇಕಾದ ಶಿಕ್ಷಕನೇ ಕ್ರೌರ್ಯ ಮೆರೆದು ಇಡೀ ಶಿಕ್ಷಕ ಸಮೂಹಕ್ಕೆ ಕಳಂಕ ತಂದಿದ್ದಾನೆ. ಶಿಕ್ಷಕರ ಇಂತಹ ಅಸಂಗತ ವರ್ತನೆಗಳು ಮಾಧ್ಯಮಗಳಲ್ಲಿ ಆಗಾಗ ಪ್ರಕಟವಾಗುತ್ತಿವೆ.

ಕಾಮುಕ ಶಿಕ್ಷಕ ಕುಡಿದ ಮತ್ತಿನಲ್ಲಿ ವಿದ್ಯಾರ್ಥಿನಿಯರ ವಸತಿಗೃಹಕ್ಕೆ ಹೋಗಿ ಏಟುತಿಂದ ಪ್ರಕರಣ ಕೆಲವು ದಿನಗಳ ಹಿಂದೆ ವರದಿಯಾಗಿತ್ತು. ವಿದ್ಯಾರ್ಥಿಗಳ ಮೇಲೆ ಲೈಂಗಿಕ ದೌರ್ಜನ್ಯ, ದೈಹಿಕವಾಗಿ ಹಿಂಸಿಸುವುದು, ಅಸಭ್ಯ ಮಾತುಗಳನ್ನಾಡುವಂಥ ವರ್ತನೆಗಳು ಇತ್ತೀಚಿನ ದಿನಗಳಲ್ಲಿ ಶಿಕ್ಷಕರಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ.

'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂದು ಗುರುವನ್ನು ಅತೀ ಎತ್ತರದ ಸ್ಥಾನದಲ್ಲಿ ಕೂಡಿಸಿ ಹಾಡಿದ ನಾಡಿದು. 'ಮುಂದೆ ಗುರಿ ಇರಲು ಹಿಂದೆ ಗುರುವಿರಲು ನಡೆ ಮುಂದೆ ನುಗ್ಗಿ ನಡೆ ಮುಂದೆ' ಎಂದು ಗುರುವಿನ ಮೇಲೆ ಅಪರಿಮಿತ ವಿಶ್ವಾಸವಿರಿಸಿದ ನೆಲವಿದು. ಹರ ಮುನಿದರೂ ಗುರು ಕಾಯುವನು ಎನ್ನುವಷ್ಟು ನಂಬಿಕೆ ಗುರುವಿನ ಮೇಲೆ.

ರಾಜ ಮಹಾರಾಜರು ತಮ್ಮ ಮಕ್ಕಳನ್ನು ಸುಖ ವೈಭೋಗದಿಂದ ದೂರವಾಗಿಸಿ ಗುರುಗಳ ಆಶ್ರಯದಲ್ಲಿ ಬಿಡುತ್ತಿದ್ದರು. ಕರ್ಣ, ಏಕಲವ್ಯನಂಥ ಮಹಾಯೋಧರು ವಿದ್ಯೆಗಾಗಿ ಗುರುವನ್ನು ಹುಡುಕುತ್ತ ಅಲೆದದ್ದು ಗುರುವಿನ ಪ್ರಾಮುಖ್ಯಕ್ಕೊಂದು ಉದಾಹರಣೆ.

ಸರ್ವಜ್ಞ 'ವಿದ್ಯೆ ಕಲಿಸದ ಗುರು, ಬುದ್ಧಿ ಹೇಳದ ತಂದೆ, ಬಿದ್ದಿರಲು ಬಂದು ನೋಡದ ತಾಯಿ ಶುದ್ಧ ವೈರಿಗಳು' ಎಂದು ಗುರುವಿಗೆ ತಂದೆ-ತಾಯಿಯಷ್ಟೇ ಮಹತ್ವದ ಜವಾಬ್ದಾರಿ ನೀಡಿರುವುದು ಶಿಕ್ಷಕ ವೃತ್ತಿಯ ಘನತೆಗೊಂದು ದೃಷ್ಟಾಂತ. ಹಿಂದೆಲ್ಲ ಗುರುವಿಗೆ ತನ್ನ ಶಿಷ್ಯನ ಶ್ರೇಯೋಭಿವೃದ್ಧಿಯೇ ಮುಖ್ಯವಾಗಿರುತ್ತಿತ್ತು. ಗುರುವಾದವನಿಗೆ ಶಿಷ್ಯ ತನ್ನನ್ನೂ ಮೀರಿ ಬೆಳೆಯಬೇಕೆಂಬ ಉತ್ಕಟ ಹಂಬಲ. ಗುರು-ಶಿಷ್ಯ ಪರಂಪರೆ ಈ ನೆಲದ ಉತ್ಕೃಷ್ಟ ಸಂಸ್ಕೃತಿ. ಈ ಪರಂಪರೆ ಅನೇಕ ದೇಶಗಳಿಗೆ ಮಾದರಿಯಾಗಿದೆ.

ಬದುಕಿನ ಕಹಿಯನ್ನು ಮನದಾಳದಲ್ಲಿ ಉಳಿಸಿಕೊಂಡು ಕೇಡು ಬಯಸುವ ವ್ಯಕ್ತಿಯಾಗಬಾರದು ಶಿಕ್ಷಕ. ಬದುಕಿನ ಸಿಹಿಯನ್ನು ಸಂತೋಷದಿಂದ ಹಂಚಿಕೊಳ್ಳುವ ಮನಸ್ಸು ಶಿಕ್ಷಕನದ್ದಾಗಿರಬೇಕು. ಅಗ್ರಹಾರ ಕೃಷ್ಣಮೂರ್ತಿ 'ನನ್ನ ಮೇಷ್ಟ್ರು' ಲೇಖನದಲ್ಲಿ ಆದರ್ಶ ಶಿಕ್ಷಕರಾಗಿ ಜಿ.ಎಸ್.ಶಿವರುದ್ರಪ್ಪನವರ ವ್ಯಕ್ತಿತ್ವವನ್ನು ಬಹಳ ಸುಂದರವಾಗಿ ಚಿತ್ರಿಸಿರುವರು. ಕೃಷ್ಣಮೂರ್ತಿ ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ ಅಂತಿಮ ವರ್ಷದಲ್ಲಿದ್ದಾಗ ಒಂದು ಘಟನೆ ನಡೆಯಿತು. ಆಗ ಶಿವರುದ್ರಪ್ಪನವರು ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದ ಅವಧಿ. ಶೈಕ್ಷಣಿಕ ಪ್ರವಾಸಕ್ಕೆ ಸಂಬಂಧಿಸಿದಂತೆ ಕೃಷ್ಣಮೂರ್ತಿ ಮತ್ತು ಜಿ.ಎಸ್.ಎಸ್. ನಡುವೆ ಸಣ್ಣ ಜಗಳವಾಯಿತು. ಶಿವರುದ್ರಪ್ಪನವರಿಗೆ ನೋವಾಗುವಂತೆ ಅಗ್ರಹಾರ ವರ್ತಿಸಿದರು. ಇದರಿಂದ ಕೃಷ್ಣಮೂರ್ತಿ ಎಂ.ಎ. ಪದವಿ ಗಳಿಸುವುದಿಲ್ಲ ಎಂದೇ ಎಲ್ಲರೂ ಭಾವಿಸಿದ್ದರು. ಈ ಕುರಿತು ಕೃಷ್ಣಮೂರ್ತಿ ಅವರಿಗೂ ಹೆದರಿಕೆ ಇತ್ತು. ಆದರೆ ಪರೀಕ್ಷೆಯ ಫಲಿತಾಂಶ ಬಂದಾಗ ಅವರು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದರು.

ಅದಾದ ಎಷ್ಟೋ ತಿಂಗಳುಗಳ ನಂತರ ಗುರುಗಳಿಗೆ ಕೃಷ್ಣಮೂರ್ತಿ ಪತ್ರ ಬರೆದು, ತಮ್ಮ ಅಂದಿನ ಅವಿವೇಕದ ವರ್ತನೆಯನ್ನು ಪ್ರಸ್ತಾಪಿಸಿ ಕ್ಷಮೆ ಕೇಳಿದ್ದರು. ಆಗ ಶಿವರುದ್ರಪ್ಪನವರಿಂದ ಬಂದ ಉತ್ತರ ಹೀಗಿತ್ತು: 'ನೀವು ನಿಮ್ಮ ವಿದ್ಯಾರ್ಥಿ ಜೀವನದ ಅವಿವೇಕದ ವರ್ತನೆಗಳ ಬಗ್ಗೆ ಪ್ರಸ್ತಾಪಿಸಿದ್ದೀರಿ. ನನಗೆ ಅವೆಲ್ಲ ನೆನಪಿನಲ್ಲೇ ಇಲ್ಲ. ನೀವು ಯಾವ ತಪ್ಪನ್ನೂ ಮಾಡಿಲ್ಲ. ಒಂದು ವಯಸ್ಸಿನಲ್ಲಿ ಒಂದೊಂದು ರೀತಿಯಿಂದ ನಡೆದುಕೊಳ್ಳುವುದು ತೀರಾ ಸಹಜ. ವೈಪರೀತ್ಯಗಳು, ವೈವಿಧ್ಯಗಳು ಇದ್ದರೇ ಅದು ಜೀವಂತಿಕೆಯ ಲಕ್ಷಣ'.

ಶಿಕ್ಷಕ ವೃತ್ತಿಯ ಘನತೆಯನ್ನು ಎಸ್.ಎಲ್. ಭೈರಪ್ಪನವರು ಆತ್ಮಕಥೆಯಲ್ಲಿ ವಿವರಿಸುವುದು ಹೀಗೆ: 'ಅಧ್ಯಾಪಕತನವೂ ಒಂದು ವೃತ್ತಿ ನಿಜ. ಬ್ಯಾಂಕ್ ನೌಕರನು, ರೈಲ್ವೆ ನೌಕರನು, ಫ್ಯಾಕ್ಟರಿ ಎಂಜಿನಿಯರನು ನನ್ನ ಕೆಲಸದ ವೇಳೆಯ ನಂತರ ನಾನೇನು ಮಾಡುತ್ತೇನೆಂದು ಕೇಳುವ ಅಧಿಕಾರ ನಿನಗಿಲ್ಲ ಎಂದರೂ ನಡೆದೀತು. ಆದರೆ ಇದೇ ಮಾತನ್ನು ಹೇಳುವ ಅಧಿಕಾರ ಅಧ್ಯಾಪಕನಿಗಿಲ್ಲ. ವಿದ್ಯಾರ್ಥಿಗಳಿಗೆ ಪರೋಕ್ಷವಾಗಿಯಾದರೂ ತಿಳಿದು ಅವರ ಚಾರಿತ್ರ್ಯಕ್ಕೆ ಕೆಟ್ಟ ಮಾದರಿಯಾಗುವ ಯಾವ ಕೆಲಸವನ್ನೂ ಖಾಸಗಿಯಲ್ಲಿ ಕೂಡ ಮಾಡುವುದು ಅಧ್ಯಾಪಕನಿಗೆ ಸಲ್ಲುವುದಿಲ್ಲ. ಅಂಥವನು ಆ ವೃತ್ತಿಯನ್ನು ಬಿಟ್ಟುಬಿಡಬೇಕು ಎಂದು ನಾನು ದೃಢವಾಗಿ ನಂಬಿದವನು. ಉಪಾಧ್ಯಾಯನ ಘನತೆ ಇರುವುದು ಅವನ ಸಂಬಳದಿಂದಲ್ಲ. ವಿದ್ವತ್ತು, ಚಾರಿತ್ರ್ಯದಿಂದ ಕೂಡಿದ ಸ್ವಾತಂತ್ರ್ಯ ಮತ್ತು ಬೋಧನಾ ಶಕ್ತಿಯಿಂದ'.

ಇಂದು ಕೆಲವು ಮಂದಿ ಅಪ್ರಾಮಾಣಿಕರು ಮತ್ತು ಅನೀತಿವಂತರಿಂದ ಶಿಕ್ಷಕ ವೃತ್ತಿ ಸಮಾಜದಲ್ಲಿ ಗೌರವವನ್ನು ಕಳೆದುಕೊಳ್ಳುತ್ತಿದೆ. ವಿದ್ಯಾರ್ಥಿಗಳೊಡನೆ ಅನುಚಿತವಾಗಿ ವರ್ತಿಸುತ್ತ ಶಿಕ್ಷಕ ಸ್ಥಾನಕ್ಕೆ ಕಪ್ಪುಮಸಿ ಬಳಿಯುತ್ತಿದ್ದಾರೆ. ಆದರ್ಶ ಶಿಕ್ಷಕರು ಇಲ್ಲವೆಂದಲ್ಲ. ಆದರೆ ಅಂಥವರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿರುವುದು ಇಂದಿನ ಶಿಕ್ಷಣ ಕ್ಷೇತ್ರದ ಬಹುಮುಖ್ಯ ಸಮಸ್ಯೆಯಾಗಿದೆ.

ವಾಚಕರ ವಾಣಿ

ಸಾವರ್ಕರ್ ಚಿತ್ರ: ಮುಚ್ಚುಮರೆ ಅಗತ್ಯವಿತ್ತೇ?

ಬೆಳಗಾವಿಯ ಸುವರ್ಣಸೌಧದಲ್ಲಿ ರಾಜ್ಯ ಸರ್ಕಾರವು ತರಾತುರಿಯಲ್ಲಿ ಸಾವರ್ಕರ್ ಅವರ ಫೋಟೊ ಹಾಕಿ ದೊಡ್ಡ ಸುದ್ದಿ ಮಾಡಿದೆ. ತನ್ನ ದೇಶದ ಘನತೆಗಾಗಿ ಜೀವಾರ್ಪಣೆ ಮಾಡಿದ ಸಂಗೊಳ್ಳಿ ರಾಯಣ್ಣ, ರಾಣಿ ಚೆನ್ನಮ್ಮ ಅವರ ಫೋಟೊ ಹಾಕಲಿಲ್ಲ. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಫೋಟೊ ಇಲ್ಲ. ತರಾತುರಿಯಲ್ಲಿ ರಹಸ್ಯವಾಗಿ ಸಮಾರಂಭ ಆಯೋಜಿಸುವ ಬದಲು ನಾಲ್ಕಾರು ಜನರೊಂದಿಗೆ ಸಮಾಲೋಚನೆ ನಡೆಸಲಿಲ್ಲ. ಮುಖ್ಯಮಂತ್ರಿಯವರು ವಿರೋಧಪಕ್ಷದ ನಾಯಕರೊಂದಿಗೆ ಸಮಾಲೋಚನೆ ನಡೆಸಲಿಲ್ಲ. ಇದು ಪ್ರಜಾಪ್ರಭುತ್ವದ ನಡೆಯೇ? ಯಾವ ಸಮಾರಂಭ ಒಂದು ಸಂಭ್ರಮದ ವಿಚಾರವಾಗಬೇಕಿತ್ತೋ ಅದು ಮುಚ್ಚುಮರೆಯ ಪ್ರಕರಣವಾಗಬೇಕಿತ್ತೇ? ಆಗಿರುವ ತಪ್ಪನ್ನು ನಿರ್ವಿಕಾರಚಿತ್ತದಿಂದ ಆಲೋಚಿಸಿ ಸಂಬಂಧಿಸಿದವರು ತಪ್ಪನ್ನು ಸರಿಪಡಿಸಲು ಒತ್ತಾಯಿಸುತ್ತೇವೆ.

ಡಾ. ಕೆ.ಮರುಳಸಿದ್ಧಪ್ಪ, ಡಾ. ಜಿ.ರಾಮಕೃಷ್ಣ, ಪ್ರೊ. ಎಸ್.ಜಿ.ಸಿದ್ಧರಾಮಯ್ಯ, ಡಾ. ವಿಜಯಾ, ಡಾ.ಕಾಳೇಗೌಡ ನಾಗವಾರ, ಕೆ.ಎಸ್.ವಿಮಲಾ, ಶ್ರೀಪಾದ ಭಟ್, ಡಾ. ನಿರಂಜನಾರಾಧ್ಯ, ಡಾ. ಬಂಜಗೆರೆ ಜಯಪ್ರಕಾಶ್,ಡಾ. ವಸುಂಧರಾ ಭೂಪತಿ, ರುದ್ರಪ್ಪ ಹನಗವಾಡಿ

ಪ್ರಶ್ನೆಪತ್ರಿಕೆಯು ಸಾಮರ್ಥ್ಯವನ್ನು ಒರೆಗೆ ಹಚ್ಚಲಿ

ಪಿಯು ಮಂಡಳಿಯು 2022-23ನೇ ಸಾಲಿನ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ಪ್ರಶ್ನೆಪತ್ರಿಕೆಯ ನೀಲನಕ್ಷೆ ಮತ್ತು ಮಾದರಿ ಪ್ರಶ್ನೆಪತ್ರಿಕೆಯನ್ನು ಬಿಡುಗಡೆಗೊಳಿಸಿದೆ. ಇದರಲ್ಲಿ ಬಹು ಆಯ್ಕೆಯ ಪ್ರಶ್ನೆಗಳು, ಆವರಣದಲ್ಲಿರುವ ಉತ್ತರ ಆರಿಸಿ ಬರೆಯುವುದು, ಬಿಟ್ಟ ಜಾಗ ಭರ್ತಿ ಮಾಡುವ ಅಥವಾ ಹೊಂದಿಸಿ ಬರೆಯುವುದಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಎರಡು, ಮೂರು, ಐದು ಅಂಕಗಳ ಪ್ರಶ್ನೆಗಳನ್ನೇ ಹೆಚ್ಚಾಗಿ ನೀಡಲಾಗಿದೆ.

ಇದನ್ನು ಗಮನಿಸಿದಾಗ, ಇದೊಂದು ಪ್ರಾಥಮಿಕ ಹಂತದ ಪ್ರಶ್ನೆಪತ್ರಿಕೆಯಂತೆ ಭಾಸವಾಗುತ್ತದೆ. ಹೆಚ್ಚು ಮಕ್ಕಳು ತೇರ್ಗಡೆಯಾಗುವಂತೆ ಮಾಡುವುದೇ ಇದರ ಮುಖ್ಯ ಉದ್ದೇಶವಾಗಿದೆ. ಆದರೆ ಮಕ್ಕಳ ನಿಜವಾದ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಸಾಧ್ಯವಿಲ್ಲ. ಹಿಂದಿನಂತೆ ದೀರ್ಘ ಉತ್ತರ ನಿರೀಕ್ಷಿಸುವ ಪ್ರಶ್ನೆಪತ್ರಿಕೆ ಇದ್ದಿದ್ದರೆ ಮಕ್ಕಳ ನಿಜವಾದ ಶೈಕ್ಷಣಿಕ ಸಾಮರ್ಥ್ಯವನ್ನು ಗುರುತಿಸಬಹುದಿತ್ತು.

ದೇವರಹಳ್ಳಿ ಲೋಕೇಶ್, ಪಾಂಡವಪುರ

ಸಿಡಿಮದ್ದು ಪ್ರದರ್ಶನ ಕೈಬಿಡಿ

ಮೂಡುಬಿದಿರೆಯಲ್ಲಿ ನಡೆಯುತ್ತಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯು ಮಕ್ಕಳಲ್ಲಿ ಸಮಾಜಮುಖಿ ಕಾಳಜಿಯನ್ನು, ಪರಿಸರಪ್ರೇಮವನ್ನು ಮೂಡಿಸಲು ಉದ್ದೇಶಿಸಿರುವುದು ಸ್ವಾಗತಾರ್ಹ. ಆದರೆ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಸಿಡಿಮದ್ದು ಪ್ರದರ್ಶನ ಏರ್ಪಡಿಸಿರುವುದು ಸರಿಯಲ್ಲ.

ಅಲ್ಲಿ ಸೇರಿದವರು ಸಿಡಿಮದ್ದು ಪ್ರದರ್ಶನದಿಂದ ಒಂದು ಕ್ಷಣ ಸಂತಸಗೊಳ್ಳಬಹುದು. ಆದರೆ ಅದರಿಂದಾಗಿ ನಮ್ಮ ಪರಿಸರ ಮಲಿನಗೊಳ್ಳುತ್ತದೆ. ಉಸಿರಾಡುವ ಗಾಳಿ ವಿಷಮಯವಾಗುತ್ತದೆ. ಹೀಗಾಗಿ ಅದೊಂದು ಪರಿಸರ ಮಾಲಿನ್ಯಕಾರಕ ಚಟುವಟಿಕೆಯಾಗಿದೆ. ಆದ್ದರಿಂದ ನಾವು ಬಹಳಷ್ಟು ಹಣವನ್ನು ಖರ್ಚು ಮಾಡಿ, ಅಲ್ಲಿ ಸೇರಿದ ಸಾವಿರಾರು ಮಕ್ಕಳಿಗೆ ಸಿಡಿಮದ್ದು ಪ್ರದರ್ಶನದಿಂದ ಯಾವ ಮೌಲ್ಯಸಂದೇಶವನ್ನು ಬಿತ್ತಿದಂತೆ ಆಗುತ್ತದೆ?! ಇದೊಂದು ವಿರೋಧಾಭಾಸ. ಆದ್ದರಿಂದ ಸಿಡಿಮದ್ದು ಪ್ರದರ್ಶನವನ್ನು ಸಂಘಟಕರು ಕೈಬಿಡಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಕ್ಷರ ಜಾತ್ರೆ: ಎಲ್ಲರಿಗೂ ಸಲ್ಲುವಂತಿರಲಿ

ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳ ಆನ್‌ಲೈನ್ ನೋಂದಣಿಗೆ ನೀರಸ ಪ್ರತಿಕ್ರಿಯೆಯ ಸುದ್ದಿ (ಪ್ರ.ವಾ., ಡಿ. 21) ಓದಿ, ಡಾ. ಎಸ್.ಎಲ್.ಭೈರಪ್ಪನವರು ಸಮ್ಮೇಳನದ ಅಧ್ಯಕ್ಷರಾಗಿದ್ದ, ಕನಕಪುರದಲ್ಲಿ ನಡೆದ 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಾಯಿತು. ಆಗ ಡಾ. ಬಸವಾರಾಧ್ಯರು ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕಕ್ಕೆ ಎಲ್ಲೇಗೌಡ ಬೆಸಗರಹಳ್ಳಿಯವರು ಅಧ್ಯಕ್ಷರಿದ್ದರು, ಕನಕಪುರ ತಾಲ್ಲೂಕು ಕಚೇರಿಯಲ್ಲಿ ಆಹಾರ ಪರಿವೀಕ್ಷಕನಾಗಿದ್ದ ನಾನು, ಗ್ರಾಮಾಂತರ ಜಿಲ್ಲೆಗೆ ಕಸಾಪ ಖಜಾಂಚಿ ಆಗಿದ್ದೆ. ಆಗ ಸಚಿವರಾಗಿದ್ದ ಪಿ.ಜಿ.ಆರ್.ಸಿಂಧ್ಯಾ ಅವರು ಸಮ್ಮೇಳನದ ಉಸ್ತುವಾರಿ ನೋಡುತ್ತಿದ್ದರು. ಮೂರು ದಿನಗಳ ಊಟ ವಸತಿಗಾಗಿ ಪ್ರತಿನಿಧಿ ಶುಲ್ಕ ₹ 100 ಪಡೆದು ರಸೀದಿ ನೀಡುವಂತೆ ಕೇಂದ್ರ ಸಾಹಿತ್ಯ ಪರಿಷತ್ತು ಸೂಚಿಸಿತ್ತು. ಈ ಸುದ್ದಿ ಉಸ್ತುವಾರಿ ಸಚಿವರಿಗೆ ತಿಳಿಯಿತು. ತಕ್ಷಣ ಅವರು ಸ್ವಾಗತ ಸಮಿತಿಯ ಸಭೆ ಕರೆದು ಪ್ರತಿನಿಧಿ ಶುಲ್ಕವನ್ನು ವಸೂಲು ಮಾಡದಂತೆ ತಿಳಿಸಿದರು. ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೆ ಉಚಿತ ಊಟ, ವಸತಿ ಘೋಷಣೆ ಮಾಡಿದರು. ಸರ್ಕಾರವೇ ಎಲ್ಲವನ್ನೂ ಭರಿಸಿತ್ತು. 'ನ ಭೂತೋ ನ ಭವಿಷ್ಯತ್' ಎನ್ನುವಂತೆ ಭರ್ಜರಿ ಊಟದ ವ್ಯವಸ್ಥೆ ಆಗಿತ್ತು.

ಸ್ಥಳೀಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಜನರು ಅಕ್ಷರ ಜಾತ್ರೆಗೆ ಮುಗಿಬಿದ್ದರು. ಸುತ್ತಮುತ್ತಲಿನ ಊರುಗಳ ಮಹಿಳೆಯರು, ಗಂಡಸರು ವಯಸ್ಸಿನ ಅಂತರವಿಲ್ಲದಂತೆ ಬಂದು ಅಕ್ಷರ ಜಾತ್ರೆಯಲ್ಲಿ ಅಡ್ಡಾಡಿ ಊಟ ಮಾಡಿ ಹೋದರು. ಆನಂತರದಲ್ಲಿ ನಡೆದ ಬಹುತೇಕ ಸಮ್ಮೇಳನಗಳಲ್ಲಿ ರುಚಿ ರುಚಿಯಾದ ಊಟವನ್ನು ಉಚಿತವಾಗಿಯೇ ಬಡಿಸಲಾಗಿದೆ. ದೂರದಿಂದ ಬರುವ ಶಿಕ್ಷಕರು, ಸರ್ಕಾರಿ ನೌಕರ ಪ್ರತಿನಿಧಿಗಳಿಗೆ ಹಾಜರಾತಿ ಪತ್ರ ಪಡೆಯಲು ಅನುಕೂಲವಾಗುವಂತೆ ಆದಷ್ಟೂ ಕಡಿಮೆ ಪ್ರತಿನಿಧಿ ಶುಲ್ಕ ವಿಧಿಸಿದ್ದು ಇದೆ.

ಈಗಲೂ ಅಷ್ಟೇ, ಸಮ್ಮೇಳನಕ್ಕಾಗಿ ₹ 20 ಕೋಟಿ ಕೊಟ್ಟಿರುವ ಸರ್ಕಾರಕ್ಕೆ ಯಾವುದೂ ಭಾರವಾಗಿಲ್ಲ. ಸಮ್ಮೇಳನಕ್ಕೆ ಬರುವವರೆಲ್ಲಾ ಗೋಷ್ಠಿಗಳಲ್ಲಿ ಕೂಡಲು ಬರುವುದಿಲ್ಲ. ಪುಸ್ತಕ ಖರೀದಿಸಲು, ಊಟದ ವೈಶಿಷ್ಟ್ಯ ಸವಿಯಲು, ಮಾತು ಕೇಳಲು, ಕವಿಗಳು, ಸಾಹಿತಿಗಳನ್ನು ಮಾತನಾಡಿಸಲು, ಹೊಸತನಕ್ಕಾಗಿ ಅಡ್ಡಾಡಲು ಬರುವ, ಆನ್‌ಲೈನ್, ಆಫ್‌ಲೈನ್ ಪರಿಜ್ಞಾನವೇ ಇಲ್ಲದ ಸ್ಥಳೀಯ ಹಿರಿ ಕಿರಿಯರೂ ಇದ್ದಾರೆ. ಎಲ್ಲರಿಗೂ ಅನುಕೂಲ ಆಗುವಂತೆ ಪರಿಷತ್ತಿನ ಪದಾಧಿಕಾರಿಗಳು ಮತ್ತು ಉಸ್ತುವಾರಿ ಸಚಿವರೂ ಸೇರಿ ಸಮಾಲೋಚನೆ ನಡೆಸಿ ಉಚಿತ ಊಟ, ಕಡಿಮೆ ಶುಲ್ಕ, ಆನ್‌ಲೈನ್, ಆಫ್‌ಲೈನ್ ಜೊತೆಗೆ ರಸೀದಿ ಮೂಲಕವೂ ಪ್ರತಿನಿಧಿಗಳಾಗಲು ಅವಕಾಶ ಕೊಟ್ಟು ಸಮ್ಮೇಳನ ಯಶಸ್ವಿ ಆಗುವಂತೆ ಎಲ್ಲರೂ ಸಹಕರಿಸಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೀವವೈವಿಧ್ಯ ಸಂರಕ್ಷಣೆಗೆ ಸುಸ್ಥಿರ ಕ್ರಿಯಾಯೋಜನೆ

ವಿಶ್ವದ ಜೀವವೈವಿಧ್ಯ ಸಂರಕ್ಷಣೆಗಾಗಿ ರೂಪಿಸಿರುವ ಜಾಗತಿಕ ಕ್ರಿಯಾ ಯೋಜನೆಗೆ 196 ದೇಶಗಳು ಈಚೆಗೆ ಸಹಿ ಮಾಡಿವೆ. ನಾಲ್ಕು ವರ್ಷಗಳಿಂದ ಚರ್ಚೆಯಲ್ಲಿದ್ದ ಈ ಕ್ರಿಯಾಯೋಜನೆಗೆ ಈಗ ಅಂತಿಮ ರೂಪ ದೊರೆತಿದೆ. ಮಾನವನ ಚಟುವಟಿಕೆಗಳು ಪರಿಸರದ ಮೇಲೆ ಬೀರುತ್ತಿರುವ ಪ್ರತಿಕೂಲ ಪರಿಣಾಮಗಳನ್ನು ಕಡಿಮೆ ಮಾಡುವ ಮತ್ತು ಜೀವವೈವಿಧ್ಯಕ್ಕೆ ಪೂರಕವಾಗುವಂತೆ ಆರ್ಥಿಕ ಚಟುವಟಿಕೆಗಳನ್ನು ಮಾರ್ಪಡಿಸುವ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು 2050ರ ವೇಳೆಗೆ ಸಾಧಿಸಬೇಕು ಎಂಬುದು ಈ ಕ್ರಿಯಾಯೋಜನೆಯ ಗುರಿ. ಜಾಗತಿಕ ಮಟ್ಟದ ಎಲ್ಲಾ ಪರಿಸರ ಸಂಬಂಧಿ ಕ್ರಿಯಾಯೋಜನೆಗಳ ಅನುಷ್ಠಾನದ ಪ್ರಯೋಗಶಾಲೆಗಳು ಅಭಿವೃದ್ಧಿಶೀಲ ರಾಷ್ಟ್ರಗಳೇ ಆಗಿವೆ. ಜಾಗತಿಕ ಜೀವವೈವಿಧ್ಯ ಕ್ರಿಯಾಯೋಜನೆಯಲ್ಲೂ ಅಭಿವೃದ್ಧಿಶೀಲ ದೇಶಗಳೇ ಈ ಪ್ರಯೋಗಕ್ಕೆ ಇಳಿಯಬೇಕಿದೆ

ಅಪಾಯಗಳ ನಿವಾರಣೆ

2050 ವೇಳೆಗೆ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು ರೂಪಿಸುವಲ್ಲಿ ಕೆಲವಾರು ಕಡಿಮೆ ಅವಧಿಯ ಗುರಿಗಳನ್ನು ಹಾಕಿಕೊಳ್ಳಲಾಗಿದೆ. 2030ರ ವೇಳೆಗೆ ಈ ಗುರಿಗಳನ್ನು ಮುಟ್ಟಬೇಕಿದೆ. ಅವುಗಳಲ್ಲಿ, ಜೀವವೈವಿಧ್ಯವು ಈಗ ಎದುರಿಸುತ್ತಿರುವ ಅಪಾಯಗಳನ್ನು ನಿವಾರಣೆ ಮಾಡುವುದು ಮೊದಲ ಗುರಿ.

- ವಿಶ್ವದ ಎಲ್ಲೆಡೆ ನೆಲ ಮತ್ತು ಜಲದಲ್ಲಿ ಜೀವವೈವಿಧ್ಯದ ದೃಷ್ಟಿಯಿಂದ ಮಹತ್ವದ ಸ್ಥಳಗಳನ್ನು ರಕ್ಷಿಸಬೇಕು. ಅಂತಹ ಸ್ಥಳಗಳಿಗೆ ಅಥವಾ ನೆಲೆಗಳಿಗೆ ಇನ್ನೂ ಹೆಚ್ಚಿನ ಹಾನಿಯಾಗದಂತೆ ಎಚ್ಚರವಹಿಸಬೇಕು
- ನೆಲ ಮತ್ತು ಜಲ ಪ್ರದೇಶಗಳಲ್ಲಿ ಈಗಾಗಲೇ ನಾಶವಾಗಿರುವ ಜೀವವೈವಿಧ್ಯ ನೆಲೆಗಳಲ್ಲಿ, ಶೇ 20ರಷ್ಟಾದರೂ ನೆಲೆಗಳನ್ನು ಮರುರೂಪಿಸುವ ಕೆಲಸವಾಗಬೇಕು. ಅಲ್ಲಿದ್ದ ಸಹಜ ಪರಿಸರ ವ್ಯವಸ್ಥೆಯನ್ನು ಮರುಸ್ಥಾಪಿಸಬೇಕು
- ಜೀವವೈವಿಧ್ಯದ ದೃಷ್ಟಿಯಿಂದ ತೀರಾ ಮಹತ್ವ ಪಡೆದಿರುವ ಹಲವು ಪ್ರದೇಶಗಳು ಈಗಾಗಲೇ ನಾಶವಾಗಿವೆ. ಅತ್ಯಂತ ಮಹತ್ವದ ಈ ಪ್ರದೇಶಗಳಲ್ಲಿ ಶೇ 30ರಷ್ಟನ್ನಾದರೂ ಮರುಸ್ಥಾಪಿಸಬೇಕು
- ಒಂದು ಪ್ರದೇಶಕ್ಕೆ ಸೀಮಿತವಾದ ಸಸ್ಯ ಮತ್ತು ಪ್ರಾಣಿ ಪ್ರಬೇಧಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಆದ್ಯತೆ ನೀಡಬೇಕು. ಈಗಾಗಲೇ ವಿನಾಶದ ಅಂಚಿಗೆ ತಲುಪಿರುವ ಇಂತಹ ಪ್ರಬೇಧಗಳನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಬೇಕು. ಮಾನವ–ವನ್ಯಜೀವಿ ಸಂಘರ್ಷವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು
- ಅರಣ್ಯ ಉತ್ಪನ್ನಗಳನ್ನು ಸುಸ್ಥಿರ ವಿಧಾನದ ಮೂಲಕ ಸಂಗ್ರಹಿಸಬೇಕು. ಅಂತಹ ಉತ್ಪನ್ನಗಳ ಸಂಗ್ರಹ, ಮಾರಾಟ ಮತ್ತು ಬಳಕೆಯನ್ನು ಕಾನೂನುಬದ್ಧಗೊಳಿಸಬೇಕು. ಈ ಮೂಲಕ ಅರಣ್ಯಗಳ ಬಳಕೆಯ ಮೇಲೆ ನಿಗಾ ಇರಿಸಬೇಕು
- ಬೇರೊಂದು ಪರಿಸರದ ಪ್ರಬೇಧಗಳನ್ನು ಹೊಸ ಪ್ರದೇಶಗಳಿಗೆ ಪರಿಚಯಿಸುವ ಯತ್ನಗಳು ಕಡಿಮೆಯಾಗಬೇಕು. ನಿಯಂತ್ರಿತ ವಿಧಾನದಲ್ಲಿ ಇಂತಹ ಕ್ರಿಯೆಗಳನ್ನು ನಡೆಸಬೇಕು. ಸ್ಥಳೀಯ ಪ್ರಬೇಧಗಳಿಗೆ ಪ್ರತಿಕೂಲವಾಗಿ ಪರಿಣಮಿಸುವ ಅಥವಾ ಪರಿಣಮಿಸುತ್ತಿರುವ ಬೇರೊಂದು ಪರಿಸರದ ಪ್ರಬೇಧಗಳನ್ನು, ಅಲ್ಲಿಂದ ನಿವಾರಣೆ ಮಾಡಬೇಕು
- ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಗೆ ಧಕ್ಕೆಯಾಗದೇ ಇರುವಷ್ಟರಮಟ್ಟಿಗೆ ಎಲ್ಲಾ ಸ್ವರೂಪದ ಮಾಲಿನ್ಯಗಳನ್ನು ತಗ್ಗಿಸಬೇಕು. ಭೂಮಿಯ ಫಲವತ್ತತೆ ಕಳೆದುಕೊಳ್ಳುವಂತಹ ಕ್ರಿಯೆಗಳನ್ನು 2030ರ ವೇಳೆಗೆ ಶೇ 50ರಷ್ಟು ಕಡಿಮೆ ಮಾಡಬೇಕು. ಕೃಷಿಯಲ್ಲಿ ಕೀಟನಾಶಕಗಳ ಬಳಕೆಯನ್ನು ಮೂರನೇ ಎರಡರಷ್ಟು ಕಡಿಮೆ ಮಾಡಬೇಕು. 2030ರ ವೇಳೆಗೆ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಪೂರ್ಣವಾಗಿ ನಿವಾರಿಸಬೇಕು
- ಹವಾಮಾನ ವೈಪರೀತ್ಯವು ಜೀವವೈವಿಧ್ಯವನ್ನು ಬಾಧಿಸದಂತೆ ತಡೆಯಬೇಕು ಅಥವಾ ಅದರ ಪರಿಣಾಮವನ್ನು ಕಡಿಮೆ ಮಾಡಬೇಕು. ಈಗಾಗಲೇ ಜೀವವೈವಿಧ್ಯದ ಮೇಲೆ ಆಗಿರುವ ದುಷ್ಪರಿಣಾಮಗಳನ್ನು ಅಧ್ಯಯನ ಮಾಡಬೇಕು. ಮತ್ತೆ ಅಂತಹ ಪರಿಸರ ವ್ಯವಸ್ಥೆ ಮರುಸ್ಥಾಪನೆಗೆ ಯತ್ನಿಸಬೇಕು

‘ಹಂಚಿಕೊಳ್ಳುವುದರಲ್ಲಿದೆ ಸುಸ್ಥಿರ ಅಭಿವೃದ್ಧಿ’

ಜೀವವೈವಿಧ್ಯ ಸಂರಕ್ಷಣೆಯನ್ನು ಸುಸ್ಥಿರ ಅಭಿವೃದ್ಧಿಯ ಮಾದರಿಯನ್ನಾಗಿಸುವುದೂ ಈ ಕ್ರಿಯಾಯೋಜನೆಯ ಮಹತ್ವದ ಘಟ್ಟಗಳಲ್ಲಿ ಒಂದು. ಜೀವವೈವಿಧ್ಯ ಸಂರಕ್ಷಣೆ ಹೆಸರಿನಲ್ಲಿ ಅತ್ಯಗತ್ಯವಾದ ಅಭಿವೃದ್ಧಿ ಚಟುವಟಿಕೆಗಳು ಕುಂಠಿತವಾಗದಂತೆ ನೋಡಿಕೊಳ್ಳುವುದು ಮತ್ತು ಮಾನವರ ಅಗತ್ಯ ಪೂರೈಕೆಗೆ ತೊಡಕಾಗದಂತೆ ಎಚ್ಚರವಹಿಸುವುದೂ ಅತ್ಯಗತ್ಯವಾಗಿದೆ. ಇದಕ್ಕಾಗಿಯೂ ಕೆಲವಾರು ಕ್ರಿಯಾಚೌಕಟ್ಟುಗಳನ್ನು ಅಳವಡಿಸಿಕೊಳ್ಳಲಾಗಿದೆ. ಇವುಗಳನ್ನು ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಪಾಲಿಸಬೇಕಿದೆ.

ಜೀವವೈವಿಧ್ಯ ಸಂರಕ್ಷಣೆಯಲ್ಲಿ ನೆಲ, ಜಲ ಸಂರಕ್ಷಣೆಗೆ ಕ್ರಮ ತೆಗೆದುಕೊಳ್ಳುವುದೇನೋ ಸರಿ. ಆದರೆ, ಅದರಿಂದ ಜನರ ಆಹಾರ ಭದ್ರತೆಗೆ, ಪೌಷ್ಟಿಕಾಂಶ ಪೂರೈಕೆಗೆ ಯಾವುದೇ ತೊಡಕಾಗಬಾರದು. ಆಹಾರ ಭದ್ರತೆ ಮತ್ತು ಪೌಷ್ಟಿಕಾಂಶ ಪೂರೈಕೆಗೆ ಧಕ್ಕೆಯಾದರೆ ಜನರ ಆರೋಗ್ಯವು ಹದಗೆಡುವ ಅಪಾಯವಿರುತ್ತದೆ. ಜತೆಗೆ ಜನರ ಜೀವನೋಪಾಯಕ್ಕೂ ಧಕ್ಕೆಯಾಗುತ್ತದೆ. ಈ ಕಾರಣದಿಂದಾಗಿ ಸುಸ್ಥಿರ ಅಭಿವೃದ್ಧಿಯ ಮಾದರಿಯನ್ನು ರೂಪಿಸುವುದು ಅತ್ಯವಶ್ಯಕ. ಹೀಗಾಗಿ ಬುಡಕಟ್ಟು ಸಮುದಾಯಗಳು ಪರಿಸರದ ಜತೆಗೆ ಇಟ್ಟುಕೊಂಡಿರುವಂತಹ ರಕ್ಷಣಾತ್ಮಕ ಪದ್ಧತಿಗಳ ಅಧ್ಯಯನ ನಡೆಸಬೇಕು ಮತ್ತು ಅವುಗಳನ್ನು ಅಳವಡಿಸಿಕೊಳ್ಳಬೇಕು. ಈ ಮೂಲಕ ಪರಿಸರ ಸಂರಕ್ಷಣೆ ಮತ್ತು ಜನರ ಜೀವನೋಪಾಯ ಎರಡನ್ನೂ ಸಮರ್ಥವಾಗಿ ನಿರ್ವಹಿಸಬೇಕು ಎಂಬುದು ಈ ಕ್ರಿಯಾ ಯೋಜನೆಯ ಉದ್ದೇಶ.

ಪ್ರತಿ ಪ್ರದೇಶದಲ್ಲೂ ಅಲ್ಲಿನ ಪರಿಸರ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಕೃಷಿ ಪದ್ಧತಿ, ಮೀನುಗಾರಿಕೆ ಮತ್ತು ಅರಣ್ಯೀಕರಣ ಕ್ರಮಗಳನ್ನು ರೂಪಿಸಬೇಕು. ಏಕಸ್ವರೂಪದ ಪದ್ಧತಿಗಳು, ಎಲ್ಲಾ ಪರಿಸರಗಳಿಗೆ ಹೊಂದಿಕೆಯಾಗುವುದಿಲ್ಲ. ಕೆಲವು ಪರಿಸರ ವ್ಯವಸ್ಥೆಗೆ ಪೂರಕವಾಗುವ ಅಭಿವೃದ್ಧಿ ಪದ್ಧತಿಗಳು, ಬೇರೊಂದು ಪರಿಸರ ವ್ಯವಸ್ಥೆಗೆ ಮಾರಕವಾಗಬಹುದು. ಈ ಅಪಾಯವನ್ನು ತಪ್ಪಿಸುವ ಸಲುವಾಗಿ ಪ್ರತಿ ಜೀವವೈವಿಧ್ಯ ತಾಣಕ್ಕೂ ಪ್ರತ್ಯೇಕವಾದ ಅಭಿವೃದ್ಧಿ ಪದ್ಧತಿಗಳನ್ನು ರೂಪಿಸುವುದಕ್ಕೆ ಆದ್ಯತೆ ನೀಡಬೇಕು.

ಸುಸ್ಥಿರ ಅಭಿವೃದ್ಧಿಯ ಮಾದರಿ ಮತ್ತು ಪದ್ಧತಿಗಳ ಜ್ಞಾನವನ್ನು ವಿಶ್ವದ ಎಲ್ಲಾ ದೇಶಗಳ ಜತೆಗೆ ಹಂಚಿಕೊಳ್ಳಬೇಕು. ಇದರಿಂದ ಜೀವವೈವಿಧ್ಯದ ರಕ್ಷಣೆ, ಮಾನವನ ಜೀವನೋಪಾಯ ಮತ್ತು ಆರೋಗ್ಯದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಈ ಸ್ವರೂಪದ ಪರಸ್ಪರ ನೆರವಾಗುವಂತಹ ಮನಸ್ಥಿತಿಯು ಸುಸ್ಥಿರ ಅಭಿವೃದ್ಧಿ ಸಾಧಿಸಲು ನೆರವಾಗುತ್ತದೆ ಎಂದು ಜೀವವೈವಿಧ್ಯ ಸಂರಕ್ಷಣೆ ಕ್ರಿಯಾಯೋಜನೆಯಲ್ಲಿ ವಿವರಿಸಲಾಗಿದೆ.

ಜೀವವೈವಿಧ್ಯ ಸಂರಕ್ಷಣೆಗೆ ಮುಂದಾಗಬೇಕಿರುವುದು ಅಭಿವೃದ್ಧಿಶೀಲ ದೇಶಗಳೇ ಆಗಿವೆ. ಕ್ರಿಯಾಯೋಜನೆಯಲ್ಲಿ ವಿವರಿಸಿರುವಂತಹ ಗುರಿಗಳನ್ನು ಸಾಧಿಸಲು ಈ ದೇಶಗಳು ತಮ್ಮ ಅಭಿವೃದ್ಧಿಯನ್ನು ಸ್ವಲ್ಪಮಟ್ಟಿಗೆ ಬಲಿಕೊಡಬೇಕಾದ ಅನಿವಾರ್ಯತೆ ಇದೆ. ಅಭಿವೃದ್ಧಿಶೀಲ ದೇಶಗಳು ಮಾಡುವ ಇಂತಹ ತ್ಯಾಗಕ್ಕೆ, ಅಭಿವೃದ್ಧಿ ಹೊಂದಿದ ದೇಶಗಳು ಪರಿಹಾರ ಒದಗಿಸಬೇಕಾಗುತ್ತದೆ. ಹವಾಮಾನ ವೈಪರೀತ್ಯ ನಿಯಂತ್ರಣ ಕ್ರಮಗಳಲ್ಲೂ ಅಭಿವೃದ್ಧಿ ಹೊಂದಿದ ದೇಶಗಳು, ಅಭಿವೃದ್ಧಿಶೀಲ ದೇಶಗಳಿಗೆ ಈ ಸ್ವರೂಪದ ಹಣಕಾಸು ನೆರವನ್ನು ನೀಡುತ್ತಿವೆ. ಜೀವವೈವಿಧ್ಯ ಸಂರಕ್ಷಣೆ ಕ್ರಿಯಾಯೋಜನೆಯಲ್ಲೂ ಅಭಿವೃದ್ಧಿಶೀಲ ದೇಶಗಳಿಗೆ ಇಂತಹ ನೆರವು ದೊರೆಯಲಿದೆ. ಭಾರತಕ್ಕೂ ಇಂತಹ ಅನುದಾನ ದೊರೆಯಲಿದೆ ಎಂದು ನಿರೀಕ್ಷಿಸಲಾಗಿದೆ.

ಅನುಷ್ಠಾನದ ತಂತ್ರಗಳು

- ಜೀವವೈವಿಧ್ಯ ಸಂರಕ್ಷಣೆ ದಿಸೆಯಲ್ಲಿ ತೆಗೆದುಕೊಳ್ಳುವ ವೈವಿಧ್ಯಮಯ ಕ್ರಮಗಳು ಸಮಗ್ರವಾಗಿರಬೇಕು. ನೀತಿಗಳು, ನಿಯಮಾವಳಿಗಳು, ಯೋಜನೆ, ಅಭಿವೃದ್ಧಿ ಪ್ರಕ್ರಿಯೆ, ಬಡತನ ನಿರ್ಮೂಲನೆ ಕಾರ್ಯತಂತ್ರಗಳು, ಸರ್ಕಾರದ ಎಲ್ಲ ಹಂತಗಳಲ್ಲಿ ತೆಗೆದುಕೊಳ್ಳುವ ಪರಿಸರ ಪರಿಣಾಮ ಮೌಲ್ಯಮಾಪನ ಚಟುವಟಿಕೆಗಳು ಹಾಗೂ ಆರ್ಥಿಕ ಕಾರ್ಯಕ್ರಮಗಳು ಜೀವವೈವಿಧ್ಯ ರಕ್ಷಣೆ ಉದ್ದೇಶಕ್ಕೆ ಹೊಂದಾಣಿಕೆಯಾಗುವಂತಿರಬೇಕು
- ಸರ್ಕಾರಿ ಹಾಗೂ ಖಾಸಗಿ ವಲಯದ ಸಣ್ಣ, ಮಧ್ಯಮ, ಬೃಹತ್ ಉದ್ದಿಮೆಗಳು ತಮ್ಮ ನಿಯಂತ್ರಣದಲ್ಲಿರುವ ಚಟುವಟಿಕೆಗಳ ಮೇಲೆ ನಿಗಾ ವಹಿಸಿ, ಜೀವವೈವಿಧ್ಯದ ಮೇಲೆ ಸ್ಥಳೀಯವಾಗಿ ಅಥವಾ ಜಾಗತಿಕವಾಗಿ ಪರಿಣಾಮ ಉಂಟಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ವರದಿ ಮಾಡಬೇಕು. ಪರಿಸರದ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತಿದ್ದಲ್ಲಿ, ಅದನ್ನು ಅರ್ಧದಷ್ಟು ತಗ್ಗಿಸಲು ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಜೀವವೈವಿಧ್ಯ ಸಂರಕ್ಷಣೆಗೆ ಪೂರಕವಾದ ಕ್ರಮಗಳನ್ನೂ ತೆಗೆದುಕೊಳ್ಳಬೇಕು. ಈ ಮೂಲಕ ಉದ್ಯಮಗಳಲ್ಲಿ ಜೀವವೈವಿಧ್ಯಕ್ಕೆ ಇರುವ ಅಪಾಯಗಳನ್ನು ತಪ್ಪಿಸಿ, ಉತ್ಪಾದನೆ, ಪೂರೈಕೆ ಸರಪಳಿ, ವಿಲೇವಾರಿಯಲ್ಲಿ ಸುಸ್ಥಿರತೆ ಸಾಧಿಸಬಹುದು
- ಜನರು ತಮ್ಮ ಸಂಸ್ಕೃತಿಯ ಅನುಸಾರ ತೊಡಗಿಕೊಳ್ಳುವ ಚಟುವಟಿಕೆಗಳು ಜವಾಬ್ದಾರಿಯುತ ಆಯ್ಕೆಗಳು ಆಗಿರುವಂತೆ ನೋಡಿಕೊಳ್ಳಬೇಕಿದೆ. ಸೂಕ್ತ ಮಾಹಿತಿಗಳೊಂದಿಗೆ, ಪರ್ಯಾಯ ಚಟುವಟಿಕೆಗಳ ಬಗ್ಗೆ ಅವರನ್ನು ಜಾಗೃತಗೊಳಿಸಬೇಕಿದೆ. ತ್ಯಾಜ್ಯ ಉತ್ಪಾದನೆಯನ್ನು ಅರ್ಧದಷ್ಟು ಕಡಿತಗೊಳಿಸುವುದು, ಆಹಾರ ಹಾಗೂ ಇತರೆ ಸಾಮಗ್ರಿಗಳ ಅತಿಯಾದ ಬಳಕೆಯ ಬಗ್ಗೆ ತಿಳಿವಳಿಕೆ ಮೂಡಿಸಬೇಕಿದೆ
- ಜೈವಿಕ ತಂತ್ರಜ್ಞಾನದಿಂದಾಗಿ ಜೀವವೈವಿಧ್ಯ, ಮಾನವನ ಆರೋಗ್ಯದ ಮೇಲೆ ಆಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಎಲ್ಲ ದೇಶಗಳಲ್ಲಿ ಪೂರಕ ಕ್ರಮಗಳನ್ನು ತೆಗೆದುಕೊಳ್ಳಬೇಕು

- ಜೀವವೈವಿಧ್ಯಕ್ಕೆ ಹಾನಿಮಾಡಬಹುದಾದ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡುವುದನ್ನು ನ್ಯಾಯಯುತ ಮಾರ್ಗದಲ್ಲಿ ಸ್ಥಗಿತಗೊಳಿಸಬೇಕು ಅಥವಾ ನೀತಿಗಳಲ್ಲಿ ಸುಧಾರಣೆ ತರಬೇಕು. ಸಹಾಯಧನಗಳು ಸೇರಿದಂತೆ, ಪ್ರತೀ ವರ್ಷ ₹41 ಲಕ್ಷ ಕೋಟಿಯಷ್ಟು (500 ಬಿಲಿಯನ್ ಡಾಲರ್) ಮೊತ್ತದ ಪ್ರೋತ್ಸಾಹಧನವನ್ನು ಕಡಿತಗೊಳಿಸಬೇಕು
- ಸಾಮರ್ಥ್ಯ ವೃದ್ಧಿ, ತಂತ್ರಜ್ಞಾನ ವರ್ಗಾವಣೆ, ವೈಜ್ಞಾನಿಕ ಸಹಕಾರದ ಮೂಲಕ ಕ್ರಿಯಾಯೋಜನೆಯ ಗುರಿಗಳನ್ನು ತಲುಪಬಹುದು. ಇದಕ್ಕಾಗಿ ಹಣಕಾಸಿನ ಸಂಪನ್ಮೂಲವನ್ನು ವೃದ್ಧಿಸುವ ಅಗತ್ಯವಿದೆ. ಎಲ್ಲ ಮೂಲಗಳಿಂದ ₹16 ಲಕ್ಷ ಕೋಟಿ (200 ಬಿಲಿಯನ್ ಡಾಲರ್) ಹಣಕಾಸನ್ನು ಪ್ರತೀ ವರ್ಷ ಕ್ರೋಢೀಕರಿಸಬೇಕಿದೆ. ಈ ಪೈಕಿ ಸುಮಾರು ₹82 ಸಾವಿರ ಕೋಟಿಯಷ್ಟು ಹಣವನ್ನು (10 ಬಿಲಿಯನ್ ಡಾಲರ್) ಅಭಿವೃದ್ಧಿಶೀಲ ದೇಶಗಳಿಗೆ ಹರಿಸಬೇಕು. ರಾಷ್ಟ್ರೀಯ ಜೀವವೈವಿಧ್ಯ ಹಣಕಾಸು ಯೋಜನೆಗಾಗಿ ಖಾಸಗಿ ವಲಯದಿಂದ ಗರಿಷ್ಠ ನೆರವು ಪಡೆದುಕೊಳ್ಳಬೇಕು ಹಾಗೂ ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು
- ಜೀವವೈವಿಧ್ಯದ ಪರಿಣಾಮಕಾರಿ ನಿರ್ವಹಣೆಗೆ ಜನರಲ್ಲಿ ಜಾಗೃತಿ ಮೂಡಿಸುವುದು, ತಿಳಿವಳಿಕೆ ಮೂಡಿಸುವುದು ಹಾಗೂ ಸಂಶೋಧನೆಯ ಮಾರ್ಗಗಳು ಪರಿಣಾಮಕಾರಿ. ಜನಾಂಗೀಯ ಸಮುದಾಯಗಳು ಹಾಗೂ ಸ್ಥಳೀಯರಿಗೆ ಆದ್ಯತೆ ನೀಡಿ, ಅವರ ಜೊತೆ ಮುಕ್ತ ಸಮಾಲೋಚನೆಯೊಂದಿಗೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಜೀವವೈವಿಧ್ಯಕ್ಕೆ ಸಂಬಂಧಪಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ವೇಳೆ, ಜನಾಂಗೀಯ ಸಮುದಾಯದವರು ಹಾಗೂ ಸ್ಥಳೀಯ ನಿವಾಸಿಗಳ ಭಾಗವಹಿಸುವಿಕೆ ಕಡ್ಡಾಯ. ತಾವು ವಾಸಿಸುತ್ತಿರುವ ಪರಿಸರದ ಮೇಲೆ ಅವರು ಹೊಂದಿರುವ ಹಕ್ಕುಗಳು ಹಾಗೂ ಅಲ್ಲಿನ ಸಂಪನ್ಮೂಲಗಳನ್ನು ಗೌರವಿಸಬೇಕು

ಆಧಾರ: ವಿಶ್ವಸಂಸ್ಥೆಯ ಜೀವವೈವಿಧ್ಯ ಸಂರಕ್ಷಣಾ ಕ್ರಿಯಾಯೋಜನೆ, ಪಿಟಿಐ, ಎಎಫ್‌ಪಿ

ರಸಗೊಬ್ಬರ, ಕೀಟನಾಶಕ ಬಳಕೆಗೆ ನಿರ್ಬಂಧ

ಕೃಷಿಯಲ್ಲಿ ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯು ಜೀವವೈವಿಧ್ಯ ಸಂರಕ್ಷಣೆಯಲ್ಲಿ ದೊಡ್ಡ ತೊಡಕಾಗಿದೆ ಎಂಬುದು ಈ ಸಮ್ಮೇಳನದಲ್ಲಿ ಚರ್ಚೆಗೆ ಬಂದಿದ್ದ ಪ್ರಮುಖ ವಿಷಯಗಳಲ್ಲಿ ಒಂದು. ಹೀಗಾಗಿ ಕ್ರಿಯಾಯೋಜನೆಯಲ್ಲೂ ಈ ವಿಷಯವನ್ನು ಪ್ರಸ್ತಾಪಿಸಲಾಗಿತ್ತು.

ಅಭಿವೃದ್ಧಿಶೀಲ ದೇಶಗಳು ಕೃಷಿಯಲ್ಲಿ ಬಳಸುತ್ತಿರುವ ರಸಗೊಬ್ಬರ ಮತ್ತು ಕೀಟನಾಶಕಗಳಿಗೆ ಸಹಾಯಧನ ನೀಡುತ್ತಿವೆ. ಈ ಸಹಾಯಧನವನ್ನು ಕಡಿತಗೊಳಿಸಬೇಕು. ಆ ಮೂಲಕ ಕೃಷಿಯಲ್ಲಿ ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯನ್ನು ತಗ್ಗಿಸಬೇಕು ಎಂದು ಜೀವವೈವಿಧ್ಯ ಸಂರಕ್ಷಣೆಯ ಕರಡು ಕ್ರಿಯಾಯೋಜನೆಯಲ್ಲಿ ಉಲ್ಲೇಖಿಸಲಾಗಿತ್ತು.

ಇದಕ್ಕೆ ಭಾರತವು ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ‘ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯನ್ನು ತಗ್ಗಿಸುವುದು ಆಹಾರ ಪದಾರ್ಥಗಳ ಉತ್ಪಾದನೆಯನ್ನು ಬಾಧಿಸುತ್ತದೆ. ಇದರಿಂದ ಜನರ ಆಹಾರ ಭದ್ರತೆಗೆ ಧಕ್ಕೆಯಾಗುತ್ತದೆ. ಅಲ್ಲದೆ, ಜನರ ಜೀವನೋಪಾಯದ ಹಾದಿಯೂ ದುರ್ಗಮವಾಗುತ್ತದೆ. ಇಂತಹ ಷರತ್ತುಗಳು ಕಾರ್ಯಸಾಧುವಲ್ಲ. ಹೀಗಾಗಿ ರಸಗೊಬ್ಬರ ಮತ್ತು ಕೀಟನಾಶಕ ಬಳಕೆಗೆ ನೀಡಿರುವ ಗುರಿಯ ಮಟ್ಟವನ್ನು ತಗ್ಗಿಸಬೇಕು’ ಎಂದು ಭಾರತವು ಆಗ್ರಹಿಸಿತ್ತು. ದೀರ್ಘಾವಧಿಯ ಚರ್ಚೆಯ ನಂತರ ಈ ಷರತ್ತನ್ನು ಸಡಿಲಗೊಳಿಸಲಾಗಿದೆ. ಆದರೆ, ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯನ್ನು ಸ್ವಲ್ಪಮಟ್ಟಿಗಾದರೂ ತಗ್ಗಿಸಬೇಕಾದ ಅನಿವಾರ್ಯತೆಗೆ ಅಭಿವೃದ್ಧಿಶೀಲ ದೇಶಗಳನ್ನು ಈ ಕ್ರಿಯಾಯೋಜನೆ ದೂಡುತ್ತದೆ.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಕೋಟಾ ಏರಿಕೆ ಮಸೂದೆಯೂ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಾಲಿಗೆ ವರದಾನ ಆಗಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವಿಮಾನ ನಿಲ್ದಾಣ: ಬಿಸಿಎಎಸ್ ಶಿಫಾರಸು

ಭದ್ರತಾ ತಪಾಸಣೆಗೆ 3ಡಿ ಸ್ಕ್ಯಾನರ್

ನವದೆಹಲಿ (ಪಿಟಿಐ): ಪ್ರಯಾಣಿಕರು ವಿಮಾನ ನಿಲ್ದಾಣಗಳ ಸ್ಕ್ಯಾನರ್‌ಗಳಲ್ಲಿ (ಶೋಧಕ) ಭದ್ರತಾ ತಪಾಸಣೆಗೆ ಒಳಗಾಗುವ ಮುನ್ನ, ತಮ್ಮ ಚೀಲದಲ್ಲಿರುವ ಮೊಬೈಲ್, ಚಾರ್ಜರ್‌ನಂತಹ ವಿದ್ಯುನ್ಮಾನ ಉಪಕರಣಗಳನ್ನು ತೆಗೆದಿರಿಸುವ ಪ್ರಮೇಯ ಇನ್ನುಮುಂದೆ ಇರುವುದಿಲ್ಲ. ನಿಲ್ದಾಣಗಳಲ್ಲಿ ಪ್ರಯಾಣಿಕರ ಭದ್ರತಾ ತಪಾಸಣೆಗೆ ಕಂಪ್ಯೂಟರ್ ಟೊಮೊಗ್ರಫಿ ತಂತ್ರಜ್ಞಾನ ಆಧರಿತ 3ಡಿ ಸ್ಕ್ಯಾನರ್‌ಗಳನ್ನು ಅಳವಡಿಸುವಂತೆ ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್) ಶಿಫಾರಸು ಮಾಡಿದೆ.

ಕೈಚೀಲದಲ್ಲಿರುವ (ಹ್ಯಾಂಡ್ ಬ್ಯಾಗೇಜ್) ವಸ್ತುಗಳನ್ನು ಎರಡು ಆಯಾಮಗಳಲ್ಲಿ ಮಾತ್ರ ನೋಡಬಹುದಾದ ಸ್ಕ್ಯಾನರ್‌ಗಳನ್ನು ವಿಮಾನ ನಿಲ್ದಾಣಗಳಲ್ಲಿ ಈಗ ಬಳಸಲಾಗುತ್ತಿದೆ. ಆದರೆ ಕಂಪ್ಯೂಟರ್ ಟೊಮೊಗ್ರಫಿ ತಂತ್ರಜ್ಞಾನ ಆಧರಿತ ಸ್ಕ್ಯಾನರ್‌ಗಳು ಕೈಚೀಲಗಳ ಮೂರು ಆಯಾಮಗಳ (3ಡಿ) ಚಿತ್ರಣವನ್ನು ಒದಗಿಸಲಿವೆ ಎಂದು ಸಂಸ್ಥೆಯ ಜಂಟಿ ಮಹಾನಿರ್ದೇಶಕ ಜೈದೀಪ್ ಪ್ರಸಾದ್ ಬುಧವಾರ ಹೇಳಿದ್ದಾರೆ.

ಸುಧಾರಿತ ಹೊಸ ಸ್ಕ್ಯಾನರ್‌ಗಳ ಮೂಲಕ ಹಾದುಹೋಗುವಾಗ, ಪ್ರಯಾಣಿಕರು ತಮ್ಮ ಕೈಚೀಲಗಳಿಂದ ವಿದ್ಯುನ್ಮಾನ ಉಪಕರಣಗಳನ್ನು ತೆಗೆದಿರಿಸಬೇಕಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಈ ಸ್ಕ್ಯಾನರ್‌ಗಳನ್ನು ಅಳವಡಿಸುವುದರಿಂದ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ಭದ್ರತಾ ತಪಾಸಣಾ ಪ್ರಕ್ರಿಯೆಯೂ ವೇಗವಾಗಿ ಮುಗಿಯುತ್ತದೆ.

ರಾಷ್ಟ್ರ ರಾಜಧಾನಿ ದೆಹಲಿ ಸೇರಿದಂತೆ ದೇಶದ ಹಲವು ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಳ ಹಾಗೂ ಭದ್ರತಾ ತಪಾಸಣೆಗೆ ಸರದಿಯಲ್ಲಿ ಹೆಚ್ಚು ಸಮಯ ಕಾಯುವ ಸ್ಥಿತಿ ಎದುರಾಗಿದೆ ಎಂಬ ಬಗ್ಗೆ ಕಳೆದ ಕೆಲವು ವಾರಗಳಿಂದ ದೂರುಗಳು ಬರುತ್ತಿವೆ. ದಟ್ಟಣೆ ಹಾಗೂ ಪ್ರಯಾಣಿಕರ ಸರತಿ ಸಾಲು ತಗ್ಗಿಸಲು ಭದ್ರತಾ ಅಧಿಕಾರಿಗಳು ಹಲವು ಕ್ರಮಗಳನ್ನು ತೆಗೆದುಕೊಂಡಿದ್ದರು.

ಅತಿಸೂಕ್ಷ್ಮ ಮತ್ತು ಸೂಕ್ಷ್ಮ ಭದ್ರತೆಯ ವಿಮಾನ ನಿಲ್ದಾಣಗಳಲ್ಲಿ ಕಂಪ್ಯೂಟರ್ ಟೊಮೊಗ್ರಫಿ ಎಕ್ಸ್‌ಪ್ಲೋಸಿವ್ ಡಿಟೆಕ್ಟಿವ್ ಸಿಸ್ಟಮ್ಸ್ (ಸಿಟಿ-ಇಡಿಎಸ್) ಮಷಿನ್ ಮತ್ತು ಡುಯಲ್ ಜನರೇಟರ್ ಎಕ್ಸ್-ಬಿಐಎಸ್ ಮಷಿನ್‌ಗಳ ಅಳವಡಿಕೆ ಹಾಗೂ ಆಧುನಿಕ ತಂತ್ರಜ್ಞಾನ ಬಳಕೆಗೆ ಶಿಫಾರಸು ಮಾಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಅಂತರರಾಷ್ಟ್ರೀಯ ಹಾಗೂ ದೇಶೀಯ ವೈಮಾನಿಕ ಸಂಚಾರ ತ್ವರಿತವಾಗಿ ಬೆಳವಣಿಗೆ ಕಾಣುತ್ತಿದೆ.

ಬರಲಿದೆ ಇಡೀ ದೇಹದ ಸ್ಕ್ಯಾನ್ ವ್ಯವಸ್ಥೆ

ಇಡೀ ದೇಹವನ್ನು ಸ್ಕ್ಯಾನಿಂಗ್‌ಗೆ ಒಳಪಡಿಸುವ ವ್ಯವಸ್ಥೆಯನ್ನು ಎಲ್ಲ ವಿಮಾನ ನಿಲ್ದಾಣಗಳಲ್ಲಿ ಜಾರಿಗೊಳಿಸುವ ಉದ್ದೇಶವೂ ಇದೆ. ಅತಿಸೂಕ್ಷ್ಮ ಹಾಗೂ ಸೂಕ್ಷ್ಮ ಎಂದು ಪರಿಗಣಿಸಲಾಗಿರುವ ವಿಮಾನ ನಿಲ್ದಾಣಗಳಲ್ಲಿ ಇದು ಹಂತ ಹಂತವಾಗಿ ಜಾರಿಗೆ ಬರಲಿದೆ. ರೇಡಿಯೊಲಾಜಿಕಲ್ ಡಿಟೆಕ್ಷನ್ ಇಕ್ವಿಪ್‌ಮೆಂಟ್ (ಆರ್‌ಡಿಇ) ಅನ್ನೂ ವಿಮಾನ ನಿಲ್ದಾಣಗಳಲ್ಲಿ ಆದ್ಯತೆ ಮೇರೆಗೆ ನಿಯೋಜಿಸಲಾಗುವುದು ಎಂದು ನಾಗರಿಕ ವಿಮಾನಯಾನ ಸಚಿವಾಲಯದ ರಾಜ್ಯ ಸಚಿವ ವಿ.ಕೆ. ಸಿಂಗ್ ಅವರು ಲೋಕಸಭೆಗೆ ತಿಳಿಸಿದ್ದರು.

ಬೆಂಗಳೂರು, ದೆಹಲಿ, ಹೈದರಾಬಾದ್ ವಿಮಾನ ನಿಲ್ದಾಣಗಳಲ್ಲಿ ಅತಿಕ್ರಮಣ ಪತ್ತೆ ವ್ಯವಸ್ಥೆ (ಪೆರಿಮೀಟರ್ ಇನ್‌ಟ್ರುಷನ್ ಡಿಟೆಕ್ಷನ್ ಸಿಸ್ಟಮ್–ಪಿಐಡಿಎಸ್) ತರಲು ಉದ್ದೇಶಿಸಲಾಗಿದೆ. ಈ ವ್ಯವಸ್ಥೆಯಲ್ಲಿರಬೇಕಾದ ಕನಿಷ್ಠ ಸವಲತ್ತುಗಳ ಕುರಿತು ಮಾರ್ಗಸೂಚಿ ಹೊರಡಿಸಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಡಿಸೆಂಬರ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ
ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಚತುರ್ದಶಿ
ಗಂ. 19-14 ನಕ್ಷತ್ರ: ಜ್ಯೇಷ್ಠ ಗಂ. 28-03 ಯೋಗ: ಶೂಲ ಗಂ. 17-43 ಕರಣ: ವಿಷ್ಟಿ ಗಂ. 08-49, ಧನುರ್ ಮಾಸದ 06 ನೇ ದಿನ. ರಾಹುಕಾಲ : ಮಧ್ಯಾಹ್ನ 01-30–03-00
ಸೂರ್ಯೋದಯ : 06-52 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ : 27 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 8, 12

ಮೇಷ: ಕಂಪನಿಯ ಹಣಕಾಸು ನಿರ್ವಹಣೆಯಲ್ಲಿ ಪಾತ್ರ ಪ್ರಮುಖವಾಗುವುದು. ಉದ್ಯೋಗದಲ್ಲಿ ಪ್ರಾಮಾಣಿಕತನದ ಫಲವಾಗಿ ಒಳ್ಳೆಯ ಸ್ಥಾನಮಾನ ಅಯಾಚಿತವಾಗಿ ಸಿಗಲಿದೆ. ನೂತನ ವಸ್ತ್ರ ಖರೀದಿಯ ಯೋಗವಿದೆ.

ವೃಷಭ: ತಂದೆಯವರ ಆರೋಗ್ಯ ಸ್ಥಿತಿ ಗಂಭೀರವಾಗುವುದು. ಯೋಗ್ಯ ವಯಸ್ಕರರಿಗೆ ವಿವಾಹ ಭಾಗ್ಯ ಒದಗಿ ಬರುವುದು. ಈ ದಿನ ಗೋವಿನ ಸೇವೆ ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರ ಗೋಚರಿಸಲಿದೆ.

ಮಿಥುನ: ತಾಯಿಯವರ ಆರೋಗ್ಯದಲ್ಲಿ ಹೆಚ್ಚಿನ ಗಮನವನ್ನು ಹರಿಸಿ, ಅದರಲ್ಲೂ ಹೊಟ್ಟೆಗೆ ಸಂಬಂಧಿಸಿದ ರೋಗ ಲಕ್ಷಣಗಳು ಅನುಭವಕ್ಕೆ ಬಂದಲ್ಲಿ, ತಡಮಾಡದೆ ಸರಿಯಾದ ವೈದ್ಯರನ್ನು ಭೇಟಿ ಮಾಡಿ, ಚಿಕಿತ್ಸೆ ಪಡೆಯಿರಿ

ಕರ್ಕಾಟಕ: ಸರ್ಕಾರಿ ಕಾಮಗಾರಿಯ ವ್ಯವಹಾರಕ್ಕೆ ಸಂಬಂಧಿಸಿದ ಹಾಗೂ ರಾಜಕೀಯದ ಸ್ಥಾನ ಪಡೆಯುವ ಬಗ್ಗೆ ವರಿಷ್ಠರೊಂದಿಗೆ ಮಾತುಕತೆಗಳು ನಡೆಯಲಿವೆ. ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ.

ಸಿಂಹ: ಹಣಕಾಸಿನ ವ್ಯಾಮೋಹ ಅತಿಯಾಗಿ ಸಮಾಜದಲ್ಲಿ ಗೌರವ ಕಳೆದುಕೊಳ್ಳುವ ಘಟನೆ ಬಾಳಲ್ಲಿ ನಡೆಯಬಹುದು. ದೇವತಾರಾಧನೆಯ ಜೊತೆಯಲ್ಲಿ ಕಾರ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿ ಮುನ್ನುಗ್ಗಿ.

ಕನ್ಯಾ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಸಮಸ್ಯೆಯನ್ನು ಎದುರಿಸಬೇಕಾಗಬಹುದು. ವೃತ್ತಿಪರವಾಗಿ ಸಮಯದ ಅಭಾವ ಕಾಡಲಿದೆ.

ತುಲಾ: ವ್ಯವಹಾರಸ್ಥರು ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಒಪ್ಪಿಕೊಳ್ಳಲು ಈ ದಿನ ಸೂಕ್ತಕಾಲವಲ್ಲ. ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ.

ವೃಶ್ಚಿಕ: ಹೋಟೆಲ್ ಉದ್ಯಮಿಗಳಿಗೆ ವ್ಯವಹಾರದಲ್ಲಿ ಅತ್ಯಂತ ಲಾಭ ಮತ್ತು ಸ್ನೇಹಪರ ಸ್ವಭಾವದಿಂದ ಸುತ್ತಮುತ್ತಲಿನ ಸಮಾಜದಲ್ಲಿ ಗೌರವ ಹೆಚ್ಚಲಿದೆ. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ.

ಧನು: ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆ ಕಾಣಿಸದು. ಸಾವಧಾನವಾಗಿ ಮುಂದುವರಿಯುವುದು ಉತ್ತಮವಾಗಿರುತ್ತದೆ. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆ ಸಂಭವ.

ಮಕರ: ಕೃಷಿಕರು ಮತ್ತು ಉದ್ಯಮಿಗಳು ಕಾರ್ಮಿಕರ ಬೇಡಿಕೆ ಈಡೇರಿಸಿ, ಸಾಮರಸ್ಯ ಕಾಪಾಡಿಕೊಳ್ಳುವುದು ಉತ್ತಮ. ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರ ಹೆಚ್ಚಿಸಿಕೊಳ್ಳಬಹುದು.

ಕುಂಭ: ಬಹಳ ಹುಡುಕಾಟದಿಂದ ಜೀವನೋಪಾಯಕ್ಕೆ ಅನುಕೂಲವಾಗುವ ಪರ್ಯಾಯ ಮಾರ್ಗ ಗೋಚರವಾಗಲಿದೆ. ಅದರಂತೆ ನಡೆದುಕೊಂಡರೆ ದಿನಚರಿ ಸಂಭಾಳಿಸಿಕೊಂಡು ಲಾಭ ಅನುಭವಿಸುವಿರಿ.

ಮೀನ: ಕುಟುಂಬದಲ್ಲಿ ಆಸ್ತಿಯ ಸಂಬಂಧಿತ ಎದುರಾದ ಸಮಸ್ಯೆಗಳು ನಿರಾತಂಕವಾಗಿ ಮುಗಿಯಲಿದೆ. ತಾಯಿಯ ಆಯಸ್ಸಿನ ವೃದ್ಧಿಗೋಸ್ಕರವಾಗಿ ಧಾರ್ಮಿಕ ಕಾರ್ಯ ಮಾಡಿ. ಮಹಾಮೃತ್ಯುಂಜಯ ಆರಾಧಿಸುವುದು ಉತ್ತಮ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸದಾಕಾಲದ ಸಿದ್ಧತೆ

ಬುದ್ಧಿಮಾತಿದು ನಿನಗೆ: ಸಿದ್ಧನಿರು ಸಕಲಕ್ಕಮ್ |
ಎದ್ದುಕುಣಿಯಲಿ ಕರ್ಮ, ದೈವ ನಿದ್ರಿಸಲಿ ||
ಅದ್ಭುತಗಳರಿದಲ್ಲ; ಭವ್ಯಕ್ಕೆ ಹದ್ದಿಲ್ಲ |
ಸಿದ್ಧನಾಗೆಲ್ಲಕಂ – ಮಂಕುತಿಮ್ಮ || 783 ||

ಪದ-ಅರ್ಥ: ಸಕಲಕ್ಕಮ್ = ಎಲ್ಲದಕ್ಕೂ, ಅದ್ಭುತಗಳರಿದಲ್ಲ = ಅದ್ಭುತಗಳು + ಅರಿದು + ಅಲ್ಲ(ಅಸಾಧ್ಯವಲ್ಲ), ಭವ್ಯಕ್ಕೆ = ಶುಭಕ್ಕೆ, ಮಂಗಳಕ್ಕೆ, ಹದ್ದಿಲ್ಲ = ಮಿತಿಯಿಲ್ಲ, ಸಿದ್ಧನಾಗೆಲ್ಲಕಂ = ಸಿದ್ಧನಾಗು + ಎಲ್ಲಕ್ಕೂ(ಎಲ್ಲದಕ್ಕೂ)

ವಾಚ್ಯಾರ್ಥ: ಇದೊಂದು ಬುದ್ಧಿಮಾತು ನಿನಗೆ. ಎಲ್ಲದಕ್ಕೂ ಸಿದ್ಧನಿರು. ಕರ್ಮ ಎದ್ದು ಕುಣಿಯಲಿ, ದೈವ ನಿದ್ರಿಸಲಿ. ಯಾವ ಅದ್ಭುತವೂ ಅಸಾಧ್ಯವಾದದ್ದಲ್ಲ ಮತ್ತು ಶುಭವಾಗುವುದಕ್ಕೆ ಮಿತಿ ಇಲ್ಲ. ಎಲ್ಲದಕ್ಕೂ ಸಿದ್ಧನಾಗು.

ವಿವರಣೆ: ಸೈನ್ಯದಲ್ಲಿ ಒಂದು ಮಾತಿದೆ Preparedness.. ಹಾಗೆಂದರೆ ಸದಾಕಾಲದಲ್ಲಿ ಸನ್ನದ್ಧರಾಗಿರುವುದು. ಯುದ್ಧ ನಾಳೆಯೇ ನಡೆದರೆ ಕೂಡ ನಾವು ಸಂಪೂರ್ಣ ತಯಾರಾಗಿರಬೇಕು. ಒಬ್ಬ ಸೈನಿಕನ ಇಡೀ ಸೇವೆಯಲ್ಲಿ ಒಂದೂ ಯುದ್ಧ ನಡೆಯದೇ ಹೋಗಬಹುದು. ಆದರೆ ಪ್ರತಿಕ್ಷಣ ಯುದ್ಧ ಸನ್ನದ್ಧತೆ ಇದ್ದರೆ ಮಾತ್ರ ದೇಶ ಸುರಕ್ಷಿತ. ಈ ಮಾತು ಮನುಷ್ಯನ ಜೀವನಕ್ಕೂ ಅನ್ವಯ. ಅವನ ಇಡೀ ಜೀವನ ಸುಸೂತ್ರವಾಗಿಯೇ ಕಳೆದು ಹೋಗಬಹುದು. ಆದರೆ ಬದುಕಿನ ಯಾವ ತಿರುವಿನಲ್ಲಿ ಆಪತ್ತು ಬಂದೀತೋ ಎಂಬುದನ್ನು ಹೇಳುವುದು ಕಷ್ಟ. ಬದುಕೂ ಒಂದು ಯುದ್ಧವೇ. ಒಮ್ಮೆ ಹಿಂದೊಮ್ಮೆ ಎಂದೋ ಮಾಡಿದ ತಪ್ಪಿಗೋ, ಅಥವಾ ಮತ್ತೊಬ್ಬರ ತಪ್ಪಿಗೋ ವಿಧಿ ನಮ್ಮನ್ನು ಎತ್ತಿ ನೆಲಕ್ಕೆ ಕೆಡವಿ ಅಪ್ಪಳಿಸುತ್ತದೆ. ಆಗ ದಿಕ್ಕು ತೋರದಂತಾಗುತ್ತದೆ. ಮನಸ್ಸನ್ನು ಮೊದಲೇ ಸಿದ್ಧಮಾಡಿಕೊಂಡಿದ್ದರೆ ಆಘಾತ ಪ್ರಮಾಣ ಕಡಿಮೆಯಾಗುತ್ತದೆ. ರಾಷ್ಟ್ರೀಯ ತಂಡದಲ್ಲಿ ವಾಲಿಬಾಲ್ ಆಡಬೇಕೆಂದಿದ್ದ ಅರುಣಿಮಾ ಸಿನ್ಹಾಳ ಕಾಲು ತುಂಡರಿಸಿದಾಗ ಬದುಕು ಕುಸಿದು ಬಿದ್ದಿತ್ತು. ಆರು ವರ್ಷದ ವಿಲ್ಮಾ ರುಡಾಲ್ಫ್‌ಗೆ ಎರಡೂ ಕಾಲು ಪೋಲಿಯೋ ರೋಗಕ್ಕೆ ತುತ್ತಾದಾಗ ಜೀವನ ಶೂನ್ಯವೆನಿಸಿತ್ತು. ಆದರೆ ಅವರಿಬ್ಬರೂ ಮನಸ್ಸನ್ನು ಹುರಿಮಾಡಿಕೊಂಡರು. ಮಲಗಿದ್ದ ದೈವವನ್ನು ಎಬ್ಬಿಸಿದರು.

ತಮ್ಮ ಕರ್ಮಫಲವನ್ನು ಹಳಿಯುತ್ತ, ಕೊರಗುತ್ತ ಕೂಡ್ರದೆ, ಭವಿಷ್ಯವನ್ನು ಕಣ್ಣಲ್ಲಿ ತುಂಬಿಕೊಂಡು ಮುಂದೆ ನುಗ್ಗಿದರು. ಅರುಣಿಮಾ ಕೃತ್ರಿಮ ಕಾಲಿನೊಂದಿಗೆ ಪ್ರಪಂಚದ ಅತ್ಯಂತ ಎತ್ತರದ ಶಿಖರ, ಮೌಂಟ್ ಎವರೆಸ್ಟನ್ನು ಏರಿದ ಪ್ರಥಮ ಮಹಿಳೆಯಾದಳು. ವಿಲ್ಮಾ ರುಡಾಲ್ಫ್ ಪೋಲಿಯೋ ರೋಗವನ್ನು ಗೆಲ್ಲುವುದು ಮಾತ್ರವಲ್ಲ, ಓಲಿಂಪಿಕ್ಸ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದು ಪ್ರಪಂಚದ ಅತ್ಯಂತ ವೇಗದ ಓಟಗಾರ್ತಿಯಾದಳು. ಕಗ್ಗ ನಮಗೆ ಎಚ್ಚರಿಕೆಯನ್ನು ಕೊಡುತ್ತದೆ. ನಿನ್ನ ಕರ್ಮ ಬೇಕಾದರೆ ಎದ್ದು ಕುಣಿಯಲಿ, ದೈವ ಕಂಡೂ ಕಾಣದಂತೆ ಸುಮ್ಮನಿರಲಿ. ಸಾಧನೆಗೆ ಮಿತಿಗಳಿಲ್ಲ. ಮಂಗಳವಾದದ್ದನ್ನು ಸಾಧಿಸಲು ಯಾವ ಬಂಧನವೂ ಇಲ್ಲ. ಆದರೆ ನಾವು ಎಲ್ಲದಕ್ಕೂ ಸಿದ್ಧನಾದಾಗ ಮಾತ್ರ ಸಾಧನೆಯ ಮೆಟ್ಟಿಲುಗಳು ಕಂಡಾವು. ಇಲ್ಲದಿದ್ದರೆ ಕಾಲುಗಳು ಕುಸಿದು ಅಸಹಾಯತೆಯ ಪ್ರಪಾತಕ್ಕೆ ಬೀಳುತ್ತೇವೆ.

ಪದಬಂಧ 5176

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಯಾವ ಉದ್ದೇಶವೂ ಇಲ್ಲದ್ದು (5)
3. ಹಿಂದೆಲ್ಲಿಯೂ ಎಂದೂ ಕಾಣದ್ದು (3)
5. ಜೊತೆಯಲ್ಲಿ ಆಲೋಚಿಸುವವನು (5)
7. ಗುಟ್ಟು ಅಥವಾ ಗೌಪ್ಯ (3)
9. ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
11. ಸಂತನಿಂದಾದ ಸಂತೋಷ (3)
13. ಯುದ್ಧದ ಕೇಸರಿ ಇಲ್ಲಿದೆ (5)
15. ಮಂದಿ ಪ್ರವೇಶಿಸಿರುವ ಗುಡಿ (3)
16. ಅತ್ಯಂತ ಚಲುವಾದುದು (5)

ಮೇಲಿಂದ ಕೆಳಕ್ಕೆ

1. ಜಗತ್ತಿನ ರೂಢಿಯಿದು (4)
2. ರಾಯರಿಂದ ಬಂದಿರುವ ನಿರೂಪ (3)
4. ಈತ ಹಳಬ ಬಿಡಿ! (3)
6. ಲೊಚ್ಚಕ್ಕನೇ ಮುತ್ತಿಟ್ಟಾಗ ಕಣ್ಣು ಕಂಡೀತೇ? (3)
8. ನೂಲನ್ನು ಹೊಸೆದು ಮಾಡಿದ ದಪ್ಪ ಹುರಿ (2)
9. ಹೆಂಡತಿಯನ್ನು ಕಳೆದುಕೊಂಡವನು (3)
10. ಹರಸುತಲಿದ್ದಾಗ ಕಾಣಿಸಿದ ಮಗ (2)
12. ಒಳ್ಳೆಯ ನಡತೆಯಿದು (4)
13. ಸರ ಧರಿಸಿದವನು ಹಚ್ಚಿರುವ ಪಾಳಿ (3)
14. ರಾಮನ ಬಳಿ ಬಂದಿದ್ದಾನೆ ಈ ಕೃತಘ್ನ! (3))



5175ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮಾವೇಶ 3.ಸಂಜೀವಿನಿ
5.ನವೀನ 6.ರಕ್ಷಕ
8.ನಿಧಾನ 10.ಹಣತೆ
11.ಪತಿತ 13.ಕುರೂಪ
15.ಪರಿಹಾರ 16.ತರಾತುರಿ

ಮೇಲಿಂದ ಕೆಳಕ್ಕೆ:
1.ಸಡಗರ 2.ಶಯನ
3.ಸಂಧಾನ 4.ನಿಮೀಲನ
7.ಕ್ಷಪಣ 9.ಧಾವತಿ
10.ಹಸ್ತಕ್ಷೇಪ 12.ತಲೋದರಿ
13.ಕುಬೇರ 14.ಪರಾತ

ಸುಡೊಕು 5562

7	5			1	6		8	
		6			9			7
4			7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	

5561 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು 635



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,385
ಇಂದಿನ ಅಂತ್ಯ	18,199
▼	186
ದಿನದ ಕನಿಷ್ಠ	18,162

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹550
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1560)
ಸೋಯಾ (ರಿಫೈನ್ಡ್)	₹1290 (1270)
ಸೂರ್ಯಕಾಂತಿ (ರಿಫೈನ್ಡ್)	₹1330 (1330)
ಪಾಮೋಲಿನ್	₹960 (945)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1900-2300
ಮಧ್ಯಮ	₹1000-1800
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹523-700
ದ್ವಿತಳಿ (ಬಿ.ವಿ)	₹533-843

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹135
ಆರ್‌ಎಸ್‌ಎಸ್-5	₹127
ಗುಡ್ ಲಾಟ್	₹120.50

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹10600
ಗರಿಷ್ಠ	₹11800
ಮಾದರಿ	₹11500

ಕೋವಿಡ್: ಹೂಡಿಕೆದಾರರಲ್ಲಿ ಆತಂಕ

ಮುಖ್ಯಾಂಶಗಳು
- ಷೇರುಪೇಟೆಯಲ್ಲಿ ಮಾರಾಟದ ಒತ್ತಡ
- ಡಾಲರ್ ಎದುರು ರೂಪಾಯಿ 14 ಪೈಸೆ ಇಳಿಕೆ

ಮುಂಬೈ (ಪಿಟಿಐ): ಚೀನಾದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಹೂಡಿಕೆದಾರರನ್ನು ಆತಂಕಕ್ಕೆ ದೂಡಿದೆ. ಇದರಿಂದಾಗಿ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 635 ಅಂಶ ಇಳಿಕೆ ಕಂಡು 61,067 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 186 ಅಂಶ ಇಳಿಕೆಯಾಗಿ 18,199 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಇಂಡಸ್‌ಇಂಡ್ ಬ್ಯಾಂಕ್ ಷೇರು ಮೌಲ್ಯ ಶೇ 2.28ರಷ್ಟು ಗರಿಷ್ಠ ನಷ್ಟ ಕಂಡರೆ, ಸನ್ ಫಾರ್ಮಾ ಶೇ 1.67ರಷ್ಟು ಗಳಿಕೆ ಕಂಡಿತು. ಬಿಎಸ್‌ಇ ಸ್ಮಾಲ್‌ಕ್ಯಾಪ್ ಶೇ 2.18ರಷ್ಟು ಇಳಿಕೆ ಕಂಡರೆ, ಮಿಡ್‌ಕ್ಯಾಪ್ ಶೇ 1.40ರಷ್ಟು ಇಳಿಕೆ ಕಂಡಿತು.

'ದೇಶಿ ಷೇರುಪೇಟೆಯಲ್ಲಿ ಕರಡಿ ಕುಣಿತವು ಹಾನಿ ಉಂಟುಮಾಡುವುದನ್ನು ಮುಂದುವರಿಸಿದೆ. ಅಮೆರಿಕದ ಜಿಡಿಪಿ ಅಂಕಿ–ಅಂಶ ಬಿಡುಗಡೆಗೂ ಮೊದಲೇ ವಾಲ್ ಸ್ಟ್ರೀಟ್‌ನಲ್ಲಿ ಇಳಿಮುಖ ವಹಿವಾಟು ನಡೆಯಿತು. ಉಳಿದೆಲ್ಲ ವಲಯಗಳು ಕುಸಿತ ಕಂಡರೂ ಜಾಗತಿಕವಾಗಿ ಕೋವಿಡ್ ಸಾಂಕ್ರಾಮಿಕವು ಮತ್ತೆ ಹೆಚ್ಚಾಗುವ ಆತಂಕ ಎದುರಾಗಿರುವುದರಿಂದ ಔಷಧ ವಲಯದ ಷೇರುಗಳು ಮಾತ್ರ ಉತ್ತಮ ಗಳಿಕೆ ಕಂಡುಕೊಂಡವು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಔಷಧ ಮತ್ತು ಡಯಾಗ್ನಾಸ್ಟಿಕ್ಸ್ ಬುಧವಾರದ ವಹಿವಾಟಿನಲ್ಲಿ ಹೆಚ್ಚು ಗಳಿಕೆ ಕಂಡವು. ಮುಂದಿನ ದಿನಗಳಲ್ಲಿಯೂ ಗಳಿಕೆಯು ಇದೇ ರೀತಿಯಲ್ಲಿ ಇರುವ ನಿರೀಕ್ಷೆ ಮಾಡಲಾಗಿದೆ. ಇನ್ನೊಂದೆಡೆ, ಪ್ರಯಾಣ ಮತ್ತು ಪ್ರವಾಸ, ಹೋಟೆಲ್, ವಿಮಾನಯಾನ, ಮನರಂಜನೆ ಮತ್ತು ರಿಟೇಲ್ ವಲಯಗಳು ಒತ್ತಡ ಎದುರಿಸುವ ಸಾಧ್ಯತೆ ಇದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ಸಿದ್ಧಾರ್ಥ್ ಖೇಮ್ಕಾ ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 1.08ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ ₹80.85 ಡಾಲರ್‌ಗೆ ತಲುಪಿದೆ.

ಹೂಡಿಕೆ ನಿಷೇಧ ಅಗತ್ಯ: ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್

ಆರ್ಥಿಕ ಬಿಕ್ಕಟ್ಟಿಗೆ ದಾರಿ ಖಾಸಗಿ ಕ್ರಿಪ್ಟೊ

ಮುಖ್ಯಾಂಶಗಳು
- ಮೂಲಸ್ವರೂಪದಲ್ಲಿಯೇ ಹೆಚ್ಚಿನ ಅಪಾಯ
- ಕ್ರಿಪ್ಟೊಕರೆನ್ಸಿ ನಿಷೇಧಿಸುವ ನಿಲುವಿಗೆ ಆರ್‌ಬಿಐ ಬದ್ಧ: ದಾಸ್

ಮುಂಬೈ (ಪಿಟಿಐ): ಖಾಸಗಿ ಕ್ರಿಪ್ಟೊಕರೆನ್ಸಿಗಳನ್ನು ಬೆಳೆಯಲು ಬಿಟ್ಟರೆ ಮುಂದಿನ ದಿನಗಳಲ್ಲಿ ಅವು ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಬುಧವಾರ ಎಚ್ಚರಿಕೆ ನೀಡಿದ್ದಾರೆ.

ನಷ್ಟದ ಅಪಾಯ ಇರುವ ಬಿಟ್‌ಕಾಯಿನ್ ತರಹದ ಕ್ರಿಪ್ಟೊಕರೆನ್ಸಿಗಳ ಮೇಲೆ ಹೂಡಿಕೆಯನ್ನು ನಿಷೇಧಿಸುವ ಅಗತ್ಯ ಇದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಆರ್ಥಿಕತೆ ಮತ್ತು ಹಣಕಾಸು ಸ್ಥಿರತೆಯ ದೃಷ್ಟಿಯಿಂದ ಕ್ರಿಪ್ಟೊಕರೆನ್ಸಿಗಳು ಹೆಚ್ಚಿನ ಅಪಾಯ ಹೊಂದಿವೆ ಎಂದು ಕಾರ್ಯಕ್ರಮವೊಂದರಲ್ಲಿ ಅವರು ಹೇಳಿದ್ದಾರೆ.

ಕ್ರಿಪ್ಟೊಕರೆನ್ಸಿ ವಿನಿಮಯ ನಡೆಸುವ ಎಫ್‌ಟಿಎಕ್ಸ್ ಕಂಪನಿ ಕುಸಿದಿದ್ದು, ಅಮೆರಿಕದ ಇತಿಹಾಸದಲ್ಲಿಯೇ ಇದೊಂದು ದೊಡ್ಡ ಹಣಕಾಸು ವಂಚನೆ ಎಂದು ಕರೆಯಲಾಗುತ್ತಿದೆ. ಇಂತಹ ಹೂಡಿಕೆಗಳಿಂದ ಎದುರಾಗುವ ಅಪಾಯಗಳನ್ನು ಈ ಬೆಳವಣಿಗೆಯು ಸ್ಪಷ್ಟಪಡಿಸುತ್ತದೆ ಎಂದು ದಾಸ್ ಹೇಳಿದ್ದಾರೆ.

'ಈ ಎಲ್ಲಾ ಬೆಳವಣಿಗೆಗಳ ಬಳಿಕ, ಕ್ರಿಪ್ಟೊಕರೆನ್ಸಿಗಳ ಕುರಿತ ನಮ್ಮ ನಿಲುವಿನ ಬಗ್ಗೆ ಇನ್ನೂ ಹೆಚ್ಚು ಹೇಳಬೇಕು ಎಂದು ನನಗೆ ಅನ್ನಿಸುತ್ತಿಲ್ಲ. ಖಾಸಗಿ ಕ್ರಿಪ್ಟೊಕರೆನ್ಸಿಗಳ ಮೌಲ್ಯವು ₹ 15.77 ಲಕ್ಷ ಕೋಟಿಯಿಂದ ₹ 11.62 ಲಕ್ಷ ಕೋಟಿಗೆ ಕುಸಿತ ಕಂಡಿದೆ' ಎಂದು ಅವರು ತಿಳಿಸಿದ್ದಾರೆ.

'ಕ್ರಿಪ್ಟೊಕರೆನ್ಸಿ ವಹಿವಾಟು ಶೇ 100ರಷ್ಟು ಊಹೆಗಳನ್ನು ಆಧರಿಸಿದೆ, ಅದನ್ನು ನಿಷೇಧಿಸಬೇಕು ಎನ್ನುವ ಅಭಿಪ್ರಾಯಕ್ಕೆ ಈಗಲೂ ಬದ್ಧ. ನೀವು ಅದನ್ನು ಕಾನೂನಿನ ವ್ಯಾಪ್ತಿಗೆ ತಂದು ಅದನ್ನು ಬೆಳೆಯಲು ಬಿಟ್ಟರೆ, ಆಗ ಖಾಸಗಿ ಕ್ರಿಪ್ಟೊಕರೆನ್ಸಿಗಳೇ ಮುಂದಿನ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಲಿವೆ. ನನ್ನ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳಿ' ಎಂದಿದ್ದಾರೆ.

ಕ್ರಿಪ್ಟೊಕರೆನ್ಸಿಗಳ ಬಗ್ಗೆ ಬೇರೆ ಬೇರೆ ದೇಶಗಳು ಭಿನ್ನ ನಿಲುವನ್ನು ಹೊಂದಿವೆ. ಆದರೆ, ಅವುಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎನ್ನುವ ನಿಲುವಿಗೆ ಆರ್‌ಬಿಐ ಬದ್ಧವಾಗಿದೆ ಎಂದು ದಾಸ್ ಸ್ಪಷ್ಟಪಡಿಸಿದ್ದಾರೆ.

ವ್ಯವಸ್ಥೆಯನ್ನು ಮುರಿಯುವುದು ಕ್ರಿಪ್ಟೊಕರೆನ್ಸಿಗಳ ಹಿಂದಿರುವ ಉದ್ದೇಶ. ಕೇಂದ್ರೀಯ ಬ್ಯಾಂಕ್‌ಗಳು ಹೊರಡಿಸುವ ಕರೆನ್ಸಿಗಳಲ್ಲಿ ಹಾಗೂ ಕಾನೂನಿನ ಮೂಲಕ ನಿಯಂತ್ರಿಸಲಾಗುವ ಹಣಕಾಸು ವ್ಯವಸ್ಥೆಯಲ್ಲಿ ಅವುಗಳಿಗೆ ನಂಬಿಕೆ ಇಲ್ಲ ಎಂದು ದಾಸ್ ಹೇಳಿದ್ದಾರೆ.

ಚಾರ್ಲ್ಸ್ ಶೋಭರಾಜ್ ಬಿಡುಗಡೆಗೆ ಅಸ್ತು

ಕಠ್ಮಂಡು (ಎಎಫ್‌ಪಿ): ಏಷ್ಯಾದ್ಯಂತ 1970ರಲ್ಲಿ ನಡುಕ ಹುಟ್ಟಿಸಿದ್ದ ಫ್ರೆಂಚ್ ಸರಣಿ ಹಂತಕ ಚಾರ್ಲ್ಸ್ ಶೋಭರಾಜ್‌ನನ್ನು ಬಿಡುಗಡೆ ಮಾಡುವಂತೆ ನೇಪಾಳದ ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿದೆ. ಇಬ್ಬರು ಉತ್ತರ ಅಮೆರಿಕ ಪ್ರವಾಸಿಗರನ್ನು ಹತ್ಯೆ ಮಾಡಿದ ಆರೋಪದಲ್ಲಿ 2003ರಿಂದ ಈತ ಇಲ್ಲಿನ ಜೈಲಿನಲ್ಲಿ ಇದ್ದ. ಅನಾರೋಗ್ಯ ಹಿನ್ನೆಲೆಯಲ್ಲಿ ಆತನ ಬಿಡುಗಡೆಗೆ ನ್ಯಾಯಾಲಯ ಇದೀಗ ಆದೇಶ ನೀಡಿದೆ.

ಬ್ರಿಟನ್: ಭಾರತೀಯ ವೀಸಾ ಸರಾಗ

ಲಂಡನ್ (ಪಿಟಿಐ): ಭಾರತೀಯ ವೀಸಾಗಳನ್ನು ಬಯಸುವ ಪ್ರಯಾಣಿಕರಿಗೆ ಕ್ರಿಸ್‌ಮಸ್ ಅವಧಿಯಲ್ಲಿ ವೀಸಾ ಪಡೆಯುವುದು ಸರಾಗವಾಗಿ ಪರಿಣಮಿಸಿದೆ ಎಂದು ವೀಸಾ ಸೇವೆ ಒದಗಿಸುವ 'ವಿಎಫ್‌ಎಸ್ ಗ್ಲೋಬಲ್' ತಿಳಿಸಿದೆ.

ಡಿಸೆಂಬರ್ ಆರಂಭದಲ್ಲಿ ಬ್ರಿಟನ್ ಪ್ರಯಾಣಿಕರಿಗೆ ಎಲೆಕ್ಟ್ರಾನಿಕ್ ವೀಸಾ (ಇ-ವೀಸಾ) ಸೌಲಭ್ಯವನ್ನು ಮರುಸ್ಥಾಪಿಸಿರುವುದು ಇದಕ್ಕೆ ಕಾರಣ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ

ಸಂದರ್ಭೋಚಿತ ಉಚಿತ ಕೊಡುಗೆ ತಪ್ಪಲ್ಲ

ನವದೆಹಲಿ (ಪಿಟಿಐ): ಸರ್ಕಾರಗಳು ನೀಡುವ ಸಬ್ಸಿಡಿ ಹಾಗೂ ಉಚಿತ ಕೊಡುಗೆಗಳು ಸಂದರ್ಭೋಚಿತವಾಗಿ ಇರಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪೂರಕ ಬೇಡಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯಸಭೆಯಲ್ಲಿ ನಡೆದ ಚರ್ಚೆಗೆ ಉತ್ತರಿಸುವ ಸಂದರ್ಭದಲ್ಲಿ ಅವರು ಈ ಮಾತು ಹೇಳಿದ್ದಾರೆ. 'ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲು ಸಾಧ್ಯವಾದರೆ, ಅದಕ್ಕೆ ಯಾರೂ ತಕರಾರು ಎತ್ತುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಆರೋಗ್ಯ, ಶಿಕ್ಷಣ ಮತ್ತು ಕೃಷಿಗೆ ನೀಡುವ ಸಬ್ಸಿಡಿಗಳಿಗೆ ಸಮರ್ಥನೆ ಇದೆ ಎಂದಿದ್ದಾರೆ. ಸಬ್ಸಿಡಿ ನೀಡುವ ವಿಚಾರದಲ್ಲಿ ತಾವು ಬಯಸುವುದು 'ಪಾರದರ್ಶಕತೆ ಹಾಗೂ ಹಣಕಾಸಿಗೆ ಸಂಬಂಧಿಸಿದ ನಿಯಮಗಳ ಪಾಲನೆ ಮಾತ್ರ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕೇಂದ್ರ ಸರ್ಕಾರವು ಹಣದುಬ್ಬರದ ಮೇಲೆ ನಿಗಾ ಇರಿಸಿದೆ ಎಂದು ಅವರು ವಿವರಿಸಿದ್ದಾರೆ. ಪೂರಕ ಬೇಡಿಕೆಗಳನ್ನು ರಾಜ್ಯಸಭೆಯು, ಲೋಕಸಭೆಗೆ ಮರಳಿಸಿದೆ. ಈ ಮೂಲಕ ಕೇಂದ್ರಕ್ಕೆ ಹೆಚ್ಚುವರಿಯಾಗಿ ₹ 3.25 ಲಕ್ಷ ಕೋಟಿ ವೆಚ್ಚ ಮಾಡಲು ಅನುಮೋದನೆ ನೀಡಿದೆ.

'ಸಾಲ ಮಾಡಿ ವೆಚ್ಚ ಮಾಡಿ, ನೋಟನ್ನು ಮುದ್ರಿಸಿ ಅರ್ಥ ವ್ಯವಸ್ಥೆಗೆ ಮತ್ತೆ ಚಾಲನೆ ನೀಡಿ ಎಂದು ಮಾಜಿ ಹಣಕಾಸು ಸಚಿವರೊಬ್ಬರು ಕೋವಿಡ್ ಸಂದರ್ಭದಲ್ಲಿ ಸಲಹೆ ನೀಡಿದ್ದರು. ಆದರೆ, ಇಂತಹ ಸಲಹೆಗಳನ್ನು ಅನುಸರಿಸಿದ್ದರಿಂದಾಗಿ ಬೇರೆ ದೇಶಗಳಲ್ಲಿ ಆಗಿರುವ ಕೆಟ್ಟ ಪರಿಣಾಮಗಳನ್ನೂ ನೋಡಬೇಕು. ಅವು ಆರ್ಥಿಕ ಹಿಂಜರಿತ ಅನುಭವಿಸುತ್ತಿವೆ' ಎಂದು ನಿರ್ಮಲಾ ಹೇಳಿದ್ದಾರೆ.

ಕೇಂದ್ರವು ಹೆಚ್ಚುವರಿಯಾಗಿ ಮಾಡಲಿರುವ ₹ 3.25 ಲಕ್ಷ ಕೋಟಿ ವೆಚ್ಚದಲ್ಲಿ ₹ 1.09 ಲಕ್ಷ ಕೋಟಿ ರಸಗೊಬ್ಬರ ಸಬ್ಸಿಡಿಗೆ ವಿನಿಯೋಗ ಆಗಲಿದೆ, ₹ 80,348 ಕೋಟಿಯು ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯದ ವೆಚ್ಚಕ್ಕೆ (ಮುಖ್ಯವಾಗಿ, ಬಡವರಿಗೆ ಉಚಿತವಾಗಿ ಆಹಾರ ಧಾನ್ಯ ನೀಡಲು) ಬಳಕೆಯಾಗಲಿದೆ.

ತೈಲ ಮಾರಾಟ ಕಂಪನಿಗಳಿಗೆ ಎಲ್‌ಪಿಜಿ ಸಬ್ಸಿಡಿ ನೀಡಲು ಹಾಗೂ ಪ್ರಧಾನ ಮಂತ್ರಿ ಉಜ್ವಲಾ ಯೋಜನೆ ಅಡಿ ಬಡವರಿಗೆ ಎಲ್‌ಪಿಜಿ ಸಂಪರ್ಕ ನೀಡಲು ₹ 29,944 ಕೋಟಿ ವೆಚ್ಚವಾಗಲಿದೆ.

ಪರ್ಯಾಯ ಬೆಳೆಯಾಗುವ ಸೂಚನೆ

ಹೊಸ ಅರಿಸಿನ ತಳಿ ಅಭಿವೃದ್ಧಿ

• ಎಚ್.ಎಸ್.ಸಚ್ಚಿತ್

> ಕೃಷಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ 'ಪ್ರಗತಿ ಮತ್ತು ಪ್ರತಿಭಾ' ಅರಿಸಿನ ತಳಿ ಬಿತ್ತನೆ ಬೀಜವನ್ನು 2023ರ ಮಾರ್ಚ್‌ನಲ್ಲಿ ರೈತರಿಗೆ ವಿತರಿಸಲು ಸಿದ್ಧತೆ ನಡೆದಿದೆ
> ಡಾ.ರಾಮಕೃಷ್ಣ, ಸಂಶೋಧನಾ ಕೇಂದ್ರದ ಮುಖ್ಯಸ್ಥ, ವಿಜ್ಞಾನಿ

'ಪ್ರತಿಭಾ ಮತ್ತು ಪ್ರಗತಿ' ಅರಿಸಿನ ತಳಿ

ಹುಣಸೂರು(ಮೈಸೂರು ಜಿಲ್ಲೆ): ವರ್ಜೀನಿಯ ತಂಬಾಕು ಬೆಳೆಗೆ ಹೆಸರುವಾಸಿಯಾದ ಹುಣಸೂರು ಉಪ ವಿಭಾಗದಲ್ಲಿ ಅರಿಸಿನ ಬೆಳೆಯು ತಂಬಾಕಿಗೆ ಪರ್ಯಾಯ ವಾಣಿಜ್ಯ ಬೆಳೆಯಾಗುವ ಸೂಚನೆಗಳು ಕಂಡು ಬಂದಿವೆ.

ರೋಗ ನಿರೋಧಕ ಔಷಧಯುಕ್ತ ಕರ್ಕ್ಯುಮಿನ್ ಅಂಶ ಶೇ 7ರಷ್ಟಿರುವ ಮೇಘಾಲಯದ ಲಕಾಡಾಂಗ್ ಅರಿಸಿನ ತಳಿಯನ್ನು ಕೇಂದ್ರ ತಂಬಾಕು ಸಂಶೋಧನಾಲಯದಲ್ಲಿ 'ಪ್ರತಿಭಾ ಮತ್ತು ಪ್ರಗತಿ' ಹೆಸರಿನಲ್ಲಿ ಅಭಿವೃದ್ಧಿಪಡಿಸಿದ್ದು ಉತ್ತಮ ಫಲಿತಾಂಶ ಸಿಕ್ಕಿದೆ. ರೈತರಿಗೆ ಬಿತ್ತನೆ ಬೀಜ ವಿತರಿಸುವ ಸಿದ್ಧತೆಯೂ ನಡೆದಿದೆ. ಮೇಘಾಲಯದಲ್ಲಿ ಅತಿ ಹೆಚ್ಚು ಅರಿಸಿನ ಬೆಳೆಯುತ್ತಿದ್ದು, ನಂತರದಲ್ಲಿ ತಮಿಳುನಾಡು, ಕರ್ನಾಟಕವಿದೆ.

ಸದ್ಯ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಕೆಲವೆಡೆ ಬೆಳೆಯಲಾಗುತ್ತಿರುವ ಪಾರಂಪರಿಕ ಸೇಲಂ ತಳಿ ಅರಿಸಿನದಲ್ಲಿ ಕರ್ಕ್ಯುಮಿನ್ ಅಂಶ ಕಡಿಮೆ ಇದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇಲ್ಲ ಎನ್ನಲಾಗಿದೆ.

'ಹೊಸ ತಳಿಗಳಲ್ಲಿ ಕರ್ಕ್ಯುಮಿನ್ ಅಂಶ ಹೆಚ್ಚಿರುವುದರಿಂದ ಕ್ಯಾನ್ಸರ್ ರೋಗ ನಿವಾರಕ ಔಷಧ ಉತ್ಪಾದಿಸುವ ಕಂಪನಿಗಳಿಂದ ಹೆಚ್ಚಿನ ಬೇಡಿಕೆ ಬರುವ ಸಾಧ್ಯತೆ ಇದೆ' ಎಂದು ಸಂಶೋಧನಾ ಕೇಂದ್ರದ ಮುಖ್ಯಸ್ಥ ವಿಜ್ಞಾನಿ ಡಾ.ರಾಮಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'10ರಿಂದ 11 ತಿಂಗಳ ಅವಧಿಯ, ಹೆಚ್ಚು ನೀರು ಬೇಡುವ ಸೇಲಂ ಅರಿಸಿನದ ಇಳುವರಿ ಪ್ರತಿ ಎಕರೆಗೆ 30ರಿಂದ 40 ಕ್ವಿಂಟಲ್ ದೊರಕುತ್ತದೆ. ಹೊಸ ತಳಿಗಳ ಅವಧಿ 6–7 ತಿಂಗಳಷ್ಟೇ. ಹನಿ ನೀರಾವರಿಯಲ್ಲೂ ಬೆಳೆಯಬಹುದು. ಇಳುವರಿ 80ರಿಂದ 90 ಕ್ವಿಂಟಲ್ ಬರಲಿದೆ. ಉತ್ಪಾದನಾ ವೆಚ್ಚ ಎಕರೆಗೆ ₹ 40ಸಾವಿರದಿಂದ ₹ 50 ಸಾವಿರ ಆಗಲಿದೆ' ಎಂದು ತಿಳಿಸಿದರು.

ಕೇಂದ್ರದಲ್ಲಿ ಕೆಂಪು ಮೆಣಸಿನಕಾಯಿ (ಬ್ಯಾಡಗಿ) ಹೊಸ ತಳಿ ಅಭಿವೃದ್ಧಿಗೊಳಿಸುವ ಪ್ರಯತ್ನವೂ ನಡೆಯಲಿದೆ.

ಸಿಇಒ ಹುದ್ದೆಗೆ 'ಮೂರ್ಖ'ಸಿಕ್ಕಿದ ತಕ್ಷಣ ರಾಜೀನಾಮೆ

ನ್ಯೂಯಾರ್ಕ್ (ಪಿಟಿಐ): ಟ್ವಿಟರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಹುದ್ದೆ ವಹಿಸಿಕೊಳ್ಳುವ 'ಮೂರ್ಖ'ರೊಬ್ಬರು ದೊರೆತ ತಕ್ಷಣ ಈ ಹುದ್ದೆಗೆ ರಾಜೀನಾಮೆ ನೀಡುವುದಾಗಿ ಇಲಾನ್ ಮಸ್ಕ್ ಘೋಷಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ನಾನು ಸಿಇಒ ಹುದ್ದೆ ತೊರೆದ ಬಳಿಕ ಸಾಫ್ಟ್‌ವೇರ್ ಮತ್ತು ಸರ್ವರ್ ತಂಡಗಳನ್ನು ಮುನ್ನಡೆಸುತ್ತೇನೆ' ಎಂದಿದ್ದಾರೆ.

ಟ್ವಿಟರ್ ಸಿಇಒ ಹುದ್ದೆಯಿಂದ ಕೆಳಗಿಳಿಯಬೇಕೇ ಅಥವಾ ಮುಂದುವರಿಯಬೇಕೇ ಎಂದು ಟ್ವಿಟರ್ ಮೂಲಕ ಜನಾಭಿಪ್ರಾಯ ಸಂಗ್ರಹಿಸಲು ಮುಂದಾಗಿದ್ದರು. ಈ ಸಮೀಕ್ಷೆಯಲ್ಲಿ ಹೊರಹೊಮ್ಮುವ ಫಲಿತಾಂಶಕ್ಕೆ ಬದ್ಧವಾಗಿರುವುದಾಗಿಯೂ ಅವರು ಘೋಷಿಸಿದ್ದರು.

ಮಸ್ಕ್ ಅವರು ಸಿಇಒ ಹುದ್ದೆಯಿಂದ ಕೆಳಗಿಳಿಯುವುದು ಸೂಕ್ತವೆಂದು ಹೆಚ್ಚಿನ ಬಳಕೆದಾರರು ಸಮೀಕ್ಷೆಯಲ್ಲಿ ಮತ ಚಲಾಯಿಸಿರುವುದರಿಂದ ಅವರು ಈ ನಿರ್ಧಾರ ಮಾಡಿದ್ದಾರೆ.

ಅಮೆರಿಕ: ಇದುವರೆಗೆ 10 ಕೋಟಿ ಜನರಿಗೆ ಕೋವಿಡ್

ಸಾವಿನ ಸಂಖ್ಯೆ ಕನಿಷ್ಠವೆಂದ ಚೀನಾ

> **15 ಲಕ್ಷ ಜನ ಸಾಯಬಹುದು**
> **ಲಂಡನ್:** ಚೀನಾದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್‌ನಿಂದ 15 ಲಕ್ಷ ಜನರು ಮೃತಪಡಬಹುದು ಎಂದು ಆರ್ಥಿಕ ತಜ್ಞರು ಅಂದಾಜು ಮಾಡಿದ್ದಾರೆ.

ಬೀಜಿಂಗ್/ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಚೀನಾದಲ್ಲಿ ವೈರಸ್ ಸಾವುಗಳನ್ನು ದಾಖಲಿಸುವ ಮಾನದಂಡವನ್ನು ಬದಲಿಸಲಾಗಿದ್ದು, ಕೋವಿಡ್‌ನಿಂದ ಮಂಗಳವಾರ ಒಂದೇ ಒಂದು ಸಾವೂ ಸಂಭವಿಸಿಲ್ಲ ಎಂದು ಸರ್ಕಾರ ಹೇಳಿಕೊಂಡಿದೆ. ಮತ್ತೊಂದೆಡೆ, ಅಮೆರಿಕದಲ್ಲಿ ಕೋವಿಡ್ ದೃಢಪಟ್ಟ ಸೋಂಕಿತರ ಸಂಖ್ಯೆ 10 ಕೋಟಿ ದಾಟಿದೆ ಎಂದು ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯ ತಿಳಿಸಿದೆ.

ಕಳೆದ ವಾರದಿಂದ ಜಪಾನ್, ಅಮೆರಿಕ, ಕೊರಿಯಾ, ಬ್ರೆಜಿಲ್ ಮತ್ತು ಚೀನಾದಲ್ಲಿ ದಿಢೀರನೇ ಕೋವಿಡ್–19ರ ಪ್ರಕರಣಗಳು ಹೆಚ್ಚಾಗಿದ್ದು, ಪೂರ್ಣ ಪ್ರಮಾಣದಲ್ಲಿ ಲಸಿಕೆ ನೀಡುವಂತೆ ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿದೆ.

ಅಮೆರಿಕದಲ್ಲಿ ಇಲ್ಲಿಯವರೆಗೆ 10,00,03,837 ಜನರಲ್ಲಿ ಕೋವಿಡ್ ದೃಢಪಟ್ಟಿದ್ದು, 10,88,236 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯ ತಿಳಿಸಿದೆ.

ವ್ಯಾಪಕವಾಗಿ ಹರಡುವ ಸಾಮರ್ಥ್ಯ ಹೊಂದಿರುವ ಓಮೈಕ್ರಾನ್‌ನ ತಳಿಗಳಾದ ಬಿಎ.5.2 ಮತ್ತು ಬಿಎಫ್.7 ಚೀನಾದ ಪ್ರಮುಖ ನಗರಗಳಲ್ಲಿ ಕಂಡು ಬಂದಿದೆ ಎಂದು ಚೀನಾದ ಆರೋಗ್ಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 2019ರ ಡಿಸೆಂಬರ್‌ನಲ್ಲಿ ಚೀನಾದ ವುಹಾನ್ ನಗರದಲ್ಲಿ ಮೊದಲ ಬಾರಿಗೆ ಕೊರೊನಾ ವೈರಸ್ ಪತ್ತೆಯಾಗಿತ್ತು.

ಕಡಿಮೆ ಲೆಕ್ಕ: ಚೀನಾದಲ್ಲಿ ಕೋವಿಡ್ ಪ್ರಕರಣ ಶೂನ್ಯಕ್ಕಿಳಿಸಲು ಹೇರಿದ ಕಠಿಣ ನಿರ್ಬಂಧಗಳನ್ನು ತೆರವುಗೊಳಿಸಿದ ಬಳಿಕ ದೇಶದಲ್ಲಿ ಕೋವಿಡ್‌ನಿಂದ ಏಳು ಜನರು ಮೃತಪಟ್ಟಿದ್ದಾರೆ. ಅವರೆಲ್ಲರೂ ಬೀಜಿಂಗ್‌ನವರೇ ಆಗಿದ್ದಾರೆ. ಈ ಏಳರ ಪೈಕಿ ಒಂದು ಪ್ರಕರಣವನ್ನು ಕೋವಿಡ್ ಪ್ರಕರಣಗಳ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊರೊನಾ ಸೋಂಕಿನಿಂದ ಉಸಿರಾಟದ ವೈಫಲ್ಯ ಎದುರಾಗಿ ಮೃತಪಟ್ಟಿದ್ದರೆ ಮಾತ್ರ ಅದನ್ನು ಕೋವಿಡ್ ಸಾವಿನ ಅಂಕಿ ಅಂಶಗಳ ಅಡಿಯಲ್ಲಿ ಪರಿಗಣಿಸಲಾಗುತ್ತದೆ ಎಂದು ಸರ್ಕಾರ ಘೋಷಿಸಿದ್ದರಿಂದ ಒಬ್ಬ ಮೃತರ ಹೆಸರನ್ನು ಈ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಹೇಳಿದ್ದಾರೆ.

ಈ ಮೊದಲು ಕೋವಿಡ್ ಸೋಂಕಿನಿಂದ ಅನಾರೋಗ್ಯಕ್ಕೆ ತುತ್ತಾಗಿ ಮೃತಪಟ್ಟಿದ್ದರೆ ಅದನ್ನು ಕೋವಿಡ್ ಸಾವಿನ ಪಟ್ಟಿಯಲ್ಲಿ ಪರಿಗಣಿಸಲಾಗುತ್ತಿತ್ತು.

ವಿ.ವಿ.ಗಳಲ್ಲಿ ಮಹಿಳೆಯರಿಗೆ ಇಲ್ಲ ಪ್ರವೇಶ: ತಾಲಿಬಾನ್

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ಖಾಸಗಿ ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರವೇಶವನ್ನು ನಿಷೇಧಿಸಿ ತಾಲಿಬಾನ್ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ. ಉನ್ನತ ಶಿಕ್ಷಣ ಸಚಿವಾಲಯದ ವಕ್ತಾರ ಜಿಯಾವುಲ್ಲಾ ಹಶ್ಮಿ ಈ ಆದೇಶ ಪತ್ರವನ್ನು ಟ್ವಿಟರ್‌ನಲ್ಲಿ ಪ್ರಕಟಿಸಿದ್ದಾರೆ.

ಮಹಿಳೆಯರ ಹಕ್ಕು, ಸ್ವಾತಂತ್ರ್ಯಕ್ಕೆ ಗೌರವ ಕೊಡುವುದಾಗಿ ಅಧಿಕಾರಕ್ಕೆ ಬಂದ ಆರಂಭದಲ್ಲಿ ಹೇಳಿದ್ದ ತಾಲಿಬಾನ್ ಸರ್ಕಾರ ತನ್ನ ಮಾತಿಗೆ ತಪ್ಪಿದೆ.

ಅಮೆರಿಕ ಆಕ್ಷೇಪ: ಮಹಿಳೆಯರಿಗೆ ಶಿಕ್ಷಣದಿಂದ ವಂಚಿಸುತ್ತಿರುವ ತಾಲಿಬಾನ್ ಸರ್ಕಾರದ ಅಸಮರ್ಥನೀಯ ನಿರ್ಧಾರವನ್ನು ಅಮೆರಿಕ ತೀವ್ರವಾಗಿ ಖಂಡಿಸಿದೆ.

ಜಪಾನ್‌ನಲ್ಲಿ ಭಾರಿ ಹಿಮಪಾತ: ಮೂವರ ಸಾವು

ಟೋಕಿಯೊ (ಎಪಿ): ಜಪಾನ್‌ನ ವಾಯುವ್ಯ ಭಾಗದಲ್ಲಿ ಕಂಡುಬಂದಿರುವ ಭಾರಿ ಹಿಮಪಾತದಿಂದಾಗಿ ಮೂರು ಮಂದಿ ಸಾವಿಗೀಡಾಗಿದ್ದಾರೆ' ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ಭಾರಿ ಹಿಮದಿಂದಾಗಿ ಅನೇಕ ವಾಹನಗಳು ಹೆದ್ದಾರಿಯಲ್ಲೇ ಸಿಕ್ಕಿಬಿದ್ದಿದ್ದು, ಸಾವಿರಾರು ಮನೆಗಳ ವಿದ್ಯುತ್ ಸ್ಥಗಿತಗೊಂಡಿದೆ. ನಿಗಾಟ, ಯಮಗಾಟ ಹಾಗೂ ಅಮೋರಿ ಪ್ರಾಂತ್ಯದಲ್ಲಿ ಆರೂವರೆ ಅಡಿಗಿಂತಲೂ ಹೆಚ್ಚು ಹಿಮ ಬಿದ್ದಿದೆ' ಎಂದೂ ಅವರು ಹೇಳಿದ್ದಾರೆ.

ನಿಗಾಟದ ಹೆದ್ದಾರಿಯಲ್ಲಿ 20 ಕಿ.ಮೀ.ವರೆಗೂ ವಾಹನಗಳು ಹಿಮದಲ್ಲಿ ಸಿಕ್ಕಿಬಿದ್ದಿದ್ದು, ಸ್ವಯಂ ರಕ್ಷಣಾ ಪಡೆಗಳು ಹಿಮವನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದವು. ಇವರ ಜೊತೆಗೆ, ಕೆಲವು ಸ್ಥಳೀಯ ಸ್ವಯಂ ಸೇವಕರು ಹಲವು ಗಂಟೆಗಳಿಂದ ವಾಹನಗಳಲ್ಲಿ ಸಿಕ್ಕಿಬಿದ್ದಿರುವ ಪ್ರಯಾಣಿಕರಿಗೆ ಆಹಾರವನ್ನು ಒದಗಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಕಾರ್ಕಳ	
ಹೊಸತು	25000-37500
ಹಳತು	40000-54500
ಕುಮಟ	
ಚಿಪ್ಪು	25699-31089
ಕೋಕ	16099-29999
ಹಳೆಚಾಲಿ	35599-39299
ಹೊಸಚಾಲಿ	31509-34299
ಕುಂದಾಪುರ	
ಹಳೆಚಾಲಿ	53000-55000
ಹೊಸಚಾಲಿ	40000-47500
ಪುತ್ತೂರು	
ಕೋಕ	11000-26000
ಹೊಸತು	32000-38000
ಶಿವಮೊಗ್ಗ	
ಬೆಟ್ಟೆ	49300-51399
ಗೊರಬಲು	17240-33199
ರಾಶಿ	40096-44050
ಸರಕು	57159-78800
ಸಿದ್ದಾಪುರ	
ಬಿಳಿಗೋಟು	26799-30399
ಚಾಲಿ	35509-39099
ಕೋಕ	23989-27489
ಕೆಂಪುಗೋಟು	22019-22099
ರಾಶಿ	42709-43599
ತಟ್ಟಿಬೆಟ್ಟೆ	40599-40599
ಶಿರಸಿ	
ಬೆಟ್ಟೆ	27099-40800
ಬಿಳಿಗೋಟು	17699-33929
ಚಾಲಿ	29099-40600
ಕೆಂಪುಗೋಟು	27389-30199
ರಾಶಿ	37299-43909

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	13200	13200	164.30 ಸೆಂಟ್ಸ್
ಎಸಿ	7000	6600	6200	
ಆರ್‌ಪಿ	8000	8500	8500	ಲಂಡನ್
ಆರ್‌ಸಿ	4450	4200	4200	1945 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

21–12-2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1570)
ಒಂದು ವಾರದ ಡೆಲಿವರಿ	1595 (1565)
ಸೋಯಾ ಕಚ್ಚಾ	1200 (1170)
ಪಾಮ್ ವಾರದ ಡೆಲಿವರಿ	958 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54,600 (54,250)
ಬೆಳ್ಳಿ ಕೆ.ಜಿ 68,200 (67,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

REQUIRED DRIVER For Tata ACE, in Peenya Bangalore For More Details Contact: 08660950985

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

TOYOTA, ಬ್ರಿಟಾನಿಯಾ, ಟಾಟಾಮೋಟಾರ್ಸ್, ಬಿಗ್‌ಬಜಾರ್‌ಗಳಿಗೆ 5th,10th,PUC, Degree, ITI, Diplomaದವರು ನೇರನೇಮಕಾತಿಯಿದೆ. 18,000 -56,000/-. ವಸತಿಯೂಟವಿದೆ. 9902869769

ಆಯುರ್ವೇದ ಕಂಪನಿಗೆ ಉದ್ಯೋಗಿ /ನಿರುದ್ಯೋಗಿ, ಪುರುಷ /ಮಹಿಳೆ ಅಗತ್ಯವಿದೆ, 25000/- ರಿಂದ 30000/- ಪ್ರತಿ ತಿಂಗಳು ಗಳಿಸಿ, ಸಂಪರ್ಕಿಸಿ. 9040578922

Hospital & Medical Jobs

ಬೇಕಾಗಿದ್ದಾರೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತಿಯರು 24 ಗಂಟೆ ನಮ್ಮಲ್ಲಿ ಉಳಿದುಕೊಳ್ಳುವಂತವರು ಬೇಕಾಗಿದ್ದಾರೆ ಸಂಬಳ: 13000- 24000 ಸಂಪರ್ಕಿಸಿ: 7483960098, 9739292222.

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611224833/ 9611225344

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 8792156697, 8792155097.

ಬೇಕಾಗಿದ್ದಾರೆ ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಕಂಪನಿಯಲ್ಲಿ ಕೆಲಸ ಮಾಡಲು ಅನುಭವವಿರುವ ಕೆಲಸಗಾರರು ತಕ್ಷಣ ಬೇಕಾಗಿದ್ದಾರೆ ಡ್ರೈವರ್ ಗಳು (ಬ್ಯಾಡ್ಜ್)15000/- ಹೆಲ್ಪರ್‌ಗಳು 12000/- ತಿಂಗಳ ಸಂಬಳ. 9845026220

Walk-in

AIR INDIA sats
ಏರ್‌ಪೋರ್ಟ್ ಕೆಲಸಕ್ಕೆ ಬೇಕಾಗಿದ್ದಾರೆ (ನೇರ ಸಂದರ್ಶನ)
ವಯೋಮಿತಿ 18-40 ವರ್ಷ
ಲೋಡಿಂಗ್, ಕ್ಯಾಬಿನ್ ಕ್ಲೀನಿಂಗ್, ವೀಲ್‌ಚೇರ್ ಅಸಿಸ್ಟೆಂಟ್ ಇಕ್ವಿಪ್ಮೆಂಟ್ ಆಪರೇಟರ್ (ಡ್ರೈವರ್)
ವಿದ್ಯಾರ್ಹತೆ: 10ನೇ ತರಗತಿಯವರೆಗೆ ಉತ್ತೀರ್ಣ ಅಥವಾ ಅನುತ್ತೀರ್ಣ, ಡ್ರೈವರ್‌ಗಳು HMV ಲೈಸೆನ್ಸ್ ಹೊಂದಿರಬೇಕು. (ಜನವರಿ 2020ರ ನಂತರ ನೀಡಲಾದ ಪಾಸ್‌ಪೋರ್ಟ್ ಅಥವಾ ಇತ್ತೀಚಿನ ಪೋಲೀಸ್ ಪರಿಶೀಲನೆಯ ಪ್ರಮಾಣಪತ್ರವನ್ನು ಹೊಂದಿರಬೇಕು)
ದಿನಾಂಕ ಮತ್ತು ಸಮಯ: 23.12.2022 ರಿಂದ 31.01.2023 ಬೆಳಗ್ಗೆ 9.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ
ವಿಳಾಸ: ಮಾನವ ಸಂಪನ್ಮೂಲ ವಿಭಾಗ, ಏರ್‌ಇಂಡಿಯಾ ಸ್ಯಾಟ್ಸ್ ಕಾರ್ಗೋ ಬಿಲ್ಡಿಂಗ್, ಕೆಂಪೇಗೌಡ ಇಂಟರ್‌ನ್ಯಾಷನಲ್ ಏರ್‌ಪೋರ್ಟ್, ದೇವನಹಳ್ಳಿ, ಬೆಂಗಳೂರು-300
ಸಂಪರ್ಕಿಸಿ: 080-66783411/4
ROUNAQH

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯ ಆಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Out-Station

PLOTS FOR SALE behind Rashmi College, Saraswatipura Kusoor Road Gulbarga Contact : 9845096147 Brokers Not Allowed.

ಪ್ರವಾಸ

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 27.04.2023 03.05.2023 08.05.2023 12.05.2023 ರಿಂದ 14/18 ದಿನಗಳು. ಗ್ವಾಲಿಯರ್, ಖಜರಾವೋ ಜಬಲ್ಪುರ್,ಉಜ್ಜಯಿನಿ ಓಂಕಾರೇಶ್ವರ್ 24.03.2023 03.04.2023 ರಿಂದ 10 ದಿನಗಳು. ಕಾಶ್ಮೀರ್ ಗುಲ್ಮಾರ್ಗ್ ಪೆಹಲ್ಗಾಂ ವೈಷ್ಣೋದೇವಿ 31.03.2023 07.04.2023 14.04.2023 ರಿಂದ 9/7 ದಿನಗಳು. ನೇಪಾಳ ಮುಕ್ತಿನಾಥ,ಪೋಖ್ರಾ,ಕಾಶಿ 31.03.2023 03.04.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

22/1/2023 ಕೇರಳ, ತಮಿಳುನಾಡು ಪ್ರವಾಸ,4.2.2023, 4.3.2023,ಮಧ್ಯಪ್ರದೇಶ, ಗುಜರಾತ್19/2/2023, 4/3/2023 ದೆಹಲಿ,ಅಮೃತಸರ,ವೈಷ್ಣೋದೇವಿ ,ಹರಿದ್ವಾರ, ಕಾಶಿ, ಅಯೋಧ್ಯ 21.2.2023, 26.3.2023ಮುಕ್ತಿನಾಥ,ನೇಪಾಳ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755 ಮೈಸೂರು: 9731187554

Pilgrimage Tours

ಸುವರ್ಣಯಾತ್ರ.07/01/23 ಮಧ್ಯಪ್ರದೇಶ ಪ್ರವಾಸ ಓಂಕಾರೇಶ್ವರ, ಮಹಾಕಾಳೇಶ್ವರ .20/01/23 ಕಾಶಿ ಪ್ರವಾಸ . 24/02/23 ಪುರಿ ಪ್ರವಾಸ 9008381022/9019462508

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 29/01/23 ಗುಜರಾತ್ ಮಧ್ಯಪ್ರದೇಶ 4 ಜ್ಯೋತಿಲಿಂಗ 03/01/23 ಪುರಿ, ಭುವನೇಶ್ವರ. 10/01/23 ರಾಮೇಶ್ವರಂ, ಕನ್ಯಾಕುಮಾರಿ. 9591017782, 9964527782

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
conditions apply*
dhclassifieds@deccanherald.co.in www.dhclassifieds.com

ರಾಹುಲ್ ಗಾಂಧಿಗೆ ಪತ್ರ ಬರೆದು ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಸೂಚನೆ

‘ಶಿಷ್ಟಾಚಾರ ಪಾಲಿಸಿ ಇಲ್ಲವೇ ಯಾತ್ರೆ ನಿಲ್ಲಿಸಿ’

ನವದೆಹಲಿ: ‘ಕೋವಿಡ್ ಶಿಷ್ಟಾಚಾರಗಳನ್ನು ಪಾಲಿಸಲು ಸಾಧ್ಯವಾಗದಿದ್ದರೆ, ಭಾರತ್ ಜೋಡೊ ಯಾತ್ರೆಯನ್ನು ನಿಲ್ಲಿಸಿ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಸೂಚನೆ ನೀಡಿದ್ದಾರೆ.

ಈ ಸಂಬಂಧ ರಾಹುಲ್ ಗಾಂಧಿ ಹಾಗೂ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ಮಂಗಳವಾರ ಪತ್ರ ಬರೆದಿರುವ ಮಾಂಡವೀಯ ಅವರು, ‘ರಾಜಸ್ಥಾನದ ಸಂಸದರಾದ ಪಿ.ಪಿ. ಚೌಧರಿ, ನಿಹಾಲ್ ಚಂದ್ ಮತ್ತು ದೇವ್ ಜಿ ಪಟೇಲ್ ಅವರು ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ‘ಭಾರತ್ ಜೋಡೊ’ ಯಾತ್ರೆಯಲ್ಲಿ ಮುಖಗವಸು (ಮಾಸ್ಕ್), ಸ್ಯಾನಿಟೈಸರ್ ಬಳಕೆ ಸೇರಿದಂತೆ ಕೋವಿಡ್‌ನ ಇತರ ಶಿಷ್ಟಾಚಾರ ಪಾಲಿಸುವಂತೆ ಕೋರಿದ್ದಾರೆ. ಇವುಗಳನ್ನು ಮೆರವಣಿಗೆಯ ಸಮಯದಲ್ಲಿ ಕಟ್ಟುನಿಟ್ಟಾಗಿ ಅನುಸರಿಸಬೇಕು’ ಎಂದೂ ಹೇಳಿದ್ದಾರೆ.

ಯಾತ್ರೆಯಲ್ಲಿ ಪಾಲ್ಗೊಂಡ ಅನೇಕರಲ್ಲಿ ರೋಗಲಕ್ಷಣಗಳು ಕಾಣಿಸಿಕೊಂಡಿವೆ. ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ಕೊರೊನಾ ವೈರಸ್ ಸೋಂಕಿಗೆ ಒಳಗಾಗಿರುವುದು ಪರೀಕ್ಷೆಯಿಂದ ದೃಢಪಟ್ಟಿದೆ ಎಂದೂ ತಿಳಿಸಿದ್ದಾರೆ.

ಭಾರತ್ ಜೋಡೊ ಯಾತ್ರೆಯು ಬುಧವಾರ ರಾಜಸ್ಥಾನದಿಂದ ಹರಿಯಾಣ ಪ್ರವೇಶಿಸಿದೆ.

ಕೋವಿಡ್ ಬಗ್ಗೆ ಆತಂಕ ಬೇಡ (ಪುಣೆ ವರದಿ): ‘ಚೀನಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದು ಕಳವಳಕಾರಿ. ಆದರೆ, ಅತ್ಯಧಿಕ ಜನರಿಗೆ ಭಾರತದಲ್ಲಿ ಕೋವಿಡ್ ಲಸಿಕೆ ಹಾಕಿರುವ ಕಾರಣ ಆತಂಕಪಡುವ ಅಗತ್ಯ ಇಲ್ಲ’ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ (ಎಸ್‌ಐಐ) ಸಿಇಒ ಅದಾರ್ ಪೂನಾವಾಲಾ ಅವರು ಹೇಳಿದ್ದಾರೆ.

ಯಾತ್ರೆಗೆ ಹೆದರಿದ ಬಿಜೆಪಿ– ಕಾಂಗ್ರೆಸ್

ನುಹ್ (ಹರಿಯಾಣ): ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಗೆ ಪತ್ರ ಬರೆದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ‘ಪಕ್ಷ ರಾಜಕಾರಣಕ್ಕಿಂತಲೂ ಸಾರ್ವಜನಿಕ ಆರೋಗ್ಯವು ತುಂಬಾ ಗಂಭೀರವಾದದ್ದು. ಕೋವಿಡ್ ಶಿಷ್ಟಾಚಾರ ಘೋಷಿಸಿದ್ದರೆ ಖಂಡಿತಾ ಶಿಷ್ಟಾಚಾರ ಪಾಲಿಸಲಾಗುವುದು’ ಎಂದು ಹೇಳಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್, ‘ಭಾರತ್ ಜೋಡೊ ಯಾತ್ರೆಯ ಯಶಸ್ಸಿನಿಂದ ಬಿಜೆಪಿ ಹೆದರಿರುವುದು ನನಗೆ ಅರ್ಥವಾಗುತ್ತದೆ. ಯಶಸ್ಸಿನ ನಂತರವೇ ಅದಕ್ಕೆ ಈ ಸಮಸ್ಯೆಗಳೆಲ್ಲಾ ಕಾಣುತ್ತಿವೆ. ಹಾಗಾಗಿ, ಕೋವಿಡ್ ಶಿಷ್ಟಾಚಾರದ ನಿಯಮ ಹೇರಲು ಮುಂದಾಗಿದೆ. ಸರ್ಕಾರವು ಕೋವಿಡ್ ಶಿಷ್ಟಾಚಾರ ಕಡ್ಡಾಯಗೊಳಿಸಿ ಘೋಷಿಸಲಿ. ನಾವು ಆ ಶಿಷ್ಟಾಚಾರವನ್ನು ಪಾಲಿಸುತ್ತೇವೆ’ ಎಂದು ಹೇಳಿದ್ದಾರೆ.

ಗೆಹಲೋತ್ ಟ್ವೀಟ್: ಸಚಿವ ಮಾಂಡವೀಯ ಅವರ ಪತ್ರಕ್ಕೆ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ‘ಜನಬೆಂಬಲ ಹೆಚ್ಚುತ್ತಿರುವ ಭಯದಿಂದ ಭಾರತ್ ಜೋಡೊ ಯಾತ್ರೆಗೆ ಅಡ್ಡಿಪಡಿಸುವುದು ಬಿಜೆಪಿಯ ಉದ್ದೇಶ ಎಂಬುದನ್ನು ಈ ಪತ್ರ ಸ್ಪಷ್ಟವಾಗಿ ತೋರಿಸುತ್ತದೆ’ ಎಂದು ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಮಾತನಾಡಿ, ‘ಕರ್ನಾಟಕದಲ್ಲಿ ಬಿಜೆಪಿ ಮತ್ತೊಂದು ಯಾತ್ರೆ ನಡೆಸುತ್ತಿದೆ. ಬಿಜೆಪಿಯವರಿಗೆ ಏಕೆ ಪತ್ರ ಬರೆದಿಲ್ಲ’ ಎಂದೂ ಖೇರಾ ಪ್ರಶ್ನಿಸಿದ್ದಾರೆ.

ನಿತೀಶ್ ವಾಗ್ದಾಳಿ: ಕೇಂದ್ರ ಸರ್ಕಾರದ ವಿರುದ್ಧ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಬುಧವಾರ ವಾಗ್ದಾಳಿ ನಡೆಸಿ, ‘ಕಾಂಗ್ರೆಸ್ ಯಾತ್ರೆ ನಡೆಯುತ್ತಿರುವಾಗಲೇ ಅವರು (ಬಿಜೆಪಿ) ಏಕೆ ಕೋವಿಡ್ ಬಗ್ಗೆ ಜಾಗರೂಕರಾಗಿದ್ದಾರೆ ಎಂಬುದನ್ನು ಖಂಡಿತಾ ಅರಿಯಬೇಕಿದೆ. ಕಾಂಗ್ರೆಸ್ ಯಾತ್ರೆಗೆ ಶಿಷ್ಟಾಚಾರ ಹೇರಿ, ಮತ್ತೊಂದೆಡೆ ಬಿಜೆಪಿಯವರೇ ಯಾಕೆ ಯಾತ್ರೆಗಳನ್ನು ನಡೆಸುತ್ತಿದ್ದಾರೆ’ ಎಂದು ಪ್ರಶ್ನಿಸಿದ್ದಾರೆ.

ವೈದ್ಯಕೀಯ ಕ್ಷೇತ್ರಕ್ಕೆ ‘ಇಂದಿರಾ ಗಾಂಧಿ ಶಾಂತಿ’ ಪ್ರಶಸ್ತಿ

ನವದೆಹಲಿ (ಪಿಟಿಐ): ಕೋವಿಡ್ ಕಾಲದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ದೇಶದ ವೈದ್ಯಕೀಯ ಕ್ಷೇತ್ರಕ್ಕೆ 2020–21ನೇ ಸಾಲಿನ ಇಂದಿರಾ ಗಾಂಧಿ ಶಾಂತಿ, ನಿಶಸ್ತ್ರೀಕರಣ ಮತ್ತು ಅಭಿವೃದ್ಧಿ–2022 ಪ್ರಶಸ್ತಿಯನ್ನು ನೀಡಲಾಗುವುದು ಎಂದು ಇಂದಿರಾ ಗಾಂಧಿ ಮೆಮೋರಿಯಲ್ ಟ್ರಸ್ಟ್ ಘೋಷಿಸಿದೆ.

‘ವೈದ್ಯಕೀಯ ಕ್ಷೇತ್ರಕ್ಕೆ ನೀಡಲಾಗುತ್ತಿರುವ ಪ್ರಶಸ್ತಿಯಾದ್ದರಿಂದ ದೇಶದ ಲಕ್ಷಗಟ್ಟಲೆ ವೈದ್ಯರು, ನರ್ಸ್‌ಗಳ ಪ್ರಾತಿನಿಧಿಕ ಸಂಸ್ಥೆಯಾಗಿರುವ ಭಾರತೀಯ ವೈದ್ಯಕೀಯ ಸಂಘ ಹಾಗೂ ಟ್ರೈನ್ಡ್ ನರ್ಸ್ ಆರ್ಗನೈಸೇಷನ್ ಆಫ್ ಇಂಡಿಯಾದ ಪ್ರತಿನಿಧಿಗಳಿಗೆ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ’ ಎಂದು ಟ್ರಸ್ಟ್ ಹೇಳಿದೆ.

‘ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಠಾಕೂರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ ಮೊತ್ತ ₹ 1 ಕೋಟಿಯೊಂದಿಗೆ ಪ್ರಶಸ್ತಿಪತ್ರವನ್ನೂ ನೀಡಲಾಗುವುದು’ ಎಂದಿದೆ.

ಮಾದರಿಗಳ ವಿಶ್ಲೇಷಣೆ– ಡಾ.ಕೆ. ಸುಧಾಕರ್

ಒಂದನೇ ಪುಟದಿಂದ...

‘ಬೆಂಗಳೂರು ವಿಮಾನ ನಿಲ್ದಾಣಕ್ಕೆ ಅತೀ ಹೆಚ್ಚು ಪ್ರಯಾಣಿಕರು ಬರುತ್ತಿದ್ದಾರೆ. ಇಲ್ಲಿಯೂ ನಿಗಾ ಇರಿಸಲು ಆರಂಭಿಸಲಾಗುವುದು. ಎರಡು ಡೋಸ್‌ಗಳಲ್ಲಿ ಶೇ 100ರಷ್ಟು ಸಾಧನೆಯಾಗಿದೆ. ಆದರೆ, ಅನೇಕರು ಮೂರನೇ ಡೋಸ್ ಪಡೆದಿಲ್ಲ. ಅಂತಹವರು ಆದಷ್ಟು ಬೇಗ ಮೂರನೇ ಡೋಸ್ ಲಸಿಕೆ ಪಡೆಯಬೇಕು’ ಎಂದು ಮನವಿ ಮಾಡಿದರು. ‘ಸಚಿವಾಲಯದ ಮಾರ್ಗದರ್ಶನ ಪಡೆದು ಕ್ರಮ ವಹಿಸಲಾಗುವುದು. ಯಾವುದೇ ಪರಿಸ್ಥಿತಿ ಎದುರಿಸಲು ಮುನ್ನೆಚ್ಚರಿಕೆ ವಹಿಸಲಾಗುವುದು. ಹಾಗೆಯೇ, ಮಾರ್ಗಸೂಚಿಯೊಂದನ್ನು ಬಿಡುಗಡೆ ಮಾಡಲಾಗುವುದು’ ಎಂದರು.

‘ಮಧುಮೇಹಿಗಳು ಮಾಸ್ಕ್ ಧರಿಸಿ’

ನವದೆಹಲಿ (ಪಿಟಿಐ): ‘ಕೋವಿಡ್–19 ಕುರಿತು ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ. ಮಧುಮೇಹ, ಅಧಿಕ ರಕ್ತದೊತ್ತಡ ಇರುವವರು (ಕೋಮಾರ್ಬಿಡಿಟಿ), ವಯಸ್ಸಾದವರು ಜನಜಂಗುಳಿ ಇರುವ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು’ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿ.ಕೆ.ಪೌಲ್ ಸಲಹೆ ನೀಡಿದ್ದಾರೆ.

‘ಅರ್ಹರ ಪೈಕಿ ಶೇ 27ರಿಂದ 28ರಷ್ಟು ಮಂದಿ ಮಾತ್ರ ಕೋವಿಡ್ ಲಸಿಕೆ ಪಡೆದಿದ್ದಾರೆ. ವಿಮಾನ ಪ್ರಯಾಣಿಕರಿಗೆ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಮಾಡಿಲ್ಲ’ ಎಂದಿದ್ದಾರೆ.

ಸಚಿವ ಮಾಂಡವಿಯಾ ಅಧ್ಯಕ್ಷತೆಯ ಸಭೆಯಲ್ಲಿ ಆರೋಗ್ಯ, ಫಾರ್ಮಾಸ್ಯೂಟಿಕಲ್, ಬಯೋಟೆಕ್ನಾಲಜಿ, ಆಯುಷ್ ಇಲಾಖೆಗಳ ಕಾರ್ಯದರ್ಶಿಗಳು, ಐಸಿಎಂಆರ್ ನಿರ್ದೇಶಕ ಜನರಲ್ ರಾಜೀವ್ ಬಹಲ್, ಲಸಿಕೆ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ) ಮುಖ್ಯಸ್ಥ ಡಾ.ಎನ್. ಕೆ.ಅರೋರಾ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿಮಾನ ನಿಲ್ದಾಣ: ವಿದೇಶಿ ಪ್ರಯಾಣಿಕರ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿದೇಶದಿಂದ ಬರುವ ಪ್ರಯಾಣಿಕರ ಮೇಲೆ ನಿಗಾ ವಹಿಸಲಾಗಿದೆ.

ಕಳೆದ ಕೆಲವು ದಿನಗಳಿಂದ ಕೋವಿಡ್ ನಿರ್ಬಂಧ ಸಡಿಲಿಕೆ ಮಾಡಲಾಗಿತ್ತು. ದಾಖಲೆ ಪರಿಶೀಲನೆ ಹೊರತುಪಡಿಸಿ ಕೋವಿಡ್ ತಪಾಸಣೆ ನಡೆಸುತ್ತಿರಲಿಲ್ಲ. ಕೇಂದ್ರ ಸರ್ಕಾರವು ಮಾರ್ಗಸೂಚಿ ಪ್ರಕಟಿಸಿದ್ದು, ಅದರಂತೆ ಬುಧವಾರದಿಂದ ಉಷ್ಣಾಂಶ ತಪಾಸಣೆ ಮರು ಆರಂಭಿಸಲಾಗಿದೆ.

ಅದಕ್ಕಾಗಿಯೇ ಪ್ರತ್ಯೇಕ ಕೊಠಡಿ ತೆರೆಯಲಾಗಿದೆ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ಕಡಲ್ಗಳ್ಳತನ ತಡೆ ಮಸೂದೆಗೆ ಅಸ್ತು

ನವದೆಹಲಿ (ಪಿಟಿಐ): ‘ಕಡಲ್ಗಳ್ಳತನ ತಡೆ ಮಸೂದೆಗೆ ಸಂಸತ್ತು ಬುಧವಾರ ಅಂಗೀಕಾರ ನೀಡಿದೆ. ಕಡಲ್ಗಳ್ಳತನದಂತಹ ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ.

ರಾಜ್ಯಸಭೆಯಲ್ಲಿ ಮಂಡನೆಯಾದ ಈ ಮಸೂದೆಗೆ ಧ್ವನಿಮತದ ಅಂಗೀಕಾರ ದೊರೆಯಿತು. ಲೋಕಸಭೆಯಲ್ಲಿ ಸೋಮವಾರವೇ ಅನುಮೋದನೆ ದೊರೆತಿತ್ತು.

ಅಪರಾಧಿಗಳಿಗೆ ಮರಣದಂಡನೆ ಮತ್ತು ಜೀವಾವಧಿ ಶಿಕ್ಷೆ ವಿಧಿಸುವ ನಿಬಂಧನೆ ಈ ಮಸೂದೆಯಲ್ಲಿದೆ.

2024ರ ಕೊನೆಯಲ್ಲಿ ಮಾನವ ಸಹಿತ ಬಾಹ್ಯಾಕಾಶ ಯಾನ

ನವದೆಹಲಿ (ಪಿಟಿಐ): ಭಾರತದ ಚೊಚ್ಚಲ ಮಾನವ ಸಹಿತ ಬಾಹ್ಯಾಕಾಶ ಯಾನವನ್ನು 2024ನೇ ಸಾಲಿನ ನಾಲ್ಕನೇ ತ್ರೈಮಾಸಿಕ ಅವಧಿಯಲ್ಲಿ ಉಡಾವಣೆ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ಪ್ರಧಾನ ಮಂತ್ರಿಗಳ ಕಚೇರಿಯ (ಪಿಎಂಒ) ರಾಜ್ಯ ಸಚಿವ ಜಿತೇಂದ್ರ ಸಿಂಗ್ ಬುಧವಾರ ಲೋಕಸಭೆಗೆ ತಿಳಿಸಿದ್ದಾರೆ.

ಈ ಯೋಜನೆಗೆ ಗಗನಯಾನಿಗಳನ್ನು ಗುರುತಿಸಲಾಗಿದ್ದು, ಅವರಿಗೆ ಬಾಹ್ಯಾಕಾಶ ಯೋಜನೆಗೆ ಸಂಬಂಧಿಸಿದ ನಿರ್ದಿಷ್ಟ ತರಬೇತಿಯನ್ನು ಬೆಂಗಳೂರಿನಲ್ಲಿ ನೀಡಲಾಗುತ್ತಿದೆ ಎಂದು ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಗಗನಯಾನಿಗಳ ಸುರಕ್ಷತೆಯ ಮಹತ್ವವನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ ಎಂದಿರುವ ಅವರು, ಈ ಕಾರಣಕ್ಕಾಗಿಯೇ ಮಾನವ ಸಹಿತ ಗಗನಯಾನಕ್ಕೂ ಮುನ್ನ ಎರಡು ಪರೀಕ್ಷಾ ವಾಹನಗಳ ಪ್ರಾತ್ಯಕ್ಷಿಕೆ ಯೋಜಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಸಿಬ್ಬಂದಿ ರಹಿತ ‘ಗಗನಯಾನ 1’ ಯೋಜನೆ 2023ರ ಮೊದಲ ತ್ರೈಮಾಸಿಕದಲ್ಲಿ ಹಾಗೂ ಸಿಬ್ಬಂದಿ ರಹಿತ ‘ಗಗನಯಾನ 2’ ಯೋಜನೆಯನ್ನು 2024ರ ಎರಡನೇ ತ್ರೈಮಾಸಿಕದಲ್ಲಿ ಉಡಾವಣೆ ಮಾಡುವ ಗುರಿ ಹೊಂದಲಾಗಿದೆ. ಬಳಿಕ ಅಂತಿಮವಾಗಿ ಮಾನವ ಸಹಿತ ಬಾಹ್ಯಾಕಾಶ ಯಾನ ‘ಎಚ್1’ ಯೋಜನೆಯನ್ನು 2024ರ ನಾಲ್ಕನೇ ತ್ರೈಮಾಸಿಕದಲ್ಲಿ ಉಡಾವಣೆ ಮಾಡುವ ಯೋಜನೆಯಿದೆ ಎಂದು ಅವರು ತಿಳಿಸಿದ್ದಾರೆ.

ದೇಶಕ್ಕೆ ಇಬ್ಬರು ‘ರಾಷ್ಟ್ರಪಿತ’: ಅಮೃತಾ ಫಡಣವೀಸ್

ನಾಗ್ಪುರ (ಪಿಟಿಐ): ದೇಶವು ಇಬ್ಬರು ‘ರಾಷ್ಟ್ರಪಿತ’ರನ್ನು ಹೊಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ನವ ಭಾರತದ ಪಿತಾಮಹ, ಗಾಂಧಿ ಅವರು ರಾಷ್ಟ್ರದ ಮೊದಲ ಪಿತಾಮಹ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಪತ್ನಿ ಅಮೃತಾ ಫಡಣವೀಸ್ ಅಣಕು ನ್ಯಾಯಾಲಯ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಅಭಿರೂಮ್ ನ್ಯಾಯಾಲಯದ ಅಣಕು ನ್ಯಾಯಾಲಯದ ಸಂದರ್ಶನದಲ್ಲಿ, ಮೋದಿ ಅವರು ರಾಷ್ಟ್ರಪಿತರಾದರೆ ಗಾಂಧಿ ಯಾರು ಎಂಬ ಪ್ರಶ್ನೆಗೆ, ‘ಮಹಾತ್ಮ ಗಾಂಧಿ ದೇಶದ ರಾಷ್ಟ್ರಪಿತ ಮತ್ತು ಮೋದಿ ಅವರು ನವಭಾರತದ ರಾಷ್ಟ್ರಪಿತ. ಹಾಗಾಗಿ ರಾಷ್ಟ್ರ ಇಬ್ಬರು ‘ರಾಷ್ಟ್ರಪಿತ’ರನ್ನು ಹೊಂದಿದೆ’ ಎಂದು ಅಮೃತಾ ಉತ್ತರಿಸಿದ್ದಾರೆ.

ಅಮೃತಾ ಅವರ ಹೇಳಿಕೆಯನ್ನು ಟೀಕಿಸಿರುವ ಕಾಂಗ್ರೆಸ್ ನಾಯಕಿ ಹಾಗೂ ಮಹಾರಾಷ್ಟ್ರದ ಮಾಜಿ ಸಚಿವೆ ಯಶೋಮತಿ ಠಾಕೂರ್, ‘ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಗಾಂಧೀಜಿಯನ್ನು ಮತ್ತೆ ಮತ್ತೆ ಹಿನ್ನೆಲೆಗೆ ತಳ್ಳುತ್ತಾ ಇತಿಹಾಸವನ್ನು ಬದಲಾಯಿಸಲು ಹೊರಟಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಸತ್‌ನಲ್ಲಿ ಭಾರತ–ಚೀನಾ ಗಡಿ ಕುರಿತ ಚರ್ಚೆಗೆ ಅವಕಾಶ ನಿರಾಕರಣೆ

ಕೇಂದ್ರದ ವಿರುದ್ಧ ಸೋನಿಯಾ ವಾಗ್ದಾಳಿ

ನವದೆಹಲಿ: ಸಂಸತ್ತಿನಲ್ಲಿ ಭಾರತ–ಚೀನಾ ಗಡಿ ಸಮಸ್ಯೆಯ ಚರ್ಚೆಯನ್ನು ನಿರಾಕರಿಸುವುದಕ್ಕಾಗಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಬುಧವಾರ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ‘ಗಂಭೀರ ಕಾಳಜಿಯ ವಿಷಯಗಳ ಬಗೆಗಿನ ಮೌನವು ಈ ಸರ್ಕಾರದ ನಿರ್ಣಾಯಕ ಲಕ್ಷಣವಾಗಿರುವುದು ದುರದೃಷ್ಟಕರ’ ಎಂದು ಹೇಳಿದ್ದಾರೆ.

ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಪಕ್ಷದ ಸಂಸದೀಯ ಸಭೆಯನ್ನುದ್ದೇಶಿಸಿ ಮಾತನಾಡಿದ ಸೋನಿಯಾ, ‘ಚೀನಾದ ಆಕ್ರಮಣಗಳಂತಹ ಗಂಭೀರ ವಿಷಯದ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯನ್ನು ನಿರಾಕರಿಸುವುದು ನಮ್ಮ ಪ್ರಜಾಪ್ರಭುತ್ವಕ್ಕೆ ಅಗೌರವವನ್ನು ತೋರಿಸುತ್ತದೆ ಮತ್ತು ಇದು ಸರ್ಕಾರದ ದುರುದ್ದೇಶವನ್ನು ಪ್ರತಿಬಿಂಬಿಸುತ್ತದೆ’ ಎಂದಿದ್ದಾರೆ.

‘ರಾಷ್ಟ್ರೀಯ ಭದ್ರತೆ ಮತ್ತು ಗಡಿ ಕುರಿತು ವಿಷಯಗಳನ್ನು ದೇಶದ ಜನರಿಗೆ ಮಾಹಿತಿ ನೀಡುವುದು ಹಾಗೂ ತನ್ನ ನೀತಿಗಳು ಹಾಗೂ ಕ್ರಮಗಳ ಕುರಿತು ವಿವರಿಸುವುದು ಸರ್ಕಾರದ ಕರ್ತವ್ಯ. ದೇಶವು ಮಹತ್ವದ ರಾಷ್ಟ್ರೀಯ ಸವಾಲನ್ನು ಎದುರಿಸುತ್ತಿರುವಾಗ, ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ದೇಶದ ಸಂಪ್ರದಾಯ. ಚರ್ಚೆಯು ದೇಶದ ನಿಲುವನ್ನು ಸ್ಪಷ್ಟಪಡಿಸುತ್ತದೆ’ ಎಂದೂ ಅವರು ಹೇಳಿದ್ದಾರೆ.

‘ಮುಂದಿನ ದಿನಗಳಲ್ಲಿ ಚೀನಾದಿಂದ ಆಕ್ರಮಣವನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಚೀನಾದೊಂದಿಗೆ ವ್ಯಾಪಾರವನ್ನು ಭಾರತವು ಮುಂದುವರಿಸಿದ್ದು, ನಾವು ರಫ್ತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿದ್ದೇವೆ. ಚೀನಾದ ಮಿಲಿಟರಿ ಹಗೆತನಕ್ಕೆ ಸರ್ಕಾರವು ಆರ್ಥಿಕ ನೆಲೆಯಲ್ಲಿ ಏಕೆ ಪ್ರತಿಕ್ರಿಯಿಸುತ್ತಿಲ್ಲ’ ಎಂದೂ ಸೋನಿಯಾ ಪ್ರಶ್ನಿಸಿದ್ದಾರೆ.

ಭಾರತ– ಚೀನಾ ಗಡಿ ಸಮಸ್ಯೆ ಕುರಿತ ಚರ್ಚೆಗೆ ಲೋಕಸಭೆಯಲ್ಲಿ ಅವಕಾಶ ನೀಡಬೇಕೆಂದು ಆಗ್ರಹಿಸಿ ನವದೆಹಲಿಯಲ್ಲಿ ಗಾಂಧಿ ಪ್ರತಿಮೆಯ ಬಳಿ ಕಾಂಗ್ರೆಸ್ ಮತ್ತು ಡಿಎಂಕೆ ಸದಸ್ಯರು ಪ್ರತಿಭಟನೆ ನಡೆಸಿದರು. ಡಿಎಂಕೆಯ ಟಿ.ಆರ್. ಬಾಲು, ಕಾಂಗ್ರೆಸ್‌ನ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಪಿ. ಚಿದಂಬರಂ ಇತರರು ಹಾಜರಿದ್ದರು —ಪಿಟಿಐ ಚಿತ್ರ

ಸಭಾತ್ಯಾಗ: ಚೀನಾ ಜತೆಗಿನ ಗಡಿ ಸಮಸ್ಯೆ ಕುರಿತು ಚರ್ಚೆ ನಡೆಸುವಂತೆ ಆಗ್ರಹಿಸಿ ಬುಧವಾರ ವಿರೋಧಪಕ್ಷಗಳು ಲೋಕಸಭೆಯಿಂದ ಹೊರನಡೆದವು.

ಸದನದಲ್ಲಿ ಶೂನ್ಯವೇಳೆ ಆರಂಭವಾಗುತ್ತಿದ್ದಂತೆಯೇ ಒಟ್ಟುಗೂಡಿದ ಕಾಂಗ್ರೆಸ್ ಮತ್ತು ಡಿಎಂಕೆಯ ಸಂಸತ್ ಸದಸ್ಯರು ಸಭಾತ್ಯಾಗ ಮಾಡಿದರು. ಬಳಿಕ ಟಿಎಂಸಿ, ಜೆಡಿಯು ಸಂಸದರು ಸಭಾತ್ಯಾಗ ಮಾಡಿ ಲೋಕಸಭೆಯಿಂದ ಹೊರನಡೆದರು.

ಇದಕ್ಕೂ ಮೊದಲು, ಸದನದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು, ‘ಸದನದಲ್ಲಿ ಭಾರತ–ಚೀನಾ ಗಡಿ ಸಮಸ್ಯೆ ಕುರಿತು ಚರ್ಚೆಗೆ ಅವಕಾಶ ಕಲ್ಪಿಸಬೇಕು’ ಎಂದು ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಅವರಿಗೆ ಒತ್ತಾಯಿಸಿದರು.

‘ಚೀನಾದ ವಿಚಾರವಾಗಿ ಚರ್ಚೆಗೆ ಅವಕಾಶ ನೀಡುವಂತೆ ನಾವು ಬೆಳಿಗ್ಗೆಯಿಂದಲೂ ಒತ್ತಾಯಿಸುತ್ತಿದ್ದೇವೆ. ಸದನದಲ್ಲಿ ಚರ್ಚೆ ಮಾಡಲು ವಿರೋಧ ಪಕ್ಷಗಳಿಗೆ ಅವಕಾಶ ನೀಡಿ. ಇದು ಪ್ರತಿಪಕ್ಷಗಳ ಹಕ್ಕಾಗಿದೆ’ ಎಂದೂ ಅವರು ಪ್ರತಿಪಾದಿಸಿದರು.

ಟಿಎಂಸಿ ಸಂಸದ ಸುದೀಪ್ ಬಂಡೋಪಾಧ್ಯಾಯ ಅವರು ಕೂಡ ಚರ್ಚೆಗೆ ಅವಕಾಶ ನೀಡುವಂತೆ ಒತ್ತಾಯಿಸಿದರು. ಬಳಿಕ ಸದನದಲ್ಲಿ ಮಾದಕವಸ್ತುಗಳ ಹಾವಳಿ ಕುರಿತ ಚರ್ಚೆಯು ಮತ್ತೆ ಆರಂಭವಾಯಿತು.

ಸೂಕ್ಷ್ಮವಿಚಾರ ಚರ್ಚಿಸುವುದು ಸರಿಯಲ್ಲ: ‘ಗಡಿ ಸಮಸ್ಯೆಯು ಸೂಕ್ಷ್ಮವಾದ ವಿಚಾರವಾಗಿದ್ದು, ಅಂಥದ್ದನ್ನು ಸದನದಲ್ಲಿ ಚರ್ಚಿಸುವುದು ಸರಿಯಲ್ಲ. ಯುಪಿಎ ಸರ್ಕಾರದ ಅವಧಿಯಲ್ಲೂ ಇಂಥ ಚರ್ಚೆಗೆ ಅವಕಾಶ ನೀಡಿರಲಿಲ್ಲ’ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

56 ಇಂಚಿನ ಎದೆ 0.56 ಇಂಚು ಆಗಿದೆ– ಎಎಪಿ ವ್ಯಂಗ್ಯ: ಚೀನಾ ಗಡಿಯ ಸಮಸ್ಯೆ ಕುರಿತು ಚರ್ಚೆ ಅವಕಾಶ ನೀಡದಿರುವುದನ್ನು ಟೀಕಿಸಿರುವ ಎಎಪಿ ಸಂಸದ ಸಂಜಯ್ ಸಿಂಗ್ ಅವರು, ‘ಆಡಳಿತಾರೂಢ ಪಕ್ಷದ ನಾಯಕನ ಎದೆಯು ಪ್ರತಿಭಟನನಿರತ ರೈತರ ಮುಂದೆ 56 ಇಂಚು ಆಗುತ್ತದೆ, ಆದರೆ, ಅದೇ ಎದೆಯು ಚೀನಾದ ವಿಚಾರದಲ್ಲಿ 0.56 ಇಂಚು ಆಗಿದೆ’ ಎಂದು ವ್ಯಂಗ್ಯವಾಡಿದ್ದಾರೆ.

ಸಂಸತ್ತಿನ ಸಂಕೀರ್ಣದ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಎಎಪಿ, ಕಾಂಗ್ರೆಸ್, ಜೆಡಿಯು ಸೇರಿದಂತೆ ಇತರ ಪಕ್ಷಗಳು ನಡೆಸಿದ ಪ್ರತಿಭಟನೆ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಂಜಯ್, ‘ಗಡಿಯ ವಿಚಾರದ ಬಗ್ಗೆ ದೇಶದ ಜನತೆ ಹಾಗೂ ಸಂಸತ್ತಿಗೆ ಉತ್ತರ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಗಡಿ ರಕ್ಷಣೆಗಾಗಿ ನಮ್ಮ ಸೈನಿಕರು ಪ್ರಾಣತ್ಯಾಗ ಮಾಡಿದ್ದಾರೆ. ಆದರೂ ಸರ್ಕಾರ ಚೀನಾದೊಂದಿಗಿನ ವ್ಯಾಪಾರವನ್ನು ಮತ್ತಷ್ಟು ಉತ್ತೇಜಿಸುತ್ತಿರುವುದು ಯಾಕೆ’ ಎಂದು ಪ್ರಶ್ನಿಸಿದರು.

ಸಂಕ್ಷಿಪ್ತ ಸುದ್ದಿ

ಜಯಪ್ರದಾ ವಿರುದ್ಧ ವಾರಂಟ್

ಬರೇಲಿ (ಯುಪಿ) (ಪಿಟಿಐ): ಮಾಜಿ ಸಂಸದೆ ಜಯಪ್ರದಾ ವಿರುದ್ಧ ರಾಂಪುರದ ವಿಶೇಷ ನ್ಯಾಯಾಲಯ ಜಾಮೀನ ರಹಿತ ವಾರಂಟ್ ಹೊರಡಿಸಿದೆ.

2019ರ ಲೋಕಸಭಾ ಚುನಾವಣೆ ವೇಳೆ ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ ವಾರಂಟ್ ಜಾರಿಗೊಳಿಸಿದೆ.

ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಜಯಪ್ರದಾ ಅವರು ಪದೇ ಪದೇ ಗೈರು ಹಾಜರಾಗಿದ್ದರಿಂದ, ನ್ಯಾಯಾಧೀಶರು ಜಾಮೀನು ರಹಿತ ವಾರಂಟ್ ಹೊರಡಿಸಿ, ವಿಚಾರಣೆಯನ್ನು ಜನವರಿ 9ಕ್ಕೆ ನಿಗದಿಪಡಿಸಿದರು.

ಡ್ರಗ್ಸ್ ವಿರೋಧಿ ಹೋರಾಟ: ಶಾ ಕರೆ

ನವದೆಹಲಿ (ಪಿಟಿಐ): ‘ಡ್ರಗ್ಸ್ ವಿರುದ್ಧದ ಹೋರಾಟಕ್ಕೆ ಕೇಂದ್ರ ಸರ್ಕಾರ ಸದಾ ಸನ್ನದ್ಧವಾಗಿದೆ. ರಾಜಕೀಯ ಮರೆತು ರಾಜ್ಯ ಸರ್ಕಾರಗಳು ಈ ಕಾರ್ಯದಲ್ಲಿ ನಮ್ಮೊಂದಿಗೆ ಕೈಜೋಡಿಸಬೇಕು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದರು.

ಡ್ರಗ್ಸ್ ಸಮಸ್ಯೆಗಳ ಕುರಿತು ಲೋಕಸಭೆಯಲ್ಲಿ ಬುಧವಾರ ಚರ್ಚೆ ನಡೆಯಿತು. ಈ ವೇಳೆ ಮಾತನಾಡಿದ ಅವರು, ‘ಡ್ರಗ್ಸ್ ಕುರಿತಾಗಿ ಕೇಂದ್ರದವು ಶೂನ್ಯ ಸಹಿಷ್ಣು ನೀತಿಯನ್ನು ಹೊಂದಿದೆ. ಎಷ್ಟೇ ದೊಡ್ಡ ಮಟ್ಟದ ಡ್ರಗ್ಸ್ ವ್ಯಾಪಾರಿಗಳಿದ್ದರೂ ಮುಂದಿನ ಎರಡು ವರ್ಷಗಳಲ್ಲಿ ಅವರನ್ನು ಜೈಲಿಗಟ್ಟುತ್ತೇವೆ’ ಎಂದರು.

‘ಆಹಾರ ಪೋಲು ತಡೆ’ ಕುರಿತ ಪಾಠ: ಕೇಂದ್ರ ಸಲಹೆ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪಠ್ಯದಲ್ಲಿ ‘ಆಹಾರ ಪೋಲು ತಡೆ’ ಕುರಿತ ಪಾಠವನ್ನು ಅಳವಡಿಸಲು ಎಲ್ಲ ರಾಜ್ಯ ಸರ್ಕಾರಗಳಿಗೆ ತಿಳಿಸಲಾಗಿದೆ ಎಂದು ಸಂಸತ್ತಿನಲ್ಲಿ ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಆಹಾರ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ, ‘ಸರ್ಕಾರ, ಮಾಧ್ಯಮಗಳ ಮೂಲಕ ಆಹಾರ ಪೋಲಿನ ವಿರುದ್ಧ ಅರಿವು ಮೂಡಿಸುತ್ತಿದೆ’ ಎಂದು ತಿಳಿಸಿದರು.

ಮಧ್ಯಪ್ರದೇಶ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ

ಭೋಪಾಲ್: ಮಧ್ಯಪ್ರದೇಶದ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ವಿರೋಧ ಪಕ್ಷ ಕಾಂಗ್ರೆಸ್, ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡಿಸಿದೆ. ಕಾಂಗ್ರೆಸ್ ನೀಡಿದ ಗೊತ್ತುವಳಿಯನ್ನು ವಿಧಾನಸಭೆ ಸ್ಪೀಕರ್ ಅಂಗೀಕರಿಸಿದ್ದಾರೆ.

ಡ್ರೋನ್ ಹೊಡೆದು ಉರುಳಿಸಿದ ಸೇನೆ

ನವದೆಹಲಿ/ಅಮೃತಸರ (ಪಿಟಿಐ): ಮಾದಕವಸ್ತು ಕಳ್ಳಸಾಗಣೆ ಉದ್ದೇಶದಿಂದ ಭಾರತದ ಗಡಿ ಪ್ರವೇಶಿಸಿದ್ದ ಡ್ರೋನ್ ಒಂದನ್ನು ಪಂಜಾಬ್‌ನ ಭಾರತ–ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿ ಬಳಿ, ಬಿಎಸ್‌ಎಫ್ ಹೊಡೆದುರುಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಮೊರೊಕ್ಕೊ ಆಟಗಾರರಿಗೆ ಸ್ವಾಗತ ಕೋರಿದ ಅಭಿಮಾನಿಗಳು– ಎಎಫ್‌ಪಿ ಚಿತ್ರ

ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ

ಮೊರೊಕ್ಕೊ ತಂಡಕ್ಕೆ ಅದ್ದೂರಿ ಸ್ವಾಗತ

ರಬಾತ್, ಮೊರೊಕ್ಕೊ(ಎಪಿ): ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಐತಿಹಾಸಿಕ ಸಾಧನೆ ಮಾಡಿದ ಮೊರೊಕ್ಕೊ ಫುಟ್‌ಬಾಲ್ ತಂಡಕ್ಕೂ ತವರಿನಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು.

ಕತಾರ್‌ನಲ್ಲಿ ನಡೆದ ಟೂರ್ನಿಯಲ್ಲಿ ಮೊರೊಕ್ಕೊ ತಂಡವು ನಾಲ್ಕನೇ ಸ್ಥಾನ ಗಳಿಸಿತ್ತು. ಸೂಟ್, ಟೈ ಧರಿಸಿ ಮಿಂಚುತ್ತಿದ್ದ ಆಟಗಾರರು ಮಂಗಳವಾರ ರಾಜಧಾನಿ ರಬಾತ್‌ನಲ್ಲಿ ತೆರೆದ ಬಸ್ಸಿನಲ್ಲಿ ಮೆರವಣಿಗೆ ಸಾಗಿದರು.

ರಸ್ತೆಯುದ್ದಕ್ಕೂ ಸಾವಿರಾರು ಜನರು ನೃತ್ಯ, ಹಾಡಿನ ಮೂಲಕ ಸಂಭ್ರಮಿಸಿದರು. ಆಟಗಾರರು ಬಳಿಕ ದೊರೆ ಆರನೇ ಮೊಹಮ್ಮದರ ರಾಯಲ್ ಪ್ಯಾಲೇಸ್‌ಗೆ ತೆರಳಿದರು.

ಅಲ್ಲಿ ಆಟಗಾರರನ್ನು ಅಭಿನಂದಿಸಲಾಯಿತು.

ಅಟ್ಲಾಸ್ ಲಯನ್ಸ್ ಎಂದು ಕರೆಯಲಾಗುವ ಮೊರೊಕ್ಕೊ ತಂಡವು ವಿಶ್ವಕಪ್ ಟೂರ್ನಿಯಲ್ಲಿ ಪ್ರಮುಖ ತಂಡಗಳಾದ ಬೆಲ್ಜಿಯಂ, ಸ್ಪೇನ್ ಮತ್ತು ಪೋರ್ಚುಗಲ್‌ಗೆ ಸೋಲಿನ ರುಚಿ ತೋರಿಸಿತ್ತು. ಟೂರ್ನಿಯ ಸೆಮಿಫೈನಲ್ ತಲುಪಿದ ಮೊದಲ ಆಫ್ರಿಕಾ–ಅರಬ್ ದೇಶ ಎಂಬ ಶ್ರೇಯ ಗಳಿಸಿತ್ತು.

ಮೂರನೇ ಸ್ಥಾನಕ್ಕಾಗಿ ನಡೆದ ಪ್ಲೇ ಆಫ್ ಪಂದ್ಯದಲ್ಲಿ ಮೊರೊಕ್ಕೊ 1–2ರಿಂದ ಕ್ರೊವೇಷ್ಯಾ ತಂಡದ ಎದುರು ಸೋತಿತ್ತು.

ದೆಹಲಿಯಲ್ಲಿ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್

ನವದೆಹಲಿ (ಪಿಟಿಐ): 2023ರ ಮಾರ್ಚ್ 28ರಿಂದ ಏಪ್ರಿಲ್ 2ರವರೆಗೆ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ ದೆಹಲಿಯಲ್ಲಿ ನಡೆಯಲಿದೆ. ಯುನೈಟೆಡ್ ವಿಶ್ವ ಕುಸ್ತಿ (ಯುಡಬ್ಲ್ಯುಡಬ್ಲ್ಯು) ಸಂಸ್ಥೆ ಬುಧವಾರ ಈ ವಿಷಯ ತಿಳಿಸಿದೆ.

ಮೂರು ವರ್ಷಗಳಲ್ಲಿ ಎರಡನೇ ಬಾರಿ ದೆಹಲಿಯಲ್ಲಿ ಏಷ್ಯನ್ ಚಾಂಪಿಯನ್‌ಷಿಪ್ ಆಯೋಜನೆಯಾಗುತ್ತಿದೆ. 2020ರ ಫೆಬ್ರುವರಿಯಲ್ಲಿ ಭಾರತದ ರಾಜಧಾನಿಯು ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಿತ್ತು.

‘ಮುಂದಿನ ವರ್ಷದಿಂದ ರ‍್ಯಾಂಕಿಂಗ್ ಸಿರೀಸ್ ಟೂರ್ನಿಗಳಿಗೆ ಕುಸ್ತಿಪಟುಗಳ ವಯಸ್ಸಿನಲ್ಲಿ ಎರಡು ವರ್ಷ ವಿನಾಯಿತಿ ನೀಡಲಾಗುತ್ತದೆ. ಇದರಿಂದ ಕುಸ್ತಿಪಟುಗಳಿಗೆ ಹೆಚ್ಚು ವಯಸ್ಸಿನ ವಿಭಾಗದಲ್ಲಿ ಸ್ಪರ್ಧಿಸುವ ಬದಲಿಗೆ ತಮ್ಮ ಆದ್ಯತೆಯ ವಿಭಾಗದಲ್ಲಿ ಸ್ಪರ್ಧೆಗೆ ಅವಕಾಶ ಸಿಗಲಿದೆ’ ಎಂದು ಯುಡಬ್ಲ್ಯುಡಬ್ಲ್ಯು ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಫುಟ್‌ಬಾಲ್: ಎಚ್‌ಎಎಲ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಎಚ್‌ಎಎಲ್ ಮತ್ತು ಇನ್‌ಕಮ್ ಟ್ಯಾಕ್ಸ್ ಎಫ್‌ಸಿ ತಂಡಗಳು ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ಟೂರ್ನಿಯ ಪಂದ್ಯದಲ್ಲಿ ಎಚ್‌ಎಎಲ್ 2–0ಯಿಂದ ಎಜಿಇಆರ್‌ಸಿ ಎಫ್‌ಸಿ ವಿರುದ್ಧ ಗೆದ್ದಿತು.

ವಿಜೇತ ಎಚ್‌ಎಎಲ್ ತಂಡದ ಪರ ದೇವದತ್ತ (29ನೇ ನಿಮಿಷ) ಮತ್ತು ಸುಜಲ್ ಮುಂಡಾ (34ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ 3–1ರಿಂದ ಬೆಂಗಳೂರು ಗನ್ನರ್ಸ್ ಎದುರು ಗೆದ್ದಿತು.

ಇನ್‌ಕಮ್ ಟ್ಯಾಕ್ಸ್ ತಂಡದ ಪರ ಶಂಕಿ ಸಿಂಗ್ (42ನೇ ನಿ.), ಪ್ರವೀಣ್ ಕುಮಾರ್ (43ನೇ ನಿ.) ಮತ್ತು ವಿಷ್ಣು ಪ್ರಸಾದ್ (45ನೇ ನಿ.) ಗೋಲು ದಾಖಲಿಸಿದರು. ಗನ್ನರ್ಸ್ ತಂಡಕ್ಕಾಗಿ ಸಿರಿಲ್ ಜಸ್ಟಿನ್ ಥಿರವಿಯನ್ (32ನೇ ನಿ.) ಗೋಲು ಗಳಿಸಿದರು.

ರಾಜ್ಯ ಬಿ ಡಿವಿಷನ್ ಹಾಕಿ: ಫ್ಲೈಯಿಂಗ್ ಕ್ಲಬ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲೈಯಿಂಗ್ ಹಾಕಿ ಕ್ಲಬ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಫ್ಲೈಯಿಂಗ್ 2–1ರಿಂದ ಆದ್ಯಮಾನ್ ಇಂಜಿನಿಯರಿಂಗ್ ಕಾಲೇಜು ತಂಡಕ್ಕೆ ಸೋಲುಣಿಸಿತು. ವಿಜೇತ ತಂಡಕ್ಕಾಗಿ ಅರವಿಂದ್ ಎನ್. 23ನೇ ನಿಮಿಷದಲ್ಲಿ ಮೊದಲ ಗೋಲು ದಾಖಲಿಸಿದರು. 34ನೇ ನಿಮಿಷದಲ್ಲಿ ನಿಖಿಲ್ ಎಂ. ಕಾಲ್ಚಳಕ ತೋರಿದರು.

ಆದ್ಯಮಾನ್ ಇಂಜಿನಿಯರಿಂಗ್ ತಂಡದ ಪರ ರವಿಶಂಕರ್ ಎಸ್. 40ನೇ ನಿಮಿಷದಲ್ಲಿ ಗೋಲು ಹೊಡೆದರು.

ಫ್ಲೈಯಿಂಗ್ ಹಾಕಿ ಕ್ಲಬ್‌ನ ಸಂಜೀವ್ (ನೀಲಿ ಪೋಷಾಕು) ಮತ್ತು ಆದ್ಯಮಾನ್ ಇಂಜಿನಿಯರಿಂಗ್ ಕಾಲೇಜು ತಂಡದ ಚಂದ್ರಶೇಖರ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಸಮರ್ಥ್ ಶತಕ ಸಂಭ್ರಮ: ಕರ್ನಾಟಕ ತಂಡಕ್ಕೆ ಮುನ್ನಡೆ; ಅಂಕಿತ್‌ಗೆ ಆರು ವಿಕೆಟ್

ಮಯಂಕ್ ಬಳಗಕ್ಕೆ ಜಯದ ಕನಸು

• ಗಿರೀಶ ದೊಡ್ಡಮನಿ

ಶತಕ ಗಳಿಸಿದ ಆರ್. ಸಮರ್ಥ್ ಸಂಭ್ರಮ –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಬೆಂಗಳೂರು: ಸತತ ಎರಡನೇ ಪಂದ್ಯದಲ್ಲಿ ಶತಕ ದಾಖಲಿಸಿದ ಆರ್. ಸಮರ್ಥ್ ಅವರಿಂದಾಗಿ ಪ್ರಸಕ್ತ ರಣಜಿ ಋತುವಿನಲ್ಲಿ ಕರ್ನಾಟಕ ತಂಡದ ಮೊದಲ ಜಯದ ನಿರೀಕ್ಷೆ ಕುಡಿಯೊಡೆದಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪುದುಚೇರಿ ತಂಡದ ಎದುರಿನ ಪಂದ್ಯದಲ್ಲಿ ಬುಧವಾರ ಆರಂಭಿಕ ಬ್ಯಾಟರ್ ಸಮರ್ಥ್ (137; 242ಎ, 4X17) ಅಮೋಘ ಶತಕದ ಬಲದಿಂದ ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 93.2 ಓವರ್‌ಗಳಲ್ಲಿ 304 ರನ್ ಗಳಿಸಿತು. ಇದರೊಂದಿಗೆ 134 ರನ್‌ಗಳ ಮುನ್ನಡೆ ಸಾಧಿಸಿತು.

ಚಹಾ ವಿರಾಮದ ನಂತರ ಎರಡನೇ ಇನಿಂಗ್ಸ್ ಆರಂಭಿಸಿದ ಪುದುಚೇರಿಗೆ ಕರ್ನಾಟಕದ ಬೌಲರ್‌ಗಳು ಆಘಾತ ನೀಡಿದರು. ಎರಡನೇ ದಿನದಾಟದ ಕೊನೆಗೆ 27 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 58 ರನ್ ಗಳಿಸಿದೆ. ಜಯ್ ಪಾಂಡೆ (ಬ್ಯಾಟಿಂಗ್ 25) ಮತ್ತು ಎಸ್. ಅಶ್ವಥ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾರೆ.

ರೋನಿತ್ ಹಾಕಿದ ನಾಲ್ಕನೇ ಓವರ್‌ನಲ್ಲಿ ಪ್ರವಾಸಿ ತಂಡದ ಆರಂಭಿಕ ಬ್ಯಾಟರ್ ಅರವಿಂದ್ ಹೊಡೆದ ಚೆಂಡನ್ನು ಸ್ಕ್ವೇರ್ ಲೆಗ್‌ನಲ್ಲಿ ಶ್ರೇಯಸ್ ಗೋಪಾಲ್ ಕ್ಯಾಚ್ ಮಾಡಿದ ರೀತಿ ಆಕರ್ಷಕವಾಗಿತ್ತು.

ನಯನ್ ಕಾಂಗಿಯನ್ 18ನೇ ಓವರ್‌ನಲ್ಲಿ ವೈಶಾಖ ಎಸೆತವನ್ನು ಕೆಣಕಿದರು. ಡೈವ್ ಮಾಡಿದ ವಿಕೆಟ್ ಕೀಪರ್ ಶರತ್ ಕ್ಯಾಚ್ ಪಡೆದರು. ಪರಸ್ ಡೋಗ್ರಾ ಅವರನ್ನು ಆಫ್‌ಸ್ಪಿನ್ನರ್ ಗೌತಮ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಕರ್ನಾಟಕದ ಮುನ್ನಡೆಯ ಮೊತ್ತವನ್ನು ಚುಕ್ತಾ ಮಾಡಲು ಪುದುಚೇರಿಗೆ 76 ರನ್‌ಗಳ ಅವಶ್ಯಕತೆ ಇದೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಆಟ ಬಾಕಿಯಿದೆ. ಗುರುವಾರ ಬೆಳಗಿನ ಅವಧಿಯಲ್ಲಿ ವಿಕೆಟ್‌ಗಳನ್ನು ಉಳಿಸಿಕೊಂಡು ಕರ್ನಾಟಕಕ್ಕೆ ಕಠಿಣ ಸವಾಲೊಡ್ಡುವ ಒತ್ತಡ ದಾಮೋದರನ್ ರೋಹಿತ್ ಬಳಗಕ್ಕೆ ಇದೆ.

ಸಮರ್ಥ್–ಅಂಕಿತ್ ಜಿದ್ದಾಜಿದ್ದಿ: ಪಂದ್ಯದ ಮೊದಲ ದಿನವಾದ ಮಂಗಳವಾರ ಚಹಾ ವಿರಾಮಕ್ಕೆ ಪುದುಚೇರಿ ತಂಡವು 170 ರನ್ ಗಳಿಸಿ ಆಲೌಟ್ ಆಗಿತ್ತು. ದಿನದಾಟದ ಕೊನೆಗೆ ಕರ್ನಾಟಕವು 111 ರನ್ ಗಳಿಸಿತ್ತು. ಅರ್ಧಶತಕ ಮಾಡಿದ್ದ ಮಯಂಕ್ ಅಗರವಾಲ್ ಔಟಾಗಿದ್ದರು. ಕ್ರೀಸ್‌ನಲ್ಲಿ ಉಳಿದಿದ್ದ ಬಲಗೈ ಬ್ಯಾಟರ್ ಸಮರ್ಥ್ ಎರಡನೇ ದಿನದಾಟದಲ್ಲಿ ಇನಿಂಗ್ಸ್ ಕಟ್ಟಿದರು.

ಆದರೆ ಇನ್ನೊಂದೆಡೆ ಪುದುಚೇರಿಯ ಸ್ಪಿನ್ನರ್ ಅಂಕಿತ್ ಶರ್ಮಾ (22–5–60–6) ಆತಿಥೇಯ ಬ್ಯಾಟರ್‌ಗಳು ದೊಡ್ಡ ಜೊತೆಯಾಟ ಬೆಳೆಸದಂತೆ ತಡೆಯೊಡ್ಡಿದರು.

ಇದರಿಂದಾಗಿ ಈ ಇನಿಂಗ್ಸ್ ಸಮರ್ಥ್ ಮತ್ತು ಅಂಕಿತ್ ನಡುವಿನ ಜಿದ್ದಾಜಿದ್ದಿಗೆ ವೇದಿಕೆಯಾಯಿತು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಪುದುಚೇರಿ 170 (54 ಓವರ್)

ಕರ್ನಾಟಕ 304 (93.2 ಓವರ್) (ಮಂಗಳವಾರ:32 ಓವರ್‌ಗಳಲ್ಲಿ 1 ವಿಕೆಟ್‌ಗೆ 111))

ಸಮರ್ಥ್ ಸಿ ರೋಹಿತ್ ಬಿ ಡೋಗ್ರಾ 137 (242ಎ, 4X17), ರೋನಿತ್ ಎಲ್‌ಬಿಡಬ್ಲ್ಯು ಅಂಕಿತ್ 0 (7ಎ), ವಿಶಾಲ್ ಸ್ಟಂಪ್ಡ್ ಅರುಣ್ ಬಿ ಅಂಕಿತ್ 4 (21ಎ, 4X1), ನಿಕಿನ್ ಸಿ ಡೋಗ್ರಾ ಬಿ ಅಂಕಿತ್ 30 (67ಎ, 4X4), ಮನೀಷ್ ಎಲ್‌ಬಿಡಬ್ಲ್ಯು ಬಿ ವಿಘ್ನೇಷ್ 45 (78ಎ, 4X4, 6X1), ಶ್ರೇಯಸ್ ಎಲ್‌ಬಿಡಬ್ಲ್ಯು ವಿಘ್ನೇಷ್ 12 (28ಎ, 4X2), ಶರತ್ ಸಿ ಅರವಿಂದ್ ಬಿ ಅಂಕಿತ್ 9 (12ಎ, 4X2), ಗೌತಮ್ ಎಲ್‌ಬಿಡಬ್ಲ್ಯು ಬಿ ಅಂಕಿತ್ 10 (13ಎ, 4X1), ವೈಶಾಖ ಬಿ ಸಾಗರ್ 1 (4ಎ), ವಿದ್ವತ್ ಔಟಾಗದೆ 0 (0ಎ)

ಇತರೆ 5 (ಬೈ 1, ವೈಡ್ 1, ನೋಬಾಲ್ 3)

ವಿಕೆಟ್ ಪತನ: 2–111 (ರೋನಿತ್ ಮೋರೆ;33.2), 3–131 (ವಿಶಾಲ್ ಓಣತ್; 39.5), 4–194 (ನಿಕಿನ್ ಜೋಸ್;58.5), 5–249 (ಸಮರ್ಥ್; 81.3), 6–280 (ಮನೀಷ್ ಪಾಂಡೆ;87.2), 7–285 (ಶ್ರೇಯಸ್ ಗೋಪಾಲ್; 89.2), 8–303 (ಬಿ. ಆರ್. ಶರತ್; 92.3) 9–304 (ಕೆ. ಗೌತಮ್; 92.6), 10–304 (ವೈಶಾಖ ವಿಜಯಕುಮಾರ್; 93.2)

ಬೌಲಿಂಗ್: ಎಸ್. ಅಶ್ವಥ್ 16–3–54–0, ಅಬಿನ್ ಮ್ಯಾಥ್ಯೂ 16.3–3–56–0, ಸಾಗರ್ ಪಿ ಉದೇಶಿ 23.2–2–80–1, ಎಂ. ವಿಘ್ನೇಷ್ 6–1–32–2, ಅಂಕಿತ್ ಶರ್ಮಾ 22–5–60–6, ಪಾರಸ್ ಡೋಗ್ರಾ 9.3–1–21–1

ಎರಡನೇ ಇನಿಂಗ್ಸ್: ಪುದುಚೇರಿ 3ಕ್ಕೆ58 (27 ಓವರ್)

ನಯನ್ ಸಿ ಶರತ್ ಬಿ ವೈಶಾಖ 24 (55ಎ, 4X5), ಅರವಿಂದ್ ಸಿ ಶ್ರೇಯಸ್ ಬಿ ರೋನಿತ್ 1 (7ಎ), ಜಯ್ ಪಾಂಡೆ ಬ್ಯಾಟಿಂಗ್ 25 (65ಎ, 4X4), ಡೋಗ್ರಾ ಎಲ್‌ಬಿಡಬ್ಲ್ಯು ಬಿ ಗೌತಮ್ 3 (8ಎ), ಎಸ್. ಅಶ್ವಥ್ ಬ್ಯಾಟಿಂಗ್ 3 (27ಎ)

ಇತರೆ 2 (ಲೆಗ್‌ಬೈ 2)

ವಿಕೆಟ್ ಪತನ: 1–6 (ಅರವಿಂದ್; 3.2), 2–41 (ನಯನ್ ಕಂಗಯನ್; 17.1), 3–48 (ಪಾರಸ್ ಡೋಗ್ರಾ; 20.2)

ಬೌಲಿಂಗ್: ವಿದ್ವತ್ ಕಾವೇರಪ್ಪ 8–6–13–0, ರೋನಿತ್ ಮೋರೆ 6–3–9–1, ವೈಶಾಖ ವಿಜಯಕುಮಾರ್ 7–2–13–1, ಕೆ. ಗೌತಮ್ 6–1–21–1

12 ವಿಕೆಟ್

ಪಂದ್ಯದ ಮೊದಲ ದಿನ ಈ ಪಿಚ್‌ನಲ್ಲಿ 11 ವಿಕೆಟ್‌ಗಳು ಪತನವಾಗಿದ್ದವು. ಎರಡನೇ ದಿನವೂ ಬೌಲರ್‌ಗಳು ಮಿಂಚಿದರು. ಒಂದೇ ದಿನ 12 ವಿಕೆಟ್‌ಗಳು ಉರುಳಿದವು.

ಒಂದು ಕಡೆ ಬಲಗೈ ಬ್ಯಾಟರ್ ರನ್ ಸೇರಿಸುವಲ್ಲಿ ನಿರತರಾಗಿದ್ದರೆ, ಇನ್ನೊಂದೆಡೆ ಎಡಗೈ ಸ್ಪಿನ್ನರ್ ವಿಕೆಟ್ ಕಬಳಿಸುವತ್ತ ಚಿತ್ತ ನೆಟ್ಟರು. ಈ ನಡುವೆ ಸಮರ್ಥ್ ಎರಡು ಮಹತ್ವದ ಜೊತೆಯಾಟಗಳಲ್ಲಿ ಭಾಗಿಯಾದರು.

ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ನಿಕಿನ್ ಜೋಸ್ ಜೊತೆಗೆ 63 ರನ್ ಸೇರಿಸಿದರು. ಇದರಿಂದಾಗಿ ಊಟದ ವಿರಾಮಕ್ಕೆ ತಂಡವು 200 ಗಡಿ ದಾಟಿತು.

ಆರನೇ ವಿಕೆಟ್ ಜೊತೆಯಾಟದಲ್ಲಿ ಸಮರ್ಥ್, ಅನುಭವಿ ಮನೀಷ್ ಪಾಂಡೆಯೊಂದಿಗೆ 55 ರನ್ ಸೇರಿಸಿದರು.

ಸಮರ್ಥ್ ನೂರರ ಗಡಿ ತಲುಪಲು 162 ಎಸೆತಗಳನ್ನು ಆಡಿದರು. ಅದರಲ್ಲಿ 15 ಬೌಂಡರಿಗಳಿದ್ದವು. 82ನೇ ಓವರ್‌ನಲ್ಲಿ ಅವರು ಡೋಗ್ರಾ ಬೌಲಿಂಗ್‌ನಲ್ಲಿ ರೋಹಿತ್‌ಗೆ ಕ್ಯಾಚಿತ್ತರು. ಮೊದಲ ಪಂದ್ಯದಲ್ಲಿ ಸರ್ವಿಸಸ್ ಎದುರು ಸಮರ್ಥ್ ಶತಕ ಗಳಿಸಿದ್ದರು. ಸಮರ್ಥ್ ಔಟಾದ ನಂತರ 55 ರನ್‌ಗಳು ತಂಡದ ಖಾತೆ ಸೇರುವಷ್ಟರಲ್ಲಿ ಐವರು ಬ್ಯಾಟರ್‌ಗಳು ಔಟಾದರು.

ಅಪಾಯಕಾರಿ ಪಿಚ್: ಪಂದ್ಯ ಸ್ಥಗಿತ

ನವದೆಹಲಿ (ಪಿಟಿಐ): ಕರ್ನೈಲ್ ಸಿಂಗ್ ಕ್ರೀಡಾಂಗಣದ ಪಿಚ್ ಅಪಾಯಕಾರಿ ಮತ್ತು ಆಟಕ್ಕೆ ಯೋಗ್ಯವಲ್ಲವೆಂದು ಇಲ್ಲಿ ನಡೆಯುತ್ತಿದ್ದ ರೈಲ್ವೆಸ್ ಹಾಗೂ ಪಂಜಾಬ್ ನಡುವಣ ರಣಜಿ ಪಂದ್ಯವನ್ನು ಬುಧವಾರ ಸ್ಥಗಿತಗೊಳಿಸಲಾಯಿತು.

ಮಂಗಳವಾರ ಪಂದ್ಯ ಆರಂಭವಾಗಿತ್ತು. ಈ ಪಿಚ್‌ನಲ್ಲಿ ಕೇವಲ 103 ಓವರ್‌ಗಳಲ್ಲಿ 24 ವಿಕೆಟ್‌ಗಳು ಪತನವಾಗಿದೆ. ಅದರಲ್ಲಿ 20 ವೇಗದ ಬೌಲರ್‌ಗಳ ಪಾಲಾಗಿವೆ. ಪಂದ್ಯದ ಮೊದಲ ದಿನ ಪಂಜಾಬ್ 162 ರನ್ ಗಳಿಸಿತು. ಅದಕ್ಕುತ್ತರವಾಗಿ ರೈಲ್ವೆಸ್ ತಂಡವು 150 ರನ್‌ಗಳಿಸಲಷ್ಟೇ ಶಕ್ತವಾಯಿತು. 12 ರನ್‌ಗಳ ಮುನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಪಂಜಾಬ್ 18 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

‘ಇದುವರೆಗೂ ಇಂತಹ ಪಿಚ್ ನೋಡಿಯೇ ಇರಲಿಲ್ಲ. ಇಲ್ಲಿ ಚೆಂಡು ಅಪಾಯಕಾರಿ ಮಟ್ಟದಲ್ಲಿ ಬೌನ್ಸ್ ಆಗುತ್ತಿದೆ’ ಎಂದು ಪಂಜಾಬ್ ಬ್ಯಾಟರ್ ಅಭಿಷೇಕ್ ಶರ್ಮಾ ಹೇಳಿದ್ದಾರೆ.

ಅಂಪೈರ್‌ಗಳಾದ ಮದನ ಗೋಪಾಲ್ ಕುಪ್ಪುರಾಜ್, ರಾಜೀವ್ ಗೋದರಾ ಮತ್ತು ಮ್ಯಾಚ್ ರೆಫರಿ ಯುವರಾಜ್ ಸಿಂಗ್ ಅವರು ಆಟ ಸ್ಥಗಿತಗೊಳಿಸುವ ನಿರ್ಧಾರ ಕೈಗೊಂಡರು.

ಈ ಪಿಚ್‌ನಲ್ಲಿ ಸಮಸ್ಯೆ ಇದೇ ಮೊದಲಲ್ಲ. 2011ರಲ್ಲಿ ಕಳಪೆ ಪಿಚ್ ಎಂದು ಘೋಷಿಸಲಾಗಿತ್ತು. ಅದಾಗಿ ಒಂದು ವರ್ಷದ ನಂತರ ಸ್ಥಳೀಯ ಕ್ಯುರೇಟರ್‌ಗಳು ಉದ್ದೇಶಪೂರ್ವಕವಾಗಿಯೇ ಕೆಟ್ಟ ಪಿಚ್‌ಗಳನ್ನು ಮಾಡುತ್ತಿದ್ದದ್ದು ಗಮನಕ್ಕೆ ಬಂದಿತ್ತು. ಅದಕ್ಕಾಗಿ 2 ವರ್ಷ ಇಲ್ಲಿ ಪಂದ್ಯ ಆಯೋಜಿಸದಂತೆ ನಿರ್ಬಂಧ ಹೇರಲಾಗಿತ್ತು.



ಹಾಲಿವುಡ್ ಬ್ಲಾಕ್ ಬಸ್ಟರ್ ಅಲೆಯನ್ನೇ ಸೃಷ್ಟಿಸಿದೆ!

ಪ್ರಾಯೋಜಕತ್ವ: ಹೊರಗುಳಿಯಲು ಬೈಜುಸ್, ಎಂಪಿಎಲ್ ಚಿಂತನೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಎರಡು ಪ್ರಮುಖ ಪ್ರಾಯೋಜಕತ್ವ ಕಂಪನಿಗಳಾದ ಬೈಜುಸ್ ಮತ್ತು ಎಂಪಿಎಲ್ ಸ್ಪೋರ್ಟ್ಸ್, ಬಿಸಿಸಿಐನೊಂದಿಗಿನ ಒಪ್ಪಂದದಿಂದ ಹೊರಗುಳಿಯಲು ಬಯಸಿವೆ.

ತಂಡಕ್ಕೆ ಪೋಷಾಕು ಪ್ರಾಯೋಜಕತ್ವ ನೀಡುತ್ತಿರುವ ಆನ್‌ಲೈನ್ ಕಲಿಕಾ ವೇದಿಕೆ ಬೈಜುಸ್, ಜೂನ್‌ನಲ್ಲಿ ತನ್ನ ಒಪ್ಪಂದವನ್ನು ₹ 293 ಕೋಟಿ ಮೊತ್ತಕ್ಕೆ 2023ರ ನವೆಂಬರ್‌ವರೆಗೆ ವಿಸ್ತರಿಸಿಕೊಂಡಿತ್ತು. ಈಗ ಅದು ಒಪ್ಪಂದ ಕಡಿತಗೊಳಿಸಲು ಬಯಸಿದೆ. ಆದರೆ ಕನಿಷ್ಠ 2023ರ ಮಾರ್ಚ್‌ವರೆಗೆ ಮುಂದುವರಿಯುವಂತೆ ಕಂಪನಿಗೆ ಬಿಸಿಸಿಐ ಕೇಳಿಕೊಂಡಿದೆ.

‘ಒಪ್ಪಂದದ ಹೊರಗುಳಿಯಲು ಬೈಜುಸ್ ಈ ವರ್ಷ ನವೆಂಬರ್ 4ರಂದು ಪತ್ರ ಬರೆದಿದೆ. ಒಪ್ಪಂದದ ಅನ್ವಯ ಪ್ರಾಯೋಜಕತ್ವ ಮುಂದುವರಿಸುವಂತೆ ನಾವು ಕೇಳಿಕೊಂಡಿದ್ದೇವೆ’ ಎಂದು ಬಿಸಿಸಿಐ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಬುಧವಾರ ನಡೆದ ಬಿಸಿಸಿಐನ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು.

ಕೆಕೆಸಿಎಲ್‌ಗೆ ಹಕ್ಕುಗಳನ್ನು ವರ್ಗಾಯಿಸಲು ಎಂಪಿಎಲ್ ಮನವಿ: ಬಿಸಿಸಿಐನೊಂದಿಗೆ ತಾನು ಹೊಂದಿರುವ ಕಿಟ್ ಪ್ರಾಯೋಜಕತ್ವದ ಸಂಪೂರ್ಣ ಹಕ್ಕುಗಳನ್ನು ಕೇವಲ್ ಕಿರಣ್ ಕ್ಲಾಥಿಂಗ್ ಲಿಮಿಟ್ (ಕೆಕೆಸಿಎಲ್) ಸಂಸ್ಥೆಗೆ ನಿಯೋಜಿಸುವಂತೆ ಎಂಪಿಎಲ್ ಮನವಿ ಮಾಡಿದೆ. ಈ ಕುರಿತು ಡಿಸೆಂಬರ್ 2ರಂದು ಕಂಪನಿ ಬಿಸಿಸಿಐಗೆ ಪತ್ರ ಬರೆದಿದೆ. ಎಂಪಿಎಲ್ ಕಂಪೆನಿಗೂ ಮಾರ್ಚ್ 31ರವರೆಗೆ ಒಪ್ಪಂದದಲ್ಲಿ ಮುಂದುವರಿಯುವಂತೆ ಬಿಸಿಸಿಐ ಮನವಿ ಮಾಡಿದೆ.

ಆಯ್ಕೆ ಸಮಿತಿ ರಚನೆಯ ಬಳಿಕ ಕೇಂದ್ರೀಯ ಗುತ್ತಿಗೆ ತೀರ್ಮಾನ: ಆಟಗಾರರ ಕೇಂದ್ರೀಯ ಗುತ್ತಿಗೆಯನ್ನು ಸಭೆಯಲ್ಲಿ ಚರ್ಚಿಸಲಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಹೊಸ ಆಯ್ಕೆ ಸಮಿತಿಯ ರಚನೆಯ ಬಳಿಕ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಆಸ್ಟ್ರೇಲಿಯಾದಲ್ಲಿ ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿಯನ್ನು ವಜಾ ಮಾಡಲಾಗಿತ್ತು.

ಆಸ್ಟ್ರೇಲಿಯಾ ಓಪನ್‌ಗೆ ನೊವಾಕ್: ಟಾಡ್ ಸಂತಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವರ್ಷದ ಹಿಂದೆ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಆಡಬೇಕಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿದ್ದರು. ಅದರಿಂದಾಗಿ ಅವರು ಟೂರ್ನಿಯಿಂದಲೇಸರಿಯಬೇಕಾಯಿತು.

ಆದರೆ ಮುಂದಿನ ತಿಂಗಳು ನಡೆಯಲಿರುವ ಆಸ್ಟ್ರೇಲಿಯಾ ಓಪನ್ ಟೂರ್ನಿ ನಡೆಯಲಿದೆ. ಅದರಲ್ಲಿ ನೊವಾಕ್ ಆಡುವುದು ಬಹುತೇಕ ಖಚಿತವಾಗಿದೆ. ಆಸ್ಟ್ರೇಲಿಯಾದಲ್ಲಿ ಸರ್ಕಾರವು ನಿಯಮ ಸಡಿಲಗೊಳಿಸಿದೆ.

‘ನೋವಾಕ್ ಆಡುವುದರಿಂದ ಟೂರ್ನಿಯ ಕಳೆ ಮರುಕಳಿಸಲಿದೆ’ ಎಂದು ಮಾಜಿ ಆಟಗಾರ ಟಾಡ್ ವುಡ್‌ಬ್ರಿಡ್ಜ್ ಹೇಳಿದ್ದಾರೆ. ಬುಧವಾರ ಸೋನಿ ನೆಟ್‌ವರ್ಕ್ ಆಯೋಜಿಸಿದ್ದ ವರ್ಚುವಲ್ ಸಂವಾದದಲ್ಲಿ ಟಾಡ್ ಮಾತನಾಡಿದರು.

ಭಾರತ–ಬಾಂಗ್ಲಾ ಎರಡನೇ ಟೆಸ್ಟ್ ಇಂದಿನಿಂದ; ಶುಭಮನ್, ಪೂಜಾರ ಮೇಲೆ ಭರವಸೆ

ಸರಣಿ ಗೆಲುವಿನತ್ತ ರಾಹುಲ್ ಪಡೆ ಚಿತ್ತ

ಮೀರಪುರ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಂಕಪಟ್ಟಿಯ ಅಗ್ರ ಎರಡರಲ್ಲಿ ಸ್ಥಾನ ಗಟ್ಟಿಗೊಳಿಸಿಕೊಳ್ಳುವ ಛಲದಲ್ಲಿ ಭಾರತ ತಂಡವಿದೆ.

ಅದಕ್ಕಾಗಿ ಗುರುವಾರ ಇಲ್ಲಿ ಆರಂಭವಾಗಲಿರುವ ಎರಡನೇ ಟೆಸ್ಟ್‌ನಲ್ಲಿಯೂ ಆತಿಥೇಯ ಬಾಂಗ್ಲಾಗೆ ಸೋಲಿನ ಕಹಿ ತೋರಿಸಿ ಸರಣಿ ಜಯಸಾಧಿಸುವ ಛಲದಲ್ಲಿದೆ.

ಈಚೆಗೆ ಗಾಬಾ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ತಂಡವು ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಹೀನಾಯ ಸೋಲು ಅನುಭವಿಸಿತ್ತು. ಭಾರತ ತಂಡವು ಬಾಂಗ್ಲಾ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ಗೆದ್ದಿತ್ತು. ಅದರಿಂದಾಗಿ ಈ ಪಟ್ಟಿಯಲ್ಲಿ ಭಾರತ ತಂಡವು ಎರಡನೇ ಸ್ಥಾನಕ್ಕೇರಿದೆ.

ಆಸ್ಟ್ರೇಲಿಯಾ (76.92%) ಪ್ರಥಮ ಸ್ಥಾನದಲ್ಲಿದೆ. ಭಾರತ (55.77%) ಹಾಗೂ ದಕ್ಷಿಣ ಆಫ್ರಿಕಾ (54.55%) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಆದರೆ ಆಸ್ಟ್ರೇಲಿಯಾ ಸರಣಿಯಲ್ಲಿ ಇನ್ನೂ ಎರಡು ಪಂದ್ಯಗಳು ಬಾಕಿಯಿವೆ. ಆದ್ದರಿಂದ ದಕ್ಷಿಣ ಆಫ್ರಿಕಾ ತಂಡಕ್ಕೆ ಪುಟಿದೇಳಲು ಇನ್ನೂ ಅವಕಾಶ ಇದೆ.

ಒಂದೊಮ್ಮೆ ಆ ರೀತಿಯಾದರೆ ಮುಂಬರುವ ಆಸ್ಟ್ರೇಲಿಯಾ ಎದುರಿನ ಸರಣಿಯು ಆತಿಥೇಯ ಭಾರತಕ್ಕೆ ಮಹತ್ವದ್ದಾಗಿದೆ. ಆದ್ದರಿಂದ ಬಾಂಗ್ಲಾ ಎದುರಿನ ಪಂದ್ಯವನ್ನೂ ಕಡೆಗಣಿಸುವಂತಿಲ್ಲ.

ಬಲಾಬಲ

12	ಪಂದ್ಯ
10	ಭಾರತ ಜಯ
2	ಡ್ರಾ

ರಾಹುಲ್ ದ್ರಾವಿಡ್ ಮತ್ತು ವಿರಾಟ್ ಕೊಹ್ಲಿ –ಎಪಿ/ಪಿಟಿಐ ಚಿತ್ರ

ರೋಹಿತ್ ಶರ್ಮಾ ಗಾಯಗೊಂಡಿದ್ದು ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಆದ್ದರಿಂದ ರಾಹುಲ್ ಅವರೇ ಈ ಪಂದ್ಯಕ್ಕೂ ನಾಯಕತ್ವ ವಹಿಸಲಿದ್ದಾರೆ. ಮೊದಲ ಪಂದ್ಯದಲ್ಲಿ ಭಾರತವು ಪ್ರಥಮ ಇನಿಂಗ್ಸ್‌ನಲ್ಲಿ ದೊಡ್ಡ ಮೊತ್ತ ಪೇರಿಸಿರಲಿಲ್ಲ. ಆದರೆ ಯುವ ಬ್ಯಾಟರ್ ಶುಭಮನ್ ಗಿಲ್ ಹಾಗೂ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರ ಅಮೋಘ ಆಟದಿಂದ ಜಯ ಸಾಧ್ಯವಾಗಿತ್ತು.

ಚೇತೇಶ್ವರ್ ಪೂಜಾರ ಕೂಡ ಶತಕ ಬಾರಿಸಿದ್ದರು. ಆದರೆ, ರಾಹುಲ್ ಮತ್ತು ರಿಷಭ್ ಪಂತ್ ಲಯಕ್ಕೆ ಮರಳುವ ಅಗತ್ಯವಿದೆ. ವಿರಾಟ್ ಕೊಹ್ಲಿ ಅವರೂ 2019ರ ನಂತರ ಟೆಸ್ಟ್ ಕ್ರಿಕೆಟ್‌ನಲ್ಲಿ ಶತಕ ಗಳಿಸಿಲ್ಲ. ಅವರು ಕೂಡ ಲಯಕ್ಕೆ ಮರಳುವ ತವಕದಲ್ಲಿದ್ದಾರೆ.

ಆತಿಥೇಯ ತಂಡವು ಮೊದಲ ಪಂದ್ಯದಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಿಕೊಂಡು ಈ ಪಂದ್ಯದಲ್ಲಿ ಜಯಿಸಿ ಸರಣಿ ಸಮ ಮಾಡಿಕೊಳ್ಳುವ ಛಲದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

‘ಹಾಕಿ ವಿಶ್ವಕಪ್‌ಗೆ ಕ್ರೀಡಾಂಗಣ ಸಿದ್ಧ’

ಭುವನೇಶ್ವರ (ಪಿಟಿಐ): ಪುರುಷರ ವಿಶ್ವಕಪ್ ಟೂರ್ನಿಗಾಗಿ ಭಾರತದ ಅತಿದೊಡ್ಡ ಹಾಕಿ ಕ್ರೀಡಾಂಗಣ ಮತ್ತು ವಿಮಾನ ನಿಲ್ದಾಣಗಳು ಒಡಿಶಾದ ರೂರ್ಕೆಲಾದಲ್ಲಿ ಸಿದ್ಧಗೊಂಡಿದೆ ಎಂದು ರಾಜ್ಯದ ಮುಖ್ಯ ಕಾರ್ಯದರ್ಶಿ ಎಸ್.ಸಿ. ಮಹಾಪಾತ್ರ ತಿಳಿಸಿದ್ದಾರೆ.

ಕ್ರೀಡಾಂಗಣ ಮತ್ತು ವಿಮಾನ ನಿಲ್ದಾಣಗಳಿಗೆ ಸೋಮವಾರ ಮುಖ್ಯಮಂತ್ರಿಯವರ ಕಾರ್ಯದರ್ಶಿ ವಿ.ಕೆ. ಪಾಂಡ್ಯನ್ ಜೊತೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಅವರು ಈ ವಿಷಯ ತಿಳಿಸಿದರು.

ವಿಶ್ವಕಪ್ ಟೂರ್ನಿಯು 2023ರ ಜನವರಿ 13ರಿಂದ ನಡೆಯಲಿದ್ದು, ಆತಿಥ್ಯ ವಹಿಸುವ ಕ್ರೀಡಾಂಗಣಗಳಲ್ಲಿ ರೂರ್ಕೆಲಾ ಕೂಡ ಒಂದಾಗಿದೆ.

ಅಕ್ಷರ್, ಕುಲದೀಪ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಅಕ್ಷರ್ ಪಟೇಲ್ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ಅವರು ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನ ಬೌಲರ್‌ಗಳ ವಿಭಾಗದಲ್ಲಿ ಭಾರಿ ಬಡ್ತಿ ಪಡೆದಿದ್ದಾರೆ.

ಬುಧವಾರ ಪ್ರಕಟವಾದ ಕ್ರಮಾಂಕಪಟ್ಟಿಯಲ್ಲಿ ಅಕ್ಷರ್ 20 ಸ್ಥಾನ ಬಡ್ತಿ ಪಡೆದು ಜೀವನಶ್ರೇಷ್ಠ 18ನೇ ಸ್ಥಾನ ತಲುಪಿದ್ದಾರೆ. 19 ಸ್ಥಾನ ಏರಿಕೆ ಕಂಡಿರುವ ಕುಲದೀಪ್ ಯಾದವ್ 49ನೇ ಸ್ಥಾನದಲ್ಲಿದ್ದಾರೆ. ಬಾಂಗ್ಲಾದೇಶ ವಿರುದ್ಧ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ 113 ರನ್ ನೀಡಿ 13 ವಿಕೆಟ್ ಕಬಳಿಸಿದ್ದ ಕುಲದೀಪ್ ಅವರ ಬಳಿ ಸದ್ಯ 455 ರೇಟಿಂಗ್ ಪಾಯಿಂಟ್‌ಗಳಿವೆ. ಅದೇ ಪಂದ್ಯದಲ್ಲಿ ಐದು ವಿಕೆಟ್ ಗಳಿಸಿದ್ದ ಅಕ್ಷರ್ 650 ಪಾಯಿಂಟ್ಸ್ ಕಲೆಹಾಕಿದ್ದಾರೆ. ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಜಸ್‌ಪ್ರೀತ್ ಬೂಮ್ರಾ ಮತ್ತು ರವಿಚಂದ್ರನ್ ಅಶ್ವಿನ್ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಕುಲದೀಪ್ ಯಾದವ್– ಪಿಟಿಐ ಚಿತ್ರ

ಬ್ಯಾಟರ್‌ಗಳ ವಿಭಾಗದಲ್ಲಿ ಚೇತೇಶ್ವರ್ ಪೂಜಾರ ಮತ್ತು ಶುಭಮನ್ ಗಿಲ್ ಕ್ರಮವಾಗಿ 16 ಮತ್ತು 54ನೇ ಸ್ಥಾನದಲ್ಲಿದ್ದಾರೆ. ರಿಷಭ್ ಪಂತ್ ಆರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್: ವಯಾಕಾಮ್ 18ಕ್ಕೆ ಪ್ರಸಾರ ಹಕ್ಕು

ಬೆಂಗಳೂರು: 2024ರ ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದ ನೇರಪ್ರಸಾರದ ಹಕ್ಕನ್ನು ವಯಾಕಾಮ್18 ಮಾಧ್ಯಮ ಪಡೆದುಕೊಂಡಿದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಬುಧವಾರ ತಿಳಿಸಿದೆ. ಭಾರತ ಮತ್ತು ಉಪಖಂಡಗಳಲ್ಲಿ ಪ್ರಸಾರ ಹಕ್ಕು ವಯಾಕಾಮ್‌ಗೆ ದೊರೆತಿದೆ.

ಅಥ್ಲೆಟಿಕ್ಸ್ ತಂಡದಲ್ಲಿ ಹಿಮೇಶ್, ಸಯೀದ್

ಬೆಂಗಳೂರು: ಬಿಹಾರದ ಪಟ್ನಾದಲ್ಲಿ 2023ರ ಜನವರಿ 12ರಿಂದ ನಡೆಯಲಿರುವ ರಾಷ್ಟ್ರೀಯ ಅಂತರಜಿಲ್ಲಾ ಜೂನಿಯರ್ ಅಥ್ಲೆಟಿಕ್ ಕೂಟಕ್ಕೆ ಬೆಂಗಳೂರು ನಗರ ಜಿಲ್ಲಾ ತಂಡದ ಆಯ್ಕೆ ಬುಧವಾರ ನಡೆಯಿತು.

ತಂಡ ಇಂತಿದೆ: ಹಿಮೇಶ್ ಎನ್ (ಹೆಕ್ಸಾಥ್ಲಾನ್), ಸಯೀದ್ ಸಬೀರ್ (600 ಮೀ. ಓಟ), ಮೋನೀಶ್ ಚಂದ್ರಶೇಖರ್ (80 ಮೀ.), ಶ್ರೀಮಯಿ ಕುಲಕರ್ಣಿ (ಶಾಟ್‌ಪಟ್), ಹರ್ಷಿತಾ ಪಿ. (ಹೈಜಂಪ್), ಕಸ್ತೂರಿ ವೆಲಂಕರ್ (80 ಮೀ.), ಅಥೆನಾ (600 ಮೀ.), ಭುವನಾ ಸಾರಯ್ಯ (ಜಾವೆಲಿನ್ ಥ್ರೊ), ಇಶಾನ್, ರಿಷಿ, ಶ್ರೀಧರ್, ಪರ್ಲ್ ಆ್ಯಂಡ್ರಿಯಾ ಮತ್ತು ಸೃಷ್ಟಿ ವಿ (ಎಲ್ಲರೂ ಟ್ರಯಾಥ್ಲಾನ್).

ಬಾಲ್ ಬ್ಯಾಡ್ಮಿಂಟನ್: ಯಶಸ್ವಿನಿ ಆಯ್ಕೆ

ಬೆಂಗಳೂರು: ಯಶಸ್ವಿನಿ ಎಚ್. ಅವರು ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಯಶಸ್ವಿನಿ ವರು ಜಯಾ ಸ್ಪೋರ್ಟ್ಸ್ ಕ್ಲಬ್‌ನ ಆಟಗಾರ್ತಿ. 69ನೇ ರಾಷ್ಟ್ರೀಯ ಚಾಂಪಿಯನ್‌ಷಿಪ್ ಕೇರಳದ ಕೊಲ್ಲಂನಲ್ಲಿ ಗುರುವಾರ ಆರಂಭವಾಗಲಿದ್ದು, ಡಿಸೆಂಬರ್ 28ರವರೆಗೆ ನಡೆಯಲಿದೆ.